ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಈದ್ -ಉಲ್- ಅದಾ ಶುಭಾಶಯಗಳು

ಸಿಕ್ಸರ್ ಸೂರ್ಯವಂಶಿ..!

ರಾಜಸ್ಥಾನ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ ಬುಧವಾರ ಮುಲ್ಲನಪುರದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ನಡೆದ ಐಪಿಎಲ್ ಪಂದ್ಯದಲ್ಲಿ 12 ಸಿಕ್ಸರ್ ಹೊಡೆದರು. ಈ ಟೂರ್ನಿಯಲ್ಲಿ ಒಟ್ಟು 65 ಸಿಕ್ಸರ್ ಹೊಡೆದು ಕ್ರಿಸ್ ಗೇಲ್ ದಾಖಲೆ ಮೀರಿದರು

ಸೆನ್ಸೆಕ್ಸ್ 75,867 | ನಿಫ್ಟಿ 23,907 | $/₹ 95.58 | ಚಿನ್ನ (Std. 10g) ₹1,63,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,83,200 (ಬೆಂಗಳೂರು)



ವೆಚ್ಚ ಏರಿಕೆ, ವಿಮಾನ ಸೇವೆಯಲ್ಲಿ ಕಡಿತ

ನವದೆಹಲಿ/ಮುಂಬೈ (ಪಿಟಿಐ): ವಿಮಾನ ಇಂಧನ ಬೆಲೆಯಲ್ಲಿನ ಹೆಚ್ಚಳ ಹಾಗೂ ಪ್ರಯಾಣಿಕರ ಸಂಖ್ಯೆಯಲ್ಲಿನ ಇಳಿಕೆಯ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಉದ್ದೇಶದಿಂದ ದೇಶಿ ವಿಮಾನ ಸಂಚಾರವನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಲು ಏರ್ ಇಂಡಿಯಾ, ಇಂಡಿಗೊ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಗಳು ತೀರ್ಮಾನಿಸಿವೆ.

ವಿವರ 10

ಕಲ್ಯಾಣ ಕರ್ನಾಟಕದಲ್ಲಿ 'ರೋಹಿಣಿ' ಅಬ್ಬರ

ವಿವರ 5

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸಿ.ಎಂ ರಾಜೀನಾಮೆ ಇಂದು

ಸಚಿವರಿಗೆ ಬೆಳಿಗ್ಗೆ ಉಪಾಹಾರ ಕೂಟ
• ನಂತರ ಲೋಕಭವನಕ್ಕೆ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಮುಖ್ಯಮಂತ್ರಿ ಸ್ಥಾನ ತ್ಯಜಿಸಲು ಮುಂದಾಗಿರುವ ಸಿದ್ದರಾಮಯ್ಯ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಗುರುವಾರ ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಸಲು ತೀರ್ಮಾನಿಸಿದ್ದಾರೆ.

ಅದಕ್ಕೂ ಮೊದಲು ತಮ್ಮ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ಸಂಪುಟ ಸಹೋದ್ಯೋಗಿಗಳಿಗೆ ಅವರು ಉಪಾಹಾರ ಕೂಟ ಆಯೋಜಿಸಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ, ತಮ್ಮ ರಾಜೀನಾಮೆ ನಿಲುವಿಗೆ ಕಾರಣ ಹಾಗೂ ಹೈಕಮಾಂಡ್ ನಿರ್ಧಾರದ ಬಗ್ಗೆ ಸಿದ್ದರಾಮಯ್ಯ ಅವರು ಸಚಿವರಿಗೆ ಮನವರಿಕೆ ಮಾಡಿಕೊಡುವ ಸಾಧ್ಯತೆಯಿದೆ.

ಮಧ್ಯಾಹ್ನ ರಾಜ್ಯಪಾಲರ ಭೇಟಿಗೆ ಲೋಕಭವನಕ್ಕೆ ತೆರಳಲು ಸಿದ್ದರಾಮಯ್ಯ ಸಮಯ ಕೇಳಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ. ರಾಜ್ಯ ರಾಜಕೀಯ ಬೆಳವಣಿಗೆಗಳ ಕುರಿತು ವಿಧಾನಸೌಧದಲ್ಲಿ ಸುದ್ದಿಗಾರರು ಬುಧವಾರ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ

ಸಿದ್ದರಾಮಯ್ಯ, 'ನಾಳೆ (ಗುರುವಾರ) ಎಲ್ಲವನ್ನೂ ಮಾತನಾಡುತ್ತೇನೆ' ಎಂದಷ್ಟೆ ಹೇಳಿದರು.

ಈ ಬೆಳವಣಿಗೆಗಳ ನಡುವೆಯೇ ರಾಜ್ಯಕ್ಕೆ ಬಂದಿರುವ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸಿದ್ದರಾಮಯ್ಯ ನಿವಾಸಕ್ಕೆ ತೆರಳಿ ಸುಮಾರು ಒಂದು ಗಂಟೆ ಪ್ರತ್ಯೇಕವಾಗಿ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಸಚಿವರಾದ ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ, ಬಿ.ಝಡ್. ಜಮೀರ್ ಅಹಮದ್ ಖಾನ್, ಬೈರತಿ ಸುರೇಶ್, ಆರ್.ಬಿ. ತಿಮ್ಮಾಪುರ, ಎನ್.ಎಸ್. ಬೋಸರಾಜು, ಎಂ.ಸಿ.ಸುಧಾಕರ್, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಪೊನ್ನಣ್ಣ ಮತ್ತಿತರರು ಹೊರಗಿದ್ದರು.

6

ಬಲಾಬಲಕ್ಕೆ ಪಟ್ಟು: ಆಯ್ಕೆ ಕಗ್ಗಂಟು?

ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು ನಿಕ್ಕಿಯಾಗಿದ್ದರೂ, ಉತ್ತರಾಧಿಕಾರಿ ಆಯ್ಕೆ ಕಗ್ಗಂಟಾಗುವ ಬೆಳವಣಿಗೆಗಳು ಬುಧವಾರ ನಡೆದಿವೆ.

ತಮ್ಮ ನಾಯಕನನ್ನು ಭೇಟಿ ಮಾಡಿದ ಆಪ್ತಬಣದ ಸಚಿವರು ಹಾಗೂ ಶಾಸಕರ ದಂಡು ಇಂತಹದೊಂದು ಪಟ್ಟು ಹಾಕುವ ಬಗ್ಗೆ ಸಿದ್ದರಾಮಯ್ಯ ಅವರ ಬಳಿ ಚರ್ಚೆ ನಡೆಸಿದೆ.

ಈ ಚರ್ಚೆಯ ವೇಳೆ, 'ಮುಂದಿನ ಮುಖ್ಯಮಂತ್ರಿ ಯಾರೆಂದು ನಿಮಗೆ ತಿಳಿಸಿದ್ದಾರಾ ಎಂದು ಬೆಂಬಲಿಗರು ಪ್ರಶ್ನಿಸಿದ್ದಾರೆ. 'ನಾವು ತೀರ್ಮಾನ ಮಾಡುತ್ತೇವೆ ಎಂಬುದಾಗಿ ವರಿಷ್ಠರು ಹೇಳಿದ್ದಾರೆ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆಗ, 'ನಮ್ಮೆಲ್ಲರ ಅಭಿಪ್ರಾಯ ಕೇಳದೇ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಹೇಗೆ ಮಾಡುತ್ತಾರೆ, ಶಾಸಕರ ಮಾತಿಗೆ ಬೆಲೆ ಇಲ್ಲವೇ ಎಂಬ ಪ್ರಶ್ನೆಯನ್ನು ಕೆಲವರು ಕೇಳಿದ್ದಾರೆ' ಎಂದು ಗೊತ್ತಾಗಿದೆ.

'ಈ ವ್ಯಕ್ತಿಯನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡುವುದು' ಎಂಬ ಹೈಕಮಾಂಡ್ ಸೂಚನೆಯ ಒಂದು ಸಾಲಿನ ಆದೇಶ ಪಾಲಿಸಲು ಸಾಧ್ಯವೇ ಇಲ್ಲ. ಪ್ರತಿಯೊಬ್ಬರ ಅಭಿಪ್ರಾಯ ಕೇಳಬೇಕು. ಪರಿಸ್ಥಿತಿ ಅನುಕೂಲಕರವಾಗಿದ್ದರೆ ಜಿ. ಪರಮೇಶ್ವರ ಹೆಸರನ್ನು ಮುಂದಿಟ್ಟು, ಬಲಾಬಲ ಪರೀಕ್ಷೆಗೆ ಬೇಡಿಕೆ ಇಡಬೇಕು' ಎಂದು ಬಹುತೇಕ ಶಾಸಕರು ಒತ್ತಾಯಿಸಿದ್ದಾರೆ' ಎಂದು ತಿಳಿದು ಬಂದಿದೆ.

'3 ಗಂಟೆಗೆ ಸಿದ್ದರಾಮಯ್ಯ ರಾಜೀನಾಮೆ'

'ನನಗಿರುವ ಮಾಹಿತಿ ಪ್ರಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಮಧ್ಯಾಹ್ನ 3 ಗಂಟೆಗೆ ರಾಜೀನಾಮೆ ಕೊಡುತ್ತಾರೆ' ಎಂದು ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ ಎಂ. ಪಟ್ಟಣ ಹೇಳಿದರು.

'ರಾಜೀನಾಮೆ ಕೊಟ್ಟು ಬೇರೆಯವರಿಗೆ ಅವಕಾಶ ಕೊಡಿ ಎಂದು ಸಿದ್ದರಾಮಯ್ಯ ಅವರಿಗೆ ರಾಹುಲ್ ಗಾಂಧಿ ಹೇಳಿದ್ದಾರೆ. ಶಿವಕುಮಾರ್ ಅವರಿಗೆ ಅವಕಾಶ ಸಿಗಬಹುದು. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆದಾಗ ಹೋಗುತ್ತೇವೆ. ಒಳ್ಳೆಯ ಸಮರ್ಥ ನಾಯಕನನ್ನು ಆಯ್ಕೆ ಮಾಡುತ್ತೇವೆ' ಎಂದೂ ಹೇಳಿದರು.

ಜಾತಿ ಸಮೀಕ್ಷೆ ವರದಿ ಸಲ್ಲಿಕೆ: ಸರ್ಕಾರಕ್ಕೆ ಆಯೋಗ ಶಿಫಾರಸು

ಒಬಿಸಿ ಮೀಸಲು ಶೇ 42ಕ್ಕೆ

ಯಾವ ಸಮುದಾಯ ಎಷ್ಟು ಜನಸಂಖ್ಯೆ	ಮುಸ್ಲಿಂ	ವೀರಶೈವ/ಲಿಂಗಾಯತ	ಒಕ್ಕಲಿಗರು	ಕುರುಬ
	75-80 ಲಕ್ಷ	60-65 ಲಕ್ಷ	55-60 ಲಕ್ಷ	40-45 ಲಕ್ಷ
	14%	11%	10%	8%

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳಿಗೆ (ಒಬಿಸಿ) ಈಗ ನೀಡುತ್ತಿರುವ ಮೀಸಲಾತಿ ಪ್ರಮಾಣವನ್ನು ಶೇ 32ರಿಂದ ಶೇ 42ಕ್ಕೆ ಹೆಚ್ಚಳ ಮಾಡಲು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಶಿಫಾರಸು ಮಾಡಿದೆ.

ಆಯೋಗವು ಸಿದ್ಧಪಡಿಸಿದ 13 ಅಧ್ಯಾಯಗಳನ್ನು ಒಳಗೊಂಡ 280 ಪುಟಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆ ವರದಿಯನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂಧನ್ ನಾಯಕ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುಧವಾರ ಸಲ್ಲಿಸಿದರು. ಮುಖ್ಯಮಂತ್ರಿ ಸ್ಥಾನ ತ್ಯಜಿಸುವಂತೆ ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದ ಬಳಿಕ, ಆಯೋಗದ ಅಧ್ಯಕ್ಷರಿಗೆ ಕರೆ ಮಾಡಿದ್ದ ಸಿದ್ದರಾಮಯ್ಯ ಅವರು, ಬುಧವಾರವೇ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದರು.

7

ಪ್ರಸ್ತುತ ಪ್ರವರ್ಗ	ಮೀಸಲಾತಿ (ಶೇಕಡವಾರು)	ಹೊಸ ಪ್ರವರ್ಗ	ಹೆಚ್ಚಳ (ಶೇಕಡವಾರು)
1	4	1ಎ	4
		1ಬಿ	4
2ಎ	15	2ಎ	10
2ಬಿ	4	2ಬಿ	6
		2ಸಿ	6
3ಎ	4	3ಎ	4
3ಬಿ	5	3ಬಿ	5
		3ಸಿ	3
ಒಟ್ಟು	32		42

ಎಸ್‌ಐಆರ್‌ಗೆ 'ಸುಪ್ರೀಂ' ಬಲ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ'(ಎಸ್‌ಐಆರ್) ನಡೆಸುವುದಕ್ಕೆ ಸಂಬಂಧಿಸಿ ಚುನಾವಣಾ ಆಯೋಗ ಅಧಿಕಾರ ಹೊಂದಿರುವುದನ್ನು ಸುಪ್ರೀಂ ಕೋರ್ಟ್ ಬುಧವಾರ ಎತ್ತಿ ಹಿಡಿದಿದೆ.

'ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸುವುದಕ್ಕೆ ಸಂವಿಧಾನದ 324ನೇ ವಿಧಿ ಹಾಗೂ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 21(3)ರಡಿ ಚುನಾವಣಾ ಆಯೋಗಕ್ಕೆ ಅಧಿಕಾರ ಇದೆ' ಎಂದು ಹೇಳಿದೆ.

'ಚುನಾವಣೆಗಳು ನ್ಯಾಯಸಮ್ಮತವಾಗಿ ನಡೆಯಬೇಕು ಎಂಬುದು ಸಾಂವಿಧಾನಿಕ ಆದೇಶ. ಹೀಗಾಗಿ, ಆಯೋಗ ನಡೆಸುವ ಎಸ್‌ಐಆರ್ ಪ್ರಕ್ರಿಯೆಯು ಸಂವಿಧಾನದ ಈ ಆಶಯಕ್ಕೆ ಜೀವ ತುಂಬಲಿದೆ' ಎಂದು ಮಹತ್ವದ ತೀರ್ಪು ನೀಡಿದೆ. ಈ ಮೂಲಕ, ಚುನಾವಣಾ ಆಯೋಗವು ಕೈಗೆತ್ತಿಕೊಂಡಿರುವ ಎಸ್‌ಐಆರ್‌ಗೆ ಮತ್ತಷ್ಟು ಬಲ ಬಂದಂತಾಗಿದೆ.

ಬಿಹಾರದಲ್ಲಿ ಕೈಗೊಂಡಿದ್ದ ಎಸ್‌ಐಆರ್ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠ ತೀರ್ಪು ಪ್ರಕಟಿಸಿದೆ.

10

THE ORIGINAL ABHARAN® UDUPI | Head office and Registered office: Corporation Bank Road, Udupi-576101
Mangaluru: Shivbagh & Mannagudde | Shivamogga | Kundapur | Karkala | Byndoor | Hebri | Kumta | Chikmagalur | Padubidri
Brahmavara | Belthangady | Sagara | Thirthahalli | Jayanagar, Bengaluru | Goa: Panjim & Margao | Toll Free: 1800 5999 777 | www.abharan.com
Our Official Store in Bengaluru, Only at 5th Block, Jayanagar.

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ

ಸಾಂಸ್ಕೃತಿಕ ಮುನ್ನೋಟ

‘ಕಥೆಗಾರ’ ನಾಟಕ



ಬೆಂಗಳೂರು: ಕಲಾಧ್ಯಾನ್ ಇನ್‌ಸ್ಟಿಟ್ಯೂಟ್ ಫಾರ್ ಆರ್ಟ್ಸ್ ಇದೇ 29ರಂದು ಸಂಜೆ 7 ಗಂಟೆಗೆ ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿ ‘ಕಥೆಗಾರ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ವಿವೇಕ್ ಎಂ. ರಾವ್ ಅವರು ರಚಿಸಿ ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ಕಲಾ ಸಂವಾದ

ಬೆಂಗಳೂರು: ಪರಮ್ ಕಲ್ಚರ್ ಸಾಂಸ್ಕೃತಿಕ ವೇದಿಕೆಯು ಇದೇ 31ರಂದು ಸಂಜೆ 6 ಗಂಟೆಗೆ ಮೀನಾಕ್ಷಿ ರಂಗಮಂಚ ಸಭಾಂಗಣದಲ್ಲಿ ‘ಕಲಾ ಸಂವಾದ’ ಸಾಂಸ್ಕೃತಿಕ ಚಿಂತನ-ಮಂಥನ ಕಾರ್ಯಕ್ರಮ ಹಮ್ಮಿಕೊಂಡಿದೆ.

ರಂಗಕರ್ಮಿ ಪ್ರಕಾಶ್ ಬೆಳವಾಡಿ ನೇತೃತ್ವದಲ್ಲಿ ಚರ್ಚೆ ನಡೆಯಲಿದೆ. ಕಲಾ ದಂಪತಿ ನಿರುಪಮಾ ರಾಜೇಂದ್ರ ಮತ್ತು ಟಿ.ಡಿ.ರಾಜೇಂದ್ರ ಅವರೊಂದಿಗೆ ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಅವರು ಸಂವಾದ ನಡೆಸಲಿದ್ದಾರೆ.

ಅಭಿನವ ಪ್ರೊಡಕ್ಷನ್ಸ್ ವತಿಯಿಂದ ವೇಷಭೂಷಣಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ನೃತ್ಯ ರೂಪಕಗಳಿಗೆ ಬಳಸಲಾದ ಭವ್ಯ ವೇಷಭೂಷಣಗಳು, ಕಲಾತ್ಮಕ ಕಿರೀಟಗಳು ಮತ್ತು ಅಪರೂಪದ ಆಭರಣಗಳನ್ನು ಕಣ್ತುಂಬಿಕೊಳ್ಳಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ಮಂಟೇಸ್ವಾಮಿ ಕಾವ್ಯ ಲೈವ್

ಬೆಂಗಳೂರು: ಕೋರಮಂಗಲದಲ್ಲಿರುವ ಇಂಡಿಯನ್ ಹೆರಿಟೇಜ್ ಅಕಾಡೆಮಿ ತನ್ನ ಕೇಂದ್ರದಲ್ಲಿ ಇದೇ 29ರಂದು ಸಂಜೆ 6.30ಕ್ಕೆ ‘ಮಂಟೇಸ್ವಾಮಿ ಕಾವ್ಯ ಲೈವ್’ ಕಾರ್ಯಕ್ರಮ ಹಮ್ಮಿಕೊಂಡಿದೆ.

15ನೇ ಶತಮಾನದ ಸಂತ ಮಂಟೇಸ್ವಾಮಿ ಅವರ ಜೀವನ ಮತ್ತು ಸಂಚಾರಗಳನ್ನು ಆಧರಿಸಿದ ಈ ಕಾವ್ಯ, ಕರ್ನಾಟಕದ ವಿವಿಧ ಸಮುದಾಯಗಳ ಜನರನ್ನು ಒಟ್ಟುಗೂಡಿಸುತ್ತಾ, ಸಾಮಾಜಿಕ ಅಸಮಾನತೆ ಮತ್ತು ಶ್ರೇಣೀಕರಣಗಳನ್ನು ಪ್ರಶ್ನಿಸುತ್ತದೆ. ಈ ಜೀವಂತ ಪರಂಪರೆಯ ಒಂದು ಭಾಗವನ್ನು ಪ್ರೇಕ್ಷಕರ ಮುಂದೆ ತರಲಾಗುತ್ತಿದೆ.

ಈ ಕಾರ್ಯಕ್ರಮವನ್ನು ಮೈಸೂರು ಜಿ. ಗುರುರಾಜ್ ಅವರು ಮುನ್ನಡೆಸಲಿದ್ದಾರೆ. ಸಿ. ಬಸವರಾಜು (ಸಹಗಾನ), ಬಿ. ಜಗದೀಶ್ (ಡಕ್ಕಿ), ಜಿ. ಪೃಥ್ವಿರಾಜ್ (ಕಂಜರಿ), ಕಾಂತರಾಜು (ತಾಳ), ಜಿ. ಸಿದ್ದರಾಜು (ಘಟ) ಅವರು ಸಾಥ್ ನೀಡಲಿದ್ದಾರೆ. ಪ್ರವೇಶ ಉಚಿತ ಎಂದು ಆಯೋಜಕರು ತಿಳಿಸಿದ್ದಾರೆ.

ನೋಂದಣಿಗೆ ಲಿಂಕ್: https://forms.gle/uBFL62eriUso5ymU9

‘ಪುಕ್ಕಟೆ ಸಲಹೆ’ ಹಾಸ್ಯ ನಾಟಕ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗ ತಂಡವು ಇದೇ 30ರಂದು ಸಂಜೆ 7 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ ‘ಪುಕಟ್ಟೆ ಸಲಹೆ’ ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನಾಟಕವನ್ನು ಎಚ್. ಡುಂಡಿರಾಜ್ ಅವರು ರಚಿಸಿದ್ದು, ಅಶೋಕ್ ಬಿ. ನಿರ್ದೇಶಿಸಿದ್ದಾರೆ. ದಿನವಿಡೀ ಎಲ್ಲ ಟಿ.ವಿಗಳಲ್ಲಿ ವಿಜೃಂಭಿಸುವ ಜ್ಯೋತಿಷಿಗಳ ಹಾವಳಿ, ಅವರ ನಿಜಬಣ್ಣ, ಅವಾಂತರಗಳನ್ನು ಹಾಸ್ಯದ ಮೂಲಕ ನಾಟಕ ಕಟ್ಟಿಕೊಡಲಿದೆ. ಒಂದೂವರೆ ಗಂಟೆಯ ಈ ಪ್ರದರ್ಶನ, ಪ್ರೇಕ್ಷಕರು ನಗೆಗಡಲಲ್ಲಿ ತೇಲುವಂತೆ ಮಾಡಲಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ ಎಂದು ಆಯೋಜಕರು ತಿಳಿಸಿದ್ದಾರೆ. ವಿವರಕ್ಕೆ: 9945977184

‘ಬಾಯ್ ತುಂಬ ನಕ್ಬಿಡಿ’ ನಾಟಕ

ಬೆಂಗಳೂರು: ಅಂತರಂಗ ಬಹಿರಂಗ ತಂಡ ಮತ್ತು ಕಲ್ಪವೃಕ್ಷ ಟ್ರಸ್ಟ್ ಜಂಟಿಯಾಗಿ ಇದೇ 31ರಂದು ಸಂಜೆ 7 ಗಂಟೆಗೆ ‘ಬಾಯ್ ತುಂಬ ನಕ್ಬಿಡಿ’ ಮಹಿಳೆಯರ ನಗೆ ನಾಟಕವನ್ನು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಹಮ್ಮಿಕೊಂಡಿವೆ.

ನಾಗವೇಣಿ ರಂಜನ್ ಅವರು ಈ ನಾಟಕ ರಚಿಸಿದ್ದು, ವನಿತಾ ರಂಗಾಯಣ ನಿರ್ದೇಶಿಸಿದ್ದಾರೆ. ಈ ಕಥೆಯು ಮನೆಯ ಯಜಮಾನಿ ಮತ್ತು ಆಕೆಯ ಸೇವಕಿ ಸುತ್ತ ಸುತ್ತುತ್ತದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ಜಾಣಜಾಣೆಯ ‘ನಗೆ ಹಬ್ಬ’

ಬೆಂಗಳೂರು: ಜಾಣಜಾಣೆಯ ಸಾಹಿತಿ ಕಲಾವಿದರ ಟ್ರಸ್ಟ್ ಇದೇ 31ರಂದು ಸಂಜೆ 5 ಗಂಟೆಗೆ ಮಲ್ಲೇಶ್ವರದಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ ಜಾಣಜಾಣೆಯ ‘ನಗೆ ಹಬ್ಬ’ ಹಮ್ಮಿಕೊಂಡಿದೆ.

ಗಂಗಾವತಿ ಪ್ರಾಣೇಶ್

ನಾಲ್ಕೂವರೆ ತಾಸು ಈ ಕಾರ್ಯಕ್ರಮ ನಡೆಯಲಿದ್ದು, ಹಾಸ್ಯ, ಸಂಗೀತ, ಮಿಮಿಕ್ರಿ ಇರಲಿದೆ. ಮಿಮಿಕ್ರಿ ಕಲಾವಿದರಾದ ದಯಾನಂದ್, ಗೋಪಿ, ಹಾಸ್ಯ ಕಲಾವಿದರಾದ ಗಂಗಾವತಿ ಪ್ರಾಣೇಶ್, ಎಂ.ಎಸ್. ನರಸಿಂಹಮೂರ್ತಿ, ಸಂಗೀತಗಾರ ಗುರುಕಿರಣ್ ಪಾಲ್ಗೊಳ್ಳಲಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

‘ಪರ್ವ’ ನಾಟಕ ಪ್ರದರ್ಶನ

ಬೆಂಗಳೂರು: ಕೋಣನಕುಂಟೆಯಲ್ಲಿರುವ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ತನ್ನ ಕೇಂದ್ರದಲ್ಲಿ ಇದೇ 30 ಮತ್ತು 31ರಂದು ಬೆಳಿಗ್ಗೆ 10 ಗಂಟೆಯಿಂದ ‘ಪರ್ವ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಎಸ್.ಎಲ್.ಭೈರಪ್ಪ ಅವರ ಕಾದಂಬರಿ ಆಧಾರಿತ ನಾಟಕ ಇದಾಗಿದೆ. ರಂಗಕರ್ಮಿ ಪ್ರಕಾಶ್ ಬೆಳವಾಡಿ ಅವರು ನಿರ್ದೇಶಿಸಿದ್ದಾರೆ. ಇದು ಮಹಾಭಾರತದ ಕಥೆಯನ್ನು ಆಧರಿಸಿದ್ದು, 8 ಗಂಟೆಗಳ ನಾಟಕವಾಗಿದೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

‘ನಾಳೆ ಬಾ!’ ಹಾಸ್ಯ ಕಾರ್ಯಕ್ರಮ

ಬೆಂಗಳೂರು: ಬಸವನಗುಡಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ತನ್ನ ಕೇಂದ್ರದಲ್ಲಿ ಇದೇ 29ರಂದು ಸಂಜೆ 6 ಗಂಟೆಗೆ ‘ನಾಳೆ ಬಾ!’ ಸ್ಟ್ಯಾಂಡ್ ಅಪ್ ಕಾಮಿಡಿ ಹಮ್ಮಿಕೊಂಡಿದೆ. ಈ ಕಾರ್ಯಕ್ರಮವನ್ನು ರಾಘವೇಂದ್ರ ಆಚಾರ್ಯ ಅವರು ನಡೆಸಿಕೊಡಲಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ರಾಘವೇಂದ್ರ ಆಚಾರ್ಯ

‘ಬಾಯ್ಬಡ್ಕಿ’ ಹಾಸ್ಯ ನಾಟಕ

ಬೆಂಗಳೂರು: ಅಂತರಂಗ ಬಹಿರಂಗ ತಂಡವು ಇದೇ 31ರಂದು ಸಂಜೆ 4 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ‘ಬಾಯ್ಬಡ್ಕಿ’ ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಭೀಷ್ಮ ರಾಮಯ್ಯ ಅವರು ಈ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಒಂದೂವರೆ ಗಂಟೆಯ ಈ ನಾಟಕದ ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

‘ರಂಗ ರಂಗೋಲಿ’ ನಾಟಕಗಳ ಉತ್ಸವ

ಬೆಂಗಳೂರು: ಅಕಾಡಮಿ ಆಫ್ ಮ್ಯೂಸಿಕ್ ‘ರಂಗ ರಂಗೋಲಿ’ ನಾಟಕಗಳ ಉತ್ಸವವನ್ನು ಮಲ್ಲೇಶ್ವರದಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದೆ.

29ರಂದು ಸಂಜೆ 6.30ಕ್ಕೆ ವೇದಿಕೆ ಫೌಂಡೇಷನ್ ತಂಡವು ‘ತುಘಲಕ್’ ನಾಟಕ ಪ್ರದರ್ಶಿಸಲಿದೆ. ಈ ನಾಟಕವನ್ನು ಗಿರೀಶ ಕಾರ್ನಾಡ ಅವರು ರಚಿಸಿದ್ದು, ಸಿ.ಆರ್. ಸಿಂಹ ನಿರ್ದೇಶಿಸಿದ್ದಾರೆ. ಋತ್ವಿಕ್ ಸಿಂಹ ಅವರು ಮರು ನಿರ್ದೇಶಿದ್ದಾರೆ.

30ರಂದು ಸಂಜೆ 6.30ಕ್ಕೆ ಬೆನಕ ತಂಡದಿಂದ ‘ಗೋಕುಲ ನಿರ್ಗಮನ’ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಬಿ.ವಿ. ಕಾರಂತ್ ಅವರ ಈ ನಾಟಕವನ್ನು ರಂಗಕರ್ಮಿ ಟಿ.ಎಸ್. ನಾಗಾಭರಣ ಅವರು ಮರು ವಿನ್ಯಾಸ ಮಾಡಿದ್ದಾರೆ.

PUBLIC NOTICE

It is hereby notified that, my client **Sri K.J. MOHAN REDDY** has agreed to purchase the Schedule Property from its Owner **Sri. JAGADEESH NARSIMHAIAH, aged about 53 years,** residing at 1105 Governess Lane, Morrisville, NC-27560, represented by his sister GPA Holder **Smt. MAMATHA.N @ MAMATHA VEGINENI,** aged about 49 years, W/o Sri. Anil Kumar, residing at 287, 10th block, 4th Cross, LB Nagar, Anjanapura, Bengaluru-560 108 If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **14 (Fourteen) days** from the date of publication of this notice. Objection/s received thereafter will not be binding on my client.

SCHEDULE PROPERTY

All that piece and parcel of the Residential House Property bearing Property No.723/30, New EPID: 3637648409, 15th 'A Main Road, Gokul 1st Stage 1st Phase, 30, Bengaluru-560054, J.P Park Ward No.17, property measuring East to West: 40 ft and North to South 28.75 ft. and bounded on:

East By : Property bearing No.708 (705)
West By : Road
North By: Property bearing No.724
South By: Property bearing No.722

P.B. BABU, Advocate
Y.B. ASSOCIATES
Tax & Law Consultants
No. 639, 4th Main, MES Ring Road, Near Mother Theresa School, Muthyalanagar, Bangalore-560054. Mobile No.9844622922,
Email id: babu.bcb@gmail.com

DH DECCAN HERALD ಪ್ರಜಾವಾಣಿ

ನಮ್ಮ ಕಂಪನಿಯ ಕೆಳಕಂಡ ವಾಹನಗಳು
“ಎಲ್ಲಿ ಹೇಗಿವೆಯೋ ಹಾಗಿನ ಸ್ಥಿತಿಯಲ್ಲಿ” ಮಾರಾಟಕ್ಕಿವೆ.

INNOVA HYCROSS 7S, 7 Seater Car, Model : July-2023, Running KM as 32,300

ಮೇಲ್ಕಂಡ ವಾಹನವನ್ನು ನಂ. 75, ಎಂ.ಜಿ.ರಸ್ತೆ, ಬೆಂಗಳೂರು–1, ಇಲ್ಲಿ ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆವರೆಗೆ ಪರಿಶೀಲಿಸಬಹುದು. ನಿಮ್ಮ ಆಫರ್‌ಗಳನ್ನು ವಾಟ್ಸಾಪ್ ಸಂಖ್ಯೆಗೆ ಕಳುಹಿಸಬಹುದು +91 7411127118 ಅಥವಾ ಲೆಟರ್ ಹೆಡ್ ಮಾದರಿಯಲ್ಲಿ dineshkumar.d@printersmysore.co.in ಇಮೇಲ್‌ಗೆ ಕಳುಹಿಸಬಹುದು ಅಥವಾ 05-06-2026 ರೊಳಗೆ ನಮ್ಮ ಕಚೇರಿಗೆ ಖುದ್ದಾಗಿ ಸಲ್ಲಿಸಬಹುದು.

ಯಾವುದೇ ಕಾರಣ ನೀಡದೇ ಆಫರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಂಪನಿ ಕಾಯ್ದಿರಿಸಿಕೊಂಡಿದೆ.

ಸಂಪರ್ಕಿಸಿ ಬೇಕಾದ ವ್ಯಕ್ತಿ: ದಿನೇಶ್ ಕುಮಾರ್.ಡಿ. – ಮೊಬೈಲ್: +91 7411127118

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್
ನಂ. 75, ಎಂ.ಜಿ.ರಸ್ತೆ, ಬೆಂಗಳೂರು–560001. ಫೋ: +91 8045557342

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಟಿ.ಬಿ ಸರ್ಕಲ್ ಹತ್ತಿರ, ದೊಡ್ಡಬಳ್ಳಾಪುರ, ಇ-ಮೇಲ್: amodbpura02@gmail.com

ಸಂಖ್ಯೆ:ಸಾ.ಆ.ಡಿಬಿಪಿ/25/2026–27 ದಿನಾಂಕ:26.05.2026

ನೇರ ಸಂದರ್ಶನದ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ಕಛೇರಿ ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಇಲ್ಲಿನ ಎ.ಆರ್.ಟಿ ಕೇಂದ್ರದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಯ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ತುಂಬಲು **ದಿನಾಂಕ :– 04.06.2026 ರಂದು ಮಧ್ಯಾಹ್ನ 2:00** ಗಂಟೆಯವರೆಗೆ ನೇಮಕಾತಿ ಮಾಡಲು ನೇರ ಸಂದರ್ಶನವನ್ನು ನಿಗದಿಪಡಿಸಲಾಗಿದೆ.

1.ವೈದ್ಯಾಧಿಕಾರಿಗಳು (MEDICAL OFFICER) ಹುದ್ದೆಗಳ ಸಂಖ್ಯೆ: 01, ಮಾಸಿಕ ಸಂಚಿತ ವೇತನ ರೂ 72,000/–

Qualification	Age Limit	Desirable	Essential
MBBS with valid registration from the respective State Medical Council/ NMC. Required certificate for computer Knowledge.	Below 70 Years	Work Experience in HIV/AIDS Programme in field settings. Those with MD Medicine/ Diploma in Medical will be preferred	6 Months work experience. Post Graduates from Clinical Discipline will also be considered.

ಸಾಮಾನ್ಯ ಮಾಹಿತಿಗಳು:–

1. ಅರ್ಜಿಗಳನ್ನು ಒಂದು ವರ್ಷದ ಗುತ್ತಿಗೆ ಆಧಾರದ ಮೇಲೆ ಆಹ್ವಾನಿಸಲಾಗಿದೆ.
2. ಅಭ್ಯರ್ಥಿಗಳು ಇತ್ತೀಚಿನ 2 ಪಾಸ್ ಪೋರ್ಟ್ ಭಾವ ಚಿತ್ರ, ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ಸಂದರ್ಶನದ ವೇಳೆ ಸಲ್ಲಿಸುವುದು.
3. ನೇರ ಸಂದರ್ಶನವನ್ನು ದಿನಾಂಕ: **04.06.2026** ರಂದು ಹಮ್ಮಿಕೊಳ್ಳಲಾಗಿದೆ.
4. ಸಂದರ್ಶನದಲ್ಲಿ ಅಭ್ಯರ್ಥಿಗಳನ್ನು ಗರಿಷ್ಠ ಅಂಕಗಳ (Merit) ಆಧಾರದ ಅನುಸಾರ ನೇಮಕಾತಿ ಮಾಡಲಾಗುವುದು.

ಸಹಿ/–
ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ–561203
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾ.ಸಾ.ಸಂ.ಇ/ವಾಪ್ರ/836/ಶಿರಡಿ ಸಾಯಿ/2026–27

AstraZeneca
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್

CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ ಔಟರ್ ರಿಂಗ್ ರೋಡ್, ಬೆಂಗಳೂರು – 560045
ದೂ.: +91 80 6774 8000. ವೆಬ್: www.astrazeneca.com/india

31ನೇ ಮಾರ್ಚ್, 2026ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಮಿಲಿಯನ್‌ಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	31/03/2026ಕ್ಕೆ ಕೊನೆಗೊಂಡ ತ್ರೈಮಾಸಿಕ	31/03/2025ಕ್ಕೆ ಕೊನೆಗೊಂಡ ತ್ರೈಮಾಸಿಕ	31/03/2026ಕ್ಕೆ ಕೊನೆಗೊಂಡ ವರ್ಷಕ್ಕೆ	31/03/2025ಕ್ಕೆ ಕೊನೆಗೊಂಡ ವರ್ಷಕ್ಕೆ
		ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ	ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	5,845.6	4,966.3	23,040.7	17,569.2
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	581.4	784.7	2,522.0	1,563.6
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	448.8	582.5	1,875.2	1,157.4
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	401.2	597.1	1,830.8	1,145.7
5	ಈಕ್ವಿಟಿ ಷೇರು ಬಂಡವಾಳ	50.0	50.0	50.0	50.0
6	ಇತರೆ ಈಕ್ವಿಟಿ	–	–	8,677.9	7,653.5
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	17.95	23.30	75.01	46.30

ಟಿಪ್ಪಣಿಗಳು:

1. ಮೇಲಿನದು, 2015 ರ ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಾವಳಿ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜುಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ವಿವರವಾದ ಹೇಳಿಕೆಗಳ ಸಾರವಾಗಿದೆ. ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಪೂರ್ಣ ಹೇಳಿಕೆ, ಸ್ಟಾಕ್ ಎಕ್ಸ್‌ಚೇಂಜುಗಳ www.nseindia.com ಮತ್ತು www.bseindia.com ಮತ್ತು ಕಂಪನಿಯ www.astrazeneca.com/india ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ. ಇದನ್ನು ಕೆಳಗೆ ನೀಡಿರುವ ಕ್ಯೂಆರ್ (QR) ಕೋಡನ್ನು ಸ್ಕ್ಯಾನ್ ಮಾಡಿಯೂ ಪಡೆಯಬಹುದು.
2. ಕಂಪನಿಗಳ ಕಾಯಿದೆ, 2013 ("ಆಕ್ಟ್") [ಕಂಪನಿಗಳ (ಭಾರತೀಯ ಲೆಕ್ಕಪರಿಶೋಧನೆ ಮಾನದಂಡಗಳು) ನಿಯಮಗಳು, 2015 (ತಿದ್ದುಪಡಿಮಾಡಿದಂತೆ)] ರ ಸೆಕ್ಷನ್ 133 ಅಡಿಯಲ್ಲಿ ಸೂಚಿಸಿರುವಂತಹ ಮತ್ತು ಅನ್ವಯವಾಗುವಂತಹ ಭಾರತೀಯ ಲೆಕ್ಕಪರಿಶೋಧಕ ಮಾನದಂಡಗಳು ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಇತರ ಲೆಕ್ಕಪತ್ರ ತತ್ವಗಳ ಅನುಸಾರ ಅಪರಿಶೋಧಿತ ಹಣಕಾಸು ಫಲಿತಾಂಶಗಳ ಹೇಳಿಕೆಗಳನ್ನು ಸಿದ್ಧಪಡಿಸಲಾಗಿದೆ.
3. ಹಿಂದೊಂದು ವರ್ಷದಲ್ಲಿ ಕಂಪನಿಯು, ಬೆಂಗಳೂರಿನಲ್ಲಿರುವ ತನ್ನ ಉತ್ಪಾದನಾ ತಾಣದಿಂದ ಸಕಾಲದಲ್ಲಿ ನಿರ್ಗಮಿಸುವ ಉದ್ದೇಶವನ್ನು ಹೊಂದಿರುವುದಾಗಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ತಿಳಿಸಿತ್ತು. ನಂತರದಲ್ಲಿ ಕಂಪನಿ, ತನ್ನ ಉತ್ಪಾದನಾ ತಾಣವನ್ನು ಸಂಪೂರ್ಣವಾಗಿ ಕೆಲಸ ಮಾಡುತ್ತಿರುವ ಸ್ಥಿತಿಯಲ್ಲೆ ಯಾವುದಾದರೂ ಸೂಕ್ತ ಕಾಂಟ್ರ್ಯಾಕ್ಟ್ ಮ್ಯಾನುಫ್ಯಾಕ್ಚರಿಂಗ್ ಆರ್ಗನೈಸೇಶನ್ (ಸಿಎಂಒ) ಗೆ ಮಾರಾಟ ಮಾಡಲು ಹುಡುಕಾಟವನ್ನು ಪ್ರಾರಂಭಿಸಿತ್ತು. ಆದರೆ ಇದಕ್ಕೆ ಬದಲಾಗಿ, ಜೂನ್ 21, 2024 ರಂದು ಕಂಪನಿಯ ಮಂಡಳಿಯು, ಕಂಪನಿಯ ಉತ್ಪಾದನಾ ತಾಣಕ್ಕೆ ಸೂಕ್ತ ಖರೀದಿದಾರರನ್ನು ಹುಡುಕಿ ಸಕಾಲದಲ್ಲಿ ನಿರ್ಗಮಿಸುವುದು ಉತ್ತಮ ಎಂದು ನಿರ್ಣಯಿಸಿತು. ಜೂನ್ 30, 2025 ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ, ಕಂಪನಿಯ ಉತ್ಪಾದನಾ ಚಟುವಟಿಕೆಗಳು ಸ್ಥಗಿತಗೊಂಡಿದ್ದು ಉತ್ಪಾದನಾ ತಾಣಕ್ಕೆ ಸಂಬಂಧಿಸಿದ ಸ್ವತ್ತುಗಳ ಮಾರಾಟ ಪ್ರಕ್ರಿಯೆ ನಡೆಯುತ್ತಿದೆ. ಅದರಂತೆ, ಕಂಪನಿಯು ಸದರಿ ಸ್ವತ್ತುಗಳನ್ನು ಸಂಬಂಧಪಟ್ಟ ಲೆಕ್ಕಪತ್ರ ಮಾನದಂಡಗಳ ಅಗತ್ಯತೆಗಳಿಗೆ ಅನುಸಾರ, "ಮಾರಾಟಕ್ಕಾಗಿ ಹಿಡಿದಿಟ್ಟುಕೊಂಡಿರುವ ಸ್ವತ್ತುಗಳು" ಎಂದು ವರ್ಗೀಕರಿಸಿದೆ.
4. ಈ ಹಣಕಾಸಿನ ಫಲಿತಾಂಶಗಳ ಹೇಳಿಕೆ, ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಹೇಳಿಕೆ, ಮತ್ತು ನಗದು ಹರಿವಿನ ಹೇಳಿಕೆಗಳನ್ನು ಮಂಡಳಿಯ ಆಡಿಟ್ ಕಮಿಟಿ ಪರಿಶೀಲಿಸಿ ಶಿಫಾರಸು ಮಾಡಿದ್ದು ನಂತರ 26 ಮೇ 2026 ರಂದು ನಡೆದ ಆಯಾ ಸಭೆಗಳಲ್ಲಿ ನಿರ್ದೇಶಕರ ಮಂಡಳಿಯು ಅನುಮೋದಿಸಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ

ಪ್ರವೀಣ್ ರಾವ್ ಅಕ್ಕಿನೇಪಲ್ಲಿ
ಮ್ಯಾನೇಜಿಂಗ್ ಡೈರೆಕ್ಟರ್
DIN: 11137771

ಸ್ಥಳ: ಬೆಂಗಳೂರು
ದಿನಾಂಕ: 26 ಮೇ 2026

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in

ತಿದ್ದುಪಡಿ ಪ್ರಕಟಣೆ

ಇ-ಟೆಂಡರ್ ಸೂಚನೆ ಸಂಖ್ಯೆ: ಆರ್ ಎಂ ಎಫ್/ಎಂ/ಓಟಿ/ಎ ಎಫ್‌ಎಸ್/2026-27/07
ದಿನಾಂಕ: 30/05/2026

ಟೆಂಡರ್ ಸಂಖ್ಯೆ: ಆರ್ ಡಬ್ಲ್ಯೂ ಎಫ್ /ಎಂ /ಓಟಿ /ಎ ಎಫ್ ಎಸ್ /2026–27/07, **ಕಾಮಗಾರಿಯ ಹೆಸರು:** ಎರಡು ವರ್ಷಗಳ ಅವಧಿಗೆ 1,80,000 ಆಕ್ಸಲ್‌ಗಳ ಪ್ರಮಾಣಕ್ಕಾಗಿ ಹೊಸ ಆಕ್ಸಲ್ ಫೋರ್ಜಿಂಗ್ ಲೈನ್ ಕಾರ್ಯಾಚರಣೆಯ ಕೆಲಸವನ್ನು (ಕನ್ಸ್ಯೂಮೆಬಲ್ಸ್) ಹೊರಗುತ್ತಿಗೆ ನೀಡುವುದು, **ಅಂದಾಜು ಮೊತ್ತ:** ರೂ 14,20,03,800.00, ಇ.ಎಂ.ಡಿ: ರೂ 28,40,100.00, **ತಾಂತ್ರಿಕ ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ:** 29/05/2026 ಬೆಳಿಗ್ಗೆ 10.30 ಗಂಟೆಗೆ, **ತಾಂತ್ರಿಕ ಬಿಡ್ ಸಲ್ಲಿಸುವ ಕೊನೆಯ ವಿಸ್ತರಿತ ದಿನಾಂಕ ಮತ್ತು ಸಮಯ:** 05/06/2026. **ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** ನಂತರ ತಿಳಿಸಲಾಗುವುದು. **ಪ್ರೀ-ಬಿಡ್ ಸಭೆಯ ದಿನಾಂಕ ಮತ್ತು ಸಮಯ:** 02/06/2026 ಬೆಳಿಗ್ಗೆ 11.30 ಗಂಟೆಗೆ ಕಾಮಗಾರಿ ಪೂರ್ಣಗೊಳಿಸುವ ಅವಧಿ: 24 ತಿಂಗಳು, ಈ ಟೆಂಡರ್ ಸೂಚನೆಯನ್ನು ನಮ್ಮ ವೆಬ್ಸೈಟ್ www.rwf.indianrailways.gov.in ನಲ್ಲಿ ವೀಕ್ಷಿಸಬಹುದು.

ಉಪ. ಸಿಎಂಇ/ಯೋಜನೆ
ಭಾರತದ ರಾಷ್ಟ್ರಪತಿಗಳ ಪರವಾಗಿ

ಕೆಐಒಸಿಎಲ್ ಲಿಮಿಟೆಡ್
KIOCL LIMITED

KUDREMUKH
(ಭಾರತ ಸರ್ಕಾರದ ಒಂದು ಉದ್ಯಮ)
CIN-L13100KA1976GO1002974
ದೂ. & ಫ್ಯಾಕ್ಸ್ ನಂ. 080-25531525
ಇಮೇಲ್: cs@kioclltd.in
ವೆಬ್‌ಸೈಟ್: www.kioclltd.in

ಮಾರ್ಚ್ 31, 2026 ಕ್ಕೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕ ಮತ್ತು ವರ್ಷದ ಲೆಕ್ಕಪರಿಶೋಧಿತ ಹಣಕಾಸು ಫಲಿತಾಂಶಗಳ ವರದಿ

ಕಂಪನಿಯ ನಿರ್ದೇಶಕರ ಮಂಡಳಿಯು 27.05.2026 ರಂದು ನಡೆದ ಸಭೆಯಲ್ಲಿ, ಮಾರ್ಚ್ 31, 2026 ರಂದು ಅಂತ್ಯಗೊಂಡ 4ನೇ ತ್ರೈಮಾಸಿಕ ಮತ್ತು ವರ್ಷದ ಸ್ವತಂತ್ರ ಪರಿಶೀಲಿತ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ.

ಸೀಮಿತ ವರದಿಯ ವಿಮರ್ಶೆಯೊಂದಿಗೆ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ https://www.kioclltd.in/table.php?id=267 ನಲ್ಲಿ ಪ್ರಕಟಿಸಲಾಗಿದೆ..

ತ್ವರಿತ ಪ್ರತಿಕ್ರಿಯೆ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಇದನ್ನು ಪ್ರವೇಶಿಸಬಹುದು.

ಸ್ಥಳ : ಬೆಂಗಳೂರು, ಭಾರತ
ದಿನಾಂಕ : 27.05.2026

ಮಂಡಳಿಯ ಆದೇಶದ ಮೇರೆಗೆ
ಕೆ.ಐ.ಒ.ಸಿ.ಎಲ್ ಲಿಮಿಟೆಡ್ ಗಾಗಿ
ಸಹಿ/– **ಗಂಟಿ ವೆಂಕಟ್ ಕಿರಣ್**
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
DIN: 07605925

ಗಮನಿಸಿ: ಗಮನಿಸಿ: ಮೇಲಿನ ಬಹಿರಂಗಪಡಿಸುವಿಕೆಯು ಖಇಃಖ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆ) ನಿಯಮಗಳು, 2015 ರ ನಿಯಮ 47(1) ರೊಂದಿಗೆ ಓದಲಾದ ನಿಯಮ 33 ರ ಪ್ರಕಾರವಾಗಿದೆ.

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727; **Website:** www.kirloskarelectric.com;
Email: investors@kirloskarelectric.com; **CIN:** L31100KA1946PLC000415

EXTRACT OF STATEMENT OF AUDITED FINANCIAL RESULTS FOR THE QUARTER AND YEAR ENDED MARCH 31, 2026

(₹. in Lakhs)

Sr. No.	Particulars	Standalone					Consolidated				
		Quarter ended			Year ended		Quarter ended			Year ended	
		Mar 31, 2026	Dec 31, 2025	Mar 31, 2025	Mar 31, 2026	Mar 31, 2025	Mar 31, 2026	Dec 31, 2025	Mar 31, 2025	Mar 31, 2026	Mar 31, 2025
		Audited	Unaudited	Audited	Audited	Audited	Audited	Unaudited	Audited	Audited	Audited
1	Total income from operations	16,438	15,510	13,154	60,040	55,080	16,438	15,510	13,231	60,040	55,157
2	Net Profit / (Loss) for the period (before Tax, Exceptional and/or Extraordinary items)	(53)	1,239	(237)	1,684	(254)	(54)	1,238	(366)	1,677	(597)
3	Net Profit / (Loss) for the period before tax (after Exceptional and/or Extraordinary items)	(53)	430	(237)	875	741	(54)	429	(366)	868	398
4	Net Profit / (Loss) for the period after tax (after Exceptional and/or Extraordinary items)	(62)	409	(255)	845	716	(63)	408	(384)	838	373
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	(11)	175	(219)	662	3,583	(12)	176	(348)	655	3,240
6	Equity share capital	6,641	6,641	6,641	6,641	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA	NA	NA	NA	NA
8	Earnings per share (EPS) (₹)										
	(a) Basic EPS before extra ordinary items (not annualised)	(0.09)	0.62	(0.38)	1.27	1.08	(0.09)	0.62	(0.58)	1.26	0.56
	(b) Diluted EPS before extra ordinary items (not annualised)	(0.09)	0.62	(0.38)	1.27	1.08	(0.09)	0.62	(0.58)	1.26	0.56
	(c) Basic EPS after extra ordinary items (not annualised)	(0.09)	0.62	(0.38)	1.27	1.08	(0.09)	0.62	(0.58)	1.26	0.56
	(d) Diluted EPS after extra ordinary items (not annualised)	(0.09)	0.62	(0.38)	1.27	1.08	(0.09)	0.62	(0.58)	1.26	0.56

NOTE:

1. The above audited standalone and consolidated financial results have been reviewed by the Audit Committee and approved by the Board of Directors at its meeting held on May 26, 2026.
2. The standalone and consolidated financial results of the Company for the quarter and year ended March 31, 2026 have been audited by its Statutory auditors.
3. The above is an extract of the detailed format of the audited financial results for the quarter and year ended March 31, 2026 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the audited financial results are available on the stock exchange websites (www.bseindia.com, www.nseindia.com) and also on the company's website (**http://www.kirloskarelectric.com/investors/investors- information/ financial.html**) and can also be accessed by scanning the below quick response code.

Place : Bengaluru
Date : May 26, 2026

Vijay R Kirloskar
Executive Chairman

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

VISHWA CHETHNA MANAGEMENT COLLEGE
Hosur Road, Anekal-562106
WANTED
DIRECTOR for MBA and MCA
PG, with PhD and 10 to 15 years of experience in teaching/Industry.
Desirable qualification: Good communication, Good administrative skills and networking knowledge.
ASSISTANT PROFESSORS: MBA, MCA with Experience
ASSOCIATE PROFESSORS: PG with PhD in relevant discipline with 10 to 15 years of experience in teaching
PROFESSOR: PG with PhD in relevant discipline with 10 to 15 years of experience in teaching
Desirable qualification: Industry academia interface knowledge. Good proven knowledge in industry linkage and placements.
Please send resume to
Email: prakashvc2022@gmail.com

PERSONAL

Change of Name

CHANGE OF NAME
I, MADHU SRINAVAS GUPTA S/o R L Srinivasa Gupta, Aged about 55 Years, R/a # Radharam Oil Mill Compound, Oil Mill Road, Lingarajapuram, Bangalore-560084, have changed my name to **MADHU SRINIVASA GUPTA** vide affidavit dated 26-05-2026 Sworn before Nnotary S.R Ravikumar, Bangalore.

CHANGE OF NAME
I,**ESHWARAIAH MANJUNATH** Residing at No. 22/14, 2nd Cross, Appurao Road, Chamarajpet, Bengaluru- 560018, have changed my name to **MANJUNATH ESHWARAIAH** vide affidavit dated 21.05.2026 before Notary Mohammed Hussain, Bengaluru.

I,VIJAY KUMAR SRIKANTHA_HEGDE S/o.Srikantha Hegde Residing`at No.G-2,Ground Floor,Pooja Residency, Upadyaya Layout, Nagadevanahalli, Bangalore Viswavidyalaya, Bangalore-560056 have`Changed my`father name`from SRIKANTHA DEVAPPA HEGDE to SRIKANTHA_HEGDE vide`Affidavit Dtd:27.05.2026 Sworn`Before Notary Devaraja E,Bengaluru

Lost

DOCUMENT LOST
I, **S.M. Irudayaraj,** residing at No. 27, Shivaramaiah Layout 3rd Block, HBR Layout, Bengaluru, have lost my **Original Property Sale Deed Loss Document No./ Identification: HBB-1-03660-2021-22.** While in transit. If found please contact: **9731877062**

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PROPERTY CORNER

KHB Sites in Bangalore
Electronic City, Bommasandra, Jigani, Anekal, Bannerghatta Road
Land Owner Share
Prime Location, Fully Developed Layout, Ready for Registration Plots
SBI & Nationalised Bank Loan Available
Call: 70260 13388

REAL ESTATE SELLING

Sites

Vishweshwariah Layout

50X80 W/F SITE VISHVESHWARAIAH LAYOUT 8th Block Prime Location, ₹6.60Cr Slightly negotiable.Direct-owner Meeting.Call:9591013777

BUSINESS

Business Offers

Agents Wanted

TIRUPUR T-SHIRT Manufacturers School, Corporate & Uniform Stores Wanted Agents, Traders Welcome. Contact: 9526510200.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಈದ್ ಪ್ರಾರ್ಥನೆ..
ಈದ್-ಉಲ್-ಅದಾ ಸಂಭ್ರಮಾಚರಣೆ ಅಂಗವಾಗಿ ಜಮ್ಮುವಿನ ಶ್ರೀನಗರದಲ್ಲಿ ಮಹಿಳೆಯೊಬ್ಬರು ಬುಧವಾರ ಪ್ರಾರ್ಥನೆ ಸಲ್ಲಿಸಿದರು

ಹಡ್ಸನ್ ವೃತ್ತ: 4 ದಿಕ್ಕಿಗೆ ಸಂಪರ್ಕ

ಮಿನರ್ವ ವೃತ್ತ, ಮೈಸೂರು ರಸ್ತೆ, ಕೆ.ಆರ್. ವೃತ್ತ, ಲಾಲ್‌ಬಾಗ್‌ಗೆ ಮಾರ್ಗ

7 ಕಿ.ಮೀ	₹725 ಕೋಟಿ	₹557 ಕೋಟಿ	₹18 ತಿಂಗಳು	10 ವರ್ಷ
ಎಲಿವೇಟೆಡ್ ಕಾರಿಡಾರ್	ಜಿಎಸ್‌ಟಿ ಹಾಗೂ ಇತರೆ ವ್ಯಯ ಸೇರಿದಂತೆ ಒಟ್ಟಾರೆ ವೆಚ್ಚ	ಟೆಂಡರ್‌ನಲ್ಲಿರುವ ಅಂದಾಜು ವೆಚ್ಚ	ಕಾಮಗಾರಿ ಮುಗಿಸಲು ಅವಕಾಶ	ಯೋಜನೆ ಮುಗಿದ ಮೇಲೆ ನಿರ್ವಹಣಾ ಅವಧಿ

● ಆರ್. ಮಂಜುನಾಥ್

ಬೆಂಗಳೂರು: ನಗರದ ನಾಲ್ಕೂ ದಿಕ್ಕುಗಳನ್ನು ಸಂಪರ್ಕಿಸುವ ವೃತ್ತಾಕಾರದ ಮೇಲ್ಸೇತುವೆ ಹಡ್ಸನ್ ವೃತ್ತದಲ್ಲಿ ನಿರ್ಮಾಣವಾಗಲಿದ್ದು, 18 ತಿಂಗಳಲ್ಲಿ ಕಾಮಗಾರಿಯನ್ನು ಮುಗಿಸುವ ಗುರಿಯನ್ನು ಬಿ-ಸ್ಮೈಲ್ ಹೊಂದಿದೆ.

ಮಿನರ್ವ ವೃತ್ತದಿಂದ ಹಡ್ಸನ್ ವೃತ್ತಕ್ಕೆ 'ಸ್ಟೀಲ್ ಫ್ಲೈಓವರ್' ನಿರ್ಮಿಸುವ ಯೋಜನೆ ದಶಕದ ಹಿಂದೆ ಸಾಕಷ್ಟು ಚರ್ಚೆಗೆ ಒಳಗಾಗಿತ್ತು. ವಿರೋಧದ ನಡುವೆ ಅದು ಸ್ಥಗಿತಗೊಂಡಿತ್ತು. ಇದೀಗ ಹೊಸ ರೂಪ ಪಡೆದುಕೊಂಡಿರುವ ಈ ಮಾರ್ಗದ ಮೇಲ್ಸೇತುವೆ, ನಾಲ್ಕು ದಿಕ್ಕುಗಳನ್ನು ಸಂಪರ್ಕಿಸುವ ಹಡ್ಸನ್ ವೃತ್ತ ಮೇಲ್ಸೇತುವೆಯ ಭಾಗವಾಗಲಿದೆ. 'ಅಲ್ಟ್ರಾ ಹೈ ಪರ್ಫಾಮನ್ಸ್ ಫೈಬರ್ ರಿ-ಇನ್‌ಫೋರ್ಸ್ಡ್ ಕಾಂಕ್ರೀಟ್' (ಯುಎಚ್‌ಪಿಎಫ್‌ಆರ್‌ಸಿ) ತಂತ್ರಜ್ಞಾನ ದಡಿ ಈ ಎಲಿವೇಟೆಡ್ ಕಾರಿಡಾರ್ ನಿರ್ಮಾಣವಾಗಲಿದೆ.

ಮಿನರ್ವ ಜಂಕ್ಷನ್, ಭಾರತ್ ಟಾಕೀಸ್ ಜಂಕ್ಷನ್, ಶಿವಾಜಿ ಟಾಕೀಸ್, ಟೌನ್‌ಹಾಲ್, ಎನ್‌ಆರ್ ಚೌಕ, ಹಲಸೂರು ಪೊಲೀಸ್ ಠಾಣೆ, ಹಡ್ಸನ್ ವೃತ್ತ, ಎಸ್‌ಜೆಪಿ ವೃತ್ತ ಜಂಕ್ಷನ್, ಕೆ.ಆರ್. ವೃತ್ತ, ಮಹಾರಾಣಿ ಕಾಲೇಜು, ಸ್ವಾತಂತ್ರ್ಯ ಉದ್ಯಾನ ಜಂಕ್ಷನ್, ಲಾಲ್‌ಬಾಗ್ ಪಶ್ಚಿಮ ಗೇಟ್ ಜಂಕ್ಷನ್‌ನ ವಾಹನ ದಟ್ಟಣೆಗೆ ಈ ಎಲಿವೇಟೆಡ್ ಕಾರಿಡಾರ್ ಪರಿಹಾರ ಕಲ್ಪಿಸಲಿದೆ.

ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯನ್ನು ವಿಸ್ತರಿಸಿ ಸೇರಿಸುವುದರಿಂದ, ಹಡ್ಸನ್ ವೃತ್ತದಲ್ಲಿ ನಿರ್ಮಾಣವಾಗಲಿರುವ ವೃತ್ತಾಕಾರದ ಎಲಿವೇಟೆಡ್ ಕಾರಿಡಾರ್ ಮೈಸೂರು ರಸ್ತೆಗೂ ಸಂಪರ್ಕ ಕಲ್ಪಿಸಲಿದೆ. ಆನಂದರಾವ್ ವೃತ್ತದಿಂದ ಕೆ.ಆರ್. ವೃತ್ತದ ಮೂಲಕ ನೃಪತುಂಗ ರಸ್ತೆಯಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣ ವಾಗಲಿದ್ದು, ಇದೂ ಎಲಿವೇಟೆಡ್ ಕಾರಿಡಾರ್‌ಗೆ ಸೇರಿಕೊಳ್ಳಲಿದೆ.

ಆರ್.ವಿ. ರಸ್ತೆ, ಡಯಾಗನಲ್ ರಸ್ತೆ, ಲಾಲ್‌ಬಾಗ್ ಫೋರ್ಟ್ ರಸ್ತೆ, ಜೆ.ಸಿ. ರಸ್ತೆ, ಕೆ.ಜಿ. ರಸ್ತೆ, ನೃಪತುಂಗ ರಸ್ತೆ, ಕಸ್ತೂರಬಾ ರಸ್ತೆ, ರಾಜಾರಾಂ ಮೋಹನ್ ರಾಯ್ ರಸ್ತೆ, ಎಸ್‌ಜೆಪಿ ರಸ್ತೆ, ಶೇಷಾದ್ರಿ ರಸ್ತೆ, ಡಾ. ಅಂಬೇಡ್ಕರ್ ರಸ್ತೆ–ವಿಧಾನಸೌಧ, ಲಾಲ್‌ಬಾಗ್ ಪಶ್ಚಿಮ ಗೇಟ್ ರಸ್ತೆಯ ಕಡೆಗೆ ಈ ಎಲಿವೇಟೆಡ್ ಕಾರಿಡಾರ್‌ಗೆ ಪ್ರವೇಶ, ನಿರ್ಗಮನ ಇರಲಿದೆ. ಮೈಸೂರು ರಸ್ತೆಯಿಂದ ಪ್ರತ್ಯೇಕ ಲೂಪ್ ಈ ಎಲಿವೇಟೆಡ್ ಕಾರಿಡಾರ್‌ಗೆ ಪುರಭವನದ ಬಳಿ ಸೇರಿಕೊಳ್ಳಲಿದೆ.

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ–ಸ್ಮೈಲ್) ನಗರದ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಕಾರಣಕ್ಕೆ 11 ಎಲಿವೇಟೆಡ್ ಕಾರಿಡಾರ್/ ಮೇಲ್ಸೇತುವೆ ಗಳನ್ನು ನಿರ್ಮಿಸಲು ತಯಾರಿ ನಡೆಸಿದೆ.

▸3

ಹಡ್ಸನ್ ವೃತ್ತದಲ್ಲಿ ವೃತ್ತಾಕಾರದಲ್ಲಿ ನಿರ್ಮಾಣವಾಗಲಿರುವ ಎಲಿವೇಟೆಡ್ ಕಾರಿಡಾರ್ ಮಾದರಿ

ಏನಿದು ಯುಎಚ್‌ಪಿಎಫ್‌ಆರ್‌ಸಿ?

ದೀರ್ಘ ಬಾಳಿಕೆ ಹಾಗೂ ವೇಗವಾದ ಕಾಮಗಾರಿಗೆ 'ಅಲ್ಟ್ರಾ ಹೈ ಪರ್ಫಾಮನ್ಸ್ ಫೈಬರ್ ರಿ-ಇನ್‌ಫೋರ್ಸ್ಡ್ ಕಾಂಕ್ರೀಟ್' (ಯುಎಚ್‌ಪಿಎಫ್‌ಆರ್‌ಸಿ) ವ್ಯವಸ್ಥೆ ಅನುವಾಗಲಿದೆ.

ಹಲವು ವರ್ಷಗಳಿಂದ ನಡೆಯುತ್ತಿರುವ ಈಜಿಪುರ ಮೇಲ್ಸೇತುವೆ ನಿರ್ಮಾಣದಲ್ಲಿ ಅಳವಡಿಸಿಕೊಂಡಿರುವ ಪ್ರೆಸ್ಡ್ ಕಾಂಕ್ರೀಟ್ (ಪಿಎಸ್‌ಸಿ) ಗರ್ಡರ್ ವ್ಯವಸ್ಥೆಯ ಬದಲಿಗೆ, ಯುಎಚ್‌ಪಿಎಫ್‌ಆರ್‌ಸಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗುತ್ತಿದೆ.

ಪಿಎಸ್‌ಸಿ ಅಥವಾ ಆರ್‌ಸಿಸಿಗಿಂತ ಯುಎಚ್‌ಪಿಎಫ್‌ಆರ್‌ಸಿ ಗುಣಮಟ್ಟ, ಶಕ್ತಿಯುತವಾಗಿರುತ್ತದೆ. ಈ ತಂತ್ರಜ್ಞಾನದಲ್ಲಿ ಉಕ್ಕು ಮತ್ತು ಫೈಬರ್‌ನಿಂದ ನಿರ್ಮಾಣವಾಗುವ ಮೇಲ್ಸೇತುವೆ 120ಕ್ಕೂ ಹೆಚ್ಚು ವರ್ಷ ಬಾಳಿಕೆ ಬರಲಿದೆ. ಮಹಾರಾಷ್ಟ್ರದ ಲಾತೂರ್‌ನಲ್ಲಿ ಈ ತಂತ್ರಜ್ಞಾನ ಬಳಸಿ ಮೇಲ್ಸೇತುವೆ ನಿರ್ಮಿಸಲಾಗಿದೆ.

▸3

'ಮೆಲೋಡಿ' ಪ್ರತಿಭಟನೆ

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ದರ ಏರಿಕೆಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ಖಂಡಿಸಿ, ಇಂಡಿಯನ್ ವೆಹಿಕಲ್ಸ್ ಡ್ರೈವರ್ ಟ್ರೇಡ್ ಯೂನಿಯನ್ ಹಾಗೂ 'ಸ್ನೇಹಜೀವಿ' ಚಾಲಕರ ಟ್ರೇಡ್ ಯೂನಿಯನ್‌ನ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ 'ಮೆಲೋಡಿ' ಚಾಕೊಲೆಟ್ ಹಿಡಿದು ವಿನೂತನವಾಗಿ ಪ್ರತಿಭಟನೆ ನಡೆಸಿದರು. ಬೆಲೆ ಏರಿಕೆ ಖಂಡಿಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಕಳೆದ ಒಂದು ತಿಂಗಳಿಂದ ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ಆಗುತ್ತಲೇ ಇದೆ. ಇದರಿಂದ ಆಟೊ ಹಾಗೂ ಕ್ಯಾಬ್ ಚಾಲಕರು ಆತಂಕಕ್ಕೆ ಒಳಗಾಗಿದ್ದಾರೆ. ದರ ಏರಿಕೆಯನ್ನು ಕೇಂದ್ರ ಸರ್ಕಾರವು ಸಮರ್ಥನೆ ಮಾಡಿಕೊಳ್ಳುತ್ತಿದೆ. 'ಎಲೆಕ್ಟ್ರಿಕ್ ವಾಹನ ಬಳಕೆ ಮಾಡಿ' ಎಂದೂ ಕೇಂದ್ರ ಸರ್ಕಾರವು ಹೇಳುತ್ತಿದೆ. ತಕ್ಷಣವೇ ಇ.ವಿ ವಾಹನ ಖರೀದಿಯೂ ಕಷ್ಟ ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

ರಾಜ್ಯದಲ್ಲಿ ಲಕ್ಷಾಂತರ ಆಟೊ ಹಾಗೂ ಕ್ಯಾಬ್‌ಗಳು ಸಾರ್ವಜನಿಕರಿಗೆ ಸೇವೆ ನೀಡುತ್ತಿದ್ದು, ಬೆಲೆ ಏರಿಕೆಯಿಂದ ಚಾಲಕರು ತತ್ತರಿಸುವಂತಾಗಿದೆ. ಎಲ್ಲಾ ದಿನಸಿ ಸಾಮಗ್ರಿಗಳ ಬೆಲೆಯೂ ಜಾಸ್ತಿ ಆಗಿದ್ದು, ಚಾಲಕರಿಗೆ ಕುಟುಂಬ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ದರ ಇಳಿಕೆ ಆಗುವವರೆಗೂ ಪ್ರತಿ ಚಾಲಕರ ಕುಟುಂಬಕ್ಕೆ ತಿಂಗಳಿಗೆ ₹15 ಸಾವಿರ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಮುಖಂಡರಾದ ಗಂಡಸಿ ಸದಾನಂದಸ್ವಾಮಿ, ಸ್ನೇಹಜೀವಿ ಸಂತೋಷ್ ಕುಮಾರ್, ರಾಜು ಕನ್ನಡಿಗ, ಸಂಚಾರಿ ಸತೀಶ್ ಮೊದಲಾದವರು ಹಾಜರಿದ್ದರು.

ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ದರ ಏರಿಕೆ ಖಂಡಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಆಟೊ ಚಾಲಕರು ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ಚಿತ್ರ

ಚೀತಾಗಳು ವೀಕ್ಷಣೆಗೆ ಲಭ್ಯ

ಬನ್ನೇರುಘಟ್ಟ: ನಾಲ್ಕು ಚೀತಾಗಳ 'ಕ್ವಾರಂಟೈನ್' ಮುಕ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಏಪ್ರಿಲ್ 18ರಂದು ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ತಂದ 4 ಚೀತಾಗಳ ಕ್ವಾರಂಟೈನ್ ಅವಧಿ ಮುಗಿದಿದ್ದು, ಜೂನ್ 4ರಿಂದ ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗಲಿವೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಈ ಸಂಬಂಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿ-ಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್ ಅವರೊಂದಿಗೆ ಸಭೆ ನಡೆಸಿದ ಅವರು, ಚೀತಾಗಳಿಗಾಗಿಯೇ ಬನ್ನೇರುಘಟ್ಟ ಮೃಗಾಲಯದಲ್ಲಿ ಪ್ರತ್ಯೇಕವಾಗಿ ಸಿದ್ಧಪಡಿಸಿರುವ ಆವರಣದಲ್ಲಿ ಅವುಗಳನ್ನು ಬಿಡಲಾಗುವುದು ಎಂದು ಹೇಳಿದರು.

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ದಕ್ಷಿಣ ಆಫ್ರಿಕಾದ ಚೀತಾ

ವನ್ಯಜೀವಿ ವಿನಿಮಯ ಕಾರ್ಯಕ್ರಮದ ಭಾಗವಾಗಿ ಏ.18ರ ಮಧ್ಯರಾತ್ರಿ ದಕ್ಷಿಣ ಆಫ್ರಿಕಾದಿಂದ ಈ ಚೀತಾಗಳನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಚಿವ ಖಂಡ್ರೆ ಬರಮಾಡಿಕೊಂಡರು.

ಬನ್ನೇರುಘಟ್ಟ ಪರಿಸರ, ವಾತಾವರಣ, ಹವಾಮಾನಕ್ಕೆ ಹೊಂದಿಕೊಳ್ಳಲು ಈ ಚೀತಾಗಳನ್ನು ಪ್ರತ್ಯೇಕವಾಗಿ ಇಡಲಾಗಿತ್ತು. ಇವುಗಳ ಆರೋಗ್ಯದ ಬಗ್ಗೆ ಸತತ ನಿಗಾ ಇಡಲಾಗಿತ್ತು. ಪ್ರಸ್ತುತ ಚೀತಾಗಳು ಸಂಪೂರ್ಣವಾಗಿ ಆರೋಗ್ಯವಾಗಿದೆ ಎಂಬ ಮಾಹಿತಿ ಪಡೆದ ಸಚಿವರು, ಜೂನ್ ಮೊದಲ ವಾರದಲ್ಲಿ ಪ್ರವಾಸಿಗರಿಗೆ ಚೀತಾ ನೋಡಲು ಅವಕಾಶ ಕಲ್ಪಿಸುವಂತೆ ನಿರ್ದೇಶಿಸಿದರು.

'ಕನಿಷ್ಠ ವೇತನ ಪರಿಷ್ಕರಣೆ: ಕೂಡಲೇ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನಿಷ್ಠ ವೇತನ ಪರಿಷ್ಕರಣೆ ಕುರಿತು ರಾಜ್ಯ ಸರ್ಕಾರ ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು. ಮಾಲೀಕರ ಒತ್ತಡಕ್ಕೆ ಮಣಿದು ಅದನ್ನು ಹಿಂಪಡೆದರೆ ಪ್ರತಿಭಟನೆ ನಡೆಸಲಾಗುವುದು' ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ತಿಳಿಸಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯ ಸಂಚಾಲಕ ಕೆ.ವಿ. ಭಟ್, ಮುಖಂಡರಾದ ಜಿ.ಆರ್. ಶಿವಶಂಕರ್, ಮೀನಾಕ್ಷಿ ಸುಂದರಂ, ಮೈತ್ರೇಯಿ ಕೃಷ್ಣನ್, ನಾಗಾಸುಂದರಂ, ರಮಾದೇವಿ ಕಾಳಪ್ಪ, ಬಾಬು ಮ್ಯಾಥ್ಯೂ ಮಾತನಾಡಿದರು. ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆಗೆ ಆಗ್ರಹಿಸಿ ಮೇ 27ರಂದು ಆಯೋಜಿಸಿದ್ದ ಪ್ರತಿಭಟನೆಯನ್ನು ಹಿಂಪಡೆಯಲಾಗಿದೆ. ರಾಜ್ಯ ಸರ್ಕಾರ ವೈಜ್ಞಾನಿಕವಾಗಿ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆಗೆ ಮುಂದಾಗಿರುವುದು ಸ್ವಾಗತಾರ್ಹ. ಕೂಡಲೇ ಈ ಅಧಿಸೂಚನೆಯನ್ನು ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

ಕನಿಷ್ಠ ವೇತನ ಕಾಯ್ದೆ-1948 ಹಾಗೂ ವೇತನ ಸಂಹಿತೆ-2019ರ ಪ್ರಕಾರ ಐದು ವರ್ಷಕ್ಕೊಮ್ಮೆ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕು ಎಂಬ ಕಾನೂನು ಇದ್ದು, ನಮ್ಮ ರಾಜ್ಯದಲ್ಲಿ ಇದನ್ನು ಉಲ್ಲಂಘಿಸಲಾಗಿದೆ' ಎಂದು ದೂರಿದರು.

'ರಾಜ್ಯದಲ್ಲಿ 2016-17ರಲ್ಲಿ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆಯಾಗಿತ್ತು. ಆದಾದ ಬಳಿಕ 2026ರಲ್ಲಿ ಕನಿಷ್ಠ ವೇತನ ಪರಿಷ್ಕರಣೆಗೆ ಸರ್ಕಾರ ಮುಂದಾಗಿದೆ. ಈ ಅಧಿಸೂಚನೆಯಲ್ಲಿ ಗಾರ್ಮೆಂಟ್ಸ್ , ಬೀಡಿ ಹಾಗೂ ತೋಟಗಾರಿಕಾ ಕ್ಷೇತ್ರದ ಕಾರ್ಮಿಕರನ್ನು ಹೊರಗಿಟ್ಟಿರುವುದು ಸರಿಯಲ್ಲ' ಎಂದರು. 'ಯಾವುದೇ ಪಟ್ಟಭದ್ರ ಹಿತಾಸಕ್ತಿ ಗಳು ಅಥವಾ ಕಾರ್ಖಾನೆ ಮಾಲೀಕರ ಒತ್ತಡಕ್ಕೆ ಮಣಿದು ಸರ್ಕಾರ ಈ ಅಧಿಸೂಚನೆ ಹಿಂಪಡೆದರೆ ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ದೇವಾಲಯಗಳ ಪ್ರಾಧಿಕಾರ: ರಾಜ್ಯಪಾಲರ ಅನುಮೋದನೆ

ಬೆಂಗಳೂರು: ಐದು ದೇವಾಲಯಗಳಿಗೆ ಪ್ರತ್ಯೇಕವಾಗಿ ರಚಿಸಿರುವ ಪ್ರಾಧಿಕಾರಗಳ ಮಸೂದೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಮೋದನೆ ನೀಡಿದ್ದಾರೆ.

ಸರ್ಕಾರದ ನಿಯಂತ್ರಣದಲ್ಲಿರುವ ಮುಜರಾಯಿ ಇಲಾಖೆಯ ಪ್ರಮುಖ ದೇವಾಲಯಗಳಲ್ಲಿ ಭಕ್ತರ ಅನುಕೂಲಕ್ಕಾಗಿ ಅಗತ್ಯವಿರುವ ಮೂಲಸೌಕರ್ಯಗಳನ್ನು ಒಳಗೊಂಡಂತೆ ದೇವಾಲಯಗಳ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ದೇವಾಲಯಗಳ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿತ್ತು.

ಆಯಾ ದೇವಾಲಯಗಳಲ್ಲಿ ನಿತ್ಯ ಮತ್ತು ಹಬ್ಬ, ವಿಶೇಷ ದಿನಗಳ ಸಮಯದಲ್ಲಿ ರಥೋತ್ಸವಗಳಂತಹ ಆಚರಣೆ ಹಿಂದಿನಿಂದಲೂ ನಡೆದುಕೊಂಡು ಬಂದಿವೆ. ಪೂಜಾ ವಿಧಿ ವಿಧಾನಗಳು, ರೂಢಿ ಸಂಪ್ರದಾಯಗಳು, ಪದ್ಧತಿಗಳ ಆಚರಣೆಯಲ್ಲಿ ಯಾವುದೇ ಲೋಪವಾಗದಂತೆ ನಿರ್ವಹಿಸಲು ಪರಿಣಾಮಕಾರಿಯಾಗಿ ಆಡಳಿತ ನಡೆಸುವ ದೃಷ್ಟಿಯಿಂದ ಸರ್ಕಾರವು ಈ ಪ್ರಾಧಿಕಾರಗಳಲ್ಲಿ ಮುಜರಾಯಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅನುಭವವುಳ್ಳ ಗ್ರೂಪ್ 'ಎ' ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ಕಾರ್ಯದರ್ಶಿಗಳ ಹುದ್ದೆಗೆ ನಿಯುಕ್ತಿಗೊಳಿಸುವುದು ಸೂಕ್ತವೆಂದು ತೀರ್ಮಾನಿಸಲಾಗಿತ್ತು.

ಮೈಸೂರು ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಜಿಲ್ಲೆಯ ಸವದತ್ತಿ ರೇಣುಕಾ ಯಲ್ಲಮ್ಮ ದೇವಾಲಯದ ಪ್ರಾಧಿಕಾರ, ದೊಡ್ಡಬಳ್ಳಾಪುರ ತಾಲ್ಲೂಕು ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಕೊಪ್ಪಳ ಜಿಲ್ಲೆ ಹುಲಿಗಿ ಹುಲಿಗಮ್ಮ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ ಜಿಲ್ಲೆ ಮಹದೇಶ್ವರ ಬೆಟ್ಟ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿತ್ತು.

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ.430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560099.
ದೂರವಾಣಿ: 080–27835122 ವೆಬ್‌ಸೈಟ್: www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/03/2026–27 ದಿನಾಂಕ: 27–05–2026

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ: 03.09.2014 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Royalgokul Construction Pvt. Ltd. ಪರವಾಗಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಮೇಶ್ ದೇವಸಂದ್ರ ಕೆಂಚಪ್ಪ	ಆನೇಕಲ್	ಅತ್ತಿಬೆಲೆ	ಗಿಡ್ಡೇನಹಳ್ಳಿ	20/2	0–22.08	ಉದ್ಯಾನವನ ಮತ್ತು ಬಯಲು ಜಾಗ	ವಸತಿ

ಸಹಿ/– ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.

ವಾಸಾಸಂಇ/ವಾ.ಪ್ರ/854/ಅಡ್ವರ್ಟೋ/2026–27

ನಗರಸಭಾ ಕಾರ್ಯಾಲಯ, ರಾಮನಗರ

ಬೆಂಗಳೂರು ದಕ್ಷಿಣ ಜಿಲ್ಲೆ – 562159. e-mail: ka.ramanagara.cmc@gmail.com

ಸಂ.: ನಸರಾ/ತಾ.ವಿ./ಕಿ.ಅ/ಟೆಂ./ಸಿ.ಆರ್./ /2026–27 ದಿನಾಂಕ: 26.05.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ರಾಮನಗರ ನಗರಸಭೆಯ ವಿವಿಧ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದು. ಈ ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ.ಯನ್ನು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 90 ದಿನಗಳವರೆಗೆ ಮಾನ್ಯತೆ ಇರತಕ್ಕದ್ದು.

ಪ್ಯಾಕೇಜ್ ಸಂಖ್ಯೆ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ. ಗಳಲ್ಲಿ)	ಕೆಲಸ ಪೂರ್ಣ ಗೊಳಿಸುವ ಅವಧಿ
1	DMA/2026-27/RD/WORK_INDENT58782	42.33	84,660/-	As per KPPP	90 ದಿನ
2	DMA/2026-27/RD/WORK_INDENT58812	49.90	99,800/-		90 ದಿನ
3	DMA/2026-27/OW/WORK_INDENT58776	46.42	92,840/-		60 ದಿನ
4	DMA/2026-27/OW/WORK_INDENT58759	43.85	87,700/-		60 ದಿನ

1) ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 09.06.2026 ರಂದು ಸಂಜೆ: 5:00 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10.06.2026 ರಂದು ಸಂಜೆ: 5:10 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 11.06.2026 ರಂದು ಬೆಳಿಗ್ಗೆ 11:00 ಗಂಟೆಗೆ. ಸೂಚನೆ:** ಮೇಲಿನ ದಿನಾಂಕಗಳಲ್ಲಿ ಯಾವುದೇ ತಿದ್ದುಪಡಿ/ಮುಂದೂಡಿಕೆ ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– **ಪೌರಾಯುಕ್ತರು**
ನಗರಸಭೆ, ರಾಮನಗರ.

DIPR/BSD/68/SA/2026-27

ಉಪರಾಷ್ಟ್ರಪತಿ ಭೇಟಿ: ಮರು ಪರಿಶೀಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧಗಳ ತನಿಖೆ ನಡೆಯುತ್ತಿರುವ ಮತ್ತು ನ್ಯಾಯಾಲಯದಲ್ಲಿ ಪ್ರಕರಣ ಎದುರಿಸುತ್ತಿರುವ ವ್ಯಕ್ತಿಗಳು ಆಯೋಜಿಸುವ ಕಾರ್ಯಕ್ರಮದಲ್ಲಿ ಭಾಗಿಯಾಗಲು ಧರ್ಮಸ್ಥಳಕ್ಕೆ ಭೇಟಿ ನೀಡುವುದು ಸರಿಯಲ್ಲ. ಈ ಬಗ್ಗೆ ಮರು ಪರಿಶೀಲನೆ ನಡೆಸಬೇಕು ಎಂದು 'ಕೊಂದವರು ಯಾರು' ಅಭಿಯಾನದ ಸದಸ್ಯರು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಪತ್ರ ಬರೆದಿದ್ದಾರೆ.

ಅಭಿಯಾನದ ಪರವಾಗಿ ಆಶಾ ರಮೇಶ್, ಜ್ಯೋತಿ ಎ., ಗುಲಾಬಿ ಬಿಳಿಮಲೆ, ಚಂಪಾವತಿ, ಪದ್ಮರೇಖಾ ಎಸ್., ಸ್ವರ್ಣಾ ಭಟ್, ಇ. ರತಿ ರಾವ್, ರೂಪಾ ಹಾಸನ, ಜಯಲಕ್ಷ್ಮೀ ಪಾಟೀಲ್, ನಾ. ದಿವಾಕರ್, ದು.ಸರಸ್ವತಿ, ಗೀತಾ ಮೆನನ್, ಎನ್. ಗಾಯತ್ರಿ, ನೇಮಿಚಂದ್ರ, ಆರ್. ಪೂರ್ಣಿಮಾ, ಜೆ. ಚಂದ್ರಕುಮಾರ್, ಇಂದಿರಾ ವಿ., ಕಲ್ಪನಾ ಚಕ್ರವರ್ತಿ, ಸಬಿತಾ ಬನ್ನಾಡಿ, ಸಿ.ಜಿ. ಮಂಜುಳಾ, ಪ್ರತಿಭಾ ಆರ್., ಆರ್. ಸುನಂದಮ್ಮ, ಕೆ.ಎಸ್. ವಿಮಲಾ, ಮಲ್ಲಿಗೆ ಈ ಪತ್ರ ಬರೆದಿದ್ದಾರೆ.

ಸೌಜನ್ಯಾ ಮೇಲಿನ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಮರುತನಿಖೆ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿದೆ. ಗುರುತು ಪತ್ತೆಯಾಗದ ಶವಗಳನ್ನು ಅಕ್ರಮವಾಗಿ ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ. ಎಸ್‌ಐಟಿ ತನಿಖೆ ಪ್ರಕ್ರಿಯೆ ಮುಂದುವರಿದಿದೆ. ಇಂಥ ಪ್ರಕರಣಗಳಿಗೆ ಸಂಬಂಧಿಸಿದ ವ್ಯಕ್ತಿ ಅಥವಾ ಸಂಸ್ಥೆಗಳೊಂದಿಗೆ ಅತ್ಯುನ್ನತ ಹುದ್ದೆಯಲ್ಲಿ ಇರುವವರು ಸಾರ್ವಜನಿಕವಾಗಿ ಕಾಣಿಸಿಕೊಂಡರೆ, ಅವರ ಸರ್ಕಾರದ ಪರೋಕ್ಷ ಬೆಂಬಲ ಅಥವಾ ರಕ್ಷಣೆ ಇದೆ ಎಂಬ ಸಂದೇಶ ರವಾನೆಯಾಗುತ್ತದೆ. ನ್ಯಾಯಾಂಗ ವ್ಯವಸ್ಥೆಯ ಸ್ವಾಯತ್ತತೆ ಮತ್ತು ನಿಷ್ಪಕ್ಷಪಾತದ ಬಗ್ಗೆ ಸಾರ್ವಜನಿಕರ ವಿಶ್ವಾಸವನ್ನು ಕುಂದಿಸುವ ಅಪಾಯವಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಸಿ.ಎಂ ಸ್ಥಾನ: ಚರ್ಚೆ ಅಪ್ರಸ್ತುತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎನ್ನುವ ಚರ್ಚೆಯೇ ಅಪ್ರಸ್ತುತ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಜಿ.ಪರಮೇಶ್ವರ

ತಮ್ಮ ಸದಾಶಿವನಗರದ ನಿವಾಸದಲ್ಲಿ ಬುಧವಾರ ಬೆಳಿಗ್ಗೆ ಸುದ್ದಿಗಾರರ ಜತೆ ಅವರು ಮಾತನಾಡಿದರು.

ಪರಮೇಶ್ವರ ಅವರ ಮನೆಯಲ್ಲಿ ಬುಧವಾರ ವಿಶೇಷ ಪೂಜೆ ಮತ್ತು ಹೋಮವನ್ನು ನಡೆಸಲಾಗಿತ್ತು. ಈ ವೇಳೆ ಸುದ್ದಿಗಾರರು, 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರೆ, ನೀವು ಮುಖ್ಯಮಂತ್ರಿ ಆಗುತ್ತೀರಾ' ಎಂದು ಪ್ರಶ್ನಿಸಿದರು. ಅದಕ್ಕೆ ಪ್ರತಿಯಾಗಿ, 'ಈ ಪ್ರಶ್ನೆಯೇ ಅಪ್ರಸ್ತುತ' ಎಂದು ಪರಮೇಶ್ವರ ಉತ್ತರಿಸಿದರು.

'ದೆಹಲಿಯಲ್ಲಿ ಹೈಕಮಾಂಡ್ ನಾಯಕರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಜತೆಗೆ ಸಭೆ ನಡೆಸಿದ್ದಾರೆ. ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಚರ್ಚೆ ನಡೆದಿದೆ ಎಂದು ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ. ಸಭೆಯಲ್ಲಿ ಏನು ಚರ್ಚೆಯಾಗಿದೆ ಎಂಬ ಮಾಹಿತಿ ನಮಗ್ಯಾರಿಗೂ ಇಲ್ಲ' ಎಂದರು.

'ಅಲ್ಲಿ ಏನು ಚರ್ಚೆಯಾಗಿದೆ, ಏನೆಲ್ಲಾ ಬದಲಾವಣೆ ಆಗುತ್ತದೆ ಅಥವಾ ಬದಲಾವಣೆ ಆಗುವುದಿಲ್ಲ ಎಂಬುದರ ಬಗ್ಗೆ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಹೇಳಿದರಷ್ಟೇ ಅಧಿಕೃತ' ಎಂದು ಹೇಳಿದರು.

'ಮುಖ್ಯಮಂತ್ರಿ ಈ ಹಿಂದೆಯೂ ಹಲವು ಬಾರಿ ಉಪಾಹಾರ ಸಭೆ, ಔತಣಕೂಟ ಆಯೋಜಿಸಿದ್ದಾರೆ. ಗುರುವಾರ ಬೆಳಿಗ್ಗೆ ಕರೆದಿರುವ ಉಪಾಹಾರ ಸಭೆಗೆ ವಿಶೇಷ ಅರ್ಥ ಕಲ್ಪಿಸುವುದು ಬೇಡ' ಎಂದರು.

'ಪರಿಶಿಷ್ಟರಿಗೆ ಸಿ.ಎಂ ಸ್ಥಾನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ತೆರವು ಮಾಡುತ್ತಿರುವ ಮುಖ್ಯಮಂತ್ರಿ ಸ್ಥಾನಕ್ಕೆ ಪರಿಶಿಷ್ಟ ಸಮುದಾಯದ ನಾಯಕರೊಬ್ಬರನ್ನು ಕಾಂಗ್ರೆಸ್ ಹೈಕಮಾಂಡ್ ಆಯ್ಕೆ ಮಾಡಬೇಕು' ಎಂದು ಕರ್ನಾಟಕ ನವ ಜಾಗೃತಿ ವೇದಿಕೆ ಆಗ್ರಹಿಸಿದೆ.

'ದಲಿತ ಸಮುದಾಯ ಬೆನ್ನಿಗೆ ನಿಂತ ಕಾರಣ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾಗಿದೆ. ಆದರೆ, ಅಧಿಕಾರಕ್ಕೆ ಬಂದ ಬಳಿಕ ಮುಖ್ಯಮಂತ್ರಿಯ ಆಯ್ಕೆ ವಿಚಾರ ಬಂದಾಗ ದಲಿತರನ್ನು ನಿರ್ಲಕ್ಷಿಸುತ್ತಲೇ ಬರಲಾಗಿದೆ' ಎಂದು ವೇದಿಕೆಯ ಅಧ್ಯಕ್ಷ ಅನಂತರಾಯಪ್ಪ ಆರೋಪಿಸಿದ್ದಾರೆ.

'ಮುಖ್ಯಮಂತ್ರಿ ಸ್ಥಾನಕ್ಕೆ ಎಲ್ಲ ಅರ್ಹತೆಗಳಿದ್ದ ಬಿ. ಬಸವಲಿಂಗಪ್ಪ, ಕೆ.ಎಚ್. ರಂಗನಾಥ್, ಮಲ್ಲಿಕಾರ್ಜುನ ಖರ್ಗೆ, ಕೆ.ಎಚ್. ಮುನಿಯಪ್ಪ, ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ ಮೊದಲಾದ ನಾಯಕರಿದ್ದರೂ ಕಾಂಗ್ರೆಸ್ ಅವಕಾಶ ನೀಡಿಲ್ಲ. ಲಿಂಗಾಯತ, ಒಕ್ಕಲಿಗ, ಹಿಂದುಳಿದ ವರ್ಗಕ್ಕೆ ಸೇರಿದ ನಾಯಕರುಗಳಿಗೆ ಅನೇಕ ಬಾರಿ ಮುಖ್ಯಮಂತ್ರಿಯಾಗುವ ಅವಕಾಶ ನೀಡಿದೆ. ಆದರೆ, ನಿರಂತರವಾಗಿ ಮತ ಕೊಟ್ಟು ಮತ್ತೆ ಮತ್ತೆ ಅಧಿಕಾರಕ್ಕೆ ಬರಲು ಕಾರಣರಾದ ಪರಿಶಿಷ್ಟರಿಗೆ ಒಮ್ಮೆಯೂ ಅವಕಾಶ ನೀಡಿಲ್ಲ. ಇದು ಕಾಂಗ್ರೆಸ್ ಪಕ್ಷದ ಬೂಟಾಟಿಕೆಯ ದಲಿತ ಪ್ರೇಮಕ್ಕೆ ಸಾಕ್ಷಿ' ಎಂದು ಅವರು ಟೀಕಿಸಿದ್ದಾರೆ.

'ಹೊರ್ಮುಜ್ ಎಲ್ಲರಿಗೂ ಮುಕ್ತವಾಗಲಿದೆ'

ವಾಷಿಂಗ್ಟನ್ (ಎಪಿ/ರಾಯಿಟರ್ಸ್): ಇರಾನ್ ಜತೆ ಮಾಡಿಕೊಳ್ಳುವ ಯಾವುದೇ ಒಪ್ಪಂದವು ಹೊರ್ಮುಜ್ ಜಲಸಂಧಿಯನ್ನು ಎಲ್ಲರಿಗೂ ಮುಕ್ತವಾಗಿರುವಂತೆ ನೋಡಿಕೊಳ್ಳುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ.

'ಅಲ್ಲದೆ, ಜಲಸಂಧಿಯ ಮೇಲೆ ಯಾವುದೇ ದೇಶದ ನಿಯಂತ್ರಣ ಇಲ್ಲದಂತೆಯೂ ಮಾಡುತ್ತದೆ. ಈ ಅಂಶಗಳೆಲ್ಲ ಮಾತುಕತೆಯ ಭಾಗವಾಗಲಿವೆ' ಎಂದು ಅವರು ಸಂಪುಟ ಸಭೆಯಲ್ಲಿ ತಿಳಿಸಿದ್ದಾರೆ.

ತೃಪ್ತಿಯಾಗದು: 'ಇರಾನ್‌ನ ಸಮೃದ್ಧೀಕರಿಸಿದ ಯುರೇನಿಯಂ ದಾಸ್ತಾನನ್ನು ರಷ್ಯಾ ಅಥವಾ ಚೀನಾ ಪಡೆದುಕೊಳುವುದಾದರೆ, ಅದರಿಂದ ನನಗೆ ತೃಪ್ತಿಯಾಗುವುದಿಲ್ಲ' ಎಂದು ಟ್ರಂಪ್ ಬುಧವಾರ ಎಚ್ಚರಿಸಿದ್ದಾರೆ.

'ಇರಾನ್ ಜತೆ ನಿಕಟ ಸಂಬಂಧ ಹೊಂದಿರುವ ಈ ಎರಡೂ ದೇಶಗಳು ಇರಾನ್‌ನ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಸ್ವಾಧೀನಪಡಿಸಿಕೊಳ್ಳುವುದು ಸೂಕ್ತವಾಗಬಹುದು' ಎಂದು ಪರಮಾಣು ವಿಶ್ಲೇಷಕರು ಅಭಿಪ್ರಾಯಪಟ್ಟ ಬೆನ್ನಲ್ಲೇ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

'ಇರಾನ್‌ನಲ್ಲಿರುವ ಸಮೃದ್ಧೀಕರಿಸಿದ ಯುರೇನಿಯಂ ಅಮೆರಿಕಕ್ಕೆ ಹಸ್ತಾಂತರಿಸಲಾಗುತ್ತದೆ ಅಥವಾ ಸ್ಥಳದಲ್ಲೇ ನಾಶಪಡಿಸಲಾಗುತ್ತದೆ ಅಥವಾ ಅಣುಶಕ್ತಿ ಆಯೋಗ ಅಥವಾ ಅದಕ್ಕೆ ಸರಿಸಮಾನ ಸಂಸ್ಥೆಯ ಸಮ್ಮುಖದಲ್ಲಿ ನಾಶಪಡಿಸಲಾಗುತ್ತದೆ' ಎಂದು ಟ್ರಂಪ್ ಸೋಮವಾರ ತಿಳಿಸಿದ್ದರು.

ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ನೀರಿನ ಅದಾಲತ್ ಅನ್ನು ಮೇ 29ರಂದು ಬೆಳಿಗ್ಗೆ 9.30ರಿಂದ 11ರವರೆಗೆ ಹಮ್ಮಿಕೊಂಡಿದೆ.

ಆಗ್ನೇಯ–3 ಉಪವಿಭಾಗದ ಅದಾಲತ್ ಕೂಡ್ಲಿ ಜಿಎಲ್‌ಆರ್ ಆವರಣ, ಆಗ್ನೇಯ–6 ಬಿಟಿಎಂ 2ನೇ ಹಂತ, ಪಶ್ಚಿಮ 1–3 ಅಗ್ರಹಾರ ದಾಸರಹಳ್ಳಿ, ಉತ್ತರ 2–3 ಜಿಕೆವಿಕೆ ಮಾನ್ಯತಾ ಟೆಕ್ ಪಾರ್ಕ್, ದಕ್ಷಿಣ 1–3 ಅಂಜನಾಪುರ ಬ್ಯಾಂಕ್ ಆಫೀಸರ್ಸ್ ಲೇಔಟ್, ನೈರುತ್ಯ–3 ಎಂಎನ್‌ಕೆ ಪಾರ್ಕ್, ಗಿರಿನಗರ, ನೈರುತ್ಯ–6 ಬನಶಂಕರಿ 6ನೇ ಹಂತ, ಪೂರ್ವ 2–4 ಉಪವಿಭಾಗದ ಅದಾಲತ್ ವಿಜಿನಾಪುರದಲ್ಲಿ ನಡೆಯಲಿದೆ. ಕುಂದುಕೊರತೆಗಳ ಬಗ್ಗೆ 1916ಕ್ಕೆ ಕರೆ ಮಾಡಿ ದೂರು ದಾಖಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸರ್ಕಾರ

ಪ್ರಧಾನ ನಿರ್ದೇಶಕರ ಕಚೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,

3ನೇ ಮಹಡಿ, 'ಎ' ಬ್ಲಾಕ್, ಟಿಟಿಎಂಸಿ ಕಟ್ಟಡ, ಕೆ.ಹೆಚ್. ರೋಡ್, ಶಾಂತಿನಗರ, ಬೆಂಗಳೂರು–27
ದೂರವಾಣಿ ಸಂ : 080–22214817, ಫ್ಯಾಕ್ಸ್ ಸಂ : 080–22216500,
ಇ–ಮೇಲ್ : 1. controllerstateaccounts@yahoo.com, 2. controllerksaad@gmail.com

ಸಂ : ರಾಲೆಪ/06/ಪ್ರ.ಹೊ.ವಾ/2026–27 ದಿನಾಂಕ : 27.05.2026

ಪ್ರಸ್ತಾವನೆಗಳಿಗೆ ಆಹ್ವಾನ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ನೋಂದಣಿಯಾಗಿರುವ ಸಂಸ್ಥೆಗಳಿಂದ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ (14) ವಾಹನಗಳನ್ನು ಪಡೆಯಲು ಟೆಂಡರ್ ಆಹ್ವಾನಿಸಲು ಇಚ್ಛಿಸಿದೆ.

ಆಸಕ್ತಿಯುಳ್ಳ ಸಂಸ್ಥೆಗಳು RFP ಯ ಎಲೆಕ್ಟ್ರಾನಿಕ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಪ್ರಸ್ತಾವನೆಗಳನ್ನು (PDF ನಮೂನೆಯಲ್ಲಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್ https://kppp.karnataka.gov.in ನಲ್ಲಿ ಬಿಡ್ಡುದಾರರ ಡಿಜಿಟಲ್ ಹಸ್ತಾಕ್ಷರ ಪ್ರಮಾಣ ಪತ್ರ (DSC)ದ ಮೂಲಕ ಅಪ್‌ಲೋಡ್ ಮಾಡುವುದು.

ಭವಿಷ್ಯದಲ್ಲಿ RFPಗೆ ಸಂಬಂಧಿಸಿದ ಯಾವುದೇ ಸೂಚನೆಗಳು/ಮಾಹಿತಿಗಳು https://kppp.karnataka.gov.in ನಲ್ಲಿ ಮಾತ್ರ ಲಭ್ಯವಿರುವುದು.

ಅರ್ಹತಾ ಮಾನದಂಡಗಳು ಹಾಗೂ ನಿಬಂಧನೆಗಳಿಗಾಗಿ RFP ದಾಖಲೆಗಳನ್ನು ಉಲ್ಲೇಖಿಸುವುದು. ತಮ್ಮ ಪ್ರಸ್ತಾವನೆಗಳನ್ನು ದಿನಾಂಕ:24.06.2026 ಸಂಜೆ 4.00 ಗಂಟೆಯವರೆಗೆ ಸಲ್ಲಿಸಬಹುದು.

1) ಆರ್‌ಎಫ್‌ಪಿ ಪ್ರಕಟಣೆ ದಿನಾಂಕ : 26.05.2026. 2) ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 24.06.2026 (4.00 PM). 3) ಪೂರ್ವ ಬಿಡ್ ಸಭೆ : 23.06.2026 (12.30 PM). 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 25.06.2026 (4.00 PM). 5) ವಾಣಿಜ್ಯ ಬಿಡ್ : 30.06.2026 (4.00 PM).

ಸಹಿ/–
ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,

DIPR/CP/839/Zen/2026-27

‘ಪ್ರಗತಿಗೆ ಪ್ರಯತ್ನಿಸಿದ್ದ ನೆಹರೂ’

ಆಧುನಿಕ ಭಾರತದ ನಿರ್ಮಾಣದಲ್ಲಿ ದೊಡ್ಡ ಪಾತ್ರ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ದೇಶದ ಪ್ರಗತಿಯನ್ನು ವೈಜ್ಞಾನಿಕವಾಗಿ ಸಾಧಿಸುವ ಪ್ರಯತ್ನ ಮಾಡಿದ್ದ ಜವಾಹರಲಾಲ್ ನೆಹರೂ ಅವರು ಆಧುನಿಕ ಭಾರತದ ನಿರ್ಮಾಣದಲ್ಲಿ ದೊಡ್ಡ ಪಾತ್ರ ವಹಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನೆಹರೂ ಅವರ 62ನೇ ಪುಣ್ಯತಿಥಿಯ ಪ್ರಯುಕ್ತ ವಿಧಾನಸೌಧದ ಆವರಣದಲ್ಲಿರುವ ನೆಹರೂ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಮೊದಲ ಪ್ರಧಾನಿಯಾಗಿ 17 ವರ್ಷ ಜನಸೇವೆ ಮಾಡಿದ್ದಾರೆ. ಸಮಾಜವಾದಿ ಮತ್ತು ಮಿಶ್ರ ಆರ್ಥಿಕತೆಗೆ ಹೆಚ್ಚು ಒತ್ತು ನೀಡಿ ಬೃಹತ್ ಅಣೆಕಟ್ಟುಗಳ ನಿರ್ಮಾಣ, ಶಿಕ್ಷಣ, ಸಹಕಾರ ಕ್ಷೇತ್ರಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಕಾರಣಕರ್ತರಾದರು ಎಂದು ನೆನಪು ಮಾಡಿಕೊಂಡರು.

ಕೆಪಿಸಿಸಿ ಕಚೇರಿಗೆ ಬಾರದ ಸಿ.ಎಂ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ನೆಹರೂ ಪುಣ್ಯ ಸ್ಮರಣೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬರುತ್ತಾರೆ ಎಂದು ಸಚಿವರು, ಮಾಜಿ ಸಚಿವರಾದಿಯಾಗಿ ಕಾಂಗ್ರೆಸ್‌ನ ಅನೇಕರು ಕಾದು ಕುಳಿತಿದ್ದರು. ಆದರೆ, ಸಿದ್ದರಾಮಯ್ಯ ಅವರು ವಿಧಾನಸೌಧದ ಮುಂಭಾಗದಲ್ಲಿ ಪುಷ್ಪನಮನ ಸಲ್ಲಿಸಿದ ಬಳಿಕ ನೇರವಾಗಿ ಕಾವೇರಿ ನಿವಾಸಕ್ಕೆ ತೆರಳಿದರು.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿಯಲ್ಲಿ ಇದ್ದ ಕಾರಣ ಗೈರಾಗಿದ್ದರು.

ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ನೇತೃತ್ವದಲ್ಲಿ ಕೆಪಿಸಿಸಿ ಕಚೇರಿಯಲ್ಲಿ ಪುಣ್ಯಸ್ಮರಣೆ ನಡೆಯಿತು. ಮಾಜಿ ಸಚಿವೆ ರಾಣಿ ಸತೀಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ಎಐಸಿಸಿ ಕಾರ್ಯದರ್ಶಿ ಗೋಪಿನಾಥ್ ಪಳನಿಯಪ್ಪನ್, ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿದರು.

ಕೆಪಿಸಿಸಿ ಕಚೇರಿಯಲ್ಲಿ ಜವಾಹರಲಾಲ್ ನೆಹರೂ ಭಾವಚಿತ್ರಕ್ಕೆ ಎಚ್.ಎಂ. ರೇವಣ್ಣ, ವಿ.ಎಸ್. ಉಗ್ರಪ್ಪ, ಗೋಪಿನಾಥ್ ಪಳನಿಯಪ್ಪನ್, ಕೆ.ಎಚ್. ಮುನಿಯಪ್ಪ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಹಲ್ಲೆ ಮಾಡಿ ಪೇಂಟರ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರದಲ್ಲಿ ಪೇಂಟಿಂಗ್ ಹಾಗೂ ಗುಜರಿ ಕೆಲಸ ಮಾಡಿಕೊಂಡಿದ್ದ ಮೊಹಮ್ಮದ್ ಖಾಸೀಂ(27) ಅವರನ್ನು ಬ್ಯಾಟರಾಯನ ಪುರ ಠಾಣಾ ವ್ಯಾಪ್ತಿಯ ಶಾಮಣ್ಣ ಗಾರ್ಡನ್‌ನಲ್ಲಿ ಕೊಲೆ ಮಾಡಲಾಗಿದೆ.

ರಾಮನಗರದ ಬೀಡಿ ಕಾಲೊನಿಯ ನಿವಾಸಿ ಮೊಹಮದ್ ಖಾಸೀಂ ಅವರು ಮಾಜಿ ಪ್ರೇಯಸಿ ಮನೆಗೆ ಬಂದಿದ್ದರು. ಆಗ ಹಲ್ಲೆ ನಡೆಸಿ, ಕೊಲೆ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಮೊಹಮ್ಮದ್ ಖಾಸೀಂ ಅವರು ಯುವತಿಯನ್ನು ಪ್ರೀತಿ ಸುತ್ತಿದ್ದರು. ಆದರೆ, ಮೂರು ವರ್ಷಗಳ ಹಿಂದೆ ಬೇರೊಬ್ಬ ಯುವಕನ ಜತೆಗೆ ಯುವತಿಯ ಮದುವೆಯಾಗಿತ್ತು. ದಂಪತಿ ಶಾಮಣ್ಣ ಗಾರ್ಡನ್‌ನಲ್ಲಿ ವಾಸವಾಗಿದ್ದರು. ಪತಿಯ ಕುಟುಂಬದ ಸದಸ್ಯರು ಬೇರೆಡೆ ವಾಸ ಆಗಿದ್ದರು. ಈ ಮಧ್ಯೆ ಖಾಸೀಂ ಹಾಗೂ ಮಾಜಿ ಪ್ರೇಯಸಿ ಮೊಬೈಲ್ ಮೂಲಕ ಸಂಪರ್ಕದಲ್ಲಿದ್ದರು. ಹೀಗಾಗಿ ಆಗಾಗ್ಗೆ ಖಾಸೀಂ ಅವರು ಮಾಜಿ ಪ್ರೇಯಸಿ ಮನೆಗೆ ಬಂದು ಹೋಗುತ್ತಿದ್ದರು. ಈ ವಿಷಯ ತಿಳಿದಿದ್ದ ಆಕೆಯ ಪತಿ ಹಾಗೂ ಅವರ ಕುಟುಂಬದ ಸದಸ್ಯರು ಗಲಾಟೆ ಮಾಡಿದ್ದರು. ಮೇ 25ರ ಸಂಜೆ ಖಾಸೀಂ ಅವರು ಮತ್ತೆ ಮಾಜಿ ಪ್ರೇಯಸಿ ಮನೆಯ ಬಳಿಗೆ ಬಂದಿದ್ದರು. ಆಗ ಖಾಸೀಂ ಮೇಲೆ ಹಲ್ಲೆ ನಡೆಸಲಾಗಿತ್ತು. ಬಳಿಕ ಸಾರ್ವಜನಿಕರು ಜಗಳ ಬಿಡಿಸಿ ರಾಜಿ ಮಾಡಿ ಕಳುಹಿಸಿದ್ದರು. ಹಲ್ಲೆಗೊಳಗಾಗಿದ್ದ ಖಾಸೀಂ ರಾಮನಗರಕ್ಕೆ ಹೋಗಿದ್ದರು. ಮೇ 26ರಂದು ಮುಂಜಾನೆ ಅಸ್ವಸ್ಥರಾಗಿದ್ದರು. ಮನೆಯವರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಸಂಬಂಧ ಖಾಸೀಂ ಪೋಷಕರು, ಮಹಿಳೆಯ ಪತಿ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಪೊಲೀಸರು ಹೇಳಿದರು. ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಅಪಘಾತ: ವ್ಯಕ್ತಿ ಸಾವು

ಬೈಕ್‌ಗೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದು ಖಾಸಗಿ ಕಂಪನಿ ಉದ್ಯೋಗಿ ಮೃತಪಟ್ಟ ಘಟನೆ ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಯಲಹಂಕ ನಿವಾಸಿ ದಿನೇಶ್ (36) ಮೃತ ಬೈಕ್ ಸವಾರ. ದಿನೇಶ್ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ರಾತ್ರಿ 10.30ರ ಸುಮಾರಿಗೆ ನೈಸ್ ರಸ್ತೆಯ ಮಾದಾವರ ಟೋಲ್ ಸಮೀಪ ತೆರಳುತ್ತಿದ್ದ ವೇಳೆ ವೇಗವಾಗಿ ಬಂದ ವಾಹನವೊಂದು ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ದಿನೇಶ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ.

ಡಿಕ್ಕಿ ಹೊಡೆದ ಬಳಿಕ ವಾಹನವನ್ನು ನಿಲುಗಡೆ ಮಾಡದೇ ಚಾಲಕ ತೆರಳಿದ್ದಾನೆ. ಟೋಲ್ ಬಳಿಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ. ವಾಹನದ ಮಾದರಿ ಹಾಗೂ ಚಾಲಕ ಪತ್ತೆ ಆಗಿಲ್ಲ ಎಂದು ಸಂಚಾರ ಪೊಲೀಸರು ಹೇಳಿದರು.

ಹೆಲ್ಮೆಟ್ ರಹಿತ ಚಾಲನೆ: 4,617 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು, ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದ 4,617 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಬುಧವಾರ ಬೆಳಿಗ್ಗೆ 6ರಿಂದ 9ರವರೆಗೆ ನಗರದಾದ್ಯಂತ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದರು. ಸವಾರರ ವಿರುದ್ಧ 3,084 ಹಾಗೂ ಹಿಂಬದಿ ಸವಾರರ ವಿರುದ್ಧ 1,533 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಹೆಲ್ಮೆಟ್ ಧರಿಸಿ ವಾಹನ ಚಲಾಯಿಸುವುದು ಕಡ್ಡಾಯವಾಗಿದೆ. ರಸ್ತೆ ಅಪಘಾತದಲ್ಲಿ ಗಾಯ, ಪ್ರಾಣಹಾನಿ ತಗ್ಗಿಸುವ ಸಲುವಾಗಿ ಇಂತಹ ವಿಶೇಷ ಕಾರ್ಯಾಚರಣೆಯನ್ನು ನಿರಂತರವಾಗಿ ನಡೆಸಲಾಗುವುದು ಎಂದು ಸಂಚಾರ ಪೊಲೀಸರು ಹೇಳಿದರು.

ಹಡ್ಸನ್ ವೃತ್ತ: 4 ದಿಕ್ಕಿಗೆ ಸಂಪರ್ಕ

ಎರಡನೇ ಮುಖಪುಟದಿಂದ...

₹13,262.70 ಕೋಟಿ ವೆಚ್ಚದಲ್ಲಿ ಒಟ್ಟು 75.60 ಕಿ.ಮೀ ಉದ್ದದ 11 ಎಲಿವೇಟೆಡ್ ಕಾರಿಡಾರ್ ನಿರ್ಮಿಸಲು ಸಚಿವ ಸಂಪುಟ ಏಪ್ರಿಲ್ 16ರಂದು ಅನುಮೋದನೆ ನೀಡಿತ್ತು. ಇದರಲ್ಲಿ ಒಂಬತ್ತು ಮೇಲ್ಸೇತುವೆಗಳಿಗೆ ಬಿ-ಸ್ಮೈಲ್ ಟೆಂಡರ್ ಆಹ್ವಾನಿಸಿದೆ. ಇವುಗಳಲ್ಲಿ ಹಡ್ಸನ್ ವೃತ್ತದ ಎಲಿವೇಟೆಡ್ ಕಾರಿಡಾರ್ ಕೂಡ ಒಂದಾಗಿದೆ.

ಸಂಚಾರ ಸುಗಮ: ‘ನಗರದ ಹೃದಯ ಭಾಗದಲ್ಲಿ ವಾಹನ ದಟ್ಟಣೆಯನ್ನು ನಿಯಂತ್ರಿಸುವ ಉದ್ದೇಶದಿಂದ ಈ ಎಲಿವೇಟೆಡ್ ಕಾರಿಡಾರ್ ಅನ್ನು ನಿರ್ಮಿಸಲಾಗುತ್ತಿದೆ. ಹೈಕೋರ್ಟ್, ವಿಧಾನಸೌಧ, ಮೆಜೆಸ್ಟಿಕ್, ಜೆ.ಸಿ. ರಸ್ತೆ ಕಡೆಯ ಸಂಚಾರ ಸುಗಮವಾಗಲಿದೆ. ಉತ್ತರ–ದಕ್ಷಿಣ ಭಾಗದ ವಾಹನ ಸಂಚಾರ ದ್ವಿಮುಖವಾಗಲಿದೆ. ಈ ಎಲಿವೇಟೆಡ್ ಕಾರಿಡಾರ್ ಹಡ್ಸನ್ ಚರ್ಚ್‌ನ ಸುತ್ತಲೂ ಹೊಸ ವಿನ್ಯಾಸವನ್ನೇ ಸೃಷ್ಟಿಸಲಿದೆ. ಹೊಸ ತಂತ್ರಜ್ಞಾನದೊಂದಿಗೆ ಕಡಿಮೆ ಅವಧಿಯಲ್ಲಿ ಕಾಮಗಾರಿ ಮುಗಿಯಲಿದೆ’ ಎಂದು ಬಿ-ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ಪುರಭವನದ ಬಳಿ ಸಾಗುವ ಮೇಲ್ಸೇತುವೆ ಮಾದರಿ

ಏನಿದು ಯುಎಚ್‌ಪಿಎಫ್‌ಆರ್‌ಸಿ?

ಎರಡನೇ ಮುಖಪುಟದಿಂದ...

ಯುಎಚ್‌ಪಿಎಫ್‌ಆರ್‌ಸಿ ಸೆಗ್‌ಮೆಂಟ್ 7 ಟನ್ ತೂಕವಿರಲಿದ್ದು, ಸಾಂಪ್ರದಾಯಿಕ ಕಾಂಕ್ರೀಟ್ ಸೆಗ್‌ಮೆಂಟ್ 32 ಟನ್ ಇರುತ್ತದೆ. ಈ ಮೊದಲು ಜರ್ಮನಿ ಹಾಗೂ ಚೀನಾದಲ್ಲಿ ಮಾತ್ರ ಯುಎಚ್‌ಪಿಎಫ್‌ಆರ್‌ಸಿ ಬಳಸಲಾಗುತ್ತಿತ್ತು. ಅಲ್ಲದೆ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಬೇಕಿತ್ತು. ‘ಮೇಕ್ ಇನ್ ಇಂಡಿಯಾ’ದಡಿ ಹಲವು ಸಂಸ್ಥೆಗಳು ಭಾರತದಲ್ಲೇ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿವೆ.

ರಾಜಸ್ಥಾನದ ಬಿಕನೇರ್‌ನಲ್ಲಿ ಸಿಲಿಕಾ ಸ್ಯಾಂಡ್ ಮತ್ತು ಕ್ವಾರ್ಟ್ಜ್ ಸಂಸ್ಥೆಗಳು ಯುಎಚ್‌ಪಿಎಫ್‌ಆರ್‌ಸಿ ಉತ್ಪಾದನಾ ಸೌಲಭ್ಯ ಹೊಂದಿವೆ. ಹೀಗಾಗಿ, ಸಾಂಪ್ರದಾಯಿಕ ಕಾಂಕ್ರೀಟ್ ಮಾದರಿಗಿಂತ ಹೆಚ್ಚು ಸೂಕ್ತ ಎಂದು ತಜ್ಞರ ಸಮಿತಿ ಹೇಳಿದೆ.

ನಗರದಲ್ಲಿ ಇಂದು

ಮಯೂರ ವರ್ಮನ ಸವಿನೆನಪಲ್ಲಿ ಕನ್ನಡ ಸಾಮ್ರಾಜ್ಯೋತ್ಸವ: ಅತಿಥಿಗಳು: ವಿ. ನಾಗೇಂದ್ರ ಪ್ರಸಾದ್, ಧರ್ಮೇಂದ್ರ ಅರೇನಹಳ್ಳಿ, ನೇ.ಭಾ. ರಾಮಲಿಂಗ ಶೆಟ್ಟಿ, ಆಯೋಜನೆ: ಕನ್ನಡ ಮೊದಲು, ಸ್ಥಳ: ಡಾ.ರಾಜ್‌ಕುಮಾರ್ ಪ್ರತಿಮೆ ಬಳಿ, ಕುರುಬರಹಳ್ಳಿ, ಬೆಳಿಗ್ಗೆ 9

ಹರಿದಾಸವಾಣಿ, ಪುರಂದರದಾಸರ ಕೀರ್ತನಗಳ ಗಾಯನೋತ್ಸವ, ವಿಚಾರಸಂಕಿರಣ: ಸಾನ್ನಿಧ್ಯ: ಸಿದ್ದೇಶ್ವರ ದೇವರು, ಉದ್ಘಾಟನೆ: ಎಲ್. ಕೃಷ್ಣಮೂರ್ತಿ, ಎಸ್. ಸುನಂದ, ಬಿ.ಇ. ಕಮಲ್‌ಕುಮಾರ್, ಆಯೋಜನೆ: ಗಾಯತ್ರಿ ಸೋಷಿಯಲ್ ಟ್ರಸ್ಟ್, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

ವಿಜಯಾ ವಿಷ್ಣುಭಟ್ ಡೋಂಗ್ರೆ ಅವರ ‘1948 ಬ್ರಾಹ್ಮಣರ ನರಮೇಧ’ ಪುಸ್ತಕ ಬಿಡುಗಡೆ: ಅತಿಥಿಗಳು: ತೇಜಸ್ವಿನಿ ಅನಂತಕುಮಾರ್, ವಿಕ್ರಮ ಫಡ್ಕೆ, ಎಸ್.ಆರ್. ಲೀಲಾ, ಜಿ.ಬಿ. ಹರೀಶ್, ಗಣಪತಿ ಜೋಶಿ, ಆಯೋಜನೆ: ಸಮೃದ್ಧ ಸಾಹಿತ್ಯ, ಅದಮ್ಯ ಚೇತನ, ಗಿರಿಜಾ ಶಾಸ್ತ್ರಿ ಸ್ಮಾರಕ ಸಂಸ್ಥೆ, ಸ್ಥಳ: ಅದಮ್ಯ ಚೇತನ, ಗವೀಪುರ, ಬೆಳಿಗ್ಗೆ 10.30

ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಂದಾಯ ನಿವೇಶನದಾರರ ಕುಂದು ಕೊರತೆಗಳ ಸಮಾಲೋಚನ ಸಭೆ: ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಆಯೋಜನೆ: ಕೊಡಿಗೇಹಳ್ಳಿ ರೆವಿನ್ಯೂ ನಿವೇಶನದಾರರ ಹಿತರಕ್ಷಣಾ ಸಮಿತಿ, ಸ್ಥಳ: ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ಕೊಡಿಗೇಹಳ್ಳಿ ಪೋಸ್ಟ್, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 10.30

‘ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ’ ಪ್ರದಾನ: ಎಸ್.ಜಿ. ಸಿದ್ಧರಾಮಯ್ಯ, ಉದ್ಘಾಟನೆ: ಕೆ.ಎ. ದಯಾನಂದ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಪ್ರಾಸ್ತಾವಿಕ ನುಡಿ: ಪದ್ಮಿನಿ ನಾಗರಾಜು, ಪ್ರಶಸ್ತಿ ಸ್ವೀಕರಿಸುವವರು: ಜೆ.ಎಂ. ವೀರಸಂಗಯ್ಯ, ಅತಿಥಿಗಳು: ಪ್ರಶಾಂತ್ ಪಟೇಲ್, ಆರ್. ಮಂಜುನಾಥ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಕೊ ಕನ್ನಡ ಬಳಗ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

‘ರಂಗ ರಂಗೋಲಿ’ ಶ್ರೇಷ್ಠ ನಾಟಕಗಳ ಅಪರೂಪದ ಉತ್ಸವ: ‘ನಡುರಾತ್ರಿ ಪುಳಕ’ ನಾಟಕ ಪ್ರದರ್ಶನ: ಉದ್ಘಾಟನೆ: ಉಮಾಶ್ರೀ, ಅನುವಾದ, ನಿರ್ದೇಶನ: ಎಸ್. ಸುರೇಂದ್ರನಾಥ್, ಪ್ರಸ್ತುತಿ: ಸಂಕೇತ್ ತಂಡ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿ ಕಾವಲ್, ಸಂಜೆ 6.30

ಉಮಾಶ್ರೀ

ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿದ 15 ಸಾಧಕರಿಗೆ ಸನ್ಮಾನ: ಅತಿಥಿಗಳು: ಈಶ್ವರ ಖಂಡ್ರೆ, ಮೀನಾಕ್ಷಿ ನೇಗಿ, ಶ್ರೀಧರ್ ಪುನತಿ, ಕೆ.ಎನ್. ಮೂರ್ತಿ, ಸಿ.ಎಸ್. ಕೇದಾರ್, ಜಿ.ಎನ್. ಶ್ರೀಕಂಠಯ್ಯ, ಸ್ಥಳ: ಅರಣ್ಯ ಭವನ, ಮಲ್ಲೇಶ್ವರ, ಬೆಳಿಗ್ಗೆ 11

ಸ್ನೇಹ ಸಮ್ಮಿಲನ, ಯು.ಪಿ. ಶಿವಾನಂದರಿಗೆ ಅಭಿನಂದನೆ ಸನ್ಮಾನ: ಉದ್ಘಾಟನೆ: ಈಶ್ವರ ದೈತೋಟ, ಅಧ್ಯಕ್ಷತೆ: ಎಂ.ಬಿ. ಜಯರಾಮ್, ಅಭಿನಂದನಾ ನುಡಿ: ಶಿವಸುಬ್ರಹ್ಮಣ್ಯ ಕಲ್ಮಡ್ಕ, ಅತಿಥಿಗಳು: ಕೆ.ಈ. ರಾಧಾಕೃಷ್ಣ, ಡಿ.ವಿ. ಶಿವರಾಮ, ಶಿವರಾಮ ಕೇವಳ, ಆಯೋಜನೆ: ಪಯಸ್ವಿನಿ ಗೆಳೆಯರ ಬಳಗ ಬೆಂಗಳೂರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2ರಿಂದ

‘ಕುಂಭಕರ್ಣ ಪ್ರಸಂಗ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಪಯಸ್ವಿನಿ ಗೆಳೆಯರ ಬಳಗ ಬೆಂಗಳೂರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

‘ಮಾರೀಕಾಡು’ ನಾಟಕ ಪ್ರದರ್ಶನ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ರಾಮಚಂದ್ರ, ಅತಿಥಿಗಳು: ರಂಗಸ್ವಾಮಿ, ಮಾಲತೇಶ್ ಬಡಿಗೇರ್, ಆಯೋಜನೆ: ಆದಿಶಕ್ತಿ ರಂಗ ಕಲಾಸಂಸ್ಥೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30ರಿಂದ

‘ಪ್ರಾಚೀನ ಭಾರತದ ಕಾನೂನು ವ್ಯವಸ್ಥೆಯಲ್ಲಿ ಕಾರ್ಮಿಕ–ಮಾಲೀಕ ಹಿತ ಚಿಂತನೆ’ ಉಪನ್ಯಾಸ: ಶಾಂತ ನಾಗಮಂಗಲ, ಉಪಸ್ಥಿತಿ: ಎಂ.ಸಿ. ನರೇಂದ್ರ, ಮಹಾಂತೇಶ ದೇಗಾವಿ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

‘ಪರಿಸರದ ಕಥೆ’ ನಾಟಕ ಪ್ರದರ್ಶನ: ರಚನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಮನು ರಾಮಚಂದ್ರ, ಆಯೋಜನೆ: ದಾಟು ಥಿಯೇಟರ್, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ವೇಶ್ಯಾವಾಟಿಕೆ: 7 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯನ್ನು ಬಾಡಿಗೆಗೆ ಪಡೆದು ವೇಶ್ಯಾವಾಟಿಕೆ ನಡೆಸುತ್ತಿದ್ದ ಏಳು ಮಹಿಳೆಯರನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ಐವರು ಮಹಿಳೆಯರನ್ನು ರಕ್ಷಿಸಿದ್ದಾರೆ.

ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಮದ್ದೂರಮ್ಮ ಲೇಔಟ್‌ನ ಶ್ರೀಗಂಧ ಕಾವಲ್, ವಿದ್ಯಾರಣ್ಯ ಪುರ ಠಾಣಾ ವ್ಯಾಪ್ತಿಯ ಟೆಂಪಲ್ ರೋಡ್, ಬಸವೇಶ್ವರ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಬಿಇಎಂಎಲ್ ಲೇಔಟ್‌ನಲ್ಲಿ ಬಾಡಿಗೆಗೆ ಮನೆ ಪಡೆದು ಆರೋಪಿಗಳು ವೇಶ್ಯಾವಾಟಿಕೆ ನಡೆಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಸಿಂಗಸಂದ್ರ ಗ್ರಾಮ, ಬೇಗೂರ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಈಗಿನ ಪ್ರಾಪರ್ಟಿ ನಂ. 123 ಬೇಗೂರ, ಹಳೆಯ ಪಿಐಡಿ ನಂ. 718/122/1, 122/3, 123 ಹೊಂದಿರುವ (1) ಸರ್ವೆ ನಂ. 123 ರಲ್ಲಿರುವ 2 ಎಕರೆ ಮತ್ತು 17 ಗುಂಟೆ; (2) ನ್ಯೂ ಸರ್ವೆ ನಂ. 122/3 ರಲ್ಲಿರುವ (ಹಳೆಯ ಸರ್ವೆ ನಂ. 122/1) 30 ಗುಂಟೆ; ಮತ್ತು (3) ಸರ್ವೆ ನಂ. 122/3 ರಲ್ಲಿರುವ (ಹಳೆಯ ಸರ್ವೆ ನಂ. 122) 28 ಗುಂಟೆ; ಒಟ್ಟಾರೆ 3 ಎಕರೆ 35 ಗುಂಟೆ ವಿಸ್ತೀರ್ಣವುಳ್ಳ ಪರಿವರ್ತಿತ ಜಮೀನುಗಳ ಉದ್ದೇಶಿತ ಸ್ವಾಧೀನತೆಗೆ ಸಂಬಂಧಿಸಿದಂತೆ, ನಮ್ಮ ಕಕ್ಷಿದಾರರ ಪರವಾಗಿ ನಾವು, ಇವುಗಳ ಮಾಲೀಕರಾದ ಎನ್ ನಾಗರಾಜ ರೆಡ್ಡಿ ಮತ್ತು ಗೋವಿಂದಮ್ಮ ಬಿ ಎಂಬುವರ ಹಕ್ಕು ಅಧಿಕಾರಗಳನ್ನು ಪರಿಶೀಲನೆ ಕೈಗೊಳ್ಳುತ್ತಿದ್ದೇವೆ.

ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಸದರಿ ಮಾಲೀಕರ ಪ್ರತಿಯಾಗಿ ಯಾವುದೇ ವ್ಯಕ್ತಿ, ಸಂಸ್ಥೆ, ಬ್ಯಾಂಕ್ ಅಥವಾ ಪ್ರಾಧಿಕಾರಕ್ಕೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಕ್ಲೇಮ್, ಚಾರ್ಜ್, ಲೀನ್, ಅಡಮಾನ, ಟೆನನ್ಸಿ, ಈಸ್‌ಮೆಂಟ್, ಆನುವಂಶಿಕ, ಸ್ವಾಧೀನ, ಅಟ್ಯಾಚ್‌ಮೆಂಟ್, ತಗಾದೆ ಅಥವಾ ಇನ್ಯಾವುದೇ ರೀತಿಯ ಋಣಭಾರಗಳಂತಹ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ, ಅಂತಹ ವ್ಯಕ್ತಿಯಾಗಲಿ/ಸಂಸ್ಥೆಯಾಗಲಿ, ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 ದಿನಗಳೊಳಗೆ, ಲಿಖಿತ ರೂಪದಲ್ಲಿ ಪುರಾವೆ ದಾಖಲಾತಿಗಳ ಸಮೇತ, ಕೆಳಕಂಡ ಸಹಿದಾರರ ಗಮನಕ್ಕೆ ತರತಕ್ಕದ್ದು, ಇಲ್ಲವಾದಲ್ಲಿ ಅಂತಹ ಯಾವುದೇ ಕ್ಲೇಮ್‌ಗಳು ಅಸ್ತಿತ್ವದಲ್ಲಿ ಇರುವುದಿಲ್ಲವೆಂದು ಪರಿಭಾವಿಸಲಾಗುತ್ತದೆ ಮತ್ತು ನಂತರದಲ್ಲಿ ಅಂತಹವುಗಳು ಎದುರಾದಲ್ಲಿ, ಅವುಗಳನ್ನು ಕೈಬಿಡಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ಜ್ಯೋತಿ ರೆಗೊ
ಹಿರಿಯ ಪಾಲುದಾರರು
ಎಎಲ್‌ಎಂಟಿ ಲೀಗಲ್
ವಕೀಲರು ಮತ್ತು ಸಾಲಿಸಿಟರ್ಸ್
2, ಲ್ಯಾವೆಲ್ಲೆ ರೋಡ್, ಬೆಂಗಳೂರು–560001
ಫೋನ್: 91–(0) 80–40160000
ಇ–ಮೇಲ್: **jrego@almtlegal.com**

*₹ 10.99 lakh for e VITARA Delta. Battery EMI: ₹ 3.99/km (subject to financier terms). Taxes and statutory charges are extra. Visit dealership for full T&Cs. | *As certified by Kantar IMRB for an OEM platform for end-to-end usage as on November 28, 2025. | *543 km range: Certified range; actual results may vary by driving conditions and usage. | *ADAS features are for driver assistance only. Driver is responsible for safe and attentive driving. | *Always wear your seatbelt. | *Mentioned ownership plan is for e VITARA Delta variant. Calculation is done assuming vehicle is running 60 km per day, excluding charging cost. Valid on retail sales for the e VITARA till 31st May ’26, capped at 1 000 units of electricity (kWh) per customer or 1 Year from the purchase of the vehicle, whichever is earlier. Assured buyback plan is available on payment basis with the option of 3 years/45 000 km or 4 years/60 000 km ownership plans (whichever is earlier). The program is offered through an Insurance company. e VITARA comes with standard warranty of 3 years/1 00 000 km with an option of extending the same on payment basis to 5 years/1 40 000 km and service activated coverage for 6th to 8th year for EV related components.

ಇನ್ವಿಟ್: ನಿರಂತರ ಆದಾಯಕ್ಕೆ ರಹದಾರಿ

• ಹರ್ಷ ಶಾ

ಮೂಲಸೌಕರ್ಯ ವಲಯದಲ್ಲಿ ಹೂಡಿಕೆ ಮಾಡಿ, ಅವುಗಳಿಂದ ನಿರಂತರವಾಗಿ ಆದಾಯ ಪಡೆಯಲು ಅನುಕೂಲಕರ ಮಾರ್ಗವೊಂದನ್ನು ದೇಶದ ಸಣ್ಣ ಹೂಡಿಕೆದಾರರಿಗೆ ಇನ್ವಿಟ್‌ಗಳು ಕಲ್ಪಿಸುತ್ತಿವೆ. ಇನ್ವಿಟ್‌ಗಳಲ್ಲಿನ ಹೂಡಿಕೆಯ ಲಾಭ, ಅವುಗಳ ಮಿತಿಯನ್ನು ಈ ಬರಹ ವಿವರಿಸಿದೆ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಸಾಗುತ್ತಿದ್ದೀರಿ ಅಥವಾ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಲಾರಿಯೊಂದು ಸರಕು ಸಾಗಿಸುತ್ತ ಇರುವುದನ್ನು ನೀವು ನೋಡುತ್ತಿದ್ದೀರಿ ಎಂದು ಭಾವಿಸಿ. ಒಂದಾದ ನಂತರ ಒಂದರಂತೆ ರಸ್ತೆ ಶುಲ್ಕ ವಸೂಲಿ ಕೇಂದ್ರಗಳನ್ನು ನೀವು ತಾಸುಗಳ ಅಂತರದಲ್ಲಿ ದಾಟಬೇಕಾಗುತ್ತದೆ. ಅಲ್ಲೆಲ್ಲ ಶುಲ್ಕ ಪಾವತಿಸಿ, ಮುಂದೆ ಸಾಗಬೇಕಾಗುತ್ತದೆ. ಅದೇ ರೀತಿ, ವಿದ್ಯುತ್ ಬಳಸುವ ಯಾವುದೇ ಉಪಕರಣವನ್ನು ಮನೆಯಲ್ಲಿ ಆನ್ ಮಾಡಿದಾಗ, ಹೆಚ್ಚಿನ ವೋಲ್ಟೇಜ್‌ನ ವಿದ್ಯುತ್ ಸಾಗಿಸುವ ತಂತಿಗಳ ಮೂಲಕ ದೂರದಿಂದ ಬಂದ ವಿದ್ಯುತ್ತನ್ನು ಅದು ಬಳಸಿಕೊಳ್ಳುತ್ತದೆ.

ನಮ್ಮಲ್ಲಿ ಬಹುತೇಕರಿಗೆ ಇವು ನಿತ್ಯದ, ಬಹಳ ಸಹಜ ಚಟುವಟಿಕೆಗಳು. ಆದರೆ ಇವುಗಳ ಜೊತೆಗಿನ ನಿಮ್ಮ ಸಂಬಂಧವನ್ನು ಬದಲಾಯಿಸಲು ಸಾಧ್ಯವಾದರೆ ಹೇಗೆ? ಅಂದರೆ, ಬಳಕೆ ಮಾಡಿದ್ದಕ್ಕೆ ಶುಲ್ಕವನ್ನು ಪಾವತಿಸುವ ಗ್ರಾಹಕ ಮಾತ್ರ ಆಗಿರುವ ಬದಲು ಭಾರತವನ್ನು ಮುನ್ನಡೆಸುವ ಈ ಮೂಲಸೌಕರ್ಯ ಆಸ್ತಿಗಳ ಭಾಗಶಃ ಮಾಲೀಕ ನೀವೇಕೆ ಆಗಬಾರದು, ಆ ಮೂಲಕ ಅವುಗಳಿಂದ ನಿರಂತರವಾಗಿ ಆದಾಯ ಏಕೆ ಗಳಿಸಬಾರದು?

ತಲೆಮಾರುಗಳಿಂದ ನಮ್ಮಲ್ಲಿ ಕುಟುಂಬಗಳ ಮಟ್ಟದಲ್ಲಿ ಸಂಪತ್ತು ಸೃಷ್ಟಿಯ ಕೆಲಸವು ಬಹಳ ಸಾಂಪ್ರದಾಯಿಕವಾದ ಹಾದಿಯಲ್ಲಿ ಸಾಗಿಬಂದಿದೆ: ಅಂದರೆ, ಉಳಿತಾಯದ ಹಣವನ್ನು ಸುರಕ್ಷತೆಯ ದೃಷ್ಟಿಯಿಂದ ಬ್ಯಾಂಕ್‌ನ ನಿಶ್ಚಿತ ಠೇವಣಿಗಳಲ್ಲಿ (ಎಫ್.ಡಿ) ತೊಡಗಿಸಲಾಗುತ್ತದೆ ಅಥವಾ ಷೇರುಪೇಟೆಯ ಬೆಳವಣಿಗೆಯ ಪ್ರಯೋಜನ ಪಡೆಯಲು ಹಣವನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಲಾಗುತ್ತದೆ. ಎಫ್.ಡಿ.ಗಳಿಂದ ಸಿಗುವ ಬಡ್ಡಿಯು ಹಣದುಬ್ಬರದ ಪ್ರಮಾಣವನ್ನು ಮೀರಲು ಹಲವು ಬಾರಿ ವಿಫಲವಾಗುತ್ತಿದೆ. ಈಕ್ವಿಟಿಗಳಲ್ಲಿ ಮಾತ್ರ ಹಣ ತೊಡಗಿಸಿದಾಗ, ಷೇರುಪೇಟೆಯ ಏರಿಳಿತಗಳು ಸಾಂಪ್ರದಾಯಿಕ ಹೂಡಿಕೆದಾರರ ಮೇಲೆ ಒಂದಿಷ್ಟು ಒತ್ತಡ ಸೃಷ್ಟಿಸುತ್ತವೆ.

ಇದರಿಂದಾಗಿ, ನೆಚ್ಚಿಕೊಳ್ಳಬಹುದಾದ ಮಧ್ಯಮ ಮಾರ್ಗವೊಂದನ್ನು ಹೂಡಿಕೆದಾರರು ಅರಸುವುದಿದೆ. ನಿಜವಾದ ಆಸ್ತಿಯ ಜೊತೆ ನಂಟು ಹೊಂದಿರುವ, ಷೇರುಪೇಟೆಯ ತೀವ್ರ ಏರಿಳಿತಗಳಿಗೆ ಗುರಿಯಾಗದೆ, ಸ್ಥಿರ ಪ್ರಮಾಣದಲ್ಲಿ ಹಾಗೂ ಊಹಿಸಲು ಸಾಧ್ಯವಾಗುವ ವರಮಾನ ನೀಡುವ, ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವ ಹೂಡಿಕೆ ಆಯ್ಕೆಯನ್ನು ಅವರು ಅರಸುವುದು ನಡೆದಿದೆ. ಮೂಲಸೌಕರ್ಯ ಹೂಡಿಕೆ ಟ್ರಸ್ಟ್‌ಗಳು (ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್) ಮುನ್ನೆಲೆಗೆ ಬರುವುದು ಇಂತಹ ಹೂಡಿಕೆ ಆಯ್ಕೆ ಅರಸುವಿಕೆಯ ಸಂದರ್ಭದಲ್ಲಿ.

ದೇಶದ ಎಂಜಿನ್: 2047ರ ಹೊತ್ತಿಗೆ ಪೂರ್ತಿಯಾಗಿ ಅಭಿವೃದ್ಧಿ ಹೊಂದಿದ ಅರ್ಥ ವ್ಯವಸ್ಥೆಯಾಗಿ ಬದಲಾವಣೆ ಕಾಣಬೇಕು ಎಂಬ ಖಚಿತ ದೂರದೃಷ್ಟಿಯನ್ನು ಭಾರತ ಹೊಂದಿದೆ. 'ಮೂಲಸೌಕರ್ಯ ಮತ್ತು ಅಭಿವೃದ್ಧಿ ಹಣಕಾಸು ಕುರಿತ ರಾಷ್ಟ್ರೀಯ ಬ್ಯಾಂಕ್' (ನಾಬ್‌ಫಿಡ್) ಪ್ರಕಾರ 2047ಕ್ಕೆ ಮೊದಲು ದೇಶದ ಮೂಲಸೌಕರ್ಯ ವಲಯದಲ್ಲಿ ಸರಿಸುಮಾರು ₹750 ಲಕ್ಷ ಕೋಟಿ ಹೂಡಿಕೆ ಆಗಬೇಕಿದೆ. ನಮಗೆ ಸುಲಲಿತವಾಗಿ ಸರಕು ಸಾಗಣೆ ಮಾಡಲು, ದತ್ತಾಂಶ ವರ್ಗಾವಣೆಗೆ ಹಾಗೂ ಇಂಧನ ಸಾಗಾಟಕ್ಕೆ ಸಹಸ್ರಾರು ಕಿ.ಮೀ. ಉದ್ದದ ಹೊಸ ಎಕ್ಸ್‌ಪ್ರೆಸ್ ಹೆದ್ದಾರಿಗಳು, ದಕ್ಷವಾದ ವಿದ್ಯುತ್ ಗ್ರಿಡ್‌ಗಳು, ನವೀಕರಿಸಬಹುದಾದ ಇಂಧನ ಉತ್ಪಾದನಾ ವಿಧಾನ, ಡಿಜಿಟಲ್ ಜಾಲ, ಅನಿಲ ಪೈಪ್‌ಲೈನ್, ಆಧುನಿಕವಾದ ಗೋದಾಮುಗಳು ಬೇಕಿವೆ. ಈ ಪ್ರಮಾಣದಲ್ಲಿ ಮೂಲಸೌಕರ್ಯ ವ್ಯವಸ್ಥೆಯನ್ನು ನಿರ್ಮಿಸಲು, ಅವುಗಳನ್ನು ನಿರ್ವಹಣೆ ಮಾಡಲು ಅಪಾರ ಬಂಡವಾಳ ಬೇಕು.

ಕಳೆದ ಒಂದು ದಶಕದಲ್ಲಿ ಈ ಬಂಡವಾಳ ಪ್ರಮುಖವಾಗಿ ಬಂದಿರುವುದು ಸರ್ಕಾರದ ಕಡೆಯಿಂದ ಆಗುವ ಹೂಡಿಕೆಯಿಂದ. 2013–14ರಲ್ಲಿ ₹1.12 ಲಕ್ಷ ಕೋಟಿ ಇದ್ದ ಕೇಂದ್ರ ಸರ್ಕಾರದ ವಾರ್ಷಿಕ ಬಂಡವಾಳ ವೆಚ್ಚವು 2026–27ರ ಹೊತ್ತಿಗೆ ₹12.2 ಲಕ್ಷ ಕೋಟಿಗೆ ಜಾಸ್ತಿ ಆಗಿದೆ. ಆದರೆ ಇಷ್ಟು ತೀವ್ರ ಪ್ರಮಾಣದಲ್ಲಿ ಮೂಲಸೌಕರ್ಯ ನಿರ್ಮಿಸುವಲ್ಲಿ ಒಂದು ಹಣಕಾಸಿನ ಸವಾಲು ಉದ್ಭವವಾಗುತ್ತದೆ. ಸರ್ಕಾರ ಅಥವಾ ಡೆವಲಪರ್‌ಗಳು ತಮ್ಮ ಬಂಡವಾಳವನ್ನು ಪೂರ್ಣಗೊಂಡ ಯೋಜನೆಗಳಲ್ಲಿ ಶಾಶ್ವತವಾಗಿ ತೊಡಗಿಸಿ ಇರಿಸಲು ಸಾಧ್ಯವಿಲ್ಲ. ಆ ಹಣವನ್ನು ಅಲ್ಲಿಂದ ತೆಗೆದು ದೇಶದ ಮುಂದಿನ ಹಂತದ ಬೆಳವಣಿಗೆಯ ಇನ್ನೊಂದು ಯೋಜನೆಯಲ್ಲಿ ತೊಡಗಿಸಬೇಕು.

ಈ ಕೆಲಸ ಮಾಡುವಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳು (ಇನ್ವಿಟ್) ಪ್ರಮುಖ ಪಾತ್ರ ವಹಿಸುತ್ತವೆ. ಅವು ಪೂರ್ಣಗೊಂಡ ಹಾಗೂ ವರಮಾನ ತಂದುಕೊಡುವ ಯೋಜನೆಗಳನ್ನು ಟ್ರಸ್ಟ್ ಒಂದಕ್ಕೆ ವರ್ಗಾವಣೆ ಮಾಡಿ, ಇನ್ನಷ್ಟು ಮೂಲಸೌಕರ್ಯ ನಿರ್ಮಾಣಕ್ಕೆ ಬಂಡವಾಳವನ್ನು ಮುಕ್ತವಾಗಿಸಿಕೊಡಲು ಡೆವಲಪರ್‌ಗಳಿಗೆ ನೆರವಾಗುತ್ತವೆ. ಇತ್ತ ಹೂಡಿಕೆದಾರರಿಗೆ, ಹಿಂದೆಲ್ಲ ಬೃಹತ್ ಗಾತ್ರ ಹಣಕಾಸು ಸಂಸ್ಥೆಗಳಿಗೆ ಮಾತ್ರ ಎಟಕುತ್ತಿದ್ದ, ಹಣ ಸಂಪಾದಿಸಿಕೊಡುವ ಆಸ್ತಿಗಳು ಲಭ್ಯವಾಗುತ್ತವೆ.

ಕಾರ್ಯಾಚರಣೆಯಲ್ಲಿ ಇರುವ ರಿಸ್ಕ್, ನಿರ್ಮಾಣದಲ್ಲಿನ ವಿಳಂಬ, ಜಮೀನು ಸ್ವಾಧೀನದಲ್ಲಿನ ಅಡಚಣೆಗಳ ಕಾರಣದಿಂದಾಗಿ ಸಣ್ಣ ಹೂಡಿಕೆದಾರರು ಮೂಲಸೌಕರ್ಯ ವಲಯದಿಂದ ದೂರವೇ ಉಳಿದಿದ್ದಾರೆ. ಈ ಸಮಸ್ಯೆ ಪರಿಹರಿಸಲು ಹಾಗೂ ಸಣ್ಣ ಹೂಡಿಕೆದಾರರನ್ನು ರಕ್ಷಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಇನ್ವಿಟ್‌ಗಳಿಗೆ ಸಂಬಂಧಿಸಿದ ಕಠಿಣವಾದ ನಿಯಂತ್ರಣ ಕ್ರಮಗಳನ್ನು ರೂಪಿಸಿದೆ. ಮ್ಯೂಚುವಲ್ ಫಂಡ್‌ಗಳಲ್ಲಿ ಇರುವ ಮಾದರಿಯಲ್ಲೇ ಇನ್ವಿಟ್‌ಗಳು ಕೂಡ ಸಹಸ್ರಾರು ಮಂದಿ ಹೂಡಿಕೆದಾರರಿಂದ ಬಂಡವಾಳ ಒಗ್ಗೂಡಿಸುತ್ತವೆ. ಆದರೆ ಆ ಹಣದಿಂದ ಕಂಪನಿಗಳ ಷೇರು ಖರೀದಿಸುವ ಬದಲು ಇನ್ವಿಟ್‌ಗಳು ಹಣವನ್ನು ವರಮಾನ ತಂದುಕೊಡುವ ನಿಜ ಆಸ್ತಿಗಳಲ್ಲಿ ತೊಡಗಿಸುತ್ತವೆ.

ಷೇರುಪೇಟೆ ನೋಂದಾಯಿತ ಇನ್ವಿಟ್‌ಗಳು ತಮ್ಮ ಆಸ್ತಿಮೌಲ್ಯದ ಗಣನೀಯ ಪ್ರಮಾಣದ ಹಣವನ್ನು (ಕನಿಷ್ಠ ಶೇ 80ರಷ್ಟನ್ನು) ಪೂರ್ಣಗೊಂಡಿರುವ, ಕಾರ್ಯಾಚರಣೆಯಲ್ಲಿರುವ ಯೋಜನೆಗಳಲ್ಲಿ ತೊಡಗಿಸಬೇಕು ಎಂದು ನಿಯಮ ಹೇಳುತ್ತದೆ. ಹೂಡಿಕೆದಾರರ ಹಣವು ಅದಾಗಲೇ ವರಮಾನ ತಂದುಕೊಡುತ್ತಿರುವ ಆಸ್ತಿಯೊಂದಕ್ಕೆ ಪೂರಕವಾಗಿ ಒದಗಿಬರುತ್ತದೆ. ಇನ್ವಿಟ್‌ಗಳು ಸಾಲ ಹೆಚ್ಚು ಮಾಡಬಾರದು ಎಂಬ ಉದ್ದೇಶದಿಂದ ಸೆಬಿ, ಇವು ತಮ್ಮ ಆಸ್ತಿ ಮೌಲ್ಯದ ಶೇ 70ಕ್ಕಿಂತ ಹೆಚ್ಚಿನ ಮೊತ್ತ ಸಾಲವಾಗಿ ಪಡೆಯಬಾರದು ಎಂಬ ನಿಯಮ ರೂಪಿಸಿದೆ. ಆಡಳಿತದ ವಿಚಾರಗಳಲ್ಲಿ ಸಣ್ಣ ಹೂಡಿಕೆದಾರರಿಗೆ ಪಾಲು ಇರಬೇಕು ಎಂಬ ಕಾರಣದಿಂದ, ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳುವ ಮೊದಲು ಹೂಡಿಕೆದಾರರ ಅನುಮತಿ ಪಡೆಯಬೇಕು ಎಂಬ ನಿಯಮ ರೂಪಿಸಲಾಗಿದೆ.

ನಿಯಮಗಳಲ್ಲಿನ ಸ್ಥಿರತೆಯು ಶಿಸ್ತುಬದ್ಧವಾದ ವರಮಾನ ಮಾದರಿಯೊಂದನ್ನು ನೇರವಾಗಿ ರೂಪಿಸಿಕೊಡುತ್ತದೆ. ನಿರ್ವಹಣಾ ವೆಚ್ಚ ಹಾಗೂ ಸಾಲ ಮರುಪಾವತಿ ಹೊಣೆಯನ್ನು ನಿಭಾಯಿಸಿದ ನಂತರದಲ್ಲಿ ಉಳಿಯುವ ನಗದನ್ನು 'ಹಂಚಿಕೆಗೆ ಲಭ್ಯವಿರುವ ನಿವ್ವಳ ನಗದು' (ನೆಟ್ ಡಿಸ್ಟ್ರಿಬ್ಯೂಟೆಬಲ್ ಕ್ಯಾಶ್ ಫ್ಲೊ – ಎನ್‌ಡಿಸಿಎಫ್) ಎಂದು ಗುರುತಿಸಲಾಗುತ್ತದೆ. ಈ ಮೊತ್ತದಲ್ಲಿ ಕನಿಷ್ಠ ಶೇ 90ರಷ್ಟನ್ನು ಹೂಡಿಕೆದಾರರಿಗೆ ವಿತರಿಸಬೇಕು ಎಂಬುದು ಸೆಬಿ ರೂಪಿಸಿರುವ ನಿಯಮ. ವರ್ಷಕ್ಕೆ ಎರಡು ಬಾರಿ ಈ ವಿತರಣೆ ಆಗಬೇಕು ಎಂದು ನಿಯಮ ಹೇಳುತ್ತದೆಯಾದರೂ, ದೇಶದ ಬಹುತೇಕ ಇನ್ವಿಟ್‌ಗಳು ಹೂಡಿಕೆದಾರರಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ವರಮಾನ ವಿತರಣೆ ಮಾಡುತ್ತವೆ. ಹೀಗೆ ವರಮಾನವನ್ನು ವಿತರಿಸುವುದು ನಿಯಮಗಳ ಅನುಸಾರ ಕಡ್ಡಾಯ ಆಗಿರುವ ಕಾರಣದಿಂದಾಗಿ, ವರಮಾನ ಎಷ್ಟು ಸಿಗಬಹುದು ಎಂಬುದನ್ನು ಅಂದಾಜಿಸಲು ಹೂಡಿಕೆದಾರರಿಗೆ ಸಾಧ್ಯವಾಗುತ್ತದೆ. ಸಾಮಾನ್ಯವಾದ ಷೇರುಗಳಿಂದ ಸಿಗುವ ಲಾಭಾಂಶದ ವಿಚಾರದಲ್ಲಿ ಹೀಗೆ ಲೆಕ್ಕಹಾಕಲು ಆಗಲಿಕ್ಕಿಲ್ಲ.

ರಿಸ್ಕ್ ಮತ್ತು ಗಳಿಕೆ: ಮಾರುಕಟ್ಟೆ ಆಧಾರಿತ ಯಾವುದೇ ಹೂಡಿಕೆಯಲ್ಲಿ ಇರುವಂತೆ ಇನ್ವಿಟ್‌ಗಳು ಕೂಡ ಸಂಪೂರ್ಣವಾಗಿ ರಿಸ್ಕ್‌ಗಳಿಂದ ಮುಕ್ತವಾಗಿಲ್ಲ. ಯೂನಿಟ್ ಬೆಲೆಯು ಚಾಲ್ತಿಯಲ್ಲಿರುವ ಬಡ್ಡಿ ದರ, ಮಾರುಕಟ್ಟೆ ಸ್ಥಿತಿ ಆಧರಿಸಿ ಏರಿಳಿತ ಕಾಣುತ್ತದೆ. ಇನ್ವಿಟ್‌ಗಳು ಹೂಡಿಕೆದಾರರಿಗೆ ಹಂಚಿಕೆ ಮಾಡುವ ವರಮಾನವು ಆಸ್ತಿಗಳಿಂದ ಸಿಗುವ ವರಮಾನ, ಸಾಲದ ಮೇಲಿನ ಬಡ್ಡಿ, ನಿಯಮಗಳಲ್ಲಿನ ಬದಲಾವಣೆ, ಸಂಚಾರ ದಟ್ಟಣೆ ಇತ್ಯಾದಿಗಳನ್ನು ಆಧರಿಸಿ ಬದಲಾಗಬಹುದು. ಹೂಡಿಕೆದಾರರು ಇನ್ವಿಟ್‌ಗಳನ್ನು ವರಮಾನಕ್ಕೆ ಆದ್ಯತೆ ನೀಡುವ, ಷೇರುಪೇಟೆಯಲ್ಲಿ ವಹಿವಾಟಾಗುವ ಹೂಡಿಕೆ ಎಂಬಂತೆ ಪರಿಗಣಿಸಬೇಕೇ ವಿನಾ ನಿಶ್ಚಿತವಾದ ಗಳಿಕೆ ನೀಡುವ ಉತ್ಪನ್ನಗಳಾಗಿ ಪರಿಗಣಿಸಬಾರದು.

ಮಾರುಕಟ್ಟೆ ಬೆಳವಣಿಗೆ ಹಾಗೂ ಒಟ್ಟಾರೆ ಗಳಿಕೆ

ಭಾರತದಲ್ಲಿ ಇನ್ವಿಟ್‌ಗಳು ಚಾಲ್ತಿಗೆ ಬಂದು ಹೆಚ್ಚು ವರ್ಷಗಳಾಗಿಲ್ಲವಾದರೂ, ಇಲ್ಲಿ ಅವುಗಳ ಬೆಳವಣಿಗೆಯು ಗಮನಾರ್ಹವಾಗಿದೆ. ಇನ್ವಿಟ್‌ಗಳು ನಿರ್ವಹಣೆ ಮಾಡುತ್ತಿರುವ ಒಟ್ಟು ಆಸ್ತಿಯ ಮೌಲ್ಯವು ₹7 ಲಕ್ಷ ಕೋಟಿ ಎಂದು ಅಂದಾಜಿಸಲಾಗಿದೆ. ಇನ್ನಷ್ಟು ರಸ್ತೆಗಳು, ವಿದ್ಯುತ್ ಗ್ರಿಡ್‌ಗಳು, ಪರಿಸರ ಪೂರಕ ಇಂಧನ ವಲಯ ಪ್ರವರ್ಧಮಾನಕ್ಕೆ ಬಂದಂತೆಲ್ಲ ಇನ್ವಿಟ್‌ಗಳ ಮಾರುಕಟ್ಟೆ ಗಾತ್ರವು ಜಾಸ್ತಿ ಆಗಲಿದೆ. ಜಾಗತಿಕ ಮಟ್ಟದಲ್ಲಿ ಕೂಡ ಇನ್ವಿಟ್‌ಗಳು ಇದೇ ಬಗೆಯಲ್ಲಿ ವಿಸ್ತರಣೆ ಕಂಡಿವೆ. ಅಮೆರಿಕ, ಸಿಂಗಪುರ, ಆಸ್ಟ್ರೇಲಿಯಾದಂತಹ ಪ್ರಬುದ್ಧ ಮಾರುಕಟ್ಟೆಗಳಲ್ಲಿ ಈ ಟ್ರಸ್ಟ್‌ಗಳು ನಿವೃತ್ತಿ ಜೀವನಕ್ಕೆ ಬಹಳ ಅಗತ್ಯವಾದ ಹೂಡಿಕೆ ಪೋರ್ಟ್‌ಫೋಲಿಯೊದಲ್ಲಿ ಮಹತ್ವದ ಸ್ಥಾನ ಪಡೆದಿರುತ್ತವೆ. ಈ ಹೂಡಿಕೆಗಳಿಂದ ನಿರಂತರವಾಗಿ ವರಮಾನ ಸಿಗುವ ಕಾರಣದಿಂದಾಗಿ ಪಿಂಚಣಿ ನಿಧಿ ನಿರ್ವಾಹಕರು, ವರಮಾನ ಬಯಸುವ ವ್ಯಕ್ತಿಗಳು ಇವುಗಳಲ್ಲಿ ಹೂಡಿಕೆ ಮಾಡುತ್ತಾರೆ.

ಸಣ್ಣ ಹೂಡಿಕೆದಾರರು ನೋಡಬೇಕಿರುವುದು ಒಟ್ಟು ಗಳಿಕೆಯನ್ನು. ಇದು ಎರಡು ಆಯಾಮಗಳಲ್ಲಿ ಇರುತ್ತದೆ. ಮೊದಲನೆಯದು, ನಿರಂತರವಾದ ವರಮಾನ ವರ್ಗಾವಣೆ (ಅಂದರೆ ಪ್ರತಿ ಮೂರು ತಿಂಗಳಿಗೊಮ್ಮೆ ಇವುಗಳಿಂದ ನಿಮ್ಮ ಖಾತೆಗೆ ಜಮಾ ಆಗುವ ಮೊತ್ತ) ಹಾಗೂ ಎರಡನೆಯದು, ಬಂಡವಾಳ ಮೌಲ್ಯದ ವೃದ್ಧಿ (ಅಂದರೆ ಆಸ್ತಿಯ ಮೌಲ್ಯ ಹೆಚ್ಚಳ ಅಥವಾ ಹೊಸ ಹಾಗೂ ವರಮಾನ ನೀಡುವ ಆಸ್ತಿಗಳನ್ನು ಟ್ರಸ್ಟ್ ಸ್ವಾಧೀನಪಡಿಸಿಕೊಳ್ಳುವುದು). ಇತಿಹಾಸವನ್ನು ಗಮನಿಸಿದರೆ, ದೇಶದಲ್ಲಿ ಚೆನ್ನಾಗಿ ನಿರ್ವಹಣೆ ಆಗುತ್ತಿರುವ ಇನ್ವಿಟ್‌ಗಳು ದೀರ್ಘಾವಧಿಯಲ್ಲಿ ಶೇ 12ರಿಂದ ಶೇ 14ರಷ್ಟು ವಾರ್ಷಿಕ ಸಂಯುಕ್ತ ಬೆಳವಣಿಗೆ ದರದಲ್ಲಿ (ಒಟ್ಟು) ಗಳಿಕೆ ನೀಡಿವೆ. ಅಂದರೆ ನಿರಂತರವಾಗಿ ಮೂರು ತಿಂಗಳಿಗೆ ಒಮ್ಮೆ ವರಮಾನ ನೀಡುತ್ತಿವೆ, ಆಸ್ತಿ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತಿವೆ.

ಲೇಖಕ ಇಂಡಿಗ್ರಿಡ್ ಇನ್ಫ್ರಾಸ್ಟ್ರಕ್ಚರ್ ಟ್ರಸ್ಟ್‌ನ ವ್ಯವಸ್ಥಾಪಕ ನಿರ್ದೇಶಕ

ಕಲೆ: ಸಂತೋಷ್ ಸಸಿಹಿತ್ಲು

ಲಕ್ಷಾಂತರ ರೂಪಾಯಿ ಬೇಡ, ನೂರಾರು ರೂಪಾಯಿ ಸಾಕು

ಇನ್ವಿಟ್‌ಗಳಲ್ಲಿ ಹೂಡಿಕೆ ಮಾಡಲು ಇದ್ದ ಅಡ್ಡಿಗಳನ್ನು ಇಂದು ಗಣನೀಯವಾಗಿ ಕಡಿಮೆ ಮಾಡಲಾಗಿದೆ. ಈ ಹಿಂದೆ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡಬೇಕು ಎಂದಾದರೆ ಲಕ್ಷಾಂತರ ರೂಪಾಯಿ ಅಗತ್ಯ ಇತ್ತು. ಆದರೆ ನಿಯಮಗಳಲ್ಲಿ ತಂದಿರುವ ಬದಲಾವಣೆಯಿಂದಾಗಿ ಇಂದು ಹೂಡಿಕೆದಾರರು ಷೇರುಪೇಟೆ ನೋಂದಾಯಿತ ಇನ್ವಿಟ್‌ಗಳ ಯೂನಿಟ್‌ಗಳನ್ನು ಡಿಮ್ಯಾಟ್ ಖಾತೆ ಮೂಲಕ ಬಹಳ ಕಡಿಮೆ ಮೊತ್ತ ಬಳಸಿ ಖರೀದಿಸಬಹುದು. ಈಗ ಒಂದು ಸಾವಿರ ರೂಪಾಯಿಗಿಂತ ಕಡಿಮೆ ಮೊತ್ತ ಇದ್ದರೂ ಇನ್ವಿಟ್‌ಗಳಲ್ಲಿ ಹೂಡಿಕೆ ಮಾಡಬಹುದು.

ಭಾರತವು ಬಹು ಟ್ರಿಲಿಯನ್ ಡಾಲರ್ ಗಾತ್ರದ ಅರ್ಥ ವ್ಯವಸ್ಥೆಯಾಗಿ ಬೆಳವಣಿಗೆ ಕಾಣುವ ಪಯಣದಲ್ಲಿ ಈ ಆಸ್ತಿಗಳು ಆಧುನಿಕ ಅರ್ಥಿಕತೆಯ ಕಾರ್ಯಾಚರಣೆ ವ್ಯವಸ್ಥೆಯಂತೆ ಕೆಲಸ ಮಾಡುತ್ತವೆ. ಭಾರತದ ಮೂಲಸೌಕರ್ಯದ ಬಳಕೆದಾರ ಮಾತ್ರವೇ ಆಗಿರುವ ಬದಲು ಅವುಗಳಿಂದ ಸಿಗುವ ವರಮಾನವನ್ನು ತಾವೂ ಪಡೆದುಕೊಳ್ಳುವ ಮಾರ್ಗವನ್ನು ಇನ್ವಿಟ್‌ಗಳು ಹೂಡಿಕೆದಾರರಿಗೆ ನೀಡುತ್ತವೆ. ಸ್ಥಿರವಾದ ವರಮಾನ ಆಧಾರಿತ ಹೂಡಿಕೆಯನ್ನು ಅರಸುತ್ತಿರುವವರಿಗೆ ಮೂಲಸೌಕರ್ಯ ಹೂಡಿಕೆ ಟ್ರಸ್ಟ್‌ಗಳು ಪರಿಗಣನೆಗೆ ಯೋಗ್ಯವಾದವುಗಳಾಗಿವೆ.

ಎಸ್ಐಎಫ್: ಯಾರಿಗೆ ಸೂಕ್ತ ಈ ಹೂಡಿಕೆ?

• ಸೂರಜ್ ನಂದಾ

ಅಸ್ಥಿರತೆಯೇ ನಿರಂತರವಾಗಿರುವ ಮಾರುಕಟ್ಟೆಯಲ್ಲಿ ಸಾಂಪ್ರದಾಯಿಕವಾದ 'ದೀರ್ಘಾವಧಿಗೆ ಖರೀದಿ' ವಿಧಾನವು ಮತ್ತೆ ಮತ್ತೆ ಪರೀಕ್ಷೆಗೆ ಗುರಿಯಾಗುತ್ತಿದೆ. ಬಹಳಷ್ಟು ಮಂದಿ ಹೂಡಿಕೆದಾರರಲ್ಲಿ ಇದು ಮುಖ್ಯವಾದ ಪ್ರಶ್ನೆಯೊಂದನ್ನು ಹುಟ್ಟುಹಾಕುತ್ತಿದೆ. ಮಾರುಕಟ್ಟೆಯ ಪರಿಸ್ಥಿತಿ ಬದಲಾದಂತೆಲ್ಲ ಹೂಡಿಕೆ ವಿಧಾನದಲ್ಲಿಯೂ ಬದಲಾವಣೆ ಆಗಬೇಕೇ ಎಂಬುದು ಆ ಪ್ರಶ್ನೆ.

ಎಸ್ಐಎಫ್ (ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್ - ಅಥವಾ ವಿಶಿಷ್ಟ ಹೂಡಿಕೆ ನಿಧಿ) ಎಂಬ ವರ್ಗವು ಈಗ ಹೂಡಿಕೆದಾರರ ಗಮನವನ್ನು ಸೆಳೆಯಲು ಆರಂಭಿಸಿದೆ. ಈ ಬಗೆಯ ಹೂಡಿಕೆಯು ಈಗಷ್ಟೇ ವಿಕಾಸ ಹೊಂದುತ್ತಿದೆ, ಇದನ್ನು ಸಣ್ಣ ಹೂಡಿಕೆದಾರರು ಈವರೆಗೆ ವ್ಯಾಪಕವಾಗಿ ಬಳಕೆ ಮಾಡುತ್ತಿಲ್ಲ. ಆದರೆ ಇದು ಹೂಡಿಕೆಗಳನ್ನು ಭಿನ್ನ ರೀತಿಯಲ್ಲಿ ನಿರ್ವಹಣೆ ಮಾಡುವ ವಿಧಾನ ಅನುಸರಿಸುತ್ತದೆ. ಅಂದರೆ ಇದು ನಿಶ್ಚಿತ ವಿಧಾನದಲ್ಲಿ ಹೂಡಿಕೆಯನ್ನು ಹಂಚಿಕೆ ಮಾಡುವ ಬದಲು, ಹೊಂದಾಣಿಕೆಯ ಹೂಡಿಕೆ ಮಾರ್ಗವನ್ನು ಅನುಸರಿಸುತ್ತದೆ.

ಹೆಚ್ಚಿನ ಸಾಂಪ್ರದಾಯಿಕ ಮ್ಯೂಚುವಲ್ ಫಂಡ್‌ಗಳಲ್ಲಿ, ಮಾರುಕಟ್ಟೆಯ ಏರಿಳಿತಗಳು ಹೇಗೆಯೇ ಇದ್ದರೂ ಪೋರ್ಟ್‌ಫೋಲಿಯೊದಲ್ಲಿನ ಹೆಚ್ಚಿನ ಮೊತ್ತವು ಷೇರುಗಳಲ್ಲಿ ವಿನಿಯೋಗ ಆಗಿರುತ್ತದೆ. ಅಂದರೆ ಮಾರುಕಟ್ಟೆಯು ಏರುಗತಿಯಲ್ಲಿ ಸಾಗುವ ಸಂದರ್ಭಗಳಲ್ಲಿ ಹೂಡಿಕೆದಾರರು ಅವುಗಳಲ್ಲಿ ಪೂರ್ಣವಾಗಿ ಭಾಗಿಯಾಗುತ್ತಾರೆ. ಹಾಗೆಯೇ ಮಾರುಕಟ್ಟೆಯ ಕುಸಿತಗಳಿಗೆ ಕೂಡ ಅವರು ತಮ್ಮನ್ನು ಪೂರ್ತಿಯಾಗಿ ಒಡ್ಡಿಕೊಳ್ಳುತ್ತಾರೆ. ರಿಸ್ಕ್ ಕಡಿಮೆ ಮಾಡಿಕೊಳ್ಳಲು ಅವರಿಗೆ ಹೆಚ್ಚಿನ ಅವಕಾಶ ಇರುವುದಿಲ್ಲ.

ಆದರೆ ಎಸ್ಐಎಫ್‌ಗಳು ಇನ್ನಷ್ಟು ಚಲನಶೀಲವಾಗಿ ಇರುವಂತೆ ರೂಪುಗೊಂಡಿವೆ. ಮಾರುಕಟ್ಟೆಯಲ್ಲಿನ ಷೇರುಮೌಲ್ಯ ಹಾಗೂ ಮಾರುಕಟ್ಟೆಯ ಒಟ್ಟಾರೆ ಪರಿಸ್ಥಿತಿಯನ್ನು ಆಧರಿಸಿ, ಒಟ್ಟಾರೆಯಾಗಿ ಮಾರುಕಟ್ಟೆಯಲ್ಲಿ ಎಷ್ಟು ಮೊತ್ತ ತೊಡಗಿಸಬೇಕು ಎಂಬುದನ್ನು ತೀರ್ಮಾನಿಸಲು ಅವು ನಿಧಿ ನಿರ್ವಾಹಕರಿಗೆ ಅವಕಾಶ ಕಲ್ಪಿಸುತ್ತವೆ. ಮಾರುಕಟ್ಟೆಯು ಆಕರ್ಷಕವಾಗಿ ಇದ್ದಾಗ ಅಲ್ಲಿಗೆ ಹೆಚ್ಚಿನ ಹಣ ಹೂಡಿಕೆ ಮಾಡುವ ಅವಕಾಶವನ್ನು, ಮಾರುಕಟ್ಟೆ ದುಬಾರಿ ಎಂದು ಅನ್ನಿಸಿದಾಗ ಅಲ್ಲಿ ಹಣ ತೊಡಗಿಸುವುದನ್ನು ಕಡಿಮೆ ಮಾಡುವ ಅವಕಾಶವನ್ನು ಅವು ನೀಡುತ್ತವೆ.

ದೀರ್ಘಾವಧಿಗೆ ಹೂಡಿಕೆ ಮಾಡುವ ಹಾಗೂ 'ಶಾರ್ಟ್' ತಂತ್ರಗಾರಿಕೆಯನ್ನು ಅನುಸರಿಸಲು ಕೂಡ ಇಲ್ಲಿ ಅವಕಾಶ ಇದೆ. ಸಾಂಪ್ರದಾಯಿಕ ಫಂಡ್‌ಗಳಲ್ಲಿನ ಹೂಡಿಕೆಯು ಮಾರುಕಟ್ಟೆ ಏರಿಕೆ ಕಂಡಾಗ ಲಾಭ ಪಡೆಯುತ್ತದೆ. ಆದರೆ ಎಸ್ಐಎಫ್‌ಗಳು, ಮಾರುಕಟ್ಟೆಯ ಕುಸಿತದ ಸಂದರ್ಭದಲ್ಲಿ ಪ್ರಯೋಜನ ಆಗಲಿದೆ ಎಂದು ಅನ್ನಿಸಿದರೆ, ಆಗ ಕೂಡ ಹೂಡಿಕೆ (ಶಾರ್ಟ್ ತಂತ್ರಗಾರಿಕೆ) ಮಾಡಬಹುದು.

ಅಂದರೆ ವಾಸ್ತವದಲ್ಲಿ ಎಸ್ಐಎಫ್‌ಗಳು ಮಾರುಕಟ್ಟೆಯ ಬೇರೆ ಬೇರೆ ಹಂತಗಳಲ್ಲಿಯೂ ಹೊಂದಾಣಿಕೆ ಮಾಡಿಕೊಳ್ಳಬಲ್ಲವು. ಮಾರುಕಟ್ಟೆ ಅಸ್ಥಿರವಾಗಿದ್ದಾಗ ಅಥವಾ ಮಾರುಕಟ್ಟೆ ಕುಸಿಯುತ್ತಿದ್ದಾಗ ಇವು ಹೂಡಿಕೆಯನ್ನು ಕಡಿಮೆ ಮಾಡಬಹುದು. ಮಾರುಕಟ್ಟೆಯು ಏರಿಕೆ, ಇಳಿಕೆ ಕಾಣುತ್ತಿದ್ದಾಗ ಇವು ಆರ್ಬಿಟ್ರಾಜ್ ಮಾರ್ಗವನ್ನು ಅನುಸರಿಸಬಹುದು. ಮಾರುಕಟ್ಟೆಯ ದಿಕ್ಕು ಸ್ಪಷ್ಟವಾಗಿದ್ದಾಗ ಇವು ಹೂಡಿಕೆ ಹೆಚ್ಚು ಮಾಡಿ, ಅದರ ಲಾಭ ಪಡೆಯಬಹುದು.

ಇವುಗಳಲ್ಲಿ ಹೂಡಿಕೆ ಮಾಡಬೇಕು ಎಂದಾದರೆ ಕನಿಷ್ಠ ₹10 ಲಕ್ಷ ಅಗತ್ಯ. ಹೂಡಿಕೆಯ ಕಾರ್ಯವಿಧಾನ ಸಂಕೀರ್ಣವಾಗಿರುತ್ತದೆ. ಇದರಿಂದಾಗಿ ಈ ಹೂಡಿಕೆಗಳು ಎಲ್ಲರಿಗೂ ಸೂಕ್ತ ಆಗದಿರಬಹುದು. ಅದರಲ್ಲೂ ಮಾರುಕಟ್ಟೆಗೆ ಹೊಸಬರಾದವರಿಗೆ ಹಾಗೂ ಸರಳವಾದ ಹೂಡಿಕೆ ಆಯ್ಕೆ ಬಯಸುವವರಿಗೆ ಇದು ಸೂಕ್ತ ಆಗದಿರಬಹುದು. ಇವುಗಳ ವಿನ್ಯಾಸ, ಇವುಗಳಲ್ಲಿನ ರಿಸ್ಕ್‌ಗಳು, ಇವು ಯಾರಿಗೆ ಸೂಕ್ತ ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಿರುವುದು ಮಹತ್ವದ್ದು.

ಮಾರುಕಟ್ಟೆಗಳು ಬೆಳವಣಿಗೆ ಹೊಂದುತ್ತ ಇರುವಾಗ ಹೂಡಿಕೆ ವಿಧಾನಗಳೂ ಬದಲಾಗುತ್ತಿರುತ್ತವೆ. ಹೂಡಿಕೆಯಲ್ಲಿ ಅಗತ್ಯಕ್ಕೆ ಅನುಗುಣವಾದ ಹೊಂದಾಣಿಕೆಯು ಮಹತ್ವದ್ದಾಗುತ್ತಿದೆ ಎಂಬುದನ್ನು ಎಸ್ಐಎಫ್‌ಗಳ ಹುಟ್ಟು ಹಾಗೂ ಅವುಗಳ ಬೆಳವಣಿಗೆಯು ತಿಳಿಸುತ್ತಿದೆ.

ಲೇಖಕ ಟಾಟಾ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿಯ ಎಸ್ಐಎಫ್ ನಿಧಿ ನಿರ್ವಾಹಕ

ಎಸ್ಸೆಸ್ಸೆಲ್ಸಿ ಸಮಾಜ ಅಧ್ಯಯನ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

Unit-1 Poem

Grandma Climbs a Tree

Author: Ruskin Bond:- Born in Kasauli in 1934, Ruskin Bond now lives in Missouri. He wrote first novel, 'The Room on the Roof', when he was seventeen and has written more than thirty books for children. 'Grandma Climbs a Tree' shows Bond's great ability to enjoy Unusual events and actions. In his autobiography, 'Scene from Writer's Life', Bond talks about his Calcutta granny as a strange person who sat alone in the evenings playing Patience, a card game.

Understand the poem

1. The speaker in the poem does not call his grandmother 'childish', what else was she according to him? Why does he consider her to be so? {Line 1-4}

Ans: The speaker calls his grandmother a genius. He calls her so for a special ability she had at the age of sixty two. She could climb any tree high or wide in a trice.

2. Grandma had been in the habit of climbing trees for a very long period. Identify the lines that suggest this

Ans: (a) "ever since child hood she'd had this gift", (b) "When last climbed a tree she was sixty two".

3. Look at the line 7 and 8 'She would be told…..' Who do you think would tell her so?

Ans: It could be poet's father and family who might have told that climbing of trees should stop when one grew old and growing old should be gone gracefully.

4. Do you find anything odd in the reply given by the grandma? If so, why do you think it is odd? {Line 10-11}

Ans: Yes. reply given by grandma was odd. It is odd because the society demands and every one wish to comply with it by growing old gracefully. Here, grandma wishes to grow old disgracefully as she does tree climbing even better.

5. Others had feared that granny would fall from a tree one day or the other. Did this happen? Or did something else happen? {Line 15-18}

Ans: Granny did not fall as feared by family members but there was a different outcome. When family was in town, granny climbed a tree and could not climb down. She had to be rescued.

6. What had the doctor recommended? What was the reaction of the kids to this advice?

Ans: The doctor took granny's temperature and advised for bed rest of one week. Kids sighed with relief on hearing doctor's advice to granny and tucked her up in bed well.

7. Quote the lines which suggest how wholeheartedly granny enjoyed climbing a tree.

Ans: (a) "For being happier in a tree than in a lift"
(b) "For her it was like a brief season in hell"

8. 'My dad knew his duties'. What did he think his duty was?

Ans: Poet's dad knew it is his duty to fulfill the wish of the mother. When his mother wished a tree house, he agreed and made a tree house with window and door.

9. Look at the picture given below the title. Quote the lines that might have guided the artist to draw.

Answer: "Made her a tree house with windows and a door".

Read and appreciate

A.1. Read the poem again. Does the behavior of grandma strike you as unusual? If so, support your view quoting her ways and responses to others. One is done for you.

Grandma climbing a tree. (Way 1)

Ans: *When told to stop tree climbing and grow old gracefully, granny laughed to reject it, preferred to grow old disgracefully.

* One day when she climbed a tree but could not come down and had to be rescued. Following the incident she was forced a bed rest for a week. Even this could not change her; instead she wanted a tree house for her stay.

2. 'Growing old gracefully' is an expression used in the poem Discuss with your partner whether what the grandma was doing was graceful or otherwise.

Ans: Grandma was an adventurer. Society wishes to see old people slow down their activities for their safety. However the modern health care and safety engineering is enabling many old people to do many feats beyond their age like flying aircraft, sky diving etc. Such adventures are appreciated and seen with respect. More and more some societies are now coming to view granny acts to live life fully as growing with grace. Grace or disgraces are the product of progress of time, values of a society.

3. Both the narrator (speaker in the poem) and his father were very considerate towards Grandma. Substantiate the statement with textual support.

Ans: The poet and his father were very considerate towards grandma. They respected her nature of adventure to climb trees even at old age when society expected her to age with grace *(Contd….)*

ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

REPRODUCTION

Reproduction in flowering plants

4. Explain Hydrophily.

Ans:- *(…..Contd)*

Many aquatic plants use other modes of pollination (*e.g.*, Water Hyacinth, Water Lily) because water is not a good transport medium for pollen grains. They emerge out of water and are pollinated by wind or insects. Many workers believe that distribution of bryophytes and pteridophytes is limited because of the dependence of their sperms on water for transport.

5. Mention the characteristics of Hydrophilous Flowers.

Ans:- Some characteristics of Hydrophilous Flowers are -

(i) Flowers are small, inconspicuous and light.
(ii) Perianth is unwettable.
(iii) Flowers are without nectar and odour.
(iv) Light and unwettable pollen grains. They are generally surrounded by mucilaginous covering.
(v) Long, sticky and unwettable stigma.

6. Mention the two types of Hydrophily.

Ans:- Hydrophily is of two types – hypohydrophily and epihydrophily.

7. What is hypohydrophily?

Ans:- Hypohydrophily is a mode of pollination which takes place below the surface of water. ***Eg:*** *Ceratophyllum, Zostera* (Sea Grass).

8. How does pollination take place in Ceratophyllum?

Ans:- Ceratophyllum is submerged fresh water plant having both male and female flowers. Male flower has 30-45 stamens. On maturation anthers break, rise to the surface and release pollen grains. Pollen grains are small, rounded, thin walled and without exine. They slowly sink downwardly to effect pollination. Stigma is quite long and sticky.

9. How does pollination take place in Zostera?

Ans:- Zostera (Sea Grass) is marine angiosperm. Pollen grains are long and ribbon-like, upto 2500 mm in size. Exine is absent. The filamentous pollen grains float below the surface of water as they have a specific gravity exactly similar to that of water stigmas are also quite long. The two have a fair chance to come in contact for pollination.

10. What is Epihydrophily?

Ans:- Epihydrophily is a mode of pollination which takes place on the surface of water. ***Eg:-*** *Lemna, Vallisneria.*

12. How does pollination take place in Vallisneria?

Ans:- Vallisneria (Tape Grass or Eel Grass) is submerged, dioecious, fresh water plant. Male plant produces a large number of male flowers which after breaking, rise upward in closed state and open on the surface of water. Each male flower has two functional stamens, two tepals forming boat like structure while a third small upwardly bent tepal forms a sail. Female plant produces female flowers singly at the tip long pedicels that bring the flowers on the surface of water. Stigma is trifid. During floating, male flowers are drawn in the depression of female flower. Ripe anthers of open male flowers come in contact with large trifid stigma of the female to effect pollination. After the pollination, female flower closes again. It is brought down into water by coiling of stalk.

Male and Female flowers of Vallisneria



13. What is Zoophily?

Ans:- Zoophily is a mode of pollination in which the biotic agency of animals is used for transfer of pollens from anthers of one flower to the stigma of another flower.

14. Mention the subtypes of Zoophily.

Ans:- Zoophily has several subtypes, they are - entomophily, malacophily, chiropterophily, ornithophily, myrmecophily and anthrophily.

15. Mention some animals carrying out Zoophily.

Ans:- Gecko Lizard, Garden Lizard (reptiles), arboreal (tree dwelling) rodents, lemurs (primates).

16. What is Entomophily?

Ans:- Entomophily is transfer of pollen grains from anthers of one flower to the stigma of another flower with the help of insects like moths, bees, wasps, butterflies, beetles, wasps, ants, flies, etc.

17. Mention the characteristics of Entomophilous Flowers.

Ans:- Some characteristics of Entomophilous Flowers are (i) Flowers are coloured for attracting the insects. Moths are attracted towards the white flowers. Reddish flowers attract butterflies and waps. Honey bees are attracted towards the bluish-purplish-violet-yellow flowers which appear coloured in ultra-violet vision of bees. Honey bees rarely visit a red flower because it appears black in ultra-violet radiations.
(ii) Both sepals and petals are well developed.
(iii) Petals are usually coloured. Where petals are not showy, other flower parts become conspicuous. e.g., coloured bract in *Bougainvillea*, ***(Contd.….)***

ಕಲ್ಯಾಣದಲ್ಲಿ 'ರೋಹಿಣಿ' ಅಬ್ಬರ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಬಹುತೇಕ ಕಡೆ ಬುಧವಾರ 'ರೋಹಿಣಿ' ಮಳೆ ಆರ್ಭಟ ಜೋರಾಗಿದೆ. ರಾಜ್ಯದಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಸಿಡಿಲಿಗೆ ಮೂವರು ಮೃತಪಟ್ಟಿದ್ದಾರೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ರೋಜಾ (ಅಣಬಿ)ಯ ತೌಕಲ್ ಪಟೇಲ್ (42), ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಮಾಳದಹಾಡಿ ನಿವಾಸಿ ಅಪ್ಪಯ್ಯ (60), ಹುಣಸೂರು ತಾಲ್ಲೂಕು ಹೊಸಪುರದ ಯಶೋಧಮ್ಮ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಕಲಬುರಗಿ ನಗರ ಸೇರಿ ಜಿಲ್ಲೆಯ ವಿವಿಧೆಡೆ ನಸುಕಿನಲ್ಲಿ ಸುಮಾರು ನಾಲ್ಕು ತಾಸು ಗುಡುಗು–ಸಿಡಿಲಿನ ಸಮೇತ ಮಳೆ ಹನಿಯಿತು. ಇಳೆಯನ್ನು ತಂಪಾಗಿಸಿತು.

ಸೇಡಂ ತಾಲ್ಲೂಕಿನ ತೊಟ್ನಳ್ಳಿ ಗ್ರಾಮದ ಮಹಾಂತೇಶ್ವರ ಮಠ ಜಲಾವೃತಗೊಂಡಿದ್ದು, ಆಳಂದ ತಾಲ್ಲೂಕಿನಲ್ಲಿ ಹಳ್ಳಕೊಳ್ಳ ತುಂಬಿ ಹರಿದವು.

ಚಿಂಚೋಳಿ ತಾಲ್ಲೂಕಿನ ಚಿಮ್ಮನಚೋಡ ಬಳಿ ಮರ ಬಿದ್ದು, ಸಂಚಾರ ಬಂದ್ ಆಯಿತು. ಪ್ರವಾಹದಿಂದ ಉಕ್ಕೇರಿ ಕಿರು ಸೇತುವೆ ಮುಳುಗಿದೆ. ಚಿತ್ತಾಪುರ–ಮೊಗಲಾ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಗೆ ಇರುವ ಕಿರು ಸೇತುವೆ ಮೇಲೆ ನೀರು ಉಕ್ಕಿ ಹರಿದಿದೆ. ಕಮಲಾಪುರ ತಾಲ್ಲೂಕಿನ ನಾಗೂರದಲ್ಲಿ ಸಿಡಿಲು ಬಡಿದು ಎಮ್ಮೆ ಮೃತಪಟ್ಟಿದೆ.

ಯಾದಗಿರಿ ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ಯರಗೋಳದಲ್ಲಿ ಮೂರಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ವಡಗೇರಾದ ಬಿಳ್ಹಾರದಲ್ಲಿ ಅತ್ಯಧಿಕ 7.55 ಸೆಂ.ಮೀ ಮಳೆ ಬಿದ್ದಿದೆ.

ಬೀದರ್ ತಾಲ್ಲೂಕಿನ ಗುಮ್ಮಾ ಗ್ರಾಮದಲ್ಲಿ ಒಂದು ಮನೆಗೆ ಹಾನಿ ಉಂಟಾಗಿದೆ. ಬಸವಕಲ್ಯಾಣ ತಾಲ್ಲೂಕು ವ್ಯಾಪ್ತಿಯಲ್ಲಿ ಹಲವೆಡೆ ಮರ, ವಿದ್ಯುತ್ ಕಂಬಗಳು ಧರೆಗುರುಳಿವೆ. ಚಿಟಗುಪ್ಪ, ಹುಮನಾಬಾದ್, ಔರಾದ್, ಭಾಲ್ಕಿ ತಾಲ್ಲೂಕು ವ್ಯಾಪ್ತಿಯಲ್ಲೂ ಉತ್ತಮ ಮಳೆಯಾಗಿದೆ.

ಜಿಲ್ಲಾ ಕೇಂದ್ರ ಕೊಪ್ಪಳ, ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಭಾಗದಲ್ಲಿ ಮಳೆ ಸುರಿಯಿತು. ರಾಯಚೂರು ಜಿಲ್ಲೆಯಲ್ಲಿ ಮುದಗಲ್ ಬಳಿ ಹೂನೂರು ಗ್ರಾಮದ ಹಳ್ಳ ತುಂಬಿ ಹರಿದಿದೆ.

ರಾಜ್ಯದಲ್ಲಿ ಸಿಡಿಲು ಬಡಿದು 3 ಸಾವು

ಸೇಡಂ ತಾಲ್ಲೂಕಿನ ತೊಟ್ನಳ್ಳಿ ಮಹಾಂತೇಶ್ವರ ಮಠ ಜಲಾವೃತಗೊಂಡಿತು

ಚಿತ್ತಾಪುರ ತಾಲ್ಲೂಕಿನ ಲಾಡ್ಲಾಪುರದಲ್ಲಿ ಉರುಳಿ ಬಿದ್ದ ವಿದ್ಯುತ್ ಕಂಬ

ದಾವಣಗೆರೆ: ಮಳೆ ಬಿರುಸು, ಕೃಷಿಕರಿಗೆ ಸಂತಸ

ದಾವಣಗೆರೆ: ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ವಿವಿಧೆಡೆ ಬುಧವಾರ ಬೆಳಗಿನಜಾವ ಸಿಡಿಲು, ಗುಡುಗು, ಬಿರುಗಾಳಿ ಸಹಿತ ಉತ್ತಮ ಮಳೆಯಾಗಿದೆ. ಮುಂಗಾರು ಬಿತ್ತನೆಗೆ ಸಿದ್ಧತೆ ನಡೆಸಿರುವ ಈ ಮಳೆ ರೈತರಲ್ಲಿ ಸಂತಸ ತಂದಿದೆ.

ಬಿರುಗಾಳಿಯಿಂದ ಭತ್ತ, ಪಪ್ಪಾಯ, ಬಾಳೆ ಬೆಳೆಗಳಿಗೆ ಹಾನಿಯುಂಟಾಗಿದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು ಹಾಗೂ ಮೊಳಕಾಲ್ಮುರು ತಾಲ್ಲೂಕಿನಲ್ಲಿ ಹಳ್ಳ, ಕೊಳ್ಳಗಳು ತುಂಬಿ ಹರಿದಿವೆ. ಅಡಿಕೆ, ಪಪ್ಪಾಯ ಗಿಡಗಳು ಧರೆಗುರುಳಿವೆ. ನಾಯಕನಹಟ್ಟಿ ಸಮೀಪದ ಕುದಾಪುರ ಗ್ರಾಮದ ಕೆಲವು ಜಮೀನುಗಳಲ್ಲಿ ಟೊಮೆಟೊ ಬೆಳೆ ಜಲಾವೃತಗೊಂಡಿದೆ.

ಮೈಸೂರು, ಹಾಸನದ ವಿವಿಧೆಡೆ ಮಳೆ

ಮೈಸೂರು: ಮೈಸೂರು, ಹಾಸನ ಜಿಲ್ಲೆಯ ವಿವಿಧೆಡೆ ಬುಧವಾರ ಉತ್ತಮ ಮಳೆಯಾಗಿದೆ. ಎಚ್.ಡಿ. ಕೋಟೆ ತಾಲ್ಲೂಕು ನೂರಲ-ಕುಪ್ಪೆಯಲ್ಲಿ ಸಿಡಿಲು ಬಡಿದು ಹಸು ಸಾವಿಗೀಡಾಗಿದೆ.

ಹಾಸನ ಜಿಲ್ಲೆಯ ಹಲವೆಡೆ ಮಂಗಳವಾರ ರಾತ್ರಿ ಹಾಗೂ ಬುಧವಾರ ಉತ್ತಮ ಮಳೆ ಸುರಿದಿದೆ. ಆಲೂರು ತಾಲ್ಲೂಕಿನ ಹೊನ್ನೇನಹಳ್ಳಿಯಲ್ಲಿ ಬುಧವಾರ ಮಧ್ಯಾಹ್ನ ಸಿಡಿಲು ಬಡಿದು ಎರಡು ಹಸುಗಳು ಮೃತಪಟ್ಟಿವೆ.

ಬೇಲೂರು ಅಡಗೂರು ಆಸುಪಾಸಿನಲ್ಲಿ ಜೋರು ಮಳೆ ಬಿದ್ದಿತು. ಹೊಲ, ಗದ್ದೆ, ತೋಟಗಳಿಗೆ ನೀರು ನುಗ್ಗಿದೆ. ಹಾಸನ ನಗರವೂ ಸೇರಿದಂತೆ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಬುಧವಾರ ಮಧ್ಯಾಹ್ನ ಸಾಧಾರಣ ಮಳೆ ಸುರಿಯಿತು.

ಬಕ್ರೀದ್: ತ್ಯಾಗದ ಸಂಕೇತ

• ಅಬ್ದುಲ್ ರಹಿಮಾನ್

ಜಾಗತಿಕ ಅಸ್ಥಿರತೆ, ಆರ್ಥಿಕ ಅನಿಶ್ಚಿತತೆ, ಸಮಾಜದಲ್ಲಿ ಅಪನಂಬಿಕೆ, ಧ್ರುವೀಕರಣ ಉಚ್ಛ್ರಾಯ ಸ್ಥಿತಿಯಲ್ಲಿರುವಾಗ ಮತ್ತೊಂದು 'ಈದ್-ಉಲ್- ಅಳ್‌ಹಾ' ಆಚರಣೆಗೆ ಜಗತ್ತು ಸಿದ್ಧವಾಗಿದೆ. ಮಾನವನ ಸಂಕಟಗಳು ಆತ್ಮಸಾಕ್ಷಿಯನ್ನು ಜಾಗೃತಗೊಳಿಸುವ ಬದಲು ಕೇವಲ ಪ್ರದರ್ಶನದ ವಸ್ತು-ವಾಗುತ್ತಿದೆ. ಇಂತಹ ವಾತಾವರಣದಲ್ಲಿ ಈದ್-ಉಲ್-ಅಳ್‌ಹಾ ಸಾರುವ ಸಂದೇಶ ಪ್ರಸ್ತುತವಾಗುತ್ತದೆ.

ಈದ್-ಉಲ್- ಅಳ್‌ಹಾದ ಮಹತ್ವವು ಪ್ರಾರ್ಥನೆ, ತ್ಯಾಗ, ಕೌಟುಂಬಿಕ ಮಿಲನ ಹಾಗೂ ಕುರ್ಬಾನಿ ಮುಂತಾದ ಧಾರ್ಮಿಕ ಆಚರಣೆಗಳಿಗೆ ಮೀರಿದ್ದು. ದೇವಾಜ್ಞೆಗೆ ವಿಧೇಯರಾಗಿ ಪ್ರವಾದಿ ಇಬ್ರಾಹಿಮರು ತಮ್ಮ ಮಗನನ್ನೇ ಬಲಿ ಅರ್ಪಿಸಲು ಮುಂದಾಗಿದ್ದು, ಭಕ್ತಿ, ನಂಬಿಕೆ, ವಿಶ್ವಾಸದ ಪ್ರತೀಕ. ಸತ್ಯ, ನ್ಯಾಯ ಮತ್ತು ಸಮಗ್ರತೆಗೆ ತ್ಯಾಗ ಮಾಡಬೇಕು ಎನ್ನುವ ಸಂದೇಶ ಅದರಲ್ಲಿ ಅಡಗಿದೆ.

'ಅಲ್ಲಾಹನಿಗೆ ತಲುಪುವುದು ಧರ್ಮನಿಷ್ಠೆ; ಮಾಂಸ, ರಕ್ತ ಅಲ್ಲ' ಎನ್ನುವ ಕುರಾನ್, ತ್ಯಾಗವೆಂದರೆ ಪ್ರದರ್ಶನವಲ್ಲ, ಬದಲಿಗೆ ಚಾರಿತ್ರ್ಯದ ಶುದ್ಧೀಕರಣ ಎನ್ನುವುದನ್ನು ಸಾರುತ್ತದೆ. ಮನುಷ್ಯನ ಅಹಂಕಾರ, ದುರಾಸೆ, ದ್ವೇಷ, ಅನ್ಯಾಯ, ಸ್ವಾರ್ಥವನ್ನು ತ್ಯಾಗ ಮಾಡಲು ಕರೆ ನೀಡಲಾಗಿದೆ. ಇಂದಿನ ಜಾಗತಿಕ ಅಸ್ಥಿರತೆಗೆ ಕಾರಣಗಳು ಇವುಗಳೇ. ಸಂಘರ್ಷ, ಪೈಪೋಟಿ ಮತ್ತು ಹಗೆತನಕ್ಕೆ ನಿರಂತರವಾಗಿ ಒಡ್ಡಿಕೊಳ್ಳುತ್ತಿರುವ ಸಮಾಜಕ್ಕೆ ಸಹಾನುಭೂತಿಯ ಪಾಠವೂ ಈದ್ ಆಚರಣೆಯಲ್ಲಿದೆ. ಅದರ ಪ್ರತೀಕವಾಗಿ ಇಬ್ರಾಹಿಮರು ನಿಲ್ಲುತ್ತಾರೆ.

ಸಮಾಜದ ಏಳಿಗೆ ಕೇವಲ ಭೌತಿಕ ಪ್ರಗತಿ ಮಾತ್ರವಲ್ಲ. ನ್ಯಾಯ, ಸಹಾನುಭೂತಿ, ನಮ್ರತೆ, ತ್ಯಾಗ ಮತ್ತು ಇತರರೆಡೆಗಿನ ಕಾಳಜಿ ನಾಗರಿಕ ಪ್ರಗತಿ ಎಂದು ಈ ಹಬ್ಬ ಒತ್ತಿಹೇಳುತ್ತದೆ. 'ಜನರಿಗೆ ಅತ್ಯಂತ ಪ್ರಯೋಜನಕಾರಿಯಾದವರೇ ಅಲ್ಲಾಹುವಿಗೆ ಅತ್ಯಂತ ಪ್ರಿಯರಾದವರು' ಎನ್ನುವ ಪ್ರವಾದಿ ಮುಹಮ್ಮದರ ಬೋಧನೆ ಇದನ್ನೇ ಹೇಳುತ್ತದೆ. ಕುರ್ಬಾನಿಯ ಮಾಂಸ ವಿತರಣೆಯು ದಾನಕ್ಕಿಂತ ಹೆಚ್ಚಿನದನ್ನು ಸಂಕೇತಿಸುತ್ತದೆ. ಇದು ಬಹಿಷ್ಕಾರದ ತಿರಸ್ಕಾರವನ್ನು ಪ್ರತಿನಿಧಿಸುತ್ತದೆ. ಘನತೆ ಎಂಬುದು ಉಳ್ಳವರಿಗೆ ಮಾತ್ರ ಸೀಮಿತವಾಗಿದ್ದಲ್ಲ ಎಂಬುದನ್ನು ಈದ್ ನೆನಪಿಸುತ್ತದೆ.

ಬಕ್ರೀದ್ ಸಮಯದಲ್ಲೇ ಬರುವ ಹಜ್ ಆಚರಣೆಯೂ ರಾಜಕೀಯ ಮತ್ತು ನಾಗರಿಕತೆಯ ಸಂದೇಶ ನೀಡುತ್ತದೆ. ವಿವಿಧ ಭಾಷೆ, ವರ್ಗ, ಪಂಥ, ಅಧಿಕಾರ, ಬಣ್ಣದ ಜನರು ಯಾವುದೇ ಭೇದವಿಲ್ಲದೆ ಸರಳ ಬಿಳಿ ವಸ್ತ್ರಗಳನ್ನು ಧರಿಸಿ ಒಟ್ಟಿಗೆ ಸೇರುತ್ತಾರೆ. ದೇವರ ಮುಂದೆ ಸಂಪತ್ತು, ರಾಷ್ಟ್ರೀಯತೆ, ಜನಾಂಗ ಮತ್ತು ರಾಜಕೀಯ ಅಧಿಕಾರಗಳು ಮಹತ್ವವನ್ನು ಕಳೆದುಕೊಳ್ಳುತ್ತವೆ.

ನಿಜವಾದ ಶಕ್ತಿ ಇರುವುದು ಆಕ್ರಮಣಶೀಲತೆಯಲ್ಲಲ್ಲ, ಸಂಯಮದಲ್ಲಿ; ನೆಮ್ಮದಿ ಇರುವುದು ಕ್ರೋಡೀಕರಣದಲ್ಲಲ್ಲ, ತ್ಯಾಗದಲ್ಲಿ; ಘನತೆ ಇರುವುದು ಶ್ರೇಷ್ಠತೆಯಲ್ಲಲ್ಲ, ಸೇವೆಯಲ್ಲಿ ಎನ್ನುವುದನ್ನು ಈ ಹಬ್ಬವು ಕಲಿಸುತ್ತದೆ. ❖

ಕಾರ್ಮಿಕರನ್ನು ಕೆರೆಯ ಮಧ್ಯದಲ್ಲಿ ನಿಲ್ಲಿಸಿ ಜಿಪಿಎಸ್ ಫೋಟೊ ತೆಗೆಯಲಾಯಿತು

'ಇ–ಹಾಜರಾತಿಗೆ ಕೆರೆಯಲ್ಲಿ ನಿಲ್ಲಿಸಿದರು'

ನರೇಗಾ ಕಾರ್ಮಿಕರಿಗೆ 'ಶಿಕ್ಷೆ'

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು): ಸಮೀಪದ ರೋಡಲಬಂಡದಲ್ಲಿ (ತವಗ) ನರೇಗಾ ಕಾರ್ಮಿಕರನ್ನು ಮಳೆ ನೀರು ತುಂಬಿರುವ ಕೆರೆಯ ಮಧ್ಯದಲ್ಲೇ ನಿಲ್ಲಿಸಿ ಜಿಪಿಎಸ್ ಫೋಟೊ ತೆಗೆದು ಇ-ಹಾಜರಾತಿ ಪಡೆಯಲಾಗಿದೆ ಎಂಬ ಆರೋಪ ಕೇಳಿಬಂದಿದೆ.

'ಕೆರೆಯಲ್ಲಿ 5 ಅಡಿಗಿಂತ ಹೆಚ್ಚು ನೀರಿತ್ತು. ಹೀಗಿದ್ದರೂ ನರೇಗಾ ಸಿಬ್ಬಂದಿ ನಮ್ಮನ್ನು ಕೆರೆಯ ಮಧ್ಯದಲ್ಲಿ ನಿಲ್ಲಿಸಿ, ಫೋಟೊ ತೆಗೆದುಕೊಂಡಿದ್ದಾರೆ' ಎಂದು ಕಾರ್ಮಿಕರು ದೂರಿದ್ದಾರೆ.

'ರೋಡಲಬಂಡದಲ್ಲಿ ನರೇಗಾದಡಿ ಕೆರೆ ಕಾಮಗಾರಿ ಕೈಗೊಳ್ಳಲಾಗಿತ್ತು. ಕಾಮಗಾರಿಯಲ್ಲಿ ಕೆಲಸ ಮಾಡಿದ್ದೆವು. ಆಗ ಜಿಪಿಎಸ್ ಫೋಟೊ ತೆಗೆದುಕೊಂಡಿರಲಿಲ್ಲ' ಎಂದಿದ್ದಾರೆ.

'ಫೋಟೊ ತೆಗೆಯಿಸಿಕೊಳ್ಳಲು ಒಪ್ಪದಿದ್ದರೆ, ಕೂಲಿ ನೀಡುವುದಿಲ್ಲ ಎಂದು ಹೆದರಿಸಿದರು. ಹೀಗಾಗಿ ಫೋಟೊ ತೆಗೆಸಿಕೊಂಡಿದ್ದೇವೆ' ಎಂದಿದ್ದಾರೆ.

'ಕಾರ್ಮಿಕರನ್ನು ಕೆರೆಯಲ್ಲಿ ನಿಲ್ಲಿಸಿ, ಫೋಟೊ ತೆಗೆದುಕೊಂಡಿರುವ ಬಗ್ಗೆ ದೂರುಗಳಿವೆ. ಮಾಹಿತಿ ಪಡೆದು, ಕ್ರಮ ಕೈಗೊಳ್ಳಲಾಗುವುದು' ಎಂದು ಲಿಂಗಸುಗೂರು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಉಮೇಶ ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಂದ್ರಶೇಖರ ದಾಮ್ಲೆಗೆ ಯಕ್ಷಗಾನ ಕಲಾರಂಗ ಪ್ರಶಸ್ತಿ



ಚಂದ್ರಶೇಖರ ದಾಮ್ಲೆ

ಉಡುಪಿ: ಯಕ್ಷಗಾನ ಕಲಾರಂಗ, ತಲ್ಲೂರು ಕನಕಾ-ಅಣ್ಣಯ್ಯ ಶೆಟ್ಟಿ ನೆನಪಿನಲ್ಲಿ ವಿದ್ವಾಂಸರಿಗೆ ನೀಡುವ 'ಯಕ್ಷಗಾನ ಕಲಾರಂಗ ಪ್ರಶಸ್ತಿ'ಗೆ ನಿವೃತ್ತ ಪ್ರಾಧ್ಯಾಪಕ, ಪ್ರಸಂಗಕರ್ತ ಚಂದ್ರಶೇಖರ ದಾಮ್ಲೆ ಅವರು ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹60 ಸಾವಿರ ನಗದು ಒಳಗೊಂಡಿದೆ.

'ಪ್ರಶಸ್ತಿ ಪ್ರದಾನ ಸಮಾರಂಭ ಜೂನ್ 5ರಂದು ಜರುಗಲಿದೆ' ಎಂದು ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್, ಕಾರ್ಯದರ್ಶಿ ಮುರಲಿ ಕಡೆಕಾರ್ ತಿಳಿಸಿದ್ದಾರೆ.

ಕೊಲ್ಲೂರು: ₹1.90 ಕೋಟಿ ಕಾಣಿಕೆ ಸಂಗ್ರಹ

ಕುಂದಾಪುರ (ಉಡುಪಿ): ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಕಾಣಿಕೆಯ ಹುಂಡಿಯಲ್ಲಿ ಒಂದು ತಿಂಗಳಲ್ಲಿ ₹1.90 ಕೋಟಿ ಕಾಣಿಕೆ ಸಂಗ್ರಹವಾಗಿದೆ.

ಇದು, ದೇವಸ್ಥಾನದ ಇತಿಹಾಸದಲ್ಲೇ ಒಂದು ತಿಂಗಳಲ್ಲಿ ಸಂಗ್ರಹವಾದ ಗರಿಷ್ಠ ಮೊತ್ತವಾಗಿದೆ ಎಂದು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ.ಬಾಬು ಶೆಟ್ಟಿ ತಗ್ಗರ್ಸೆ ಹಾಗೂ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಶೆಟ್ಟಿ ತಿಳಿಸಿದ್ದಾರೆ.

ಮಂಗಳವಾರ 41 ಹುಂಡಿಗಳನ್ನು ತೆರೆಯಲಾಗಿದ್ದು ₹1,90,43,819 ಕಾಣಿಕೆ, ₹4,00,354 ಮೌಲ್ಯದ 0.325 ಗ್ರಾಂ ಚಿನ್ನ, 2.370 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ.

ಫೆಬ್ರುವರಿ ತಿಂಗಳಲ್ಲಿ ₹1.47 ಕೋಟಿ, ಮಾರ್ಚ್‌ನಲ್ಲಿ ₹80 ಲಕ್ಷ ಹಾಗೂ ಏಪ್ರಿಲ್‌ನಲ್ಲಿ ₹70 ಲಕ್ಷ ಸಂಗ್ರಹವಾಗಿತ್ತು. ಈ ಬಾರಿ ಬೇಸಿಗೆ ರಜೆಯಲ್ಲಿ ಪ್ರತಿದಿನ ಸರಾಸರಿ 30 ಸಾವಿರ ಭಕ್ತರು ದೇವಳಕ್ಕೆ ಭೇಟಿ ನೀಡಿದ್ದರು ಎಂದೂ ತಿಳಿಸಿದ್ದಾರೆ.

'ಮುರಿನಕಟ್ಟೆ: ಸರ್ಕಾರ ಮರುನಿರ್ಮಿಸಲಿ'

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): 'ಭಟ್ಕಳದಲ್ಲಿ ಮುಸ್ಲಿಮರ ಗುಂಪು ಮುರಿನಕಟ್ಟೆಗೆ ಹಾನಿ ಮಾಡಿರುವುದು ಅಕ್ಷಮ್ಯ. ಸರ್ಕಾರವೇ ಕಟ್ಟೆ ಮರುನಿರ್ಮಿಸ-ಬೇಕು' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಒತ್ತಾಯಿಸಿದರು.

'ಪೊಲೀಸರನ್ನು ತಳ್ಳಿ ಮುರಿನಕಟ್ಟೆ ನಾಶಪಡಿಸಲು ರಾಜ್ಯ ಸರ್ಕಾರದ ತುಷ್ಟೀಕರಣ ನೀತಿಯೇ ಕಾರಣ. ಏನೂ ಮಾಡಿದರೂ ನಡೆಯುತ್ತದೆ ಎಂಬ ಧೈರ್ಯ ಸಮಾಜಘಾತುಕ ಶಕ್ತಿಗಳಿಗೆ ಇದೆ. ಸರ್ಕಾರ ಇಂಥದ್ದಕ್ಕೆ ಕಡಿವಾಣ ಹಾಕಲಿ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನೀಲಣ್ಣವರಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಶಿವಾನಂದ ನೀಲಣ್ಣವರ

ಬೆಳಗಾವಿ: ಅಧಿಕ ಬಡ್ಡಿ ಆಮಿಷ ವೊಡ್ಡಿ ಸಾವಿರಾರು ಕೋಟಿ ರೂಪಾಯಿ ವ್ಯವಹಾರ ನಡೆಸಿದ ಆರೋಪವಿರುವ ಶಿವಂ ಅಸೋಸಿಯೇಟ್ಸ್‌ನ ಶಿವಾನಂದ ನೀಲಣ್ಣವರ ಅವರನ್ನು ಕೋರ್ಟ್ ಜೂನ್ 9ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಹಿಂಡಲಗಾ ಜೈಲಿಗೆ ಕಳಿಸಲಾಗಿದೆ.

ಸಿಐಡಿ ಡಿವೈಎಸ್‌ಪಿ ಕೋದಂಡರಾಮ್ ನೇತೃತ್ವದ ತಂಡ ವೈದ್ಯಕೀಯ ತಪಾಸಣೆ ಬಳಿಕ ಆರೋಪಿಯನ್ನು ಬುಧವಾರ ಬೆಳಗಾವಿಯ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶ ಕೆ.ಗಂಗಾಧರ ಅವರು ಎದುರು ಮುಂದೆ ಹಾಜರುಪಡಿಸಿತು.

ವಿಚಾರಣೆ ವೇಳೆ ಶಿವಾನಂದ, 'ನನಗೆ ಎದೆನೋವು ಸೇರಿ ಅನಾರೋಗ್ಯ ಕಾಡುತ್ತಿದೆ. ಸೂಕ್ತ ಚಿಕಿತ್ಸೆ ಕೊಡಿಸಬೇಕು' ಎಂದು ಕೋರಿದರು.

ಇದಕ್ಕೆ ನ್ಯಾಯಾಧೀಶರು, 'ಜಿಲ್ಲಾಸ್ಪತ್ರೆ ವೈದ್ಯರು ಪರೀಕ್ಷಿಸಿ ಅಗತ್ಯ ಚಿಕಿತ್ಸೆ ನೀಡುವರು. ಅಗತ್ಯವಿದ್ದರೆ ಕಿಮ್ಸ್‌ನಲ್ಲೂ ಪಡೆಯಬಹುದು. ಇನ್ನೂ ಹೆಚ್ಚಿನ ಚಿಕಿತ್ಸೆ ಬೇಕಿದ್ದರೆ, ವಕೀಲರ ಮೂಲಕ ಅರ್ಜಿ ಸಲ್ಲಿಸಬಹುದು' ಎಂದು ಹೇಳಿದರು.

ಮಹತ್ವದ ಮಾಹಿತಿ ಸಂಗ್ರಹ

10 ದಿನ ಕಸ್ಟಡಿಗೆ ಪಡೆದು ತನಿಖೆ ನಡೆಸಿದ ಸಿಐಡಿ ಅಧಿಕಾರಿಗಳು ವ್ಯವಹಾರಕ್ಕೆ ಸಂಬಂಧಿಸಿದ ಹಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಗೊತ್ತಾಗಿದೆ.

'ಜಾಮೀನು ಅರ್ಜಿ ಜೂನ್ 1ರಂದು ವಿಚಾರಣೆಗೆ ಬರಬಹುದು. ಯಾರೂ ನೇರವಾಗಿ ದೂರು ನೀಡಿಲ್ಲ. ಕಾಗವಾಡದಲ್ಲಿ ದಾಖಲಾಗಿರುವ ದೂರಿನ ಮಾಹಿತಿ ಪರಿಶೀಲಿಸುತ್ತಿದ್ದೇವೆ. ಮೊದಲು ಜಾಮೀನು ಪಡೆಯಲು ಪ್ರಯತ್ನಿಸುತ್ತೇವೆ. ಬಳಿಕ ಎಫ್‌ಐಆರ್ ರದ್ದು ಕೋರಿ ಹೈಕೋರ್ಟ್ ಮೊರೆ ಹೋಗುತ್ತೇವೆ' ಎಂದು ಶಿವಾನಂದ ಪರ ವಕೀಲ ಆರ್.ಪಿ. ಪಾಟೀಲ ಅವರು ತಿಳಿಸಿದರು.

15 ದಿನಗಳ ಕಾಲಾವಕಾಶದ ಮನವಿಗೂ ಒಪ್ಪದ ಹೈಕಮಾಂಡ್

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ಸಚಿವ ಸಂಪುಟ ಪುನರ್ ರಚನೆಗೆ ಅಂತಿಮ ಪಡೆಯುವ ಅಮಿತ ವಿಶ್ವಾಸದಿಂದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಬಂದಿದ್ದರು. ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಹಕ್ಕೊತ್ತಾಯ ಮಂಡಿಸಲು ಸಿದ್ಧತೆ ಮಾಡಿಕೊಂಡು ಬಂದಿದ್ದರು. ಈ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಲ್ಲಿ ಪ್ರಸ್ತಾಪಿಸಿದರು. ಆಗ ಅವರು, 'ನಾವು ನಾಯಕತ್ವ ಬದಲಾವಣೆಗೆ ತೀರ್ಮಾನಿಸಿದ್ದೇವೆ. ನೀವು ಕೂಡಲೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಿ' ಎಂದು ಸೂಚಿಸಿದರು.

ಈ ಮಾತುಗಳನ್ನು ಕೇಳಿ ಸಿದ್ದರಾಮಯ್ಯ ಆಘಾತಕ್ಕೆ ಒಳಗಾದರು. ರಾಹುಲ್ ಈ ನಿರ್ದೇಶನ ನೀಡುವರೆಂದು ಅವರು ನಿರೀಕ್ಷಿಸಿರಲಿಲ್ಲ. 'ಆರಲ್ಲಿ, ದೇಶದಾದ್ಯಂತ ಜಾತಿ ಸಮೀಕ್ಷೆ, ಹಿಂದುಳಿದ ಜಾತಿಗಳ ಸಬಲೀಕರಣದ ಬಗ್ಗೆ ನಿರಂತರ ಮಾತನಾಡುವ ರಾಹುಲ್ ಅವರು ತಮ್ಮ ಪದತ್ಯಾಗಕ್ಕೆ ಸೂಚನೆ ನೀಡಲಿಕ್ಕಿಲ್ಲ ಎಂಬ ಧೈರ್ಯ ಅವರಿಗೆ ಇತ್ತು. ಆ ಕಾರಣದಿಂದಲೇ, 'ರಾಹುಲ್ ಹೇಳಿದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವೆ' ಎಂದು ಹೇಳಿಕೆ ನೀಡುತ್ತಲೇ ಬಂದಿದ್ದರು. ಆದರೆ, ಮಂಗಳವಾರ ಅವರ ನಿರೀಕ್ಷೆಗೂ ಮೀರಿದ ವಿದ್ಯಮಾನ ಘಟಿಸಿತು.

'ರಾಜ್ಯದಲ್ಲಿ ಜಾತಿ ಸಮೀಕ್ಷೆಯ ವರದಿ ಬಹುತೇಕ ಸಿದ್ಧವಾಗಿದೆ. ಈ ವರದಿ ಸ್ವೀಕರಿಸಲು ಸ್ವಲ್ಪ ಕಾಲಾವಕಾಶ ಬೇಕು. ಮುಖ್ಯಮಂತ್ರಿ ಗಾದಿಯಿಂದ ನಿರ್ಗಮಿಸಲು 15 ದಿನಗಳ ಸಮಯಾವಕಾಶ ನೀಡಿ' ಎಂದು ಸಿದ್ದರಾಮಯ್ಯ ಮನವಿ ಮಾಡಿಕೊಂಡರು. ಅದಕ್ಕೂ ರಾಹುಲ್ ಒಪ್ಪಲಿಲ್ಲ. 'ಜಾತಿ ಗಣತಿ ವರದಿ ಸ್ವೀಕಾರ ಹಾಗೂ ಇತರ ಕೆಲಸಗಳನ್ನು ಎರಡು ದಿನಗಳ ಒಳಗೆ ಮುಗಿಸಿ ರಾಜೀನಾಮೆ ನೀಡಿ' ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಮೂರು ವರ್ಷಗಳ ಹಿಂದಿನ ಅಧಿಕಾರ ಹಸ್ತಾಂತರ ಒಪ್ಪಂದವನ್ನು ನೆನಪಿಸಿದರು. ಅದಕ್ಕೆ ಗೌರವ ನೀಡಬೇಕು ಎಂದೂ ಹೇಳಿದರು. ಆ ಬಳಿಕ, ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಲು ಒಪ್ಪಿದರು ಎಂದು ಮೂಲಗಳು ಹೇಳಿವೆ.

ಬೆಂಬಲಿಗರ ಉತ್ಸಾಹ ನಿಯಂತ್ರಿಸಲು ಹರಸಾಹಸ

ಡಿ.ಕೆ.ಶಿವಕುಮಾರ್ ಅವರು ತಮ್ಮ ಪ್ರಯಾಣದ ವೇಳಾಪಟ್ಟಿಯನ್ನು ಕೊನೆಯ ಕ್ಷಣದಲ್ಲಿ ಬದಲಿಸಿ ಬುಧವಾರ ಸಂಜೆ ವರೆಗೆ ರಾಷ್ಟ್ರ ರಾಜಧಾನಿಯಲ್ಲಿ ಉಳಿದರು.

ದಿನದ ಹೆಚ್ಚಿನ ಸಮಯವನ್ನು ತಮ್ಮ ಸಫ್ದರ್‌ಜಂಗ್ ಎನ್‌ಕ್ಲೇವ್ ನಿವಾಸದಲ್ಲಿ ಕಳೆದರು. ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ರಾಜ್ಯದ ಕೆಲವು ನಾಯಕರನ್ನು ಭೇಟಿಯಾದರು. ಕರ್ನಾಟಕ ಕಾಂಗ್ರೆಸ್‌ನಲ್ಲಿನ ಆಂತರಿಕ ಪರಿಸ್ಥಿತಿ ಸ್ಥಿರವಾಗುವವರೆಗೆ ಘೋಷಣೆಗಳನ್ನು ಕೂಗುವುದು ಅಥವಾ ಸಾರ್ವಜನಿಕ ಹೇಳಿಕೆಗಳನ್ನು ನೀಡುವುದನ್ನು ತಡೆಯುವಂತೆ ತಮ್ಮ ಬೆಂಬಲಿಗರಿಗೆ ಸೂಚಿಸುವಂತೆ ಪಕ್ಷದ ಉನ್ನತ ನಾಯಕರು ಶಿವಕುಮಾರ್ ಅವರಿಗೆ ಸೂಚಿಸಿದ್ದರು. ಇನ್ನೊಂದೆಡೆ, ಶಿವಕುಮಾರ್ ಅವರನ್ನು ಸ್ವಾಗತಿಸಲು ಬೆಂಬಲಿಗರು ಬೆಂಗಳೂರಿನಲ್ಲಿ ಭರ್ಜರಿ ಸಿದ್ಧತೆ ಮಾಡಿಕೊಂಡಿದ್ದರು. ಹೀಗಾಗಿ, ಅವರ ಪ್ರಯಾಣದ ವೇಳಾಪಟ್ಟಿಯನ್ನು ಪದೇ ಪದೇ ಬದಲಾಯಿಸಲಾಯಿತು.

ಮೊದಲ ಎರಡೂವರೆ ವರ್ಷಗಳಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಹಾಗೂ ಉಳಿದ ಅವಧಿಗೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಎಂದು ಹೈಕಮಾಂಡ್ ನಾಯಕರ ಸಮ್ಮುಖದಲ್ಲಿ ಒಪ್ಪಂದ ಆಗಿತ್ತು. ಆದರೆ, ಈ ಸಂಬಂಧ ಒಪ್ಪಂದವೇ ಆಗಿಲ್ಲ ಎಂದು ಸಿದ್ದರಾಮಯ್ಯ ಪ್ರತಿಪಾದಿಸುತ್ತಲೇ ಬಂದಿದ್ದರು. ಎರಡೂವರೆ ವರ್ಷಗಳ ಬಳಿಕ ಅಧಿಕಾರ ಹಸ್ತಾಂತರ ಆಗಲೇಬೇಕು ಎಂದು ಶಿವಕುಮಾರ್ ಪಟ್ಟು ಹಿಡಿದಿದ್ದರು. ಅರು ತಿಂಗಳಲ್ಲಿ ಸುಮಾರು 17 ಬಾರಿ ದೆಹಲಿ ಯಾತ್ರೆ ನಡೆಸಿ ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹೇರಿದ್ದರು. ಐದು ವಿಧಾನಸಭೆಗಳ ಚುನಾವಣೆ ಮುಗಿಯುವವರೆಗೆ ತಾಳ್ಮೆಯಿಂದ ಇರುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಲಹೆ ನೀಡಿದ್ದರು.

ಪಕ್ಷದ ವಿಶ್ವಾಸಾರ್ಹತೆ ಎತ್ತಿ ಹಿಡಿಯಲು ನಾಯಕತ್ವ ಬದಲಾವಣೆ ಅಗತ್ಯ ಎಂದು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ಖರ್ಗೆ ಒತ್ತಿ ಹೇಳಿದ್ದರು. ಇಲ್ಲದಿದ್ದರೆ, ಕೆಟ್ಟ ಸಂದೇಶ ರವಾನೆ ಆಗಲಿದೆ ಎಂದೂ ತಿಳಿಸಿದ್ದರು.

ಹೀಗಾಗಿ, ಮುಖ್ಯಮಂತ್ರಿ ಬದಲಾವಣೆಗೆ ರಾಹುಲ್ ಒಪ್ಪಿದರು. ಸೂಕ್ತ ಕಾಲದಲ್ಲಿ ಹೈಕಮಾಂಡ್ ಕಠಿಣ ತೀರ್ಮಾನ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ ಎಂಬ ಸಂದೇಶ ರವಾನಿಸಲು ಈ ಅವಕಾಶವನ್ನು ಬಳಸಿಕೊಂಡರು.

ರಾಜ್ಯ ಸರ್ಕಾರದ ಕಾರ್ಯಕ್ರಮಕ್ಕೆ ಶ್ಲಾಘಿಸಿದ ಕಾಂಗ್ರೆಸ್ ನಾಯಕ, ಒಗ್ಗಟ್ಟಿನ ಅಗತ್ಯವನ್ನು ಒತ್ತಿ ಹೇಳಿದರು. ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿರುವಂತೆ ಇಬ್ಬರೂ ನಾಯಕರಿಗೂ ತಾಕೀತು ಮಾಡಿದರು.

ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರೊಂದಿಗೆ ಕಾಂಗ್ರೆಸ್ ನಾಯಕ ಜಂಟಿ ಸಭೆ ನಡೆಸಿದರು. ನಂತರ ಇಬ್ಬರೂ ನಾಯಕರೊಂದಿಗೆ ಪ್ರತ್ಯೇಕ ಸಭೆ ನಡೆಸಿದರು. ಆ ಬಳಿಕ ಸೋನಿಯಾ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದರು. ನಾಯಕತ್ವ ಬದಲಾವಣೆ ಬಗ್ಗೆ ದೃಢ ತೀರ್ಮಾನ ತೆಗೆದುಕೊಳ್ಳುವಂತೆ ಸೋನಿಯಾ ಸಲಹೆ ನೀಡಿದರು. ಸಂಜೆ ಸಿದ್ದರಾಮಯ್ಯ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ ರಾಹುಲ್ ಅವರು ಹೈಕಮಾಂಡ್ ನಿಲುವನ್ನು ಪುನರುಚ್ಚರಿಸಿದರು.

'ಎಂಟು ವರ್ಷ ಮುಖ್ಯಮಂತ್ರಿಯಾಗುವ ಅಪರೂಪದ ಅವಕಾಶವನ್ನು ನಿಮಗೆ ನೀಡಲಾಯಿತು. ಎರಡು ಅವಧಿಗೆ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಈಗ ನಾಯಕತ್ವದ ಬ್ಯಾಟನ್ ಬೇರೆಯವರಿಗೆ ಹಸ್ತಾಂತರಿಸುವ ಸಮಯ ಸನ್ನಿಹಿತವಾಗಿದೆ' ಎಂದೂ ನೆನಪಿಸಿದರು ಎಂದು ಗೊತ್ತಾಗಿದೆ.

ಈ ಬಳಿಕ ಮುಖ್ಯಮಂತ್ರಿ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಸುರ್ಜೇವಾಲಾ ಅವರೊಂದಿಗೆ ಸಮಾಲೋಚನೆ ನಡೆಸಿದರು. ಹೈಕಮಾಂಡ್ ನಿರ್ದೇಶನ ಪಾಲಿಸುವಂತೆ ಉಭಯ ನಾಯಕರು ಸಲಹೆ ನೀಡಿದರು ಎಂದು ಮೂಲಗಳು ಹೇಳಿವೆ. ನಂತರ ಸಿದ್ದರಾಮಯ್ಯ ಅವರು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರ ನಿವಾಸಕ್ಕೆ ಹೋಗಿ ತಮ್ಮ ಆಪ್ತರನ್ನು ಭೇಟಿಯಾದರು. 'ಆತುರದ ನಿರ್ಧಾರ ತೆಗೆದುಕೊಳ್ಳಬಾರದು. ಶಾಸಕರ ಸಹಿ ಸಂಗ್ರಹ ನಡೆಸಿ ಹೈಕಮಾಂಡ್ ಮೇಲೆ ಒತ್ತಡ ಹೇರೋಣ' ಎಂದು ಕೆಲವು ಆಪ್ತ ಸಚಿವರು ಸಲಹೆ ನೀಡಿದರು. ಇದಕ್ಕೆ ಸಿದ್ದರಾಮಯ್ಯ ಒಪ್ಪಲಿಲ್ಲ. ರಾಹುಲ್ ಸೂಚನೆಯಂತೆ ಮುನ್ನಡೆಯುವ ಎಂದು ಸ್ಪಷ್ಟಪಡಿಸಿದರು ಎಂದು ಗೊತ್ತಾಗಿದೆ.

ಕಾವೇರಿ ನಿವಾಸದ ಬಳಿ ಅಭಿಮಾನಿಗಳ ಜಮೆ

ಕಣ್ಣೀರಿಟ್ಟು ತಮ್ಮ ಅಭಿಮಾನ ತೋರಿದ ಮುಖ್ಯಮಂತ್ರಿ ಕಚೇರಿಯ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂಬ ಸುದ್ದಿ ಹರಡುತ್ತಿದ್ದಂತೆಯೇ, ಕಾವೇರಿ ನಿವಾಸದ ಬಳಿ ಅವರ ಅಭಿಮಾನಿಗಳು ಬೆಳಗ್ಗಿನಿಂದಲೇ ಸೇರತೊಡಗಿದರು.

ಹೈಕಮಾಂಡ್ ನಾಯಕರ ಜತೆಗೆ ಮಂಗಳವಾರದ ಭೇಟಿಯ ನಂತರ ಸಿದ್ದರಾಮಯ್ಯ ಅವರು ಮೌನಕ್ಕೆ ಜಾರಿದರು.

ಜವಾಹರಲಾಲ್ ನೆಹರೂ ಪುಣ್ಯ ಸ್ಮರಣೆಯಲ್ಲಿ ಭಾಗಿಯಾದ ನಂತರ ಸಿದ್ದರಾಮಯ್ಯ ಅವರು ನಾಡಿನ ಜನತೆಗೆ ಕೃತಜ್ಞತೆ ಹೇಳಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಸುದ್ದಿ ಮಾಧ್ಯಮಗಳು ಆ ಪೋಸ್ಟ್‌ಗಳನ್ನು, 'ವಿದಾಯ ಸಂದೇಶ' ಎಂದು ವರದಿ ಮಾಡಿದವು. ಅದರ ಬೆನ್ನಲ್ಲೇ ಸಿದ್ದರಾಮಯ್ಯ ಅವರ ಅಭಿಮಾನಿಗಳು ರಾಜ್ಯದ ವಿವಿಧ ಭಾಗಗಳಿಂದ ವಿಧಾನಸೌಧ, ಕಾವೇರಿ ನಿವಾಸದ ಬಳಿಗೆ ಬಂದಿಳಿಯತೊಡಗಿದರು.

ಮಧ್ಯಾಹ್ನದ ಹೊತ್ತಿಗೆ ತಂಡ-ತಂಡವಾಗಿ ಬಂದ ವರುಣಾ ಮತ್ತು ಚಾಮುಂಡೇಶ್ವರಿ ಕ್ಷೇತ್ರದ ಜನರು, ಕಾವೇರಿ ನಿವಾಸದ ಎದುರು ಜಮೆಗೊಂಡರು. ಬೀದರ್‌ನಿಂದ ಬಂದ ಮತ್ತೊಂದು ಗುಂಪು ಅವರಿಗೆ ಜತೆಯಾಯಿತು. ಹೀಗೆ ಬರುವವರ ಸಂಖ್ಯೆ ಸಂಜೆ ವೇಳೆಗೆ ಹೆಚ್ಚಾದ ಕಾರಣ, ವಿಂಡ್ಸರ್ ವೃತ್ತದ ಬಳಿ ಸಂಚಾರ ದಟ್ಟಣೆ ಉಂಟಾಯಿತು.

ಹಲವು ಸಚಿವರು ಬಂದು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಹೊರಬಂದು, 'ರಾಜೀನಾಮೆ ನೀಡುತ್ತಾರಂತೆ. ನಾವು ಎಷ್ಟು ಹೇಳಿದರೂ ಕೇಳುತ್ತಿಲ್ಲ' ಎಂದು ಹೇಳಿಕೆ ನೀಡಿದರು. ಒಬ್ಬೊಬ್ಬ ಸಚಿವರೂ ಇಂತಹ ಮಾತು ಹೇಳುತ್ತಿದ್ದಂತೆ ಸಿದ್ದರಾಮಯ್ಯ ಅವರ ಅಭಿಮಾನಿಗಳ ದುಗುಡ ಹೆಚ್ಚಿಸಿತು.

ಸಂಜೆಯ ವೇಳೆಗೆ ಸಿದ್ದರಾಮಯ್ಯ ಅವರು ವಿಧಾನಸೌಧಕ್ಕೆ ತೆರಳಿದಾಗ ಅವರ ಕಚೇರಿಯ ಸಿಬ್ಬಂದಿ, ಕಣ್ಣೀರಿಟ್ಟು ತಮ್ಮ ಅಭಿಮಾನ ತೋರಿದರು. ಜತೆಗೆ ರಾಜೀನಾಮೆ ನೀಡಬೇಡಿ ಎಂದು ಒತ್ತಾಯಿಸಿದರು. ಅದಕ್ಕೂ ಅವರು ಮೌನದಿಂದಲೇ ಪ್ರತಿಕ್ರಿಯಿಸಿದರು ಎಂಬ ಸುದ್ದಿ ಬಿತ್ತರವಾಗುತ್ತಿದ್ದಂತೆ ಇತ್ತ ಕಾವೇರಿ ನಿವಾಸದ ಬಳಿ ಅಭಿಮಾನಿಗಳು ತಮ್ಮ ಆಕ್ರೋಶ, ಅಸಮಾಧಾನ ಹೊರಹಾಕಲಾರಂಭಿಸಿದರು.

ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ಕಾವೇರಿ ನಿವಾಸಕ್ಕೆ ಬರುತ್ತಿದ್ದಂತೆಯೇ, ಅಲ್ಲಿ ಸೇರಿದ್ದ ಜನರ ಆಕ್ರೋಶದ ಕಟ್ಟೆ ಒಡೆಯಿತು. 'ಅನ್ಯಾಯ, ಅನ್ಯಾಯ. ಕಾಂಗ್ರೆಸ್ ಹೈಕಮಾಂಡ್‌ನಿಂದ ಅನ್ಯಾಯ', 'ಸಿದ್ದರಾಮಯ್ಯ ಇಳಿಸಲು ಹೈಕಮಾಂಡ್ ಯಾರು' ಎಂದು ಘೋಷಣೆ ಕೂಗತೊಡಗಿದರು. ಅಷ್ಟರಲ್ಲೇ ಪೊಲೀಸರು, ಅವರನ್ನು ಚದುರಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡರು.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಹಿಂದುಳಿದ ವರ್ಗಗಳ ಆಯೋಗದ ಸಭೆಯ ನಂತರ ವಿಧಾನಸೌಧದಿಂದ ಹೊರಟಾಗ...

ಪ್ರಜಾವಾಣಿ ಚಿತ್ರ/ ಎಂ. ಎಸ್ ಮಂಜುನಾಥ್

ನುಡಿದಂತೆ ನಡೆದ ಹೆಮ್ಮೆ: ಸಿದ್ದರಾಮಯ್ಯ

'ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ ಪ್ರತಿ ಮಾತಿಗೂ ಬದ್ಧರಾಗಿ ನಡೆಯುವ ಮೂಲಕ ನುಡಿದಂತೆ ನಡೆದ ಹೆಮ್ಮೆ ನಮಗಿದೆ. 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಪ್ರತಿ ಮನೆಗೂ ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಅವರು ವಿವರವಾದ ಪೋಸ್ಟ್ ಮಾಡಿದ್ದಾರೆ. 'ರಾಜ್ಯದ ಜನರ ಆಶೀರ್ವಾದದೊಂದಿಗೆ ನಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳು ಪೂರೈಸಿರುವ ಈ ಸಾರ್ಥಕ ಸಂದರ್ಭದಲ್ಲಿ ನಮ್ಮ ಸರ್ಕಾರದ ಎಲ್ಲಾ ಸಾಧನೆಗಳ ಶ್ರೇಯವನ್ನು ಪ್ರತಿಯೊಬ್ಬ ಕನ್ನಡಿಗನಿಗೂ ಅರ್ಪಿಸುತ್ತಿದ್ದೇವೆ' ಎಂದಿದ್ದಾರೆ.

'ಯಾರೂ ಹಸಿವಿನಿಂದ ಮಲಗಬಾರದು ಎಂಬ ಸಂಕಲ್ಪದೊಂದಿಗೆ ಜಾರಿಗೊಂಡ ಅನ್ನಭಾಗ್ಯ ಯೋಜನೆಯು ಕೋಟ್ಯಂತರ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಭದ್ರತೆ ನೀಡುವ ಮೂಲಕ ಆರೋಗ್ಯವಂತ ಸಮಾಜಕ್ಕೆ ಆಧಾರವಾಗಿದೆ. ಅನ್ನಭಾಗ್ಯ ಯೋಜನೆಯಡಿ ಉಚಿತ ಆಹಾರಧಾನ್ಯ ವಿತರಿಸಲು ಈವರೆಗೆ ₹18,897 ಕೋಟಿ ವ್ಯಯಿಸಲಾಗಿದ್ದು, 4.26 ಕೋಟಿ ಪಡಿತರ ಚೀಟಿದಾರರು ಮೂರು ಹೊತ್ತು ನೆಮ್ಮದಿಯಿಂದ ಊಟ ಮಾಡುತ್ತಿದ್ದಾರೆ' ಎಂದು ವಿವರಿಸಿದ್ದಾರೆ.

'ವಿದ್ಯುತ್ ಬಿಲ್ ಹೊರೆಯಿಂದ ಕಂಗೆಟ್ಟಿದ್ದ ಜನರಿಗೆ ಉಚಿತ ವಿದ್ಯುತ್ ಸೌಲಭ್ಯ ನೀಡಿ, ನೆಮ್ಮದಿಯ ಬದುಕು ಕಲ್ಪಿಸುವ ಬದ್ಧತೆಯೊಂದಿಗೆ ನಾವು ಜಾರಿಗೆ ತಂದ ಗೃಹಜ್ಯೋತಿ ಯೋಜನೆ ಇಂದು ನಾಡಿನ ಪ್ರತಿ ಮನೆಯನ್ನು ಬೆಳಗುತ್ತಿದೆ. ಈ ಯೋಜನೆಯಡಿ ರಾಜ್ಯದ ಒಟ್ಟು 1.64 ಕೋಟಿ ಕುಟುಂಬಗಳಿಗೆ ಮಾಸಿಕ ಗರಿಷ್ಠ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಈವರೆಗೆ ಯೋಜನೆಗಾಗಿ ₹26,115 ಕೋಟಿ ಅನುದಾನವನ್ನು ವ್ಯಯಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ವಿವಿಧ ಸಚಿವರ ಭೇಟಿ

ಸಚಿವರಾದ ಎಚ್.ಕೆ.ಪಾಟೀಲ, ಜಮೀರ್ ಅಹಮದ್ ಖಾನ್, ಈಶ್ವರ ಖಂಡ್ರೆ, ಎಂ.ಬಿ.ಪಾಟೀಲ, ಸಂತೋಷ್ ಲಾಡ್, ಶಿವರಾಜ ತಂಗಡಗಿ ಸೇರಿದಂತೆ ಹಲವು ಸಚಿವರು, ಶಾಸಕರು ಭೇಟಿ ನೀಡಿ, ಸಿದ್ದರಾಮಯ್ಯ ಅವರ ಜತೆ ಮಾತನಾಡಿದರು. ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಭೇಟಿ ನೀಡಿದರು.

'ರಾಜೀನಾಮೆ ನೀಡಲು ಆತುರ ಮಾಡಬಾರದು, ಸಮಯ ತೆಗೆದುಕೊಂಡು ನಿಧಾನವಾಗಿ ತೀರ್ಮಾನ ಮಾಡಬೇಕು' ಎಂದು ಹಲವು ಸಚಿವರು, ಶಾಸಕರು ಧೈರ್ಯ ತುಂಬಿದರು. ಆದರೆ, ಅವರ ಮಾತುಗಳಿಗೆ ಯಾವುದೇ ಪ್ರತಿಕ್ರಿಯೆ ನೀಡದ ಸಿದ್ದರಾಮಯ್ಯ ಇಡೀ ದಿನ ಮೌನಕ್ಕೆ ಶರಣಾಗಿದ್ದರು. 'ರಾಜೀನಾಮೆ ನೀಡದಂತೆ ಸೂಚಿಸಬೇಕು. ಸಿದ್ದರಾಮಯ್ಯ ಅವರನ್ನೇ ಮುಂದುವರಿಸಬೇಕು' ಎಂದು ಹೈಕಮಾಂಡ್ ಒತ್ತಾಯಿಸಲು ಕೆಲ ಸಚಿವರು, ಶಾಸಕರು ಸಹಿ ಸಂಗ್ರಹಿಸಿದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ ಜಾತಿಗಣತಿ ವರದಿಯನ್ನು ಸ್ವೀಕರಿಸಲು ಸಿದ್ಧರಾಮಯ್ಯ ವಿಧಾನಸೌಧಕ್ಕೆ ಆಗಮಿಸಿದಾಗ ಸಚಿವರಾದ ಸತೀಶ ಜಾರಕಿಹೊಳಿ, ಎಚ್.ಸಿ.ಮಹದೇವಪ್ಪ, ಎನ್.ಚಲುವರಾಯಸ್ವಾಮಿ, ಶಿವರಾಜ ತಂಗಡಗಿ ಜತೆಗಿದ್ದರು. ವಾಪಸ್ ಹೊರಡುವಾಗ ವಿಧಾನಸೌಧದ ಹೊರಗೆ ಜಮಾಯಿಸಿದ್ದ ವಿವಿಧ ಸಂಘಟನೆಗಳ ಕಾರ್ಯಕರ್ತರು, ಅಭಿಮಾನಿಗಳು ಸಿದ್ದರಾಮಯ್ಯ ಪರ ಘೋಷಣೆ ಕೂಗಿದರು. ರಾಜೀನಾಮೆ ನೀಡಬಾರದು ಎಂದು ಮತ್ತೆ ಆಗ್ರಹಿಸಿದರು. ಮುಖ್ಯಮಂತ್ರಿ ಸಚಿವಾಲಯದ ಸಿಬ್ಬಂದಿ ಕಣ್ಣುಗಳು ಒದ್ದೆಯಾದವು. ಇಷ್ಟೆಲ್ಲ ಬೆಳವಣಿಗೆ ನಡೆದರೂ ಸಿದ್ದರಾಮಯ್ಯ ಅವರದು ಮೌನವೇ ಉತ್ತರವಾಗಿತ್ತು.

ಕಚೇರಿಗಳಲ್ಲೂ ನೀರವ ಮೌನ

ವಿಧಾನಸೌಧದಲ್ಲಿ ಸಂಜೆಯವರೆಗೂ ನೀರವಮೌನ ಆವರಿಸಿತ್ತು. ಬಹುತೇಕ ಸಚಿವರು ತಮ್ಮ ಕಚೇರಿಗಳತ್ತ ಸುಳಿಯಲಿಲ್ಲ. ಅವರ ಆಪ್ತಸಹಾಯಕರ ಕಚೇರಿಗಳೂ ಬಣಗುಡುತ್ತಿದ್ದವು.

ವರ್ಗಾವಣೆಯ ಸಮಯವಾದ ಕಾರಣ ಕೆಲ ಸಚಿವರ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮನೆಗಳಲ್ಲೇ ಕುಳಿತು ವರ್ಗಾವಣೆ ಪಟ್ಟಿ ಅಂತಿಮಗೊಳಿಸಲು ಕಸರತ್ತು ನಡೆಸಿದರು. ವರ್ಗಾವಣೆ ವಿಚಾರವಾಗಿ ವಿಧಾನಸೌಧ, ವಿಕಾಸಸೌಧಕ್ಕೆ ಶಿಫಾರಸು ಪತ್ರಗಳೊಂದಿಗೆ ಬಂದಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿ ಕೆಲಸವಾಗದೆ ನಿರಾಸೆಯಿಂದ ಹಿಂದಿರುಗುತ್ತಿದ್ದ ದೃಶ್ಯ ಕಂಡುಬಂತು.

ಮೌನಕ್ಕೆ ಶರಣಾದ ಸಿದ್ದರಾಮಯ್ಯ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಚಿವರು, ಶಾಸಕರು ಬುಧವಾರ ಬೆಳಗ್ಗಿನಿಂದಲೇ ಭೇಟಿ ಮಾಡಿ ಮಾತುಕತೆ ನಡೆಸಿದರು. ಆದರೆ, ಸಿದ್ದರಾಮಯ್ಯ ಮೌನಕ್ಕೆ ಶರಣಾಗಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಎಚ್.ಕೆ. ಪಾಟಿಲ, 'ಮಾಧ್ಯಮಗಳಲ್ಲಿ ಬಂದ ಸುದ್ದಿ ಕಾರಣಕ್ಕೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದೇವೆ. ಸಹಜವಾಗಿಯೇ ನಮಗೂ ಒಂದು ರೀತಿಯ ಕಳವಳ ಇತ್ತು. ಆ ಬಗ್ಗೆ ಮಾತನಾಡಲು ಹೋಗಿದ್ದೆವು. ನಮ್ಮ ಕಳವಳ, ಮನವಿಯನ್ನು ಅವರಿಗೆ ತಿಳಿಸಿದ್ದೇವೆ. ಆದರೆ, ಅವರು ಮಾತ್ರ ಏನೂ ಮಾತನಾಡಿಲ್ಲ, ಮೌನವಾಗಿದ್ದರು' ಎಂದರು.

'ರಾಜೀನಾಮೆ ನೀಡದಂತೆ ಅವರಿಗೆ (ಸಿದ್ದರಾಮಯ್ಯ) ಮನವಿ ಮಾಡಿದ್ದೇವೆ. ಆದರೆ, ಮಾತು ಕೊಟ್ಟಿದ್ದೇನೆ ಎಂದು ಅವರು ಹೇಳಿದ್ದಾರೆ' ಎಂದು ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು. 'ಶಾಸಕಾಂಗ ಪಕ್ಷದ ಸಭೆ ಕರೆದು ನಾಯಕತ್ವ ಬದಲಾವಣೆ ಮಾಡಬೇಕಿತ್ತು. ಅಲ್ಲಿ ನಾಯಕನ ಬಲಾಬಲ ನಿರ್ಧಾರವಾಗಬೇಕಿತ್ತು. ಆದರೆ, ನೇರವಾಗಿ ರಾಜೀನಾಮೆಗೆ ಸೂಚಿಸಿರುವುದು ಸರಿಯಲ್ಲ. ಏಕಾಏಕಿ ಬದಲಾವಣೆ ಮಾಡುವುದರಿಂದ ಏನು ಸಂದೇಶ ಕೊಟ್ಟಂತಾಗಲಿದೆ' ಎಂದು ಹೈಕಮಾಂಡ್ ನಡೆ ಬಗ್ಗೆ ಪ್ರಸ್ತಾಪಿಸಿದರು.

'ಆತ್ಮಸಾಕ್ಷಿಯಿಂದ ನಾಯಕತ್ವ ಬದಲಾವಣೆ ಆಗಬೇಕಿತ್ತು. ಸಿದ್ದರಾಮಯ್ಯ ಅವರೇ ಮುಂದೆ ನಿಂತು, ಅಧಿಕಾರ ಹಸ್ತಾಂತರ ಆಗುವಂತೆ ನೋಡಿಕೊಳ್ಳಬೇಕಿತ್ತು. ಪೂರ್ಣ ಮನಸ್ಸಿನಿಂದಲೇ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಡಬೇಕಿತ್ತು' ಎಂದು ದೇಶಪಾಂಡೆ ಹೇಳಿದರೂ ಸಿದ್ದರಾಮಯ್ಯ ಮೌನವಾಗಿದ್ದರು.

ಸಚಿವ ಕೆ.ಎಚ್. ಮುನಿಯಪ್ಪ, 'ಸಿದ್ದರಾಮಯ್ಯ ರಾಜೀನಾಮೆ ಕುರಿತು ಏನೂ ಗೊತ್ತಿಲ್ಲ. ಉಪಾಹಾರ ಕೂಟದ ಸಂದರ್ಭದಲ್ಲಿ ಎಲ್ಲ ವಿಷಯಗಳ ಬಗ್ಗೆ ಅವರ ಜೊತೆ ಚರ್ಚೆ ಮಾಡುತ್ತೇನೆ. ಸಿದ್ದರಾಮಯ್ಯ ಪಕ್ಷದ ಶಿಸ್ತಿನ ಸಿಪಾಯಿ. ದಲಿತ ಮುಖ್ಯಮಂತ್ರಿ ವಿಚಾರದಲ್ಲಿ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ' ಎಂದರು.

ಡಿಕೆಶಿ ತವರಿನಲ್ಲಿ ಸಂಭ್ರಮ

ರಾಮನಗರ: ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಹೈಕಮಾಂಡ್ ಹಸಿರು ನಿಶಾನೆ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತವರು ಜಿಲ್ಲೆಯಲ್ಲಿ ಸಂಭ್ರಮ ಮುಗಿಲು ಮುಟ್ಟಿದೆ.

ಡಿ.ಕೆ.ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಎಂದು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಬುಧವಾರ ಇಲ್ಲಿನ ಐಜೂರು ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸಿದರು.

ಪಕ್ಷದ ಯುವ ಘಟಕದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು 'ಡಿ.ಕೆ... ಡಿ.ಕೆ...' ಎಂದು ಘೋಷಣೆ ಕೂಗಿ ಕುಣಿದು ಕುಪ್ಪಳಿಸಿದರು. ಪಟಾಕಿ ಸಿಡಿಸಿ ಸಂಭ್ರಮಿಸಿದರು.

ರಾಜ್ಯದಲ್ಲಿ ಪಕ್ಷಕ್ಕಾಗಿ ಅವಿರತವಾಗಿ ದುಡಿದು ಅಧಿಕಾರಕ್ಕೆ ತಂದಿರುವ ಜನ ನಾಯಕ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂಬ ಪ್ರಾರ್ಥನೆ ಕಡೆಗೂ ಫಲಿಸಿದೆ ಎಂದು ಯುವ ಘಟಕದ ಜಿಲ್ಲಾಧ್ಯಕ್ಷ ಸಿ.ವಿ. ಚಂದ್ರಸಾಗರ್ ಹರ್ಷ ವ್ಯಕ್ತಪಡಿಸಿದರು.

ದೆಹಲಿ ಪ್ರವಾಸದಿಂದ ಮರಳಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಸದಾಶಿವನಗರದಲ್ಲಿರುವ ತಮ್ಮ ನಿವಾಸಕ್ಕೆ ಆಗಮಿಸಿದರು

ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲಿ ಎಂದು ಎಷ್ಟೋ ಮಂದಿ ಹರಕೆ ಹೊತ್ತಿದ್ದರು. ಅದು ಸಾಕಾರವಾಗುವ ದಿನ ಬಂದಿದೆ. ನಮ್ಮ ನಾಯಕ ಸಿ.ಎಂ ಆಗಿ ಪ್ರಮಾಣವಚನ ಸ್ವೀಕರಿಸುವುದನ್ನು ಕಣ್ತುಂಬಿಕೊಳ್ಳಲು ಕಾತರದಿಂದ ಕಾಯುತ್ತಿದ್ದೇವೆ' ಎಂದರು.

'ಕೈ'ನಲ್ಲಿ ನಾಯಕತ್ವ ಗೊಂದಲ: ಅವಧಿಗೆ ಮುನ್ನ ಚುನಾವಣೆ

ಶಿವಮೊಗ್ಗ: 'ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಬದಲಾವಣೆ ನಂತರವೂ ಕಾಂಗ್ರೆಸ್‌ನಲ್ಲಿ ನಾಯಕತ್ವದ ಗೊಂದಲ ಮುಂದುವರಿಯಲಿದೆ. ಯಾರೇ ಮುಖ್ಯಮಂತ್ರಿ ಆದರೂ ಅದು ತಾತ್ಕಾಲಿಕ. ಹೀಗಾಗಿ ಅವಧಿಗೆ ಮುನ್ನವೇ ರಾಜ್ಯದಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಲಿದೆ' ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರದ ವೈಫಲ್ಯ ಆ ಪಕ್ಷದ ಹೈಕಮಾಂಡ್ ಗಮನಕ್ಕೆ ಬಂದಿದ್ದು, ವರಿಷ್ಠರು ಮುಖ್ಯಮಂತ್ರಿ ಅವರನ್ನು ಬದಲಾಯಿಸುವ ನಿರ್ಧಾರವನ್ನು ಕೈಗೊಂಡಿದ್ದಾರೆ' ಎಂದರು.

'ಮುಂದೆ ಯಾರು ಮುಖ್ಯಮಂತ್ರಿ ಎಂಬುದು ಮುಖ್ಯವಲ್ಲ. ಸಿದ್ದರಾಮಯ್ಯ ₹10 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ. ಅದನ್ನು ಮತ್ತೆ ಹಳಿಗೆ ತರುವ ಬಹುದೊಡ್ಡ ಸವಾಲು ಮುಂದಿನವರಿಗೆ ಎದುರಾಗಲಿದೆ' ಎಂದರು.

'ಸರ್ಕಾರ ವಿಪರೀತ ಭ್ರಷ್ಟಾಚಾರದಲ್ಲಿ ಮುಳುಗಿದೆ. ಹೀಗಾಗಿ ಉಪ ಚುನಾವಣೆಯಲ್ಲಿ ಗೆದ್ದರೂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಾದ ಅನಿವಾರ್ಯತೆ ಇದೆ' ಎಂದರು.

'ಕುರ್ಚಿ ಯಾರಿಗೆ ಎನ್ನುವ ಒಂದೇ ಪ್ರಶ್ನೆ ಸರ್ಕಾರವನ್ನು ನುಂಗಿಬಿಟ್ಟಿದೆ'

ಸರ್ಕಾರವೇ ಬದಲಾಗಬೇಕು: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕಕ್ಕೆ ಇಂದು ಬೇಕಿರುವುದು ಕೇವಲ ಮುಖ್ಯಮಂತ್ರಿ ಬದಲಾವಣೆ ಅಲ್ಲ. ಜನ ವಿರೋಧಿ ಕಾಂಗ್ರೆಸ್ ಸರ್ಕಾರದ ಸಂಪೂರ್ಣ ಬದಲಾವಣೆ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'2023 ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ರಾಜ್ಯದಲ್ಲಿ ಆಡಳಿತ ಎನ್ನುವುದು ಸಂಪೂರ್ಣ ಮರೀಚಿಕೆಯಾಗಿದೆ. ಅಭಿವೃದ್ಧಿ, ಜನರ ಸಮಸ್ಯೆ, ರೈತರ ಸಂಕಷ್ಟ, ಯುವಕರ ಭವಿಷ್ಯ ಇವೆಲ್ಲವೂ ಗೌಣವಾಗಿದೆ. ಕುರ್ಚಿ ಯಾರಿಗೆ ಎನ್ನುವ ಒಂದೇ ಪ್ರಶ್ನೆ ಸರ್ಕಾರವನ್ನು ನುಂಗಿಬಿಟ್ಟಿದೆ' ಎಂದು ತಿಳಿಸಿದ್ದಾರೆ.

'ಅಧಿಕಾರ ಹಂಚಿಕೆ ಎಂಬ ಪ್ರಹಸನ ಈಗ ಬೀದಿ ನಾಟಕದ ಮಟ್ಟಕ್ಕೆ ಇಳಿದಿದೆ. ಎಗ್ಗಿಲ್ಲದೆ ನಡೆಯುತ್ತಿರುವ ಕುರ್ಚಿ ಕದನ ಇಡೀ ಕರ್ನಾಟಕದ ಮಾನವನ್ನು ದೇಶದ ಮುಂದೆ ಹರಾಜು ಹಾಕುತ್ತಿದೆ. ಪ್ರಜಾಸೌಧದಲ್ಲಿ ಆಡಳಿತ ಚರ್ಚೆ ಇಲ್ಲ. ಬರಿ ಅಧಿಕಾರದ ಲೆಕ್ಕಾಚಾರ ಮಾತ್ರ ಎನ್ನುವಂತಾಗಿದೆ' ಎಂದಿದ್ದಾರೆ.

'ಕನ್ನಡಿಗರು ಅರ್ಥ ಮಾಡಿಕೊಳ್ಳಬೇಕಾದ ಸತ್ಯ ಒಂದೇ. ಸಿದ್ದರಾಮಯ್ಯ ಅವರೇ ಮುಂದುವರೆಯಲಿ, ಡಿ.ಕೆ.ಶಿವಕುಮಾರ್ ಬರಲಿ ಅಥವಾ ಮತ್ತೊಬ್ಬರನ್ನು ಕೂರಿಸಲಿ. ಈ ದಿವಾಳಿ ಕಾಂಗ್ರೆಸ್ ಸರ್ಕಾರದಿಂದ ಕನ್ನಡಿಗರಿಗೆ ನಯಾಪೈಸೆ ಪ್ರಯೋಜನವಿಲ್ಲ' ಎಂದು ಅಶೋಕ ಹೇಳಿದ್ದಾರೆ.

'ಜನರ ಸಹನೆಯನ್ನು ದೌರ್ಬಲ್ಯ ಎಂದು ಕಾಂಗ್ರೆಸ್ ಭಾವಿಸಬಾರದು. ಜನ ಎಲ್ಲವನ್ನೂ ಗಮನಿಸುತ್ತಿದ್ದಾರೆ. ರಾಜ್ಯದ ಅಭಿವೃದ್ಧಿಯನ್ನು ಬಲಿಕೊಟ್ಟು ಒಳಜಗಳದಲ್ಲಿ ಮುಳುಗಿರುವ ಜನ ವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ಕನ್ನಡಿಗರು ತಕ್ಕ ಉತ್ತರ ನೀಡುವ ದಿನ ದೂರವಿಲ್ಲ' ಎಂದು ಅಶೋಕ ಹೇಳಿದ್ದಾರೆ.

ಹಿಂದುಳಿದವರ ಕೆಡಹುವ ರಾಹುಲ್: ಸುನಿಲ್

'ಉಳುವವನೇ ಹೊಲದೊಡೆಯ ಕಾಯ್ದೆ ಜಾರಿ ಸೇರಿ ಅನೇಕ ಸುಧಾರಣೆಗಳನ್ನು ತಂದ ದೇವರಾಜ ಅರಸು ಅವರನ್ನು ಹೀನಾಯವಾಗಿ ಪಟ್ಟದಿಂದ ಇಳಿಸಲಾಗಿತ್ತು. ಇಂದು ಸಿದ್ದರಾಮಯ್ಯ ಅವರನ್ನು ಪದಚ್ಯುತಿಗೊಳಿಸುವ ಮೂಲಕ ಹಿಂದುಳಿದ ವರ್ಗದ ರಾಜಕೀಯ ಉತ್ಕರ್ಷವನ್ನು ಕಾಂಗ್ರೆಸ್ ಸಹಿಸಲ್ಲ ಎಂಬುದನ್ನು ಮತ್ತೆ ದೃಢಪಡಿಸಿದೆ' ಎಂದು ಬಿಜೆಪಿ ಶಾಸಕ ವಿ.ಸುನಿಲ್‌ಕುಮಾರ್ ಹೇಳಿದ್ದಾರೆ.

'ಒಂದೆಡೆ ತಾನು ಹಿಂದುಳಿದ ಸಮುದಾಯದ ಧ್ವನಿ ಆಲಿಸುವುದಕ್ಕೆ ವಿಳಂಬ ಮಾಡಿದೆ. ಜಾತಿ ಗಣತಿ ನಡೆಸಿ ಈ ವರ್ಗಕ್ಕೆ ಸಮುದಾಯಕ್ಕೆ ನ್ಯಾಯ ಕೊಡುತ್ತೇನೆ ಎಂದು ಭಾಷಣ ಮಾಡುವ ರಾಹುಲ್, ಇನ್ನೊಂದೆಡೆ ಒಬಿಸಿ ಸಮುದಾಯದ ರಾಜಕೀಯ ನಾಯಕರನ್ನು ಅಧಿಕಾರದಿಂದ ಕೆಡವುತ್ತಿದ್ದಾರೆ' ಎಂದರು.

ಕಾಂಗ್ರೆಸ್ ಹಿಂದುಳಿದವರ ವಿರೋಧಿ: ಬೊಮ್ಮಾಯಿ

'ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುವ ಮೂಲಕ ಕಾಂಗ್ರೆಸ್ ಪಕ್ಷ ಹಿಂದುಳಿದವರ ವಿರೋಧಿ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಹುಲ್‌ಗಾಂಧಿ ಹಿಂದುಳಿದ ಸಮುದಾಯದ ವಿರೋಧಿ ಎಂಬ ಅವರ ನಿಜ ಬಣ್ಣ ಈಗ ಬಯಲಾಗಿದೆ' ಎಂದರು.

'ಕಾಂಗ್ರೆಸ್ ಆಡಳಿತದಲ್ಲಿರುವ ನಾಲ್ಕು ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಮಾತ್ರ ಹಿಂದುಳಿದ ವರ್ಗಕ್ಕೆ ಸೇರಿದ ಮುಖ್ಯಮಂತ್ರಿ ಇದ್ದಾರೆ. ಇವರನ್ನು ತೆಗೆಯುವುದರಿಂದ ಹಿಂದುಳಿದ ವರ್ಗ ಪ್ರಾತಿನಿಧ್ಯ ಕಳೆದುಕೊಳ್ಳುತ್ತದೆ. ರಾಹುಲ್ ಗಾಂಧಿ ಅವರ ಅಜ್ಜಿ ಇಂದಿರಾಗಾಂಧಿ ಮತ್ತು ಆ ಬಳಿಕ ಅಧಿಕಾರ ಹಿಡಿದ ಕಾಂಗ್ರೆಸ್ ನಾಯಕರು ಹಿಂದುಳಿದ ವರ್ಗಗಳ ವಿರೋಧಿಯಾಗಿದ್ದರು. ಅದೇ ಪರಂಪರೆ ಮುಂದುವರೆದಿದೆ ಅಷ್ಟೇ' ಎಂದು ಹೇಳಿದರು

'ಹಳೇ ಹುಲಿ ಆಟ ಏನೋ ಗೊತ್ತಿಲ್ಲ'

'ಸಿದ್ದರಾಮಯ್ಯ ಹಳೇ ಹುಲಿ. ಯಾವ ರೀತಿ ಆಟ ಆಡುತ್ತಾರೋ ಗೊತ್ತಿಲ್ಲ. ಅವರು ರಾಜೀನಾಮೆ ನೀಡುವವರೆಗೂ ಗ್ಯಾರಂಟಿ ಇಲ್ಲ' ಎಂದು ಕೇಂದ್ರ ಸಚಿವ ಶೋಭಾ ಕರಂದ್ಲಾಜೆ ಹೇಳಿದರು.

'ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳಲು ಯತ್ನಿಸಿದರೆ, ಶಿವಕುಮಾರ್ ಮುಖ್ಯಮಂತ್ರಿ ಆಗಲು ಯತ್ನಿಸುತ್ತಿದ್ದಾರೆ. ಇವರ ಕಿತ್ತಾಟದಲ್ಲಿ ರಾಜ್ಯದ ಜನ ಬಡವರಾಗಿದ್ದಾರೆ' ಎಂದರು.

ಕಾಂಗ್ರೆಸ್‌ನಿಂದ ದಲಿತರ ಮೂಗಿಗೆ ತುಪ್ಪ: ರವಿ

ಚಿಕ್ಕಮಗಳೂರು: ಮೂರು ದಶಕಗಳಿಂದ ದಲಿತರ ಮೂಗಿಗೆ, ಮೊಣಕೈಗೆ ತುಪ್ಪ ಸವರುವ ಕೆಲಸವಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು. 'ದಲಿತರನ್ನು ಸಿ.ಎಂ ಮಾಡಿದ್ದರೆ ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ ಅವರು ಈ ವೇಳೆಗೆ ಮಾಜಿ ಮುಖ್ಯಮಂತ್ರಿ ಆಗಿರಬೇಕಿತ್ತು. ಆದರೆ, ಕಾಂಗ್ರೆಸ್ ಈವರೆಗೆ ಮಾಡಿಲ್ಲ' ಎಂದು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದರು. 'ಸಿದ್ದರಾಮಯ್ಯ ರಾಷ್ಟ್ರ ರಾಜಕಾರಣಕ್ಕೆ ಎಂಬುದು ಊಹಾಪೋಹ ಅಷ್ಟೆ. ಯಾವಾಗ ಬೇಕಿದ್ದರೂ ಬದಲಾವಣೆ ಆಗಬಹುದು. ಸದ್ಯಕ್ಕೆ ಕಾಂಗ್ರೆಸ್ ಜನರ ಅಪೇಕ್ಷೆಗೆ ತಕ್ಕಂತೆ ಕೆಲಸ ಮಾಡಿದೆಯೇ ಎಂಬುದು ಪ್ರಶ್ನೆ' ಎಂದರು.

ಸಿ.ಎಂ ರಾಜೀನಾಮೆ ಇಂದು

ಒಂದನೇ ಪುಟದಿಂದ...

ಸಿದ್ದರಾಮಯ್ಯ ಜೊತೆ ಚರ್ಚೆ ನಡೆಸಿದ ನಂತರ ಸುರ್ಜೇವಾಲಾ ಅವರು ಪರಮೇಶ್ವರ, ಮಹದೇವಪ್ಪ, ಜಮೀರ್ ಅಹಮದ್, ದಿನೇಶ್ ಗುಂಡೂರಾವ್ ಅವರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು.

ಸಚಿವರು, ಶಾಸಕರು 'ಕಾವೇರಿ'ಗೆ ದೌಡು: ಮಂಗಳವಾರ ರಾತ್ರಿ ದೆಹಲಿಯಿಂದ ನೇರವಾಗಿ ಬೆಂಗಳೂರಿಗೆ ವಿಶೇಷ ವಿಮಾನದಲ್ಲಿ ಸಿದ್ದರಾಮಯ್ಯ ಅವರು ಬಂದಿದ್ದರು. ಬುಧವಾರ ಬೆಳಗ್ಗೆಯೇ ಅವರನ್ನು ಭೇಟಿ ಮಾಡಲು ಸಚಿವರು, ಶಾಸಕರು ದೌಡಾಯಿಸಿದರು. ಸಚಿವರಾದ ಎಂ.ಸಿ. ಸುಧಾಕರ್, ಸಂತೋಷ್ ಲಾಡ್, ಎಚ್.ಕೆ. ಪಾಟೀಲ, ಶಾಸಕರಾದ ಯಶವಂತರಾಯಗೌಡ ಪಾಟೀಲ, ಕೆ.ಎಂ. ಶಿವಲಿಂಗೇಗೌಡ, ಕೆ.ವೈ. ನಂಜೇಗೌಡ, ಬಿ. ನಾಗೇಂದ್ರ, ರಾಘವೇಂದ್ರ ಹಿಟ್ನಾಳ್, ಎಚ್.ಸಿ. ಬಾಲಕೃಷ್ಣ, ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ರಾಜೇಂದ್ರ ರಾಜಣ್ಣ, ನಸೀರ್ ಅಹಮದ್, ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಮುಂತಾದವರು ಭೇಟಿ ಮಾಡಿದರು.

ಜವಾಹರಲಾಲ್ ನೆಹರೂ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ವಿಧಾನಸೌಧದ ಮುಂಭಾಗದಲ್ಲಿರುವ ನೆಹರು ಪ್ರತಿಮೆಗೆ ಬೆಳಿಗ್ಗೆ ಸಿದ್ದರಾಮಯ್ಯ ಪುಷ್ಪನಮನ ಸಲ್ಲಿಸಿದರು. ಕೆಪಿಸಿಸಿ ಕಚೇರಿಯಲ್ಲಿ ನಡೆದ ನೆಹರು ಪುಣ್ಯಸ್ಮರಣೆ ಕಾರ್ಯಕ್ರಮಕ್ಕೆ ಗೈರಾದರು.

'ನಾಯಕತ್ವ ಬದಲಾವಣೆ ವದಂತಿ'

'ನಾಯಕತ್ವ ಬದಲಾವಣೆ ಎಂಬುದು ಕೇವಲ ವದಂತಿ. ದೆಹಲಿ ಸಭೆಯಲ್ಲಿ ರಾಜ್ಯಸಭೆ, ವಿಧಾನಪರಿಷತ್ ಚುನಾವಣೆ ಕುರಿತಂತೆ ಚರ್ಚೆಯಾಗಿದೆ. ಅದನ್ನು ಬಿಟ್ಟು ಬೇರೆ ವಿಚಾರ ಚರ್ಚಿಸಿಲ್ಲ. ಈ ಕುರಿತು ವೇಣುಗೋಪಾಲ್ ಕೂಡ ಹೇಳಿಕೆ ನೀಡಿದ್ದಾರೆ. ವದಂತಿ ಹರಡಬೇಡಿ' ಎಂದು ಕಾಂಗ್ರೆಸ್ ಉಸ್ತವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು. 'ಸದ್ಯಕ್ಕೆ ನಾಯಕತ್ವ ಬದಲಾವಣೆ ವಿಷಯ ನಮ್ಮ ಮುಂದಿಲ್ಲ. ಹಾಗೇನಾದರೂ ಇದ್ದರೆ ನಿಮ್ಮ (ಮಾಧ್ಯಮ) ಮುಂದೆ ನಾವೇ ಹೇಳುತ್ತೇವೆ. ಶಾಸಕಾಂಗ ಪಕ್ಷದ ಸಭೆಯನ್ನೂ ನಾವು ಕರೆದಿಲ್ಲ. ಉಳಿದಂತೆ ಏನೇ ನಿರ್ಧಾರವಾದರೂ ಮಾಧ್ಯಮಗಳಿಗೆ ತಿಳಿಸುತ್ತೇವೆ' ಎಂದರು.

'ರಾಜೀನಾಮೆ ಪ್ರಶ್ನೆಯೇ ಉದ್ಭವ ಆಗಿಲ್ಲ'

'ಸಿದ್ದರಾಮಯ್ಯ ರಾಜೀನಾಮೆಯ ಪ್ರಶ್ನೆಯೇ ಉದ್ಭವ ಆಗಿಲ್ಲ' ಎಂದು ಎಂ.ಬಿ. ಪಾಟೀಲ ಹೇಳಿದರೆ, 'ಅಂತಹ ಯಾವುದೇ ಬೆಳವಣಿಗೆಯೂ ನಡೆದಿಲ್ಲ' ಎಂದು ಪರಮೇಶ್ವರ ಪ್ರತಿಕ್ರಿಯಿಸಿದರು.

'ದೆಹಲಿಯಲ್ಲಿ ನಡೆದ ಸಭೆಯ ಬಗ್ಗೆ ಹೈಕಮಾಂಡ್ ನಾಯಕರಾದ ಕೆ.ಸಿ. ವೇಣುಗೋಪಾಲ, ರಣದೀಪ್ ಸಿಂಗ್ ಸುರ್ಜೇವಾಲಾ, ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ಹೇಳಿಕೆ ನೀಡಿದ್ದಾರೆ. ರಾಜ್ಯಸಭೆ ಚುನಾವಣೆ ಬಗ್ಗೆ ಚರ್ಚಿಸಲು ನಮ್ಮನ್ನು ಕರೆಯಲಾಗಿದೆ. ಬೇರೆ ಯಾವುದೇ ವಿಚಾರ ಚರ್ಚೆ ಆಗಿಲ್ಲ ಎಂದಿದ್ದಾರೆ' ಎಂದು ಅವರು ಹೇಳಿದರು.

'ಬೊಕ್ಕಸ ಬರಿದಾಗುವ ಯೋಜನೆ ಬಗ್ಗೆ ಗಟ್ಟಿ ನಿಲುವು ತಾಳಲಿ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಡಿ.ಕೆ.ಶಿವಕುಮಾರ್ ಅವರಿಗೆ ತಡವಾಗಿ ಆದರೂ ಮುಖ್ಯಮಂತ್ರಿ ಆಗುವ ಅವಕಾಶ ಬಂದಿದೆ. ಪ್ರಯೋಜನ ಇಲ್ಲದ ಯೋಜನೆಗಳಿಂದ ಸರ್ಕಾರದ ಬೊಕ್ಕಸ ಬರಿದಾಗುತ್ತಿದೆ. ಈ ಬಗ್ಗೆ ಗಟ್ಟಿ ನಿಲುವು ತೆಗೆದುಕೊಳ್ಳುವ ಆತ್ಮಬಲ ಅವರಿಗೆ ಬರಲಿ' ಎಂದು ಬಾಳೆಹೊನ್ನೂರು ರಂಭಾಪುರಿ ಮಠದ ವೀರಸೋಮೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು. 'ರಾಜ್ಯದ ಅಭಿವೃದ್ಧಿ ಬಗ್ಗೆ ಬಹಳಷ್ಟು ಅಪೇಕ್ಷೆ ಇದೆ. ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಬೇಕು. ಇದಕ್ಕೆ ಬೇಕಿರುವ ಶಕ್ತಿ ಅವರಿಗೆ ದೊರಕಲಿ' ಎಂದು ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, '2023ರಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿತು. ಈಗ ಮೂರು ವರ್ಷ ದಾಟಿದೆ. ಗಂಗಾಧರ ಅಜ್ಜಯ್ಯನ ಮೇಲೆ ನಂಬಿಕೆ ಇಟ್ಟು ಡಿ.ಕೆ.ಶಿವಕುಮಾರ್ ತಾಳ್ಮೆಯಿಂದ ಕಾದಿದ್ದರು. ಕೊನೆಗೂ ಪ್ರತಿಫಲ ಸಿಕ್ಕಿದೆ.



ವೀರಸೋಮೇಶ್ವರ ಸ್ವಾಮೀಜಿ

ಸಿದ್ದರಾಮಯ್ಯ ಸ್ಥಾನ ಬಿಡುವ ಮುತ್ಸದ್ದಿತನ ಮೆರೆದಿದ್ದಾರೆ. ಅದನ್ನು ಮೆಚ್ಚಬೇಕು' ಎಂದು ಹೇಳಿದರು.

'ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುವ ಪ್ರಸಂಗವು ಪರಮಾತ್ಮನ ಕೊಡುಗೆ, ವೀರ ಗಂಗಾಧರ ಗುರುಗಳ ಆಶೀರ್ವಾದ ಕಾರಣ. ಅಧಿಕಾರವನ್ನು ಡಿ.ಕೆ. ಶಿವಕುಮಾರ್ ಅವರು ಒಳ್ಳೆಯ ರೀತಿಯಲ್ಲಿ ನಡೆಸಲಿ' ಎಂದು ಆಶಿಸಿದರು.

ಎಸ್‌ಐಆರ್: ಶೇ 89ರಷ್ಟು ಮ್ಯಾಪಿಂಗ್

ಗಣತಿ ನಮೂನೆ ಸಲ್ಲಿಕೆ ಅವಧಿಯಲ್ಲೂ ಮ್ಯಾಪಿಂಗ್; ಶೇ 100ರಷ್ಟು ಪ್ರಗತಿ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಪೂರ್ವ ತಯಾರಿಯ ಭಾಗವಾಗಿ ರಾಜ್ಯದ 5.55 ಕೋಟಿ ಮತದಾರರ ಪೈಕಿ, 4.93 ಕೋಟಿ ಮಂದಿಯ ವಿವರಗಳ ಮ್ಯಾಪಿಂಗ್ ಪೂರ್ಣಗೊಂಡಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ತಿಳಿಸಿದರು.

ವಿ.ಅನ್ಬು ಕುಮಾರ್

ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಎಸ್‌ಐಆರ್ ಪ್ರಕ್ರಿಯೆ ಕುರಿತು ಪತ್ರಕರ್ತರಿಗೆ ಬುಧವಾರ ಕಾರ್ಯಾಗಾರ ಆಯೋಜಿಸಿತ್ತು. ಎಸ್‌ಐಆರ್ ಪೂರ್ವ ತಯಾರಿ ಮ್ಯಾಪಿಂಗ್ ಪ್ರಕ್ರಿಯೆಯನ್ನು ಅವರು ವಿವರಿಸಿದರು.

'ರಾಜ್ಯದ ಒಟ್ಟು ಮತದಾರರ ಪೈಕಿ, ಬುಧವಾರ (ಮೇ 27) ಬೆಳಿಗ್ಗೆ ವೇಳೆಗೆ ಶೇ 88.8ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಂಡಿದೆ. ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಿ ಗಣತಿ ನಮೂನೆ ಸಲ್ಲಿಕೆ ಅವಧಿಯಲ್ಲೂ ಮ್ಯಾಪಿಂಗ್ ನಡೆಯಲಿದ್ದು, ಶೇ 100ರಷ್ಟು ಪ್ರಗತಿ ಸಾಧಿಸುವ ಗುರಿ ಹಾಕಿಕೊಳ್ಳಲಾಗಿದೆ' ಎಂದರು.

1,145 ಮಂದಿಗೆ ತರಬೇತಿ: ಎಸ್‌ಐಆರ್ ಭಾಗವಾಗಿ ಈಗಾಗಲೇ 34 ಹೆಚ್ಚುವರಿ ಜಿಲ್ಲಾಧಿಕಾರಿಗಳು, 224 ಮತದಾರರ ನೋಂದಣಾಧಿಕಾರಿ, 336 ಸಹಾಯಕ ಮತದಾರರ ನೋಂದಣಾಧಿಕಾರಿ, 34 ಚುನಾವಣಾ ತಹಶೀಲ್ದಾರ್, 34 ಜಿಲ್ಲಾ ಮಟ್ಟದ ಮಾಸ್ಟರ್ ತರಬೇತುದಾರರು, 224 ಕ್ಷೇತ್ರಮಟ್ಟದ ಮಾಸ್ಟರ್ ತರಬೇತುದಾರರು, 224 ಆಪರೇಟರ್‌ಗಳು ಸೇರಿ ಒಟ್ಟು 1,145 ಮಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ.

ರಾಜ್ಯದ 59,050 ಮತಗಟ್ಟೆಗಳಿಗೆ ಅಷ್ಟೇ ಸಂಖ್ಯೆಯ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು (ಬಿಎಲ್‌ಒ) ನಿಯೋಜಿಸಲಾಗಿದೆ. ಎಸ್‌ಐಆರ್ ಮ್ಯಾಪಿಂಗ್ ಹಂತದಲ್ಲಿ ಈಗಾಗಲೇ ಅವರಿಗೆ ತರಬೇತಿ ನೀಡಲಾಗಿದೆ. ಈಗ ಮತ್ತೆ ಜೂನ್ ಮೊದಲ ವಾರದಿಂದ ಮತ್ತೆ ತರಬೇತಿ ನೀಡಲಾಗುತ್ತದೆ. ರಾಜಕೀಯ ಪಕ್ಷಗಳ ಮತಗಟ್ಟೆ ಮಟ್ಟದ ಏಜೆಂಟರಿಗೂ ಕಾರ್ಯಾಗಾರ ಏರ್ಪಡಿಸಲಾಗುತ್ತದೆ.

ಬಿಎಲ್‌ಎ ನೇಮಕ ಪ್ರಗತಿ

69,944
ರಾಜಕೀಯ ಪಕ್ಷಗಳಿಂದ ನೇಮಕವಾಗಿರುವ ಒಟ್ಟು ಬಿಎಲ್‌ಎಗಳು

36,213
ಕಾಂಗ್ರೆಸ್‌ನ ಬಿಎಲ್‌ಎಗಳು

31,115
ಬಿಜೆಪಿಯ ಬಿಎಲ್‌ಎಗಳು

2,616
ಜೆಡಿಎಸ್‌ನ ಬಿಎಲ್‌ಎಗಳು

ಶಿಸ್ತು ಕ್ರಮಕ್ಕೂ ಅವಕಾಶ

- ಗಣತಿ ನಮೂನೆಯನ್ನು ವಿತರಿಸಿದ, ಮತದಾರರಿಂದ ಸಂಗ್ರಹಿಸಿದ ಗಣತಿ ನಮೂನೆಗಳನ್ನು ಸಲ್ಲಿಸದ ಬಿಎಲ್‌ಒಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಅವಕಾಶ
- ಒಂದಕ್ಕಿಂತ ಹೆಚ್ಚು ವಿಳಾಸಗಳಲ್ಲಿ ನೋಂದಣಿಗೆ ಯತ್ನಿಸುವ ಮತ್ತು ಒಂದಕ್ಕಿಂತ ಹೆಚ್ಚು ಗಣತಿ ನಮೂನೆಗಳನ್ನು ಸಲ್ಲಿಸುವ ಮತದಾರರ ವಿರುದ್ಧ ಪ್ರಕರಣ ದಾಖಲಿಸಬಹುದು
- ಕರಡು ಮತದಾರರ ಪಟ್ಟಿಗೆ ಆಕ್ಷೇಪ ಸಲ್ಲಿಸುವ ವ್ಯಕ್ತಿ/ರಾಜಕೀಯ ಪಕ್ಷದ ಪ್ರತಿನಿಧಿಯು ನೀಡಿದ ಮಾಹಿತಿ ಸುಳ್ಳು ಎಂದು ಸಾಬೀತಾದರೆ, ಪ್ರಕರಣ ದಾಖಲಿಸಲು ಅವಕಾಶ

ದಲಿತ ಬಾಲಕಿ ಸಾವು: ಸಿಐಡಿ ತನಿಖೆಗೆ

ಬೀದರ್: ಔರಾದ್ ಪಟ್ಟಣದಲ್ಲಿ ಮೇ 8ರಂದು ನಡೆದ ದಲಿತ ಬಾಲಕಿ ಶಂಕಾಸ್ಪದ ಸಾವಿನ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದೆ.

ಘಟನೆ ಸಂಬಂಧ ಔರಾದ್ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಬೀದರ್ ಜಿಲ್ಲಾ ಪೊಲೀಸರು ಸಿಐಡಿಗೆ ವಹಿಸಬೇಕು ಎಂದು ಡಿಜಿಪಿ ಡಾ.ಎಂ.ಎ.ಸಲೀಂ ಅವರು ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದ್ದಾರೆ. ಈ ಕುರಿತ ಪತ್ರ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಮೂಳೆ ಕಸಿ: ಜೀವನಿರೋಧಕ ಲೇಪನ ತಂತ್ರಜ್ಞಾನ

ಸುರತ್ಕಲ್‌ನ ಕರ್ನಾಟಕ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ (ಎನ್‌ಐಟಿಕೆ) ಸಂಶೋಧಕರಿಂದ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್‌ನಲ್ಲಿರುವ ಕರ್ನಾಟಕ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯ (ಎನ್‌ಐಟಿಕೆ) ಸಂಶೋಧಕರು ಮೂಳೆ ಕಸಿಯಲ್ಲಿ ಬಳಸಬಹುದಾದ ಜೀವನಿರೋಧಕ (ಆ್ಯಂಟಿ ಮೈಕ್ರೋಬಿಯಲ್) ಲೇಪನ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾರೆ.

ಇದು, ಸುಧಾರಿತವಾಗಿದ್ದು ಜೈವಿಕವಾಗಿ ಸಕ್ರಿಯವಾದ, ದೀರ್ಘ ಬಾಳಿಕೆ ಬರುವ ಹಾಗೂ ನಿರ್ದಿಷ್ಟ ಭಾಗದ ಅವಶ್ಯಕತೆಗೆ ತಕ್ಕಂತೆ ಮಾರ್ಪಾಡು ಮಾಡಬಹುದಾಗಿದೆ.

'ಸೊಂಟ ಮತ್ತು ಮೊಣಕಾಲುಗಳ ಕೀಲು ಮೂಳೆ ಕಸಿ ಶಸ್ತ್ರಚಿಕಿತ್ಸೆಯ ಫಲಿತಾಂಶ ಸುಧಾರಣೆಗೆ ಇದು ಪ್ರಯೋಜನಕಾರಿ. 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ ಪೇಟೆಂಟ್ ಪಡೆದ ಈ ದೇಸಿ ತಂತ್ರಜ್ಞಾನ ಬಯೋಮೆಡಿಕಲ್ ಎಂಜಿನಿಯರಿಂಗ್‌ನಲ್ಲಿ ಮಹತ್ವದ ಮೈಲುಗಲ್ಲು' ಎಂದು ಸಂಶೋಧಕರು ತಿಳಿಸಿದ್ದಾರೆ.

ಸುಧಾಕರ್ ಸಿ. ಜಂಬಗಿ ಮತ್ತು ದೀಪ್ ಶಂಕರ್

ಮೂಳೆ ಕಸಿ ಮಾಡಿಸಿಕೊಳ್ಳುವ ರೋಗಿಗಳ ಸ್ಥಿತಿ ಸುಧಾರಿಸುವಲ್ಲಿ ಇದೊಂದು ಮಹತ್ವದ ಹೆಜ್ಜೆ. ಎನ್‌ಐಟಿಕೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಸಹಪ್ರಾಧ್ಯಾಪಕ ಸುಧಾಕರ್ ಸಿ. ಜಂಬಗಿ ಮತ್ತು ಸಂಶೋಧನಾ ವಿದ್ಯಾರ್ಥಿ ದೀಪ್ ಶಂಕರ್ ಇದನ್ನು ಅಭಿವೃದ್ಧಿಪಡಿಸಿದ್ದಾರೆ.

'ಮೂಳೆ ಕಸಿ ಬಳಿಕ ಸೋಂಕು ತಗಲುವಿಕೆ, ಜೋಡಿಸಿದ ಕೀಲು ಮೂಳೆಗಳು ಸಡಿಲಗೊಳ್ಳುವುದು ಮುಂತಾದ ಸವಾಲುಗಳನ್ನು ಈ ಹೊಸ ತಂತ್ರಜ್ಞಾನ ಬಗೆಹರಿಸಲಿದೆ. ಈ ಲೇಪನವನ್ನು ಅತ್ಯುತ್ತಮವಾದ ಹೈ ವೆಲಾಸಿಟಿ ಆಕ್ಸಿ-ಫ್ಯುಯೆಲ್ (ಎಚ್‌ವಿಒಎಫ್) ಥರ್ಮಲ್ ಸ್ಪ್ರೇ ಮೂಲಕ ಮೂಳೆ ಕಸಿಗೆ ಬಳಸುವ ಸಾಧನಗಳ ಮೇಲೆ ನೇರವಾಗಿ ಅನ್ವಯಿಸಬಹುದು. ಇದು ಆ ಭಾಗಕ್ಕೆ ನಿರ್ದಿಷ್ಟವಾಗಿ ಜೀವನಿರೋಧಕ ರಕ್ಷಣೆ ಒದಗಿಸುತ್ತದೆ' ಎಂದು ಸಂಶೋಧಕರು ತಿಳಿಸಿದ್ದಾರೆ.

'ಮಾರುಕಟ್ಟೆಯಲ್ಲಿ ಲಭ್ಯವಿರುವ ಸಾಂಪ್ರದಾಯಿಕ ಮೂಳೆ ಕಸಿ ವಿಧಾನಗಳಿಗೆ ಹೋಲಿಸಿದರೆ ಈ ಹೊಸ ತಂತ್ರಜ್ಞಾನವು ಭರವಸೆದಾಯಕ. ವೆಚ್ಚವನ್ನೂ ಇದು ಕಡಿತಗೊಳಿಸಬಲ್ಲುದು. ಸಂಶೋಧನಾ ತಂಡವು ಈ ತಂತ್ರಜ್ಞಾನದ ಕ್ಲಿನಿಕಲ್ ಬಳಕೆ ಮತ್ತು ವಾಣಿಜ್ಯ ಬಳಕೆಯ ಕುರಿತು ಕಾರ್ಯೋನ್ಮುಖವಾಗಿದೆ. ಇದನ್ನು ಮಾರುಕಟ್ಟೆಗೆ ತಲುಪಿಸಲು ಡೀಪ್-ಟೆಕ್ ನವೋದ್ಯಮವನ್ನೂ ಆರಂಭಿಸಲಾಗಿದೆ. ಸ್ಥಳೀಯ ಬಯೋಮೆಡಿಕಲ್ ತಂತ್ರಜ್ಞಾನವನ್ನು ಉತ್ತೇಜಿಸುವುದು ಮತ್ತು ದೇಶದ ಜನರಿಗೆ ಕೈಗೆಟಕುವ ದರಲ್ಲಿ ಸುಧಾರಿತ ಆರೋಗ್ಯ ಪರಿಹಾರೋಪಾಯ ತಲುಪಿಸುವುದು ಮುಖ್ಯ ಉದ್ದೇಶ' ಎಂದು ಎನ್‌ಐಟಿಕೆ ತಿಳಿಸಿದೆ.

ಮಹಿಳೆಗೆ ಎಬೋಲಾ ಸೋಂಕಿಲ್ಲ: ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಗಾಂಡದಿಂದ ಇಲ್ಲಿಗೆ ಬಂದಿದ್ದ 28 ವರ್ಷದ ಮಹಿಳೆ ಎಬೋಲಾ ಸೋಂಕಿತರಾಗಿಲ್ಲ ಎನ್ನುವುದು ಪ್ರಯೋಗಾಲಯದ ಪರೀಕ್ಷಾ ವರದಿಯಿಂದ ದೃಢಪಟ್ಟಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ಇದೇ 23ರಂದು ಉಗಾಂಡದಿಂದ ಬೆಂಗಳೂರಿಗೆ ಬಂದಿದ್ದ ಮಹಿಳೆ, ಇಲ್ಲಿನ ಹೋಟೆಲ್‌ನಲ್ಲಿ ವಾಸವಾಗಿದ್ದರು. ಅವರಿಗೆ ರೋಗ ಲಕ್ಷಣಗಳು ಕಾಣಿಸಿಕೊಂಡಿದ್ದವು. ಪ್ರತ್ಯೇಕ ವಾಸಕ್ಕಾಗಿ ಆಂಬುಲೆನ್ಸ್ ಮೂಲಕ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗೆ (ಎಪಿಡೆಮಿಕ್ ಡಿಸೀಸ್ ಆಸ್ಪತ್ರೆ) ಅವರನ್ನು ಸ್ಥಳಾಂತರ ಮಾಡಲಾಗಿತ್ತು. ಸೋಂಕು ಪತ್ತೆಗೆ ಅವರ ರಕ್ತದ ಮಾದರಿಯನ್ನು ಸಂಗ್ರಹಿಸಿ, ರಾಷ್ಟ್ರೀಯ ವೈರಾಣು ಸಂಸ್ಥೆಯ (ಎನ್‌ಐವಿ) ಬೆಂಗಳೂರು ಘಟಕದ ಮೂಲಕ ಪುಣೆಯ ಎನ್‌ಐವಿಗೆ ಕಳುಹಿಸಲಾಗಿತ್ತು.

ಈ ಬಗ್ಗೆ 'ಎಕ್ಸ್' ಮಾಡಿರುವ ದಿನೇಶ್ ಗುಂಡೂರಾವ್, 'ಎಬೋಲಾ ಶಂಕಿತ ಪ್ರಕರಣದ ಪ್ರಯೋಗಾಲಯದ ಪರೀಕ್ಷಾ ವರದಿ ಬಂದಿದ್ದು, ಮಹಿಳೆ ಎಬೋಲಾ ಸೋಂಕಿತರಾಗಿಲ್ಲ ಎನ್ನುವುದು ಖಚಿತಪಟ್ಟಿದೆ. ಶಂಕೆ ವ್ಯಕ್ತವಾದ ತಕ್ಷಣವೇ ಇಲಾಖೆಯು ಸಾರ್ವಜನಿಕ ಆರೋಗ್ಯ ಮಾರ್ಗಸೂಚಿಗಳ ಅನ್ವಯ ಕಟ್ಟುನಿಟ್ಟಾದ ಮುನ್ನೆಚ್ಚರಿಕೆ ಕ್ರಮಗಳು ಮತ್ತು ವೈದ್ಯಕೀಯ ನಿಯಮಗಳನ್ನು ಪಾಲಿಸಿದೆ' ಎಂದು ಹೇಳಿದ್ದಾರೆ.

'ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷತೆಯೇ ನಮ್ಮ ಸರ್ಕಾರದ ಮೊದಲ ಆದ್ಯತೆಯಾಗಿದೆ. ಯಾರೂ ಆತಂಕಕ್ಕೆ ಒಳಗಾಗಬಾರದು. ನಿಗದಿಪಡಿಸಿದ ಆರೋಗ್ಯ ಮಾರ್ಗಸೂಚಿಗಳನ್ನು ಪಾಲಿಸಬೇಕು' ಎಂದು ಮನವಿ ಮಾಡಿದ್ದಾರೆ.

ಮೇಕೆದಾಟು: ವಿಜಯ್ ಚರ್ಚೆ

ನವದೆಹಲಿ/ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯದ ಪ್ರಮುಖ ವಿಷಯಗಳ ಕುರಿತಂತೆ ಬುಧವಾರ ಚರ್ಚಿಸಿದರು.

ಮೇಕೆದಾಟು ಅಣೆಕಟ್ಟು ನಿರ್ಮಾಣ, ಮೀನುಗಾರರ ಬಂಧನ ಹಾಗೂ ತಮಿಳು ನಾಡಗೀತೆ ಸೇರಿದಂತೆ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಮಾತುಕತೆ ನಡೆಸಿದರು.

ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಶಿಲಾನ್ಯಾಸ ಸಮಾರಂಭವನ್ನು ಕರ್ನಾಟಕ ಸರ್ಕಾರವು ಘೋಷಿಸಿರುವುದಕ್ಕೆ, ಮುಖ್ಯಮಂತ್ರಿ ವಿಜಯ್ ಅವರು ಪ್ರಧಾನಿ ಅವರ ಬಳಿ ತೀವ್ರ ಕಳವಳ ವ್ಯಕ್ತಪಡಿಸಿದರು ಎಂದು ತಮಿಳುನಾಡು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕದ ಈ ಕ್ರಮವು ಕಾವೇರಿ ಜಲವಿವಾದ ನ್ಯಾಯಮಂಡಳಿಯ ಅಂತಿಮ ಆದೇಶ ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪಿಗೆ ಸಂಪೂರ್ಣ ವಿರುದ್ಧವಾಗಿದೆ ಎಂದು ಮುಖ್ಯಮಂತ್ರಿಯು ಪ್ರಧಾನಿಗೆ ತಿಳಿಸಿದ್ದಾರೆ ಎಂದಿದೆ.

ಮುಖ್ಯಮಂತ್ರಿ ವಿಜಯ್, ಪ್ರಧಾನಿ ಮೋದಿ ಚರ್ಚಿಸಿದರು

ಸರ್ಕಾರಿ ಕಾರ್ಯಕ್ರಮಗಳ ಆರಂಭದಲ್ಲೇ ತಮಿಳು ನಾಡಗೀತೆ ಹಾಡಲು ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ಮುಖ್ಯಮಂತ್ರಿಯು ಪ್ರಧಾನಿಯನ್ನು ಕೋರಿದರು.

ಮೀನುಗಾರರು ಹಾಗೂ ಅವರ ದೋಣಿಗಳನ್ನು ತಕ್ಷಣವೇ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಒತ್ತಾಯಿಸಿದರು.

ಲಾರಿಗೆ ಟಾಟಾ ಏಸ್ ಡಿಕ್ಕಿ: ಒಂದೇ ಕುಟುಂಬದ ಐವರು ಸಾವು

ಪ್ರಜಾವಾಣಿ ವಾರ್ತೆ

ಮೊಳಕಾಲ್ಮುರು: ನಿಂತಿದ್ದ ಲಾರಿಗೆ ಟಾಟಾ ಏಸ್ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಗೂಡ್ಸ್ ವಾಹನದಲ್ಲಿದ್ದ ಒಂದೇ ಕುಟುಂಬದ ಐವರು ಮೃತಪಟ್ಟ ಘಟನೆ ತಾಲ್ಲೂಕಿನ ಬೈರಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ನಡೆದಿದೆ.

ವೆಂಕಟೇಶ್ (28), ಶಿವಮ್ಮ (28), ಮೀನಾಕ್ಷಿ (18), ಪೂಜಾ (2) ಪುರುಷೋತ್ತಮ (2) ಮೃತರು. ಇವರು ಬಳ್ಳಾರಿ ತಾಲ್ಲೂಕಿನ ಗುಡಾರ ನಗರ ಗ್ರಾಮದವರು.

ಶಿವಮ್ಮ ಮತ್ತು ಅವರ ಕುಟುಂಬ ವರ್ಗದವರು ಬುಧವಾರ ಬೆಳಿಗ್ಗೆ ದಾವಣಗೆರೆಯಲ್ಲಿ ಪಾತ್ರೆ ವ್ಯಾಪಾರ ಮುಗಿಸಿಕೊಂಡು ವಾಪಸ್ ಬರುವಾಗ ಘಟನೆ ನಡೆದಿದೆ. ಡಿಕ್ಕಿಯ ರಭಸಕ್ಕೆ ಗೂಡ್ಸ್ ವಾಹನವು ನಜ್ಜುಗುಜ್ಜಾಗಿದೆ. ಶಿವಮ್ಮ, ಮೀನಾಕ್ಷಿ, ಪೂಜಾ, ಮತ್ತು ಪುರುಷೋತ್ತಮ ಸ್ಥಳದಲ್ಲಿಯೇ ಮೃತಪಟ್ಟರು. ಗೂಡ್ಸ್ ವಾಹನದ ಚಾಲಕ ವೆಂಕಟೇಶ್ ಗಂಭೀರವಾಗಿ ಗಾಯಗೊಂಡಿದ್ದರು. ಇವರನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿದ್ದಾರೆ.

ಒಬಿಸಿ ಮೀಸಲು ಶೇ 42ಕ್ಕೆ

ಒಂದನೇ ಪುಟದಿಂದ...

ಅದರ ಬೆನ್ನಲ್ಲೇ, ಆಯೋಗವು ತುರ್ತು ಸಭೆ ನಡೆಸಿ ವರದಿಗೆ ಅಂತಿಮ ರೂಪ ನೀಡಿದೆ ಎಂದು ಗೊತ್ತಾಗಿದೆ.

ಪ್ರವರ್ಗ '2 ಎ'ನಲ್ಲಿದ್ದ ಕುರುಬ ಸಮುದಾಯಕ್ಕೆ ಪ್ರತ್ಯೇಕ ಪ್ರವರ್ಗ ಸೃಷ್ಟಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಪ್ರವರ್ಗ-1ರಲ್ಲಿನ ಜಾತಿಗಳನ್ನು ಎರಡು ಪ್ರವರ್ಗ, ಪ್ರವರ್ಗ-2 ಹಾಗೂ ಪ್ರವರ್ಗ-3ಯಲ್ಲಿನ ಜಾತಿಗಳನ್ನು ತಲಾ ಮೂರು ಪ್ರವರ್ಗಗಳಾಗಿ ವಿಂಗಡಿಸಿದೆ. ಸರ್ಕಾರವು ಹಾಲಿ ಮೀಸಲಾತಿ ಪ್ರಮಾಣವನ್ನು ಶೇ 32ಕ್ಕೆ ಸೀಮಿತಗೊಳಿಸುವುದಾದರೆ ಪ್ರವರ್ಗ-1ರ ಎರಡು ಪ್ರವರ್ಗಗಳಿಗೆ ತಲಾ ಶೇ 3, ಪ್ರವರ್ಗ-2ಎಗೆ ಶೇ 8, 2ಬಿಗೆ ಶೇ 4 ಹಾಗೂ 2 ಸಿಗೆ ಶೇ 5ರಷ್ಟು ಮೀಸಲಾತಿ, ಪ್ರವರ್ಗ-3ಎಗೆ ಶೇ 3, 3 ಬಿಗೆ ಶೇ 4 ಹಾಗೂ 3ಸಿಗೆ ಶೇ 2 ಮೀಸಲಾತಿ ನೀಡಲು ಶಿಫಾರಸು ಮಾಡಿದೆ.

ರಾಷ್ಟ್ರೀಯ, ರಾಜ್ಯಗಳ ವಿವಿಧ ಆಯೋಗಗಳು ನಡೆಸಿದ ಅಧ್ಯಯನಗಳು, ಹಿಂದುಳಿದಿರುವಿಕೆ ಐತಿಹಾಸ, ಸಮೀಕ್ಷೆಗೆ ಅನುಸರಿಸಿದ ವಿಧಾನ ಮತ್ತು ದೃಷ್ಟಿಕೋನ, ಹಿಂದುಳಿದಿರುವಿಕೆ ನಿರ್ಧರಿಸುವ ಮಾನದಂಡಗಳು, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಹಿಂದುಳಿದಿರುವಿಕೆಯ ವಿಶ್ಲೇಷಣೆ ಹಾಗೂ ಆಯೋಗದ ಶಿಫಾರಸುಗಳನ್ನು ವರದಿ ಒಳಗೊಂಡಿದೆ.

ಆಯೋಗವು ಸರ್ಕಾರದ ಸೂಚನೆಯಂತೆ 2025ನೇ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 31ರವರೆಗೆ ರಾಜ್ಯದಾದ್ಯಂತ ಸಮೀಕ್ಷೆ ನಡೆಸಿ, ಅಧ್ಯಯನ ವರದಿ ಸಿದ್ಧಪಡಿಸಿತ್ತು. ಆನ್‌ಲೈನ್ ಮೂಲಕ ಸ್ವಯಂ ಘೋಷಣೆಯ ಮಾಹಿತಿಯನ್ನು ಸಲ್ಲಿಸಲು ನವೆಂಬರ್ 30ರವರೆಗೆ ಅವಕಾಶ ಕಲ್ಪಿಸಲಾಗಿತ್ತು. 6.14 ಕೋಟಿ ಜನರಲ್ಲಿ 5.86 ಕೋಟಿ ಜನರು ಭಾಗವಹಿಸಿ, ಮಾಹಿತಿ ನೀಡಿದ್ದರು. ಸಮೀಕ್ಷೆಗೆ ಒಟ್ಟು ₹253 ಕೋಟಿ ವ್ಯಯಿಸಲಾಗಿತ್ತು. ಸಮೀಕ್ಷೆಯಿಂದ ಸಂಗ್ರಹಿಸಲಾದ ಮಾಹಿತಿಯನ್ನು ವಿಶ್ಲೇಷಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ.

ಸಚಿವರಾದ ಶಿವರಾಜ ತಂಗಡಗಿ, ಎಚ್.ಸಿ.ಮಹದೇವಪ್ಪ, ಎಂ.ಸಿ. ಸುಧಾಕರ್, ಸತೀಶ ಜಾರಕಿಹೊಳಿ, ಎನ್.ಚಲುರಾಯಸ್ವಾಮಿ, ಶಾಸಕರಾದ ಕೋನರೆಡ್ಡಿ, ನರೇಂದ್ರಸ್ವಾಮಿ, ಮುಖ್ಯಮಂತ್ರಿ ಕಾನೂನು ಸಲಹೆಗಾರ ಪೊನ್ನಣ್ಣ, ಆಯೋಗದ ಸದಸ್ಯರಾದ ಶಿವಣ್ಣಗೌಡ, ಚಂದ್ರಪ್ಪ ಯಾದವ, ಪ್ರತಿಭಾ ಕುಳಾಯಿ, ಸಿ.ಎಂ. ಕುಂದಗೋಳ, ಜಿ.ಎನ್.ಶ್ರೀಕಂಠಯ್ಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ದಯಾನಂದ್, ಕಾರ್ಯದರ್ಶಿ ಊರ್ಮಿಳಾ, ಆಯೋಗದ ವಿಶೇಷ ಸಲಹೆಗಾರ ಡಿ.ಎನ್.ನಾಯಕ್ ಉಪಸ್ಥಿತರಿದ್ದರು.

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

ALUMINUM WASTE FOR SALE

Sealed Tenders are invited for the disposal of the following Scrapped Aluminum wastes from our Press at Bangalore, Dharwad, Mangalore, Harihara, Mysore, Gulbarga and Hospet.

Details	Location - wise quantity in Kgs available						
	Bangalore	Dharwad	Mangalore	Harihara	Mysore	Kalaburgi	Hospet
Scrapped Aluminum Sheets	6-7 Tons	2-4 Tons	2-3 Tons	2-3 Tons	2 Tons	2-3 Tons	1-2 Tons

For clarification, contact Procurement Head at **babu.v@printersmysore.co.in**, **venu.tl@printersmysore.co.in**, Ph: 25880340 Mob: 9900042650. Sealed Tenders/e-mail may be addressed within 7 days from the date of this advertisement.

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ
Bomgondeshwar Samudaya Bhavan (Gonda Bhavan), Near Gurudwara, Chickpet Road, Bidar-585 401, Ph. No: 08482-229332, Fax: 08482-225262, E-mail: ka.bidar.dudc@gmail.com

ಸಂ: ಜಿನಕೋಬೀ/ಕೆಕೆಆರಡಿಬಿ/ಸಿಆರ್-15/2026-27 ದಿನಾಂಕ: 25-05-2026

ಟೆಂಡರ್ ಪ್ರಕಟಣೆ

1) ಕಾಮಗಾರಿ / ಸರಕು / ಸೇವೆಯ ವಿವರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆಯಡಿ ಬೀದರ ನಗರ ವ್ಯಾಪ್ತಿಯಲ್ಲಿ Construction of CC Road from Appolo Medical near Gurudwara Kamaan to Megure Hospital via Bhalke Hospital in Bidar city (KKRDB Macro for the year 2023-24) ಕಾಮಗಾರಿಯ (DMA/2026-27/RD/WORK_INDENT58582), 2) ಕಾಮಗಾರಿ/ಸರಕು/ ಸೇವೆಯ ಅಂದಾಜು ಮೊತ್ತ KPPP-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ KPPP-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ KPPP-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಭರ್ತಿ ಮಾಡಿ ಸಲ್ಲಿಸಲು ಅಂತಿಮ **ದಿನಾಂಕ 10-06-2026 upto 04.30 PM,** 6) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 11-06-2026 at 05.00 PM**, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಬೀದರ ಇ-ಮೇಲ್: ka.bidar.dudc@gmail.com 08482-229332, 8) ಅಂತರಜಾಲ ತಾಣದ ವಿಳಾಸ https://kppp.karnataka.gov.in

ಸಹಿ/-ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿಕೋಶ, ಬೀದರ.

ವಾ.ಸಾ.ಸಂ.ಇ/ಬೀದರ/40/ಕೆ.ಎಸ್.ಎಂ.ಸಿ.&ಎ/2026-27

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್. ನಂ. 4821/26, 4821/27, ಆರ್.ಎಸ್. ನಂ. 1005, ಸುಭಾಷನಗರ, ಬೆಳಗಾವಿ.
ದೂರವಾಣಿ : 0831 - 2405304, ಇ-ಮೇಲ್ : itstaff_ulb_belgaum@yahoo.com,
ವೆಬ್‌ಸೈಟ್ : www.belgaumcity.mrc.gov.in

ಸಂಖ್ಯೆ : ಮ.ನ.ಬೆ./ಕಂ.ಶಾ./ಜಾಹೀರಾತು/ಇ-ಹರಾಜು/2026-27 ದಿನಾಂಕ : 22-05-2026

ಇ-ಹರಾಜು ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಈ ಕೆಳಗಿನಂತೆ ವಿವರಿಸಲಾದ ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿಯ ಉತ್ತರ ವಲಯದಲ್ಲಿ ಬರುವಂತಹ ವಿವಿಧ ಜಾಹೀರಾತುಗಳ ಪ್ರದರ್ಶನ ಮಾಡುವ ಕುರಿತು ಹರಾಜನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಉತ್ತರ ವಲಯದಲ್ಲಿನ ಮಹಾನಗರ ಪಾಲಿಕೆಯ ಹೋರ್ಡಿಂಗ್ಸ್ - 28, ಎಲ್.ಇ.ಡಿ. ಸ್ಕ್ರೀನ್ - 02, ಬಸ್ ಬ್ಯಾಕ್‌ಡ್ರಾಪ್ - 23, ಗ್ಯಾಂಟ್ರೀಜ - 03, ಕ್ಯಾಂಟಿಲೀವರ್ - 08 ಗಳ ಜಾಹೀರಾತು ಪ್ರದರ್ಶನ ಶುಲ್ಕ ವಸೂಲಾತಿ ಕುರಿತು ಇ-ಹರಾಜು ಮಾಡುವುದು. (Auction for Collection of fees for Hoardings - 28, LED Screen - 02, Bus Backdrop - 23, Gantry - 03 and Cantilever - 08 Advertisement Board in the Belagavi City Corporation North Zone Limit) Auction No. : DMA/2026-27/AUCTION/6805, ಕನಿಷ್ಠ ಹರಾಜು ಮೊತ್ತ : ರೂ. 79,70,649/- (ಜಿ.ಎಸ್.ಟಿ. ಹೊರತುಪಡಿಸಿ), ಇ.ಎಂ.ಡಿ. ಹಣ (ರೂ. ಗಳಲ್ಲಿ) : 1,59,413/-, ನಿರ್ವಹಿಸುವ ಕಾಲಾವಧಿ : 03 ವರ್ಷಗಳು.

1) ಹರಾಜು ಕುರಿತು ವಿವರಣೆಗಾಗಿ ಕೊನೆಯ ದಿನಾಂಕ ಮತ್ತು ವೇಳೆ : 08-06-2026 ರ ಸಂಜೆ 5.00 ಘಂಟೆಯವರೆಗೆ,
2) ಹರಾಜಿನಲ್ಲಿ ಭಾಗವಹಿಸುವ ಕೊನೆಯ ದಿನಾಂಕ ಮತ್ತು ವೇಳೆ : 10-06-2026 ರ ಸಂಜೆ 5.00 ಘಂಟೆಯವರೆಗೆ,
3) ಹರಾಜಿನ ಆರಂಭದ ದಿನಾಂಕ ಮತ್ತು ವೇಳೆ : 15-06-2026 ರ ಬೆಳಿಗ್ಗೆ 11.00 ರಿಂದ 5.00 ಘಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ **ವೆಬ್‌ಸೈಟ್ : https://kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಹರಾಜಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಉಪ ಆಯುಕ್ತರು (ಕಂದಾಯ), ಮಹಾನಗರ ಪಾಲಿಕೆ, ಬೆಳಗಾವಿ.
ಸಹಿ/- ಮುಖ್ಯ ಲೆಕ್ಕಾಧಿಕಾರಿಗಳು, ಮಹಾನಗರ ಪಾಲಿಕೆ, ಬೆಳಗಾವಿ.
ಸಹಿ/- ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/324/ಮಣಿಪಾಲ್/2026-27

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್) : L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು - 560100
ದೂರವಾಣಿ : +91 80 28520261 ಫ್ಯಾಕ್ಸ್ : +91 80 28520362
investors@infosys.com, www.infosys.com

45ನೇ ವಾರ್ಷಿಕ ಸರ್ವಸದಸ್ಯರ ಸಭೆ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸುವ ಬಗ್ಗೆ, ದಾಖಲಾತಿಯ ದಿನಾಂಕ, ಅಂತಿಮ ಲಾಭಾಂಶದ ಮಾಹಿತಿ ಸೂಚನೆ

1. ಇನ್‌ಫೋಸಿಸ್ ಲಿಮಿಟೆಡ್ (ಕಂಪನಿಯ) 45ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಹಾಗೂ ಇತರೆ ದೃಶ್ಯಶ್ರಾವ್ಯ ಮಾಧ್ಯಮಗಳ ಮೂಲಕ ಮಂಗಳವಾರ, ದಿನಾಂಕ ಜೂನ್ 23, 2026 ರಂದು ಸಂಜೆ ಭಾರತೀಯ ಕಾಲಮಾನ 4:00 ಗಂಟೆಗೆ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025, ದಿನಾಂಕ ಸೆಪ್ಟೆಂಬರ್ 22, 2025, ಇತರ ಅನ್ವಯವಾಗುವ ಎಲ್ಲಾ ಕಾನೂನುಗಳು ಹಾಗೂ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಮತ್ತು ಭಾರತೀಯ ಭದ್ರತಾ ಮತ್ತು ವಿನಿಮಯ ಮಂಡಳಿ (SEBI) ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳು (ಇನ್ನು ಮುಂದೆ ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ), ಮತ್ತು ಎಲ್ಲಾ ಇತರ ಅನ್ವಯವಾಗುವ ಕಾನೂನುಗಳ ಅನ್ವಯ ಸಭೆಯ ಸೂಚನೆಯಲ್ಲಿ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸಲಾಗುವುದು.

2. ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಗಳ ವಿದ್ಯುನ್ಮಾನ ಪ್ರತಿಗಳನ್ನು ಮತ್ತು 2025-26ನೇ ಆರ್ಥಿಕ ವರ್ಷದ ಸಂಯೋಜಿತ ವಾರ್ಷಿಕ ವರದಿಯನ್ನು ಕಂಪನಿ ಅಥವಾ ಡೆಪಾಸಿಟರಿ ಪಾರ್ಟಿಸಿಪೆಂಟ್‌ನಲ್ಲಿ ತಮ್ಮ ವಿದ್ಯುನ್ಮಾನ ಅಂಚೆಯನ್ನು (ಇ-ಮೇಲ್) ಯಾರು ನೋಂದಾಯಿಸಿದ್ದಾರೋ ಅಂತಹ ಷೇರುದಾರರ ವಿದ್ಯುನ್ಮಾನ ಅಂಚೆಗೆ ಕಳಿಸಲಾಗುವುದು. ಕಂಪನಿಯ ಷೇರುಗಳನ್ನು ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಅವರ ವಿದ್ಯುನ್ಮಾನ ಅಂಚೆ ಹಾಗೂ ದೂರವಾಣಿ ಸಂಖ್ಯೆಯನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ ಮೂಲಕ ನೋಂದಾಯಿಸಲು ಹಾಗೂ ಭೌತಿಕರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಆ ವಿವರಗಳನ್ನು ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ("ಆರ್‌ಟಿಎ") ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರಿಗೆ ವಿದ್ಯುನ್ಮಾನ ಅಂಚೆ einward.ris@kfintech.com ಮೂಲಕ ತಿಳಿಸಲು ಕೋರಲಾಗಿದೆ. ಕಂಪನಿಯ 45ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಮತ್ತು ಸಂಯೋಜಿತ ವಾರ್ಷಿಕ ವರದಿ 2025-26 ರ ಸೂಚನೆಯನ್ನು ಕಂಪನಿಯ ವೆಬ್‌ಸೈಟ್, www.infosys.com, ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಮತ್ತು NSDL ವೆಬ್‌ಸೈಟ್, https://www.evoting.nsdl.com ನಲ್ಲಿಯೂ ಸಹ ಲಭ್ಯವಾಗುವಂತೆ ಮಾಡಲಾಗುತ್ತದೆ.

3. ಕಂಪನಿ ಅಥವಾ ಡಿಪಾಸಿಟರಿಗಳೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ 2025-26ನೇ ಆರ್ಥಿಕ ವರ್ಷದ ಸಂಯೋಜಿತ ವಾರ್ಷಿಕ ವರದಿಯನ್ನು ಪ್ರವೇಶಿಸಲು ವೆಬ್‌ಲಿಂಕ್ ಒದಗಿಸುವ ಪತ್ರವನ್ನು ಕಳುಹಿಸಲಾಗುವುದು.

4. ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಷೇರುದಾರರಿಗೆ ಸರ್ವಸದಸ್ಯರ ಸಭೆಯ ಸೂಚನೆಯಲ್ಲಿ ತಿಳಿಸಿರುವಂತೆ ಹೇಳಲಾಗುವ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಸದರಿ ಇ-ವೋಟಿಂಗ್ ಮಾಡಲು ಅವಕಾಶವಿರುತ್ತದೆ. ಕಂಪನಿಯ ಷೇರುಗಳನ್ನು ಡಿಮೆಟೀರಿಯಲೈಸ್ಡ್ ಮತ್ತು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರಿಗೆ ಮತ ಚಲಾಯಿಸುವ ವಿಧಾನವನ್ನೂ ಸಹ ಸರ್ವಸದಸ್ಯರ ಸಭೆಯ ಸೂಚನೆಗಳಲ್ಲಿ ಒದಗಿಸಲಾಗಿರುವುದು.

5. ದಿನಾಂಕ ಏಪ್ರಿಲ್ 23, 2026 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯು ಮಾರ್ಚ್ 31, 2026 ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಪ್ರತಿ ಈಕ್ವಿಟಿ ಷೇರಿಗೆ ₹25/- ಅಂತಿಮ ಲಾಭಾಂಶವನ್ನು ಶಿಫಾರಸು ಮಾಡಿದೆ ಎಂಬುದನ್ನು ಷೇರುದಾರರು ಗಮನಿಸಬಹುದು ಹಾಗೂ ಅಂತಿಮ ಲಾಭಾಂಶದ ಉದ್ದೇಶಕ್ಕಾಗಿ ದಾಖಲಾತಿ ದಿನಾಂಕ ಜೂನ್ 10, 2026 ಆಗಿರುತ್ತದೆ. ಬರಲಿರುವ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ಅಂತಿಮ ಲಾಭಾಂಶವು ಒಪ್ಪಿಗೆಯಾದ ನಂತರ ಜೂನ್ 25, 2026 ರಂದು ವಿವಿಧ ಮಾರ್ಗಗಳಲ್ಲಿ ವರ್ಗಾಯಿಸಲಾಗುವುದು. ಲಾಭಾಂಶ ಸ್ವೀಕರಿಸುವುದು ತಡವಾಗುವುದನ್ನು ತಪ್ಪಿಸಲು ಷೇರುದಾರರು, ಲಾಭಾಂಶವನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ತಮ್ಮ ಕೆವೈಸಿಯನ್ನು ತಮ್ಮ ಡಿಪಾಸಿಟರಿಗಳಲ್ಲಿ (ಎಲ್ಲಿ ಷೇರುಗಳನ್ನು ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿದ್ದಾರೋ ಅಲ್ಲಿ) ಮತ್ತು ಕಂಪನಿಯ ಆರ್‌ಟಿಎ ಬಳಿ (ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವವರು) ನೋಂದಾಯಿಸಲು ಕೋರಲಾಗಿದೆ.

6. ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ವಿಳಾಸ ಅಥವಾ ಬ್ಯಾಂಕ್ ಖಾತೆ ವಿವರಗಳಲ್ಲಿನ ಯಾವುದೇ ಬದಲಾವಣೆಯನ್ನು ತಮ್ಮ ಡಿಪೋಸಿಟರಿ ಪಾರ್ಟಿಸಿಪೇನ್ಟ್ (ಡಿಪಿ) ತಿಳಿಸಲು ಕೋರಲಾಗಿದೆ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಪ್ರತ್ಯೇಕವಾಗಿ ಲಾಭಾಂಶ ಪಾವತಿಯನ್ನು ಸುಗಮಗೊಳಿಸಲು ಕಂಪನಿಯ ಆರ್‌ಟಿಎಯೊಂದಿಗೆ ತಮ್ಮ ಕೆವೈಸಿಯನ್ನು ಪೂರ್ಣಗೊಳಿಸುವುದು ಕಡ್ಡಾಯವಾಗಿದೆ ಹಾಗೂ ಲಾಭಾಂಶವನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಪಾವತಿಸಲಾಗುತ್ತದೆ.

7. ತಮ್ಮ ಇಮೇಲ್ ವಿಳಾಸ/ಬ್ಯಾಂಕ್ ಖಾತೆಯ ಆದೇಶವನ್ನು ನೋಂದಾಯಿಸಲು ಬಯಸುವ ಷೇರುದಾರರು ಕೆಳಗಿನ ಸೂಚನೆಗಳನ್ನು ಅನುಸರಿಸಬಹುದು:

ಡಿಮೆಟೀರಿಯಲೈಸ್ಡ್ **ಹೋಲ್ಡಿಂಗ್**	ನಿಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಸಲಹೆ ನೀಡಿದ ಪ್ರಕ್ರಿಯೆಯ ಪ್ರಕಾರ, ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ.
ಭೌತಿಕ ಹಿಡುವಳಿ	einward.ris@kfintech.com ನಲ್ಲಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಕಂಪನಿಯ ರಿಜಿಸ್ಟ್ರಾರ್ ಹಾಗೂ ವರ್ಗಾವಣೆ ಏಜೆಂಟ್ (ಆರ್‌ಟಿಎ) ರೊಂದಿಗೆ ನಿಗದಿತ ನಮೂನೆ ISR-I ಮತ್ತು ಇತರ ಸಂಬಂಧಿತ ನಮೂನೆಗಳಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ. ಷೇರುದಾರರು ನಿಗದಿತ ನಮೂನೆಗಳನ್ನು ಕಂಪನಿಯ ಜಾಲತಾಣದಿಂದ https://www.infosys.com/investors/shareholder-services/investors-service.html ನಲ್ಲಿ ಡೌನ್‌ಲೋಡ್ ಮಾಡಬಹುದು. ಷೇರುದಾರರು ಕಂಪನಿಯ ವೆಬ್‌ಸೈಟ್ https://www.infosys.com/ investors/shareholder-services/faqs.html ನಲ್ಲಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು ("FAQs") ಸಹ ಉಲ್ಲೇಖಿಸಬಹುದು.

8. ಹಣಕಾಸು ಕಾಯಿದೆ 2025 ರಂತೆ ತಿದ್ದುಪಡಿಯಾದ ಆದಾಯ ತೆರಿಗೆ ಕಾಯಿದೆ, (2025ರ ಐಟಿ ಕಾಯಿದೆ) ಅನ್ವಯ ಕಂಪನಿ ನೀಡಿದ ಅಥವಾ ವಿತರಿಸಲಾದ ಲಾಭಾಂಶಕ್ಕೆ ಷೇರುದಾರರು ತೆರಿಗೆ ಪಾವತಿಸಬೇಕಾಗುತ್ತದೆ. ಆದ್ದರಿಂದ ಕಂಪನಿಯು ಅಂತಿಮ ಲಾಭಾಂಶವನ್ನು ಪಾವತಿಸುವಾಗ ಮೂಲದಲ್ಲಿ ತೆರಿಗೆಯನ್ನು ಕಡಿತಗೊಳಿಸಲಾಗುತ್ತದೆ. ಹೀಗೆ ಮೂಲದಲ್ಲಿ ತೆರಿಗೆಯನ್ನು ಹಿಡಿಯುವ ದರವನ್ನು ನಿಷ್ಕರ್ಷಿಸಲು ಅನುವಾಗುವಂತೆ ಕೆಳಗೆ ಸೂಚಿಸಲಾಗಿರುವ ಮೂಲದಾಖಲೆಗಳನ್ನು ಐಟಿ ಕಾಯಿದೆ 2025 ಅನುಸಾರ ಸಲ್ಲಿಸಲು ಕೋರಲಾಗಿದೆ.

ನಿವಾಸಿ ಷೇರುದಾರರಿಗೆ, ಆದಾಯ ತೆರಿಗೆ ಕಾಯಿದೆಯ 2025ರ ಪರಿಚ್ಛೇದ 393ರ ಅನ್ವಯ ಈ ಕೆಳಕಂಡಂತೆ ಕಡಿತಗೊಳಿಸಲಾಗುವುದು.

ಅಧಿಕೃತವಾದ/ಮಾನ್ಯವಾದ ಶಾಶ್ವತ ಖಾತೆ ಸಂಖ್ಯೆ (PAN) ಹೊಂದಿರುವ ಷೇರುದಾರರು	10% ಅಥವಾ ಭಾರತ ಸರ್ಕಾರ (GOI) ಸೂಚಿಸಿದಂತೆ
ಅಧಿಕೃತವಾದ/ಮಾನ್ಯವಾದ ಶಾಶ್ವತ ಖಾತೆ ಸಂಖ್ಯೆ (PAN) ಹೊಂದಿರದ ಷೇರುದಾರರಿಗೆ	20% ಅಥವಾ ಭಾರತ ಸರ್ಕಾರ (GOI) ಸೂಚಿಸಿದಂತೆ

* ಆದಾಯ ತೆರಿಗೆ ಕಾಯಿದೆ 2025 ಪರಿಚ್ಛೇದ 262 ಅನ್ವಯ ಪ್ಯಾನ್ ಸಂಖ್ಯೆ ಹೊಂದಿರುವ ಹಾಗೂ ಆಧಾರ್ ಹೊಂದಲು ಅರ್ಹನಾಗಿರುವ ವ್ಯಕ್ತಿಯು ತನ್ನ ಪ್ಯಾನ್ ಅನ್ನು ಆಧಾರ್‌ನೊಂದಿಗೆ ಲಿಂಕ್ ಮಾಡುವುದು ಕಡ್ಡಾಯವಾಗಿರುತ್ತದೆ. ಹಾಗೆ ಮಾಡದ ಸಂದರ್ಭಗಳಲ್ಲಿ ನೀಡಲಾದ ಪ್ಯಾನ್ ಅನರ್ಹ ಇಲ್ಲವೇ ನಿಷ್ಕ್ರಿಯ ಎಂದಾಗುತ್ತದೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಐಟಿ ಕಾಯ್ದೆ 2025 ರಲ್ಲಿ ಹೇಳಲಾದ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಮತ್ತು ಐಟಿ ಕಾಯ್ದೆ 2025 ರ ಸೆಕ್ಷನ್ 397 ರಲ್ಲಿ ಒದಗಿಸಿದಂತೆ ಹೆಚ್ಚಿನ ದರಗಳಲ್ಲಿ ಅಂದರೆ, ಮೂಲದಲ್ಲಿ 20% ತೆರಿಗೆಯನ್ನು ಕಡಿತಗೊಳಿಸಲಾಗುತ್ತದೆ,

ಆದಾಗ್ಯೂ, 2026-27ರ ತೆರಿಗೆ ವರ್ಷದಲ್ಲಿ ನಿವಾಸಿ ವೈಯಕ್ತಿಕ ಷೇರುದಾರರು ಪಡೆಯಬೇಕಾದ ಒಟ್ಟು ಲಾಭಾಂಶವು ₹10,000 ಮೀರದಿದ್ದರೆ ಮತ್ತು ಸದಸ್ಯರು ಫಾರ್ಮ್ 121 ಅನ್ನು ಒದಗಿಸುವ ಸಂದರ್ಭಗಳಲ್ಲಿ, ಐಟಿ ಕಾಯ್ದೆ 2025 ರಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು, ಅವರಿಗೆ ಪಾವತಿಸಬೇಕಾದ ಲಾಭಾಂಶದ ಮೇಲೆ ಯಾವುದೇ ತೆರಿಗೆಯನ್ನು ಕಡಿತಗೊಳಿಸಲಾಗುವುದಿಲ್ಲ. ನಿವಾಸಿ ಷೇರುದಾರರು ತೆರಿಗೆಯ ಕಡಿಮೆ/ಶೂನ್ಯ ತಡೆಹಿಡಿಯುವಿಕೆಯನ್ನು ಪಡೆಯಲು ಐಟಿ ಕಾಯ್ದೆ 2025 ರ ಅಡಿಯಲ್ಲಿ ಸೂಚಿಸಲಾದ ಯಾವುದೇ ಇತರ ದಾಖಲೆಯನ್ನು ಸಹ ಸಲ್ಲಿಸಬಹುದು. ಫಾರ್ಮ್ 121 ಅಥವಾ ಮೇಲೆ ತಿಳಿಸಿದಂತೆ ಯಾವುದೇ ಇತರ ದಾಖಲೆಯನ್ನು ಒದಗಿಸುವ ಸದಸ್ಯರಿಗೆ ಪ್ಯಾನ್ ಕಡ್ಡಾಯವಾಗಿದೆ.

ಅನಿವಾಸಿ ಷೇರುದಾರರಿಗೆ, ಸೆಕ್ಷನ್ 393ರ ನಿಬಂಧನೆಗಳು ಮತ್ತು 2025 ರ ಐಟಿ ಕಾಯ್ದೆಯ ಇತರ ಅನ್ವಯವಾಗುವ ವಿಭಾಗಗಳ ಪ್ರಕಾರ, ಜಾರಿಯಲ್ಲಿರುವ ದರಗಳಲ್ಲಿ ತೆರಿಗೆಗಳನ್ನು ತಡೆಹಿಡಿಯಬೇಕಾಗುತ್ತದೆ. ತಡೆಹಿಡಿಯುವ ತೆರಿಗೆಯು 20% (ಅನ್ವಯವಾಗುವ ಸರ್‌ಚಾರ್ಜ್ ಮತ್ತು ಸೆಸ್ ಜೊತೆಗೆ) ದರದಲ್ಲಿರುತ್ತದೆ ಅಥವಾ ಪಾವತಿಸಬೇಕಾದ ಲಾಭಾಂಶದ ಮೊತ್ತದ ಮೇಲೆ GOI ಸೂಚಿಸಿದಂತೆ ಇರುತ್ತದೆ. ಆದಾಗ್ಯೂ, 2025 ರ ಐಟಿ ಕಾಯ್ದೆಯ ಸೆಕ್ಷನ್ 159 ರ ಪ್ರಕಾರ, ಅನಿವಾಸಿ ಷೇರುದಾರರು ಭಾರತ ಮತ್ತು ಷೇರುದಾರರ ತೆರಿಗೆ ವಾಸಸ್ಥಳದ ದೇಶದ ನಡುವೆ, ಅವರಿಗೆ ಹೆಚ್ಚು ಪ್ರಯೋಜನಕಾರಿಯಾಗಿದ್ದರೆ, ಡಬಲ್ ಟ್ಯಾಕ್ಸ್ ಅವಾಯ್ಡೆನ್ಸ್ ಅಗ್ರಿಮೆಂಟ್ ("ತೆರಿಗೆ ಒಪ್ಪಂದ" ಅಥವಾ "ಡಿಟಿಎಎ"), ಬಹುಪಕ್ಷೀಯ ಇನ್ಸ್ಟ್ರುಮೆಂಟ್ ("MLI") ಯಾವುದಾದರೂ ಇದ್ದರೆ, ಅದರ ನಿಬಂಧನೆಗಳಿಂದ ನಿಯಂತ್ರಿಸಲ್ಪಡುವ ಆಯ್ಕೆಯನ್ನು ಹೊಂದಿರುತ್ತಾರೆ. ಈ ಉದ್ದೇಶಕ್ಕಾಗಿ, ಅಂದರೆ DTAA ಯೊಂದಿಗೆ ಓದಲಾದ MLI ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು, ಅನಿವಾಸಿ ಷೇರುದಾರರು ಈ ಕೆಳಗಿನವುಗಳನ್ನು ಒದಗಿಸಬೇಕಾಗುತ್ತದೆ:

- ಭಾರತೀಯ ಆದಾಯ ತೆರಿಗೆ ಅಧಿಕಾರಿಗಳು ಹಂಚಿಕೆ ಮಾಡಿದ, ಷೇರುದಾರರು/ ಅಧಿಕೃತ ಸಹಿದಾರರು ಸರಿಯಾಗಿ ದೃಢೀಕರಿಸಿದ ಪ್ಯಾನ್ ಕಾರ್ಡ್‌ನ ಪ್ರತಿ. ಪ್ಯಾನ್ ಲಭ್ಯವಿಲ್ಲದಿದ್ದರೆ, ಆದಾಯ ತೆರಿಗೆ ನಿಯಮಗಳು, 2026 ರ ನಿಯಮ 217 ರ ಉಪ-ನಿಯಮ 2 ರ ಅಡಿಯಲ್ಲಿ ಮಾಹಿತಿ.
- ತೆರಿಗೆ ವಾಸಸ್ಥಳದ ದೇಶದ ಆದಾಯ ಅಥವಾ ತೆರಿಗೆ ಅಧಿಕಾರಿಗಳಿಂದ ಪಡೆದ, ಷೇರುದಾರರು/ ಅಧಿಕೃತ ಸಹಿದಾರರು ಸರಿಯಾಗಿ ದೃಢೀಕರಿಸಿದ 2026-27 ರ ತೆರಿಗೆ ವರ್ಷಕ್ಕೆ ತೆರಿಗೆ ನಿವಾಸ ಪ್ರತಿ.
- ಫಾರ್ಮ್ 41 (ತೆರಿಗೆ ಒಪ್ಪಂದದ ಪ್ರಯೋಜನವನ್ನು ಪಡೆಯಲು) ಅನ್ನು ಆದಾಯ ತೆರಿಗೆ ವೆಬ್‌ಸೈಟ್‌ನ https://www.incometax.gov.in/iec/foportal ನಲ್ಲಿ ಇ-ಫೈಲಿಂಗ್ ಪೋರ್ಟಲ್ ಮೂಲಕ ಎಲೆಕ್ಟ್ರಾನಿಕ್ ಆಗಿ ಪಡೆಯಬಹುದು.
- ಅನ್ವಯವಾಗುವ ತೆರಿಗೆ ಒಪ್ಪಂದ ಮತ್ತು ಐಟಿ ಕಾಯ್ದೆ 2025 ರ ಪ್ರಕಾರ ಭಾರತದಲ್ಲಿ ಯಾವುದೇ ಶಾಶ್ವತ ಸ್ಥಾಪನೆಯನ್ನು ಹೊಂದಿಲ್ಲ ಎಂದು ಷೇರುದಾರರಿಂದ ಸ್ವಯಂ ಘೋಷಣೆ.
- ಅನಿವಾಸಿ ಷೇರುದಾರರಿಂದ ಈಕ್ವಿಟಿ ಷೇರುಗಳ ಪ್ರಯೋಜನಕಾರಿ ಮಾಲೀಕತ್ವದ ಸ್ವಯಂ ಘೋಷಣೆ
- ಬಹುಪಕ್ಷೀಯ ಉಪಕರಣ (MLI) ನೊಂದಿಗೆ ಓದಲಾದ ತೆರಿಗೆ ಒಪ್ಪಂದದ ಪ್ರಯೋಜನವನ್ನು ಪಡೆಯಲು ಅರ್ಹರಾಗಲು ಅನ್ವಯವಾಗುವ ತೆರಿಗೆ ಒಪ್ಪಂದದ ಎಲ್ಲಾ ಷರತ್ತುಗಳನ್ನು ಪೂರೈಸುವ ಸ್ವಯಂ ಘೋಷಣೆ.
- ಅನ್ವಯವಾಗಿದ್ದರೆ, ಐಟಿ ಕಾಯ್ದೆ 2025 ರ ಅಡಿಯಲ್ಲಿ ಸೂಚಿಸಲಾದ ಯಾವುದೇ ಇತರ ದಾಖಲೆಗಳು, ಅಥವಾ ಷೇರುದಾರರಿಂದ ಸರಿಯಾಗಿ ದೃಢೀಕರಿಸಲ್ಪಟ್ಟ ತೆರಿಗೆಗಳ ಕಡಿಮೆ ತಡೆಹಿಡಿಯುವಿಕೆಯ ಪ್ರಮಾಣಪತ್ರ.

ಯಾವುದೇ ಇತರ ಕಾಯ್ದೆ ಅನ್ವಯವಾಗಿದ್ದರೆ ಅಥವಾ ಷೇರುದಾರರಿಂದ ಸರಿಯಾಗಿ ದೃಢೀಕರಿಸಲ್ಪಟ್ಟ ತೆರಿಗೆಗಳ ಕಡಿಮೆ ತಡೆಹಿಡಿಯುವಿಕೆಯ ಪ್ರಮಾಣಪತ್ರ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (FII) / ವಿದೇಶಿ ಪೋರ್ಟ್‌ಫೋಲಿಯೋ ಹೂಡಿಕೆದಾರರು (FPI) ಸಂದರ್ಭದಲ್ಲಿ, ತೆರಿಗೆಯನ್ನು ಐಟಿ ಕಾಯ್ದೆ 2025 ರ ಸೆಕ್ಷನ್ 393 ರ ಅಡಿಯಲ್ಲಿ 20% (ಜೊತೆಗೆ ಅನ್ವಯವಾಗುವ ಸರ್‌ಚಾರ್ಜ್ ಮತ್ತು ಸೆಸ್) ಅಥವಾ ಸಂಬಂಧಿತ DTAA ನಲ್ಲಿ ಒದಗಿಸಲಾದ ದರದಲ್ಲಿ, MLI ಯೊಂದಿಗೆ ಓದಿ, ಯಾವುದು ಹೆಚ್ಚು ಪ್ರಯೋಜನಕಾರಿಯೋ ಅದನ್ನು ಕಡಿತಗೊಳಿಸಲಾಗುತ್ತದೆ, ಅನ್ವಯಿಸಿದರೆ, ಮೇಲಿನ ದಾಖಲೆಗಳ ಸಲ್ಲಿಕೆಗೆ ಒಳಪಟ್ಟಿರುತ್ತದೆ.

ಮೇಲೆ ತಿಳಿಸಲಾದ ದಾಖಲೆಗಳನ್ನು ಜೂನ್ 11, 2026 ರಂದು ಅಥವಾ ಅದಕ್ಕೂ ಮೊದಲು https://www.infosys.com/investors/shareholder-services/dividend-tax.html ನಲ್ಲಿ ಷೇರುದಾರರ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಈ ವಿಷಯದ ಕುರಿತು ಹೆಚ್ಚಿನ ಸೂಚನೆಗಳು ಮತ್ತು ಮಾಹಿತಿಗಾಗಿ ಸದಸ್ಯರು https://www.infosys.com/investors/shareholder-services/dividend-tax.html ಗೆ ಭೇಟಿ ನೀಡಬೇಕೆಂದು ವಿನಂತಿಸಲಾಗಿದೆ. ತೆರಿಗೆ ತಡೆಹಿಡಿಯುವ ವಿಷಯಗಳಿಗೆ ಸಂಬಂಧಿಸಿದಂತೆ ಜೂನ್ 11, 2026 ರ ನಂತರ ಸದಸ್ಯರಿಂದ ಯಾವುದೇ ಸಂವಹನವನ್ನು ಸ್ವೀಕರಿಸಲಾಗುವುದಿಲ್ಲ. ಈ ವಿಷಯದ ಕುರಿತು ಯಾವುದೇ ಸ್ಪಷ್ಟೀಕರಣಗಳಿಗಾಗಿ ಷೇರುದಾರರು dividend.tax@infosys.com ಗೆ ಬರೆಯಬಹುದು.

ಷೇರುದಾರರು ತಮ್ಮ ತೆರಿಗೆ ಕ್ರೆಡಿಟ್ ಅನ್ನು ಫಾರ್ಮ್ 168 (ಹಿಂದಿನ ಫಾರ್ಮ್ 26AS) ನಲ್ಲಿ ಇ-ಫೈಲಿಂಗ್ ಖಾತೆಯಿಂದ ಪರಿಶೀಲಿಸಬಹುದು https://www.incometax.gov.in/iec/foportal.

45ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಅನ್ವಯವಾಗುವ ಕಾನೂನುಗಳಿಗೆ ಅನುಸಾರವಾಗಿ ಷೇರುದಾರರಿಗೆ ಅವರ ನೋಂದಾಯಿತ ಇಮೇಲ್ ಐಡಿಗೆ ಸಕಾಲದಲ್ಲಿ ಕಳುಹಿಸಲಾಗುತ್ತದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/-
ಎ.ಜಿ.ಎಸ್.ಮಣಿಕಂಠ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ ಎ21918

ಬೆಂಗಳೂರು, ಭಾರತ
ಮೇ 27, 2026

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸೋಮಾರಿತನದಿಂದ ಕಾಲ ಕಳೆಯುವುದು ಪ್ರಪಂಚದಲ್ಲೇ ಅಪಮಾನಕರವಾದ ನಡತೆ.

–ಲಿಯೊ ಟಾಲ್‌ಸ್ಟಾಯ್

ಸಂಪಾದಕೀಯ

ಪಿಯು ಕಾಲೇಜುಗಳ ಅಡ್ಡದಾರಿ ಅಂಕುಶದ ಪ್ರಯತ್ನ ಸ್ವಾಗತಾರ್ಹ

ವಿದ್ಯಾರ್ಥಿಗಳು ಮತ್ತು ಕೋಚಿಂಗ್ ಸೆಂಟರ್‌ಗಳ ನಡುವೆ ಮಧ್ಯವರ್ತಿಗಳಂತೆ ಕಾರ್ಯನಿರ್ವಹಿಸುವ ಪಿಯು ಕಾಲೇಜುಗಳ ಮಾನ್ಯತೆ ರದ್ದುಪಡಿಸುವ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ಧಾರ, ವ್ಯವಸ್ಥೆಯಲ್ಲಿನ ಗುರುತರ ಲೋಪವೊಂದನ್ನು ಸರಿಪಡಿಸುವ ನಿಟ್ಟಿನಲ್ಲಿ ಅಗತ್ಯವಾಗಿರುವ ಕ್ರಮವಾಗಿದೆ. ಶಿಕ್ಷಣದ ಹೆಸರಿನಲ್ಲಿ ನಡೆಯುತ್ತಿರುವ ಕೋಚಿಂಗ್ ದಂಧೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ತಡವಾಗಿಯಾದರೂ ಶಿಕ್ಷಣ ಇಲಾಖೆ ಎಚ್ಚೆತ್ತುಕೊಂಡಿದೆ. ಕೋಚಿಂಗ್ ಸೆಂಟರ್‌ಗಳ ಮಧ್ಯವರ್ತಿಗಳ ರೂಪದಲ್ಲಿ ಕಾರ್ಯನಿರ್ವಹಿಸುವ ಕಾಲೇಜುಗಳ ಚಟುವಟಿಕೆಗಳು ಪದವಿಪೂರ್ವ ಶಿಕ್ಷಣ ನಿಯಮಗಳು–2024 ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಉಲ್ಲಂಘನೆಯಾಗುತ್ತವೆ; ತಪ್ಪಿತಸ್ಥ ಸಂಸ್ಥೆಗಳ ಮಾನ್ಯತೆ ರದ್ದುಪಡಿಸಲಾಗುವುದು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಹೇಳಿದ್ದಾರೆ. ನೀಟ್, ಜೆಇಇ, ಸಿಇಟಿಯಂತಹ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ದೊರಕಿಸಿಕೊಡುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಹೆಸರಿನಲ್ಲಿ ಟ್ಯೂಷನ್ ದಂಧೆಯೊಂದು ಚಾಲ್ತಿಯಲ್ಲಿರುವುದು ಗುಟ್ಟೇನಲ್ಲ. ಈ ಅಕ್ರಮ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಕಾಲೇಜುಗಳಿಗೆ ಹೋಗುವ ಬದಲಾಗಿ, ಕೋಚಿಂಗ್ ಸೆಂಟರ್‌ಗಳಲ್ಲೇ ಪೂರ್ಣಾವಧಿ ತರಬೇತಿ ಪಡೆಯುತ್ತಾರೆ. ಆದರೆ, ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶ ಆಗುವಂತೆ, ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದಿರುವ ಪಿಯು ಕಾಲೇಜುಗಳಲ್ಲಿ ನೋಂದಣಿ ಮಾಡಿಕೊಳ್ಳಲು ಕೋಚಿಂಗ್ ಸೆಂಟರ್‌ಗಳು ಅವಕಾಶ ಕಲ್ಪಿಸುತ್ತವೆ. ನೆಪಕ್ಕಷ್ಟೇ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು, ಉಳಿದಂತೆ ಕೋಚಿಂಗ್ ಸೆಂಟರ್‌ಗಳಲ್ಲಿ ಕಲಿಕೆ ಮುಂದುವರಿಸುತ್ತಾರೆ. ಈ ಅಪವಿತ್ರ ಮೈತ್ರಿಯ ದೊಡ್ಡದೊಂದು ದಂಧೆಯೇ ನಡೆಯುತ್ತಿದೆ. ಇಂಥ ಚಟುವಟಿಕೆಯನ್ನು ನಿಯಂತ್ರಿಸಲು ಪದವಿಪೂರ್ವ ಶಿಕ್ಷಣ ಇಲಾಖೆ ಮುಂದಾಗಿರುವುದು, ಶಿಕ್ಷಣದ ಹೆಸರಿನಲ್ಲಿ ನಡೆಯುತ್ತಿರುವ ಅನಾರೋಗ್ಯಕರ ಚಟುವಟಿಕೆಗಳನ್ನು ತಡೆಯುವ ನಿಟ್ಟಿನ ಮಹತ್ವದ ನಡೆಯಾಗಿದೆ.

ಕೋಚಿಂಗ್ ಸೆಂಟರ್‌ಗಳ ವಿದ್ಯಾರ್ಥಿಗಳಿಗೆ ಅಧಿಕೃತ ಪ್ರವೇಶ ಕಲ್ಪಿಸಿ, ಪರೀಕ್ಷೆ ಬರೆಯಲು ಅವಕಾಶ ಒದಗಿಸಿಕೊಡುವ ಕಾಲೇಜುಗಳು ಶಿಕ್ಷಣದ ಮೂಲ ಆಶಯಗಳನ್ನು ಉಲ್ಲಂಘಿಸುತ್ತಿವೆ.

ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಹೆಸರಿನಲ್ಲಿ ಶಿಕ್ಷಣದ ಮೂಲತತ್ತ್ವಗಳನ್ನೇ ಮೂಲೆಗುಂಪು ಮಾಡುವ ಪ್ರಯತ್ನಗಳು ಇತ್ತೀಚಿನ ದಿನಗಳಲ್ಲಿ ತೀವ್ರಗೊಳ್ಳುತ್ತಿವೆ. ವಿದ್ಯಾರ್ಥಿಗಳ ಯಶಸ್ಸಿನಲ್ಲಿ ಕಾಲೇಜುಗಳಿಗಿಂತಲೂ ಕೋಚಿಂಗ್ ಸೆಂಟರ್‌ಗಳಿಗೇ ಹೆಚ್ಚಿನ ಮಹತ್ವವಿದೆ ಎಂದು ಬಿಂಬಿಸಲಾಗುತ್ತಿದೆ. ಪಿಯು ಶಿಕ್ಷಣ ವಿದ್ಯಾರ್ಥಿಜೀವನದಲ್ಲಿ ಅತ್ಯಂತ ಮುಖ್ಯವಾದ ಘಟ್ಟ. ಪಠ್ಯದ ಕಲಿಕೆಯ ಜೊತೆಗೆ, ವಿದ್ಯಾರ್ಥಿಗಳ ಸಾಮಾಜಿಕ ನಡವಳಿಕೆ ಹಾಗೂ ಹೊಣೆಗಾರಿಕೆ ಸೂಕ್ಷ್ಮಗೊಳ್ಳಬೇಕಾದ ಸಂದರ್ಭವಿದು. ಇಂಥ ಅವಕಾಶ ಕಾಲೇಜುಗಳಲ್ಲಿ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆ, ಸಮಾಜದ ಸಂಕೀರ್ಣತೆಯ ಕುರಿತು ತಿಳಿವಳಿಕೆ, ವ್ಯಕ್ತಿತ್ವ ನಿರ್ಮಾಣ ಹಾಗೂ ವಿಮರ್ಶಾತ್ಮಕ ಚಿಂತನೆಯ ವಿಕಾಸಕ್ಕೆ ಕಾಲೇಜುಗಳು ಪೂರಕ ವಾತಾವರಣ ಒದಗಿಸುತ್ತವೆ. ಈ ಅವಕಾಶವನ್ನು ಕಸಿದುಕೊಳ್ಳುವ ಕೋಚಿಂಗ್ ಸೆಂಟರ್‌ಗಳು, ವಿದ್ಯಾರ್ಥಿಗಳನ್ನು ಯಂತ್ರಗಳಂತೆ ಭಾವಿಸಿ, ಪರೀಕ್ಷೆಯಲ್ಲಿ ಅಂಕ ಗಳಿಸುವುದಕ್ಕೆ ಮಾತ್ರ ಅವರನ್ನು ಸೀಮಿತವಾಗಿಸುತ್ತವೆ. ಈ ಸಂವೇದನಾರಹಿತ ಶಿಕ್ಷಣ ಪದ್ಧತಿಯು ವಿದ್ಯಾರ್ಥಿಗಳನ್ನು ಮಾನಸಿಕ ಒತ್ತಡಕ್ಕೆ ದೂಡುತ್ತದೆ; ಕೆಲವೊಮ್ಮೆ ಜೀವ ಕಳೆದುಕೊಳ್ಳುವ ದುರಂತವನ್ನೂ ಸೃಷ್ಟಿಸುತ್ತದೆ.

ಕೋಚಿಂಗ್ ಸೆಂಟರ್‌ಗಳಿಗೆ ದುಬಾರಿ ಶುಲ್ಕ ಪಾವತಿಸುವ ಪೋಷಕರು, ಅಧಿಕೃತ ಪ್ರವೇಶ ಹಾಗೂ ಪರೀಕ್ಷೆ ಬರೆಯುವ ಅವಕಾಶ ಕಲ್ಪಿಸುವ ಕಾಲೇಜುಗಳಿಗೂ ಹಣ ಪಾವತಿಸಬೇಕಾಗುತ್ತದೆ. ಕೋಚಿಂಗ್ ಸೆಂಟರ್‌ಗಳಲ್ಲಿ ಪೂರ್ಣಾವಧಿ ತರಬೇತಿ ಪಡೆದ ಮಕ್ಕಳು ಪಿಯು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಬಹುದೆನ್ನುವ ನಿರೀಕ್ಷೆಯಿಂದ ಪೋಷಕರು ತಿಳಿದೋ ತಿಳಿಯದೆಯೋ ಈ ಅನೈತಿಕ ದಂಧೆಯ ಭಾಗವಾಗುತ್ತಾರೆ. ಮಕ್ಕಳ ಬಗೆಗಿನ ಪೋಷಕರ ಕಾಳಜಿ ಮತ್ತು ಆತಂಕವನ್ನು ಕೋಚಿಂಗ್ ಸೆಂಟರ್‌ಗಳು ದುರುಪಯೋಗ ಮಾಡಿಕೊಳ್ಳುತ್ತವೆ. ಅಂಥ ಕೇಂದ್ರಗಳ ಜೊತೆಗೆ ಕೈಜೋಡಿಸುವ ಮೂಲಕ ಶಿಕ್ಷಣವನ್ನು ಅನೈತಿಕಗೊಳಿಸುವ ಕೃತ್ಯದಲ್ಲಿ ಕೆಲವು ಕಾಲೇಜುಗಳೂ ಪಾಲುದಾರರಾಗಿವೆ. ಈ ದಂಧೆಯನ್ನು ನಿಯಂತ್ರಿಸುವುದು ಶಿಕ್ಷಣ ಇಲಾಖೆಯ ಹೊಣೆಗಾರಿಕೆ ಆಗಿರುವುದರ ಜೊತೆಗೆ, ಪೋಷಕರ ಜವಾಬ್ದಾರಿಯೂ ಆಗಿದೆ. ಆರ್ಥಿಕ ಸಂಕಷ್ಟ ಅನುಭವಿಸುವುದರ ಜೊತೆಗೆ ಮಕ್ಕಳನ್ನು ಒತ್ತಡಕ್ಕೆ ಸಿಲುಕಿಸುವ ಕೋಚಿಂಗ್ ಸೆಂಟರ್‌ಗಳ ಆಕರ್ಷಕ ಭರವಸೆಗಳನ್ನು ಪೋಷಕರು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಹೆಚ್ಚಿನ ತರಬೇತಿ ಅಗತ್ಯವಿರುವ ಮಕ್ಕಳನ್ನು ಟ್ಯೂಷನ್‌ಗೆ ಕಳುಹಿಸುವುದು ತಪ್ಪೇನಲ್ಲ. ಆದರೆ, ಟ್ಯೂಷನ್ ಕೇಂದ್ರಗಳನ್ನು ಶಾಲಾಕಾಲೇಜುಗಳಿಗೆ ಪರ್ಯಾಯವೆಂದು ಪರಿಗಣಿಸುವುದು ಅಪಾಯಕಾರಿ. ಹಾಗೆಯೇ, ಶಿಕ್ಷಣ ಸಂಸ್ಥೆಗಳು ತಮ್ಮ ಕರ್ತವ್ಯವನ್ನು ಮರೆತು ಆರ್ಥಿಕ ಲಾಭಕ್ಕಾಗಿ ನಿಯಮಗಳನ್ನು ಉಲ್ಲಂಘಿಸುವುದಕ್ಕೆ ಯಾವುದೇ ಸಮರ್ಥನೆ ಇಲ್ಲ. ಅಡ್ಡದಾರಿ ಹಿಡಿಯುವ ಕಾಲೇಜುಗಳ ವಿರುದ್ಧ ಶಿಕ್ಷಣ ಇಲಾಖೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಿ.

ರಾಜಕಾರಣಕ್ಕೆ ಕ್ರಿಮಿನಲ್ ನೆರಳು

ವಿಶ್ಲೇಷಣೆ

ಸಿ.ಎಚ್. ಹನುಮಂತರಾಯ

ಸಾಮಾಜಿಕ ಹಿತಾಸಕ್ತಿಯ ಹೆಸರಿನಲ್ಲಿ ಸರ್ಕಾರ ಹಲವು ಕ್ರಿಮಿನಲ್ ಪ್ರಕರಣಗಳನ್ನು ಕೈಬಿಟ್ಟಿದೆ. ಇದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ನಡೆ. ಸರ್ಕಾರದ ಅಕಾರಣ ಔದಾರ್ಯವು ಸಮಾಜಘಾತುಕರು ಕಾನೂನಿನ ಪರಿಧಿಯಿಂದ ತಪ್ಪಿಸಿಕೊಳ್ಳಲಿಕ್ಕೆ ಅವಕಾಶ ಕಲ್ಪಿಸಲಿದೆ.

ಸಂವೇದನಾಶೀಲರು ಮತ್ತು ಸಾಮಾಜಿಕ ಚಿಂತಕರು ಯಾವಾಗಲೂ ದುಃಖತಪ್ತರು ಎಂಬ ಮಾತೊಂದಿದೆ. ಈ ಮಾತಿಗೆ ಹತ್ತಿರವಾಗಿರುವ ಬೆಳವಣಿಗೆಯೊಂದು ನಾಡಿನ ಜನರಿಗೆ ಈಗ ಎದುರಾಗಿದೆ.

ನಮ್ಮ ಅಪರಾಧಿಕ ನ್ಯಾಯವ್ಯವಸ್ಥೆಯಲ್ಲಿ ಮುಖ್ಯ ಪಾತ್ರವಹಿಸುವ ಕಾನೂನುಗಳೆಂದರೆ 'ಐಪಿಸಿ' (ಭಾರತೀಯ ದಂಡ ಸಂಹಿತೆ–1860), 'ಸಿಆರ್‌ಪಿಸಿ' (ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973) ಮತ್ತು 'ಇಂಡಿಯನ್ ಎವಿಡೆನ್ಸ್ ಆ್ಯಕ್ಟ್' (ಭಾರತೀಯ ಸಾಕ್ಷ್ಯ ಅಧಿನಿಯಮ–1872). ಸಿಆರ್‌ಪಿಸಿ ಎಂಬುದು ವಿಶೇಷವಾಗಿ ತನಿಖಾ ಕಾಲದಲ್ಲಿ ತನಿಖಾಧಿಕಾರಿ ಗಮನದಲ್ಲಿ ಇರಿಸಿಕೊಂಡು ಅನುಸರಿಸಲೇಬೇಕಾದ ಮಾರ್ಗೋಪಾಯಗಳನ್ನು ಗುರ್ತಿಸುತ್ತದೆ. ಅಲ್ಲದೆ, ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿ ಬಳಸಬೇಕಾದ ಪ್ರಕ್ರಿಯೆಗಳು ಹೇಗಿರಬೇಕೆಂಬ ನಿಯಮಗಳನ್ನು ಒದಗಿಸಿಕೊಡುತ್ತದೆ. ಇತ್ತೀಚೆಗೆ ರಾಜ್ಯ ಸರ್ಕಾರ ವಿವಿಧ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿ ಇದ್ದ 52 ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆಯಿಂದ ಹಿಂಪಡೆಯುವ ಸಂಬಂಧ ಆದೇಶವೊಂದನ್ನು ಹೊರಡಿಸಿದೆ. ಈ ಆದೇಶವು ಜನರಲ್ಲಿ ಕುತೂಹಲ ಮೂಡಿಸಿದ್ದು, ಚರ್ಚೆಗೆ ಗ್ರಾಸವಾಗಿದೆ. ಇದಕ್ಕೆ ಮುಖ್ಯ ಕಾರಣ, ಘೋರ ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣ ವಾಪಸು ಪಡೆದಿರುವುದು.

ಸಿಆರ್‌ಪಿಸಿ–1973ರ ಸೆಕ್ಷನ್ 320ರ (ಹೊಸ ಕಾಯ್ದೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023, ಸೆಕ್ಷನ್ 359) ಪ್ರಕಾರ, ಭಾರತೀಯ ದಂಡ ಸಂಹಿತೆ–1860ರಲ್ಲಿ ಇರುವ 56 ಅಪರಾಧಗಳಿಗೆ (ಭಾರತೀಯ ನ್ಯಾಯ ಸಂಹಿತೆ–2023ರ ಸೆಕ್ಷನ್ 360ರಲ್ಲಿ 55) ಸಂಬಂಧಪಟ್ಟಂತೆ, ಫಿರ್ಯಾದುದಾರರು ಇಲ್ಲವೇ ಸಂತ್ರಸ್ತರು ಖುದ್ದಾಗಿ ಕೊಟ್ಟ ಫಿರ್ಯಾದಿನ ಆಧಾರದ ಮೇಲೆ ತನಿಖೆ ನಡೆದು ವಿಚಾರಣಾ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆಯಾದಾಗ, ವಿಚಾರಣೆಯಲ್ಲಿರುವ ಪ್ರಕರಣಗಳನ್ನು ಖುದ್ದಾಗಿ ಮನ್ನಾ ಮಾಡುವ ಇಲ್ಲವೇ ಕಾನೂನು ಕ್ರಮ ಮುಂದುವರಿಸದೆ ಬಿಟ್ಟುಬಿಡುವ ಹಕ್ಕು ಇದೆ.

ಐಪಿಸಿಯಲ್ಲಿ ಇಷ್ಟು ಅಪರಾಧಗಳ ಹೊರತಾಗಿ ಉಳಿಯುವ ಸುಮಾರು 450 ಅಪರಾಧಗಳಿಗೆ ಸಂಬಂಧಪಟ್ಟಂತೆ ಮೊಕದ್ದಮೆಗಳನ್ನು ವಾಪಸು ಪಡೆಯುವ ಅಧಿಕಾರವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೊಂದಿರುತ್ತವೆ. ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ, ಮೊಕದ್ದಮೆಯನ್ನು ವಾಪಸು ಪಡೆಯುವ ಆದೇಶವನ್ನು ಹೊರಡಿಸುವ ಮುನ್ನ ಕ್ಯಾಬಿನೆಟ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗುತ್ತದೆ. ಆ ನಿರ್ಣಯಗಳು ಮೊಕದ್ದಮೆ ವಾಪಸು ತೆಗೆಯಲು ಬಲವಾದ ಕಾರಣಗಳನ್ನು ಒಳಗೊಂಡಿರಬೇಕಾಗಿರುತ್ತದೆ. ಇದರಲ್ಲಿ ಮುಖ್ಯವಾದುದು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದೇ ಆಗಿರುತ್ತದೆ. ಈ ಸಂಬಂಧದಲ್ಲಿ ಕೆಲವು ಸಿದ್ಧಸೂತ್ರಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೊಂದಿವೆ. ಇದಕ್ಕೆ ಬೆಂಬಲವಾಗಿ ಹೈಕೋರ್ಟ್‌ಗಳ ಮತ್ತು ಸುಪ್ರೀಂ ಕೋರ್ಟ್‌ನ ಮಾರ್ಗದರ್ಶಕ ಸೂತ್ರಗಳೂ ಇವೆ.

ಯಾವುದೇ ಸರ್ಕಾರ ಕ್ರಿಮಿನಲ್ ಮೊಕದ್ದಮೆಗಳನ್ನು ವಾಪಸು ಪಡೆಯಲು ಆದೇಶ ಹೊರಡಿಸಿದ ಮಾತ್ರಕ್ಕೆ ನ್ಯಾಯಾಲಯ ಅವುಗಳನ್ನು ಕೈಬಿಡುವಂತಿಲ್ಲ. ಹಳೆಯ ದಂಡ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 321ರಂತೆ ಸರ್ಕಾರದ ಪರವಾಗಿ ಸಾರ್ವಜನಿಕ ಅಭಿಯೋಜಕರು ಸಮರ್ಥವಾದ ವಾದ ಮಂಡನೆ ಮಾಡಬೇಕಾಗಿರುತ್ತದೆ. ಹೊಸ ಕಾನೂನಿನ ಪ್ರಕಾರ, ಅಂದರೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ ಸೆಕ್ಷನ್ 360ರಂತೆ, ಸಾರ್ವಜನಿಕ ಅಭಿಯೋಜಕರು ಸರ್ಕಾರದ ಆದೇಶವನ್ನು ಸಮರ್ಥಿಸಿಕೊಳ್ಳುವಲ್ಲಿ ವಾದ ಮಂಡನೆ ಮಾಡಿದರಷ್ಟೇ ಸಾಲದು; ಆ ಹಂತದಲ್ಲಿ ನ್ಯಾಯಾಲಯದ ಹೊಣೆಗಾರಿಕೆ, ಸಂಬಂಧಪಟ್ಟ ಮೊಕದ್ದಮೆಯಲ್ಲಿ ಕಂಡುಬರುವ ಸಂತ್ರಸ್ತರನ್ನೂ ಬರಮಾಡಿಕೊಂಡು ವಾದ ಮಂಡನೆಗೆ ಅವಕಾಶ ಕೊಡಬೇಕಾಗಿದೆ. ಇವೆಲ್ಲಾ ವಾದ ಪ್ರಕ್ರಿಯೆಗಳು ಜರುಗಿದ ನಂತರ ಕ್ರಿಮಿನಲ್ ನ್ಯಾಯಾಲಯ ತನ್ನ ಸಮ್ಮತಿಯನ್ನು ಸರ್ಕಾರದ ಆದೇಶದ ಪರವಾಗಿ ಕೊಟ್ಟರೆ ಮಾತ್ರ ಅದು ಊರ್ಜಿತವಾಗಲು ಸಾಧ್ಯ. ಇದು ಹೊಸ ಕಾನೂನಿನಲ್ಲಿ ಕಂಡುಬರುವ ವಿಶೇಷ ಬೆಳವಣಿಗೆ.

ಪ್ರಸ್ತುತ ಆದೇಶವು ಹಳೆಯ ಮತ್ತು ಹೊಸ ಕಾಯ್ದೆಗಳಿಗೆ ಸಂಬಂಧಪಟ್ಟಿದ್ದು ಸಂಕೀರ್ಣವಾಗಿದೆ. ಸದರಿ ಆದೇಶವು ಕಲಬುರಗಿಯ ಆಳಂದ, ಹುಬ್ಬಳ್ಳಿ ಮತ್ತು ಡಿ.ಜೆ. ಹಳ್ಳಿ, ಕೆ.ಜೆ. ಹಳ್ಳಿಯಲ್ಲಿ ಜರುಗಿದ ಗಲಭೆ ಪ್ರಕರಣಗಳನ್ನೂ ಒಳಗೊಂಡಿದೆ. ಈ ಪ್ರಕರಣಗಳಲ್ಲಿ ಪೊಲೀಸರ ಮೇಲೆ ನಡೆದ ಹಲ್ಲೆಯ ಕಾರಣ ಹಲವರು ದೈಹಿಕವಾಗಿ ಊನಗೊಂಡರು. ಮುಸ್ಲಿಮರ ವಿರುದ್ಧ ಹಿಂದೂಗಳು, ಹಿಂದೂಗಳ ವಿರುದ್ಧ ಮುಸ್ಲಿಮರು ಎಸಗಿದ ಘೋರ ಪ್ರಕರಣಗಳಲ್ಲಿ ಪ್ರಾಣ ಮತ್ತು ಆಸ್ತಿಗಳಿಗೆ ಹಾನಿಯಾಗಿ 'ಪಕ್ಷ ಪ್ರತಾಪಿ'ಗಳು ಮಿಂಚಿರುವುದಿದೆ. ಎಷ್ಟೋ ಪ್ರಕರಣಗಳಲ್ಲಿ ರಾಜಕೀಯ ಕಾರ್ಯಕರ್ತರು, ಕನ್ನಡಪರ ಹೋರಾಟಗಾರರು ಮತ್ತು ಸಾರ್ವಜನಿಕರು ಎಸಗಿದ್ದಾರೆನ್ನುವ ಕೃತ್ಯಗಳ ಪರಿಣಾಮ ತೀರಾ ಅಪಾಯಕಾರಿಯಲ್ಲ. ಇವುಗಳಲ್ಲಿ ಕಾವೇರಿ ನೀರಿನ ಹಂಚಿಕೆ ವಿವಾದದ ಸಂಬಂಧ ನಡೆದ ಪ್ರತಿಭಟನೆ, ಬೇರೆ ಭಾಷೆಯ ನಾಮಫಲಕಗಳ ವಿರುದ್ಧದ ಪ್ರತಿಭಟನೆ ಮತ್ತು ಆ ಸಂದರ್ಭಗಳಲ್ಲಿ ವಿಧಿಸಿದ್ದ ನಿಷೇಧಾಜ್ಞೆಗಳ ವಿರುದ್ಧದ ಪ್ರತಿಭಟನೆ, ಮೇಕೆದಾಟು ಯೋಜನೆ ಸಂಬಂಧದ ಹೋರಾಟ, ತಮಿಳುನಾಡಿಗೆ ಕಾವೇರಿ ನೀರು ಹರಿಸಿದ್ದರ ವಿರುದ್ಧದ ಹೋರಾಟದ ಪ್ರಕರಣಗಳು, ವಾಟಾಳ್ ನಾಗರಾಜ್ ಮತ್ತು ಅವರ ಬೆಂಬಲಿಗರ ವಿರುದ್ಧದ ಹತ್ತಾರು ಪ್ರಕರಣಗಳು, ಕರ್ನಾಟಕ ರಕ್ಷಣಾ ವೇದಿಕೆಯ (ಕರವೇ) ನಾರಾಯಣಗೌಡ ಮತ್ತು ಪ್ರವೀಣ ಶೆಟ್ಟಿ ಅವರಿಗೆ ಸಂಬಂಧಿಸಿದ ಪ್ರಕರಣಗಳೂ ಸೇರಿವೆ.

ಆಳಂದದ ಲಾಡ್ಲೇ ಮಶಾಕ ದರ್ಗಾದ ಬಳಿ ಪೊಲೀಸರ ಮೇಲೆ ನಡೆದ ಹಲ್ಲೆಯನ್ನು ಧರ್ಮ, ಸಿದ್ಧಾಂತ ಅಥವಾ ಜಾತಿಯ ನೆಲೆಯಲ್ಲಿ ಕಾನೂನಿನ ಬಗ್ಗೆ ಗೌರವವೇ ಇಲ್ಲದಂತೆ ಎಸಗಿರುವುದು ಅಕ್ಷಮ್ಯ. ಇಂತಹ ಕೃತ್ಯಗಳನ್ನು ಅಧಿಕಾರ ಇರುವವರು, ಅಧಿಕಾರ ಇಲ್ಲದವರ ಮೇಲೆ ಅಥವಾ ದುರ್ಬಲರ ಮೇಲೆ ನಡೆಸಿದಾಗ ಬದುಕು ದುಸ್ತರವಾಗುತ್ತದೆ. ಯಾರೂ, ಯಾವುದೂ ಇಂತಹವರನ್ನು ಶಿಕ್ಷೆಯಿಂದ ತಪ್ಪಿಸಬಾರದು. ಈ ಸಂಬಂಧದಲ್ಲಿ 2015ರವರೆಗೆ ಸರ್ಕಾರ ಹೊರಡಿಸಿದ ಆದೇಶಗಳಲ್ಲಿ ಗಮನದಲ್ಲಿ ಇರಿಸಿಕೊಂಡಿದ್ದ ಕಾನೂನಿನ ಅಂಶಗಳು, ಸಾಮಾಜಿಕ ತತ್ತ್ವಗಳನ್ನು ಇತ್ತೀಚಿನ ಆದೇಶದಲ್ಲಿ ಗಮನದಲ್ಲಿ ಇರಿಸಿಕೊಂಡಿರುವಂತೆ ಮೇಲ್ನೋಟಕ್ಕೆ ಕಂಡುಬಂದರೂ, ಅಸಂಖ್ಯ ಕಿಡಿಗೇಡಿಗಳೂ ಸಮಾಜಘಾತುಕರೂ ಇದರ ನೆಪದಲ್ಲಿ ಬಚಾವಾಗಿರುವುದು ದುರದೃಷ್ಟಕರ. ಅನೇಕ ಪ್ರಕರಣಗಳಲ್ಲಿ ಎಷ್ಟೋ ಕೇಡಿಗಳು (Known Dacoits), ರೌಡಿ ಶೀಟರ್‌ಗಳು, ವೃತ್ತಿಪರ ಕ್ರಿಮಿನಲ್‌ಗಳು ಮುಂತಾದವರಿದ್ದರೂ, ಬೇರೆಯವರನ್ನು ಅವರಿಂದ ಹೊರತುಪಡಿಸಿ ಕ್ರಿಮಿನಲ್ ಪ್ರಕರಣವನ್ನು ಅಂತಹವರ ವಿರುದ್ಧ ಮುಂದುವರಿಯುವಂತೆ ಎಚ್ಚರ ವಹಿಸದಿರುವುದು, ಸರ್ಕಾರವು ಏನನ್ನೂ ತಳಸ್ಪರ್ಶಿಯಾಗಿ ಗಮನಿಸದೆ ಇರುವುದು ಎದ್ದು ಕಾಣುತ್ತಿದೆ.

ಕ್ರಿಮಿನಲ್ ಪ್ರಕರಣಗಳನ್ನು ರದ್ದುಪಡಿಸುವ ಅಥವಾ ಹಿಂಪಡೆಯುವ ಪ್ರಕ್ರಿಯೆಯು ಅತ್ಯಂತ ಅರ್ಹರಿಗೆ ಸಂಬಂಧಿಸಿದ್ದು ಎನ್ನುವ ಮೂಲತತ್ತ್ವವನ್ನೇ ಗಾಳಿಗೆ ತೂರಿರುವುದು ಇಲ್ಲಿ ಎದ್ದುಕಾಣುತ್ತದೆ. ಕರವೇ ನಾರಾಯಣಗೌಡರ ವಿರುದ್ಧ 27 ಪ್ರಕರಣಗಳಿದ್ದು, ಪ್ರತಿ ಪ್ರಕರಣದಲ್ಲೂ ಅವರ ವೇದಿಕೆಯ ನೂರಾರು ಸದಸ್ಯರು ಆರೋಪಿಗಳಾಗಿರುವುದು ಒಂದು ವಾಸ್ತವ. ಸರ್ಕಾರದ ಆದೇಶದ ವಿರುದ್ಧ ಪ್ರತಿಕ್ರಿಯಿಸಿರುವ ನಾರಾಯಣಗೌಡರು, 'ನಾಮ್ ಕೆ ವಾಸ್ತೆಗೆ ಎರಡು ಪ್ರಕರಣಗಳನ್ನು ಹಿಂಪಡೆದಿದ್ದಾರೆ. ಮೂಗಿಗೆ ತುಪ್ಪ ಹಚ್ಚುವುದು ಎಂದರೆ ಇದೇನಾ? ಆ ಎರಡು ಪ್ರಕರಣಗಳನ್ನಾದರೂ ಏಕೆ ಹಿಂಪಡೆದಿರಿ?' ಎಂದು ಸರ್ಕಾರಕ್ಕೆ ಸವಾಲೆಸೆದಿದ್ದಾರೆ. ಅವರು ಪ್ರಸ್ತುತ ಸಂದರ್ಭದ ಕುರಿತು ಸರಿಯಾದ ಮಾತುಗಳನ್ನೇ ಆಡಿರುತ್ತಾರೆ. ಸರ್ಕಾರ ಇದುವರೆಗೂ ನಿರುತ್ತರವಾಗಿದೆ. ಕೆಲವೊಂದು ಪ್ರಕರಣಗಳಲ್ಲಿನ ಆರೋಪಿಗಳನ್ನು ರಕ್ಷಿಸುವುದು ಸರ್ಕಾರದ ಉದ್ದೇಶವಾಗಿದ್ದು, ಅದಕ್ಕಾಗಿ ಬೇರೆ ಸಂಘ ಸಂಸ್ಥೆಗಳ ವಿರುದ್ಧವಿದ್ದ ಪ್ರಕರಣಗಳಲ್ಲಿ ಕೆಲವನ್ನು ನೆಪಮಾತ್ರಕ್ಕೆ ಆಯ್ಕೆ ಮಾಡಿಕೊಂಡಿರುವುದು ಎದ್ದುಕಾಣಿಸುವಂತಿದೆ. ಭಂಡರನ್ನು ರಕ್ಷಿಸುವ ಸರ್ಕಾರದ ಹದ್ದು ಮೀರಿದ ಹಿರಿಯಾಸೆಯೂ ಕಂಡುಬರುತ್ತದೆ.

ಪ್ರಕರಣಗಳನ್ನು ಹಿಂಪಡೆಯಲು ಪ್ರಮುಖ ಇಲಾಖೆಗಳ ಹಾಗೂ ಉನ್ನತ ಅಧಿಕಾರಿಗಳ ಸಮ್ಮತಿ ಮುಖ್ಯವಾಗಿದ್ದು, ಆ ಇಲಾಖೆಗಳು ಮತ್ತು ಅಧಿಕಾರಿಗಳು ಸರ್ಕಾರದ ಪ್ರಸ್ತಾವನೆಗೆ ಲಿಖಿತವಾಗಿಯೇ ಅಸಮ್ಮತಿ ಸೂಚಿಸಿದ್ದರು. ಪ್ರಕರಣಗಳನ್ನು ಹಿಂಪಡೆಯುವ ಪ್ರಕ್ರಿಯೆಯಲ್ಲಿ ಡಿಜಿ ಮತ್ತು ಐಜಿಪಿ ಕಾರಣಗಳನ್ನು ನೀಡಿ ಹಿಂತೆಗೆಯುವುದನ್ನು ನಿರಾಕರಿಸಿರುವುದು ಗಮನಾರ್ಹ.

ಸರ್ಕಾರದ ನಿರ್ಧಾರದಲ್ಲಿ ಸಾರ್ವಜನಿಕ ಹಿತಾಸಕ್ತಿ ಕಂಡುಬರುತ್ತಿಲ್ಲ. ಕೆಲವು ವರ್ಷಗಳ ಹಿಂದೆಯೇ ಗೃಹ ಮಂತ್ರಿ ಜಿ. ಪರಮೇಶ್ವರ ಅವರು 'ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಲು ಹಿಂಜರಿಯುವ ಮನಸ್ಸುಗಳೇ, ನಿಮ್ಮ ಮನೆಗಳ ಮೆಟ್ಟಿಲನ್ನು ನಮ್ಮ ಆರಕ್ಷಕರೇ ಹತ್ತಲಿದ್ದಾರೆ. ನಿಮ್ಮ ದೂರುಗಳನ್ನು ಆಲಿಸಿ, ಕಾನೂನುಗಳ ಪಾಲಿಸಿ, ಸಮಸ್ಯೆಗಳನ್ನು ಬಗೆಹರಿಸಿ, ನಿಮ್ಮೆಲ್ಲರ ಮನ ಮುಟ್ಟಲಿದ್ದಾರೆ' ಎಂದು ಹೇಳಿದ್ದರು ('ಮನೆ ಮನೆಗೆ ಪೊಲೀಸ್' ಕಾರ್ಯಕ್ರಮ ಅನುಷ್ಠಾನದ ಸಂದರ್ಭದಲ್ಲಿ). ಆ ಮಾತಿನ ಹಿನ್ನೆಲೆಯಲ್ಲಿ ಪ್ರಸಕ್ತ ವಿದ್ಯಮಾನಗಳನ್ನು ಪರಿಶೀಲಿಸುವಾಗ, ನೊಬೆಲ್ ಪುರಸ್ಕೃತೆ ಡೋರಿಸ್ ಲೆಸ್ಸಿಂಗ್ ಅವರ ಮಾತುಗಳು ನೆನಪಾಗುತ್ತವೆ: 'ಬಹುತೇಕ ರಾಜಕಾರಣಿಗಳು ಅಸಂಬದ್ಧವಾಗಿ ಜೀವಿಸುವ ಜೀವಿಗಳು. ಅವರನ್ನು ಯಾರಾದರೂ ನೋಡಿಕೊಳ್ಳುತ್ತಿರಲೇಬೇಕು' ಎನ್ನುವ ಮಾತದು. ಹೌದಲ್ಲವೆ? ಸಾರ್ವಜನಿಕ ಹಿತಾಸಕ್ತಿಯ ಕಾರಣದಿಂದ ಕ್ರಿಮಿನಲ್ ಪ್ರಕರಣ ಕೈಬಿಡಲಾಗಿದೆ ಎಂದಾದರೆ, ಅಂತಹ ಸಾರ್ವಜನಿಕ ಹಿತಾಸಕ್ತಿಗೆ ಬೆಲೆಯಿಲ್ಲ ಎಂದು ಹೇಳಬೇಕಾಗುತ್ತದೆ. ಜಗತ್ತಿನಲ್ಲಿ ನಮಗೆ ಗೊತ್ತಾಗಬೇಕಾಗಿರುವುದು ನ್ಯಾಯ ಮಾತ್ರ. ನಾವೆಲ್ಲ ಕೇಳುವುದು ಅದೊಂದನ್ನು ಮಾತ್ರ.

ಲೇಖಕ: ಹಿರಿಯ ವಕೀಲ

ವಾಚಕರ ವಾಣಿ

ಅರ್ಹರಿಗೆ ಮುಚ್ಚಿದ ಮೀಸಲಾತಿ ಬಾಗಿಲು

'ಐಎಎಸ್ ಅಧಿಕಾರಿಗಳ ಮಕ್ಕಳಿಗೂ ಮೀಸಲಾತಿ ಬೇಕೇ?' ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ಇದು ಬರೀ ಕಾನೂನು ವಿಚಾರವಲ್ಲ; ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಮರುಪರಿಶೀಲಿಸುವ ಸಂದರ್ಭವೂ ಆಗಿದೆ. ತಲೆಮಾರುಗಳಿಂದ ಮೀಸಲಾತಿಯ ಲಾಭ ಉಂಡು, ಸರ್ಕಾರದ ಉನ್ನತಮಟ್ಟದ ಆಡಳಿತಾತ್ಮಕ ಹುದ್ದೆಗಳಲ್ಲಿರುವ ಕುಟುಂಬಗಳ ಮಕ್ಕಳು ಸಹ ಮೀಸಲಾತಿ ಕೋಟಾದಡಿ ಸ್ಪರ್ಧಿಸುತ್ತಿದ್ದಾರೆ. ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂದರ್ಭ ಇದು.

ಸಾಮಾಜಿಕ ನ್ಯಾಯ ಎಂದರೆ ಸದಾ ಒಂದೇ ಕುಟುಂಬಕ್ಕೆ ಸೌಲಭ್ಯ ಮುಂದುವರಿಸುವುದಲ್ಲ; ಅತಿ ಹಿಂದುಳಿದವರನ್ನು ಮೇಲಕ್ಕೆತ್ತುವುದಾಗಿದೆ. ಹಾಗಾಗಿ, ಸರ್ಕಾರದ ಉನ್ನತ ಅಧಿಕಾರಿಗಳು, ಶ್ರೀಮಂತ ರಾಜಕಾರಣಿಗಳು ಹಾಗೂ ಸ್ಥಿತಿವಂತರು ಸ್ವಯಂ ಪ್ರೇರಿತವಾಗಿ ಮೀಸಲಾತಿಯನ್ನು ಅವರದೇ ಸಮುದಾಯಕ್ಕೆ ಸೇರಿರುವ ಕಡುಬಡವರಿಗೆ ಬಿಟ್ಟು ಕೊಡುವ ಅಗತ್ಯವಿದೆ. ತಮ್ಮ ಮಕ್ಕಳಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಬೇಡವೆಂದು ಘೋಷಿಸುವ ಮೂಲಕ ಹೊಸ ಅಭಿಯಾನಕ್ಕೆ ನಾಂದಿ ಹಾಡಿ ಇತರರಿಗೂ ಮಾದರಿಯಾಗಬೇಕಿದೆ.

ಶಿವರಾಜ್ ನಡಗೇರಿ, ಕಲಬುರಗಿ

ಎತ್ತಣ ಕ್ರೀಡಾಂಗಣ? ಎತ್ತಣ ಕೆಎಚ್‌ಬಿ?

ಕರ್ನಾಟಕ ಗೃಹ ಮಂಡಳಿಯ ಮೂಲೋದ್ದೇಶವು ಸ್ವಂತ ಮನೆ ಹೊಂದಬೇಕೆಂಬ ಜನರ ಕನಸನ್ನು ನನಸು ಮಾಡುವುದಾಗಿದೆ. ಈಗಿನ ತಂತ್ರಜ್ಞಾನ ಉತ್ಕರ್ಷದ ಪರ್ವದಲ್ಲೂ ಈ ಕನಸು ಈಡೇರಿಸಲು ಮಂಡಳಿಯು ದಶಕಗಳವರೆಗೆ ಸಮಯ ತೆಗೆದುಕೊಳ್ಳುತ್ತದೆ. ರಾಜ್ಯದಲ್ಲಿ ಮೂರು ವರ್ಷದ ಹಿಂದೆ ಬೆಂಗಳೂರು ಹೊರವಲಯದ ದೇವನಹಳ್ಳಿ, ಹೊಸಕೋಟೆ ಆಜುಬಾಜಿನಲ್ಲಿ ನಿವೇಶನ ಅಭಿವೃದ್ಧಿ ಯೋಜನೆಗೆಂದು ಮಂಡಳಿಯು ಸಾವಿರಾರು ಜನರಿಂದ ಕೋಟ್ಯಂತರ ರೂಪಾಯಿ ಪ್ರಾರಂಭಿಕ ಇಡುಗಂಟು ಪಡೆದಿದೆ. ಆದರೆ, ಆ ಯೋಜನೆ ಯಾವ ಸ್ಥಿತಿಯಲ್ಲಿದೆ ಎಂಬ ಮಾಹಿತಿಯನ್ನೇ ನೀಡಿಲ್ಲ. ಈಗ ಆನೇಕಲ್ ತಾಲ್ಲೂಕಿನ ಇಂಡ್ಲವಾಡಿಯಲ್ಲಿ ಬೃಹತ್ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಮಂಡಳಿ ಕೈಹಾಕಿರುವುದು ಸೋಜಿಗ. ಕ್ರೀಡಾಂಗಣಕ್ಕೂ ಕೆಎಚ್‌ಬಿಗೂ ಎತ್ತಣಿಂದೆತ್ತ ಸಂಬಂಧ?

ರಮೇಶ್, ಬೆಂಗಳೂರು

ಕೇಂದ್ರ ಇಂಧನದ ಹೊರೆ ತಗ್ಗಿಸುವುದೆ?

ಕೇಂದ್ರ ಸರ್ಕಾರವು ಕಳೆದ ಎರಡು ವಾರಗಳ ಅಂತರದಲ್ಲಿ ನಾಲ್ಕು ಬಾರಿ ಇಂಧನದ ಬೆಲೆ ಏರಿಸಿದೆ. ಇದು ಸಾಮಾನ್ಯ ಜನರ ಜೀವನದ ಮೇಲೆ ಗಂಭೀರ ಪರಿಣಾಮ ಬೀರಿದೆ. ದಿನನಿತ್ಯದ ಜೀವನ ನಿರ್ವಹಣೆಯೇ ಕಷ್ಟಕರವಾಗಿದೆ. 2014ರಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 91.50 ಡಾಲರ್ ಇದ್ದಾಗ ಪೆಟ್ರೋಲ್ ಪ್ರತಿ ಲೀಟರ್‌ಗೆ ₹72ಕ್ಕೆ ದೊರೆಯುತ್ತಿತ್ತು. 2019–20ರಲ್ಲಿ ಕಚ್ಚಾತೈಲದ ಬೆಲೆ 57 ಡಾಲರ್‌ಗೆ ಇಳಿದಾಗ ಪೆಟ್ರೋಲ್ ಬೆಲೆಯನ್ನು ಇಳಿಸದೆ ₹73ರ ಆಸುಪಾಸಿನಲ್ಲೇ ಮಾರಾಟ ಮಾಡಲಾಯಿತು. ಈ ಅವಧಿಯಲ್ಲಿ ತೈಲ ಕಂಪನಿಗಳು ಹಾಗೂ ಸರ್ಕಾರ ಹೆಚ್ಚಿನ ಆದಾಯಗಳಿಸಿವೆ. ಆದರೆ, ಗ್ರಾಹಕರಿಗೆ ಕಚ್ಚಾತೈಲದ ಬೆಲೆ ಇಳಿಕೆಯ ಲಾಭವನ್ನು ವರ್ಗಾಯಿಸಿಲ್ಲ. ಹಾಗಾಗಿ, ಈಗಿನ ಬೆಲೆ ಏರಿಕೆಯ ಸಂದರ್ಭದಲ್ಲಿ ತೆರಿಗೆ ಕಡಿತಗೊಳಿಸುವ ಮೂಲಕ ಇಂಧನದ ಬೆಲೆ ಏರಿಕೆಯ ಹೊರೆಯನ್ನು ತಗ್ಗಿಸಬೇಕಿದೆ.

ಬಿ.ಆರ್. ಮಂಜುನಾಥ ಬೆಂಡರವಾಡಿ, ಗುಂಡ್ಲುಪೇಟೆ

ದೇವಾಲಯ ಪ್ರವೇಶ: ಬೇಕಿದೆ ಪರಿವರ್ತನೆ

ಎಡೆಯೂರು ಸಿದ್ಧಲಿಂಗೇಶ್ವರಸ್ವಾಮಿ ದೇವಾಲಯದ ಗದ್ದುಗೆ ಭಾಗದ ಗರ್ಭಗುಡಿ ಪ್ರದೇಶಕ್ಕೆ ಸ್ವಾಮೀಜಿಯೊಬ್ಬರು ಪ್ರವೇಶ ಮಾಡಿದ ಕಾರಣಕ್ಕೆ ದೇಗುಲವನ್ನು ಶುಚಿಗೊಳಿಸಿರುವುದು ವರದಿಯಾಗಿದೆ. ಇದು ಬಾಲಿಶವಾದ ನಡೆ ಹಾಗೂ ಒಬ್ಬ ವ್ಯಕ್ತಿಗೆ ಮಾಡಿದ ಅವಮಾನ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಒಬ್ಬ ಸ್ವಾಮೀಜಿ ದೇವರ ಮೇಲಿನ ಭಕ್ತಿಯಿಂದ ಗರ್ಭಗುಡಿಯ ಒಳಗೆ ಪ್ರವೇಶಿಸಿದ್ದೇ ತಪ್ಪು ಎಂದು ಆಡಳಿತಾಧಿಕಾರಿಯು ಹೋಮ ಹವನ ನಡೆಸಿರುವುದು ಅಕ್ಷಮ್ಯ. ಮನುಷ್ಯ ಮನುಷ್ಯರ ನಡುವಿನ ಇಂತಹ ತಾರತಮ್ಯವನ್ನು ಖಂಡಿಸಬೇಕಿದೆ.

ಈ. ಬಸವರಾಜು, ಬೆಂಗಳೂರು

ಭೂಗಳ್ಳರ ದುರಾಸೆಗೆ ಅರಣ್ಯ ಆಪೋಶನ

ಚಿಕ್ಕಮಗಳೂರು ಜಿಲ್ಲೆಯಲ್ಲಿ 36,785 ಎಕರೆ ಅರಣ್ಯ ಪ್ರದೇಶ ಒತ್ತುವರಿಯಾಗಿರುವುದು ವರದಿಯಾಗಿದೆ. ಆ ಜಿಲ್ಲೆಯಲ್ಲಿ ಅರಣ್ಯ ಮಾತ್ರವಲ್ಲದೆ ಗೋಮಾಳ, ಸ್ಮಶಾನ ಭೂಮಿಯನ್ನೂ ಭೂಗಳ್ಳರು ಬಿಟ್ಟಿಲ್ಲ. ಇದರಲ್ಲಿ ಎಲ್ಲ ಪಕ್ಷದವರೂ ಇದ್ದಾರೆ. ದೊಡ್ಡ ಪ್ಲಾಂಟರ್‌ಗಳು ಸ್ವಂತವಾಗಿ ಇನ್ನೂರು ಎಕರೆ ಹೊಂದಿದ್ದರೆ, ಇನ್ನೂರು ಎಕರೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುತ್ತಾರೆ. ಆದರೆ, ಕಾಫಿ ಬೆಳೆಯುವುದರಿಂದ ನಷ್ಟವೆಂದು ಸದಾ ಹಲುಬುತ್ತಾರೆ. ಅಷ್ಟು ನಷ್ಟದ ಕೆಲಸಕ್ಕೆ ಅರಣ್ಯವನ್ನು ಕಬಳಿಸುವುದಾದರೂ ಏಕೆ? ಅರಣ್ಯ ಅತಿಕ್ರಮಣದ ತೆರವು ಮರೀಚಿಕೆಯಾಗಿದೆ.

ಮಧುಸೂದನ್ ಬಿ.ಎಸ್. ಬೆಂಗಳೂರು

ಯುವಜನರ ಹಿತಾಸಕ್ತಿ ಪಕ್ಷಗಳಿಗೆ ಅಪಥ್ಯ

ಎಲ್ಲ ರಾಜಕೀಯ ಪಕ್ಷಗಳೂ ಯುವಜನರ ಹಿತ ಕಾಪಾಡುವಲ್ಲಿ ಸೋತು ಹೋಗಿವೆ. ನಿರುದ್ಯೋಗ ಅವರನ್ನು ಹಿಂಸಿಸುತ್ತಿದೆ. ಭ್ರಷ್ಟಾಚಾರ ಮತ್ತು ಕಾರ್ಪೊರೇಟ್ ಧಣಿಗಳಿಗೆ ಮಣೆ ಹಾಕುವಿಕೆಯು ಎಲ್ಲೆ ಮೀರಿದೆ. ಸಂಪತ್ತು ಕೆಲವೇ ಸಿರಿವಂತರ ಪಾಲಾಗುತ್ತಿದೆ. ಸರ್ಕಾರಿ ಅಧಿಕಾರಿಗಳಿಗೆ ಭ್ರಷ್ಟಾಚಾರ ನಡೆಸಲು, ಉದ್ಧಟತನ ತೋರಲು ಸರ್ಕಾರವೇ ಅನುಮತಿ ನೀಡಿದಂತಿದೆ. ಬಡವರು ಬಡವರಾಗಿಯೇ ಉಳಿದು, ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಸಂವಿಧಾನದ ಆಶಯದಂತೆ ಯಾವ ಸರ್ಕಾರವೂ ಆಡಳಿತ ನಡೆಸುತ್ತಿಲ್ಲ. ಜೆನ್ ಝೀ ಕ್ರಾಂತಿ ಸರಿಯಾದ ಮಾರ್ಗ ಹಿಡಿದರೆ ದೇಶದ ಭವಿಷ್ಯ ಬದಲಾಗುವುದರಲ್ಲಿ ಅನುಮಾನವಿಲ್ಲ. ಆಗ ರಾಜಕಾರಣವನ್ನು ವೃತ್ತಿಯಾಗಿಸಿಕೊಂಡವರು ಮೂಲೆಗುಂಪಾಗುತ್ತಾರೆ.

ಅಶೋಕ ಪ. ಹೊನಕೇರಿ, ಧಾರವಾಡ

ಚುರುಮುರಿ

ತ್ಯಾಗ'ರಾಜ' ಸಿಎಂ!

• ಗುರು ಪಿ.ಎಸ್.

'ಸ್ವೀಟ್ ತಗೊಳಿ ಸಾರ್...' ಕೈಗೆ ಕೆಂಪು ದಾರ ಕಟ್ಟಿಕೊಂಡು, ಹಣೆಗೆ ತಿಲಕ ಇಟ್ಟುಕೊಂಡು ಬಂದ ಮುದ್ದಣ್ಣ, ಮೈಸೂರ್‌ಪಾಕ್ ಕೊಟ್ಟ.

'ಏನ್ ವಿಶೇಷ ಮುದ್ದಣ್ಣ' ಸ್ವೀಟ್ ತಿನ್ನುತ್ತಲೇ ಕೇಳಿದ ವಿಜಿ.

'ಒಂದೆರಡು ದಿನಗಳಲ್ಲೇ ನಮ್ ಸಾಹೇಬ್ರು ಸಿಎಂ ಆಗ್ತಾರೆ ಸಾರ್'.

'ಆರು ತಿಂಗಳಿಂದ ಇದನ್ನೇ ಹೇಳ್ತಿದೀರಿ, ಗ್ಯಾರಂಟಿ ಆಗಲ್ಲ'.

'ಏನ್ ಸಾರ್! ಗ್ಯಾರಂಟಿಗಳು ಇರಲ್ಲ ಅಂದ್ರಾ?'

'ಗ್ಯಾರಂಟಿಗಳದ್ದು ಗೊತ್ತಿಲ್ಲಪ್ಪ, ರಾಜ್ಯದಲ್ಲಿ ಸಿಎಂ ಚೇಂಜ್ ಆಗ್ತಾರೋ ಇಲ್ಲವೋ ಡೌಟು ಅಂದೆ'.

'ಚೇಂಜ್ ಆಗೇ ಆಗ್ತಾರೆ ಸಾರ್. ಇನ್ಮೇಲೆ ರಾಜ್ಯದಲ್ಲಿ ಬದಲಾವಣೆ ಪರ್ವ ಶುರುವಾಗುತ್ತೆ, ನೋಡ್ತಾ ಇರಿ'.

'ಓಹೋ, ಅಷ್ಟೊಂದು ಬದಲಾವಣೆ ತರ್ತಾರಾ?'

'ಹೂಂ ಸಾರ್, ಬದಲಾವಣೆ ಆಗಲೇಬೇಕಲ್ಲ, ಸಚಿವ ಸಂಪುಟ ಬದಲಾಗಬೇಕು, ಶಾಸಕರು ಬಣ ಬದಲಾಯಿಸಬೇಕು, ಸಲಹೆಗಾರರು ಚೇಂಜ್ ಆಗಬೇಕು... ಜಾಹೀರಾತುಗಳಲ್ಲಿ ನಮ್ ಸಾಹೇಬ್ರುದು ಒಬ್ಬರದೇ ಫೋಟೊ ಬರಬೇಕು'.

'ಓಹ್, ನೀನು ಈ ಬದಲಾವಣೆ ಹೇಳ್ದಾ... ಅದ್ ಸರಿ, ನಿನಗ್ಯಾಕಿಷ್ಟು ಖುಷಿ?'

'ಇದೆಲ್ಲ ಬದಲಾದ ಮೇಲೆ, ನಿಗಮ–ಮಂಡಳಿ ಅಧ್ಯಕ್ಷರು ಬದಲಾಗಲ್ವ ಸಾರ್, ಆಗ ನನಗೊಂದು ಚಾನ್ಸ್ ಸಿಗಲ್ವ ಸಾರ್?' ಎಂದು ವಿಜಿ ಆಶಾಭಾವದಿಂದ ಕೇಳಿದ.

'ಓಹೊಹೊ ದೂರಾಲೋಚನೆ... ಅದಕ್ಕೆ ಈಗಿರೋರು ಹುದ್ದೆ ತ್ಯಾಗ ಮಾಡಿ, ರಾಜ್ಯಸಭೆಯ ರಾಜ ಆಗಬಹುದು ಅಥವಾ ನಿಮ್ಮ ಸಾಹೇಬ್ರಿಗೇ ನೀನೇ ತ್ಯಾಗರಾಜ ಆಗು ಅಂತ ಹೇಳಿ, ಅವರೇ ರಾಜ್ಯದ ರಾಜರಾಗಿ ಮುಂದುವರಿಯಬಹುದು...'

'ಅಯ್ಯೋ, ಹಿಂಗೂ ಆಗಬಹುದು ಅಂತೀರಾ?'

'ಹೂಂ ಮತ್ತೆ, ಈಗಿರೋರು ರಾಜ್ಯಸಭೆಗೆ ಏನಾದರೂ ಹೋದರೆ, ಒಂದು ಸಮನ್ವಯ ಸಮಿತಿ ಮಾಡಿ, ಮೈಸೂರಿನ ಮರಿ ಹುಲೀನ ಅದರ ಅಧ್ಯಕ್ಷನನ್ನಾಗಿ ಮಾಡಿದ್ರೂ ಮಾಡಬಹುದು...'

'ಏಯ್ ಸುಮ್ನಿರಿ ಸಾರ್, ಬರೀ ಅಪಶಕುನ ಮಾತಾಡ್ತೀರಿ. ಹಂಗೆಲ್ಲ ಏನೂ ಆಗಲ್ಲ' ಎಂದು ಸಿಹಿ ಡಬ್ಬಿ ಎತ್ತಿಕೊಂಡು ಹೊರಹೋದ ಮುದ್ದಣ್ಣ.

ಚುನಾವಣೆ

ನೈತಿಕತೆಯ ಪ್ರಶ್ನೆ!

ಮುಖ್ಯಮಂತ್ರಿಯಾಗಲು 'ದಲಿತ' ಎಂದು ಸಮಷ್ಟಿ ಹೆಸರು ಬಳಸಲು ಯಾರೂ ಅರ್ಹರಲ್ಲ. ಒಳಮೀಸಲು ಹಂಚಿಕೆಯಲ್ಲಿ ಎಲ್ಲರೂ ಬೆತ್ತಲಾಗಿದ್ದಾರೆ. ಅವರವರ ಉಪಜಾತಿ ಹೇಳಿಕೊಂಡು ಕ್ಲೇಮು ಮಾಡುವುದು ಒಳಿತು.

ಗುರುಪ್ರಸಾದ್ ಕಂಟಲಗೆರೆ, ಕಥೆಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ರಾಜ್ಯದಲ್ಲಿ ಆಡಳಿತಯಂತ್ರ ಕುಸಿದುಬಿದ್ದಿದೆ. ಅಭಿವೃದ್ಧಿ ಯೋಜನೆಗಳು ನನೆಗುದಿಗೆ ಬಿದ್ದಿವೆ. ಈ ಬಗ್ಗೆ ಬಿಜೆಪಿ ಹಾಗೂ ಜನರು ನಿತ್ಯವೂ ಧ್ವನಿ ಎತ್ತುತ್ತಿದ್ದಾರೆ. ಆದರೆ, ಅಧಿಕಾರದಾಹ ಹೊಂದಿದ ಕೈಪಾಳಯದ ನಾಯಕರು ಈ ಮಾತುಗಳಿಗೆ ಕಿವಿಗೊಡುತ್ತಿಲ್ಲ.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 28-5-2001

• **'ಇಸ್ರೊ' ಕೇಂದ್ರದ ಜತೆ ಸಂಪರ್ಕ ಕಳೆದುಕೊಂಡ 'ಜಿಸ್ಯಾಟ್–1'**

ಬೆಂಗಳೂರು, ಮೇ 27 (ಯುಎನ್‌ಐ)– ಕಳೆದ ಏಪ್ರಿಲ್ 18ರಂದು ಉಡಾವಣೆ ಮಾಡಲಾಗಿದ್ದ ಪ್ರಾಯೋಗಿಕ ಸಂಪರ್ಕ ಉಪಗ್ರಹ 'ಜಿಸ್ಯಾಟ್–1' (ಜಿಎಸ್‌ಎಟಿ) ಹಾಸನದಲ್ಲಿರುವ 'ಇಸ್ರೊ'ದ ಪ್ರಧಾನ ನಿಯಂತ್ರಣ ಸೌಲಭ್ಯ ಕೇಂದ್ರದ ನೇರ ಸಂಪರ್ಕ ಕಳೆದುಕೊಂಡಿದೆ ಎಂದು ಅಧಿಕೃತ ಸುದ್ದಿ ಮೂಲಗಳು ತಿಳಿಸಿವೆ.

ಇಂಧನ ಕೊರತೆಯಿಂದ ಉಪಗ್ರಹವನ್ನು ನಿಗದಿತ ಕಕ್ಷೆಗೆ ತಲಪಿಸುವುದು ಸಾಧ್ಯವಾಗದ್ದರಿಂದ ನೇರ ಸಂಪರ್ಕ ತಪ್ಪಿದೆ. ಈಗ ವಿಶ್ವದಾದ್ಯಂತ ಇರುವ ಇತರ ಕೇಂದ್ರಗಳ ಮೂಲಕ ಹಾಸನದ ನಿಯಂತ್ರಣ ಕೇಂದ್ರ ಉಪಗ್ರಹದ ಪರಿಭ್ರಮಣೆ ಮೇಲೆ ನಿಗಾ ಇಡಬಹುದು. ಮತ್ತೆ ನೇರ ಸಂಪರ್ಕ ಬಹುತೇಕ ಕಷ್ಟಸಾಧ್ಯ ಎಂದು ಮೂಲಗಳು ತಿಳಿಸಿವೆ.

75 ವರ್ಷಗಳ ಹಿಂದೆ

ಸೋಮವಾರ, 28-5-1951

• **'ಕವನಗಳ ಕೇಳದವರಾರು?' ಪ್ಯಾರಿಸ್ ಕವಿಗಳ ಸವಾಲು**

ಪ್ಯಾರಿಸ್, ಮೇ 27– 'ಇಂದಿನ ಸ್ಥಿತಿಯಲ್ಲಿ ಕವನಗಳನ್ನು ಕೇಳುವವರು ಇಲ್ಲ' ಎಂದು ಪ್ರಕಾಶಕರಿಂದ ಕೇಳಿಸಿಕೊಂಡು ಬೇಸರಗೊಂಡ ಹಣವಿಲ್ಲದ ಪ್ಯಾರಿಸ್ಸಿನ ಕವಿಗಳು, ಬಹಿರಂಗ ಸ್ಥಳದಲ್ಲಿ ಅಂಗಡಿಗಳನ್ನು ತೆರೆದು ಜನರಿಗೆ ನೇರವಾಗಿ ತಮ್ಮ ಕವನಗಳನ್ನು ಮಾರಲು ಆರಂಭಿಸಿದರು.

ಪ್ರಖ್ಯಾತ ಕವಿ ವಿಕ್ಟರ್ ಹ್ಯೂಗೋ ಜೀವಿಸುತ್ತಿದ್ದ 'ಡೆಸ್ ವಾಸ್‌ಗೆಸ್' ಪ್ರದೇಶದಲ್ಲಿ ಕವಿಗಳು ನಿಂತುಕೊಂಡು ಕೈಬರಹ ಮತ್ತು ಟೈಪ್ ರೈಟರುಗಳಲ್ಲಿ ಮುದ್ರಿಸಿದ ತಮ್ಮ ಕವಿತ್ವದ ಪ್ರತಿಗಳನ್ನು ಒಂದೊಂದು ಕವನಕ್ಕೆ ಹತ್ತು ಫ್ರಾಂಕುಗಳಂತೆ ಮಾರಾಟ ಮಾಡಲು ಪ್ರಾರಂಭಿಸಿದಾಗ ಜನಸಂದಣಿಯು ಅಗಾಧವಾಗಿ ಕಾವ್ಯ ಸರಸರನೆ ವಿಕ್ರಯವಾಗುತ್ತಿದ್ದಿತು. ಅದರಲ್ಲೂ ಪ್ರವಾಸಿಗಳು ಹೆಚ್ಚಿನದಾಗಿ ಖರೀದಿ ಮಾಡಿದರು.

ಸಂಗತ

ಅಧಿಕಾರದ ನಶೆಗೆ ಸಹಾನುಭೂತಿ ವಿರುದ್ಧವೆ?

ಬಹುತೇಕ ಸಂದರ್ಭಗಳಲ್ಲಿ 'ಅಧಿಕಾರ' ಅಮಲಿನ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಅಧಿಕಾರದಲ್ಲಿ ಇರುವವರನ್ನು ಮಾನವೀಯ ಸ್ಪಂದನಗಳಿಂದ ದೂರ ಇರಿಸುತ್ತದೆ.

• ನಡಹಳ್ಳಿ ವಸಂತ್

ಕೆನಡಾದ ಮ್ಯಾಕ್‌ಮಾಸ್ಟರ್ ವಿಶ್ವವಿದ್ಯಾಲಯದ ಸಿಗಿಂದಾ ಒಬಿ ಎನ್ನುವ ನರವಿಜ್ಞಾನಿ ಒಂದು ಕುತೂಹಲಕರ ಪ್ರಯೋಗ ನಡೆಸಿದರು. ವಿದ್ಯಾರ್ಥಿಗಳ ಗುಂಪೊಂದನ್ನು ಎಂಆರ್‌ಐ ಯಂತ್ರದಲ್ಲಿ ಮಲಗಿಸಿದರು. ಅವರಿಗೆ ತಾವು ಸಂಪೂರ್ಣ ಅಧಿಕಾರ ಮತ್ತು ಹಿಡಿತ ಹೊಂದಿದ್ದ ಸಂದರ್ಭವನ್ನು ಕಲ್ಪಿಸಿಕೊಳ್ಳುವಂತೆ ಹೇಳಿ, ಅವರ ಮಿದುಳಿನ ಚಟುವಟಿಕೆಗಳನ್ನು ದಾಖಲಿಸಿದರು. ಫಲಿತಾಂಶ ಆಶ್ಚರ್ಯಕರವಾಗಿತ್ತು. ಮಿದುಳಿನ ಯಾವ ಭಾಗ ಕರುಣೆ, ಸಹಾನುಭೂತಿ, ಪ್ರತಿಸ್ಪಂದನಗಳನ್ನು ಪ್ರಚೋದಿಸಬೇಕಾಗಿತ್ತೋ ಆ ಭಾಗ ಅಧಿಕಾರದ ಕಲ್ಪನೆಯ ಸಂದರ್ಭದಲ್ಲಿ ಚಟುವಟಿಕೆಗಳಿಲ್ಲದೆ ಸಂಪೂರ್ಣ ನಿಷ್ಕ್ರಿಯವಾಗಿತ್ತು. ಬರೀ ಅಧಿಕಾರದ ಕಲ್ಪನೆಯೇ ನಮ್ಮ ಸಹಾನುಭೂತಿಯನ್ನು ಕುರುಡಾಗಿಸುವುದಾದರೆ, ಇನ್ನು ನಿಜವಾದ ನಿರಂತರ ಅಧಿಕಾರ ಮಾನವರ ಮಿದುಳನ್ನು ಹೇಗೆ ಬದಲಾಯಿಸಬಹುದು?

ಇದೇ ರೀತಿಯ ಪ್ರಯೋಗಗಳನ್ನು ಹಲವು ವಿಜ್ಞಾನಿಗಳು ಭಿನ್ನ ಭಿನ್ನ ದೃಷ್ಟಿಕೋನದಿಂದ ಮತ್ತೆ ಮತ್ತೆ ಮಾಡುತ್ತಲೇ ಬಂದಿದ್ದಾರೆ. ಅಮೆರಿಕದ ಪಾಲ್ ಪೀಫ್ ಎನ್ನುವ ವಿಜ್ಞಾನಿ ಸರಣಿ ಪ್ರಯೋಗಗಳನ್ನು ನಡೆಸಿದ್ದಾರೆ. ಒಂದು ಪ್ರಯೋಗದಲ್ಲಿ ಅವರು, ಹಲವರನ್ನು ಒಟ್ಟಿಗೆ ಸೇರಿಸಿಕೊಂಡು ಜೂಜಿನ ಪಂದ್ಯ ಏರ್ಪಡಿಸಿದರು. ದಾಳವನ್ನು ಉರುಳಿಸಿ ಬರುವ ಸಂಖ್ಯೆಗಳನ್ನು ಊಹಿಸಿ, ಹಣವನ್ನು ಬೆಟ್ಟಿಂಗ್ ಮಾಡುವ ಜೂಜು ಅದು. ಅಂತಹ ಗುಂಪಿನಲ್ಲಿ ಕೆಲವರಿಗೆ ಇತರರಿಗಿಂತ ದುಪ್ಪಟ್ಟು ಹಣವನ್ನು ನೀಡಿದ್ದಲ್ಲದೆ, ಅವರಿಗೆ ಪ್ರತಿಸಾರಿ ಎರಡು ಬಾರಿ ದಾಳ ಉರುಳಿಸುವ ಆಯ್ಕೆಯನ್ನೂ ಕೊಡಲಾಯಿತು. ಸಹಜವಾಗಿ ದುಪ್ಪಟ್ಟು ಹಣ ಮತ್ತು ಎರಡು ಬಾರಿ ದಾಳ ಉರುಳಿಸುವ ಅವಕಾಶ ಹೊಂದಿದವರೇ ಗೆಲ್ಲುತ್ತಿದ್ದರು. ಆಟವಾಡುವ ಸಮಯದಲ್ಲಿ ಅಂತಹವರ ನಡವಳಿಕೆಯಲ್ಲಿ ಅಹಂಕಾರ ಮತ್ತು ದರ್ಪ ಎದ್ದುಕಾಣುತ್ತಿತ್ತು. ಆಟದ ನಂತರ ಜೂಜಿನಲ್ಲಿ ಗೆದ್ದವರೊಂದಿಗೆ ನಡೆಸಿದ ಸಂದರ್ಶನದಲ್ಲಿ ಅವರು ತಮ್ಮ ಬುದ್ಧಿವಂತಿಕೆ, ಕೌಶಲದಿಂದ ಗೆದ್ದೆವು ಎಂದು ಬೀಗಿದರೇ ಹೊರತು, ಆಟದ ಆರಂಭದಲ್ಲಿಯೇ ತಮಗೆ ಹೆಚ್ಚಿನ ಅನುಕೂಲ ಮಾಡಿಕೊಡಲಾಗಿತ್ತು ಎಂದು ಒಪ್ಪಿಕೊಳ್ಳಲಿಲ್ಲ. ಅಧಿಕಾರ, ಯಶಸ್ಸುಗಳು ಕಾನೂನುಬಾಹಿರವಾಗಿ ಮತ್ತು ಅನೈತಿಕವಾಗಿ ಬಂದಾಗಲೂ ನಮ್ಮ ಮಿದುಳಿಗೆ ವಾಸ್ತವವನ್ನು ಗ್ರಹಿಸಲಾಗದಷ್ಟು ನಶೆ ಆವರಿಸಿಕೊಳ್ಳುತ್ತದೆ.

ಈಗ ನರವಿಜ್ಞಾನಿಗಳು ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವ ಸಂಗತಿ: ರಾಜಕೀಯ, ಸಾಮಾಜಿಕ, ಧಾರ್ಮಿಕ, ವಿದ್ಯೆ, ದೇಹದ ಬಣ್ಣ ಸೇರಿದಂತೆ ಯಾವುದೇ ರೀತಿಯಿಂದ ಅಧಿಕಾರ ಬಂದಿದ್ದರೂ ಅದು ನಮ್ಮೊಳಗಿನ ಮಾನವೀಯತೆಯನ್ನು, ಸಹಸ್ಪಂದನವನ್ನು ನಾಶ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ನಿರುದ್ಯೋಗಿ ಯುವಜನರನ್ನು ಜಿರಲೆಗಳೆಂದು ಯಾರಾದರೂ ಹೇಳಿದಲ್ಲಿ, ಆ ಮಾತುಗಳ ಬಗ್ಗೆ ಅಚ್ಚರಿಪಡುವಂತಹದ್ದೇನೂ ಇಲ್ಲ. ಇಂಥ ಮಾತುಗಳನ್ನು ಯಾರು ಆಡಿದರು ಎನ್ನುವುದಕ್ಕಿಂತಲೂ, ಇಂತಹ ಮಾತುಗಳನ್ನು ಬೇರೆ ಬೇರೆ ಕ್ಷೇತ್ರಗಳ ಮುಖಂಡರುಗಳಿಂದ ಕೇಳುತ್ತಲೇ ಬಂದಿದ್ದೇವೆ ಎನ್ನುವುದು ಮುಖ್ಯ.

ಕಾಂಗ್ರೆಸ್‌ನ ರಶೀದ್ ಮಸೂದ್ ಅವರು 2013ರ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದಾಗ, ದೆಹಲಿಯಲ್ಲಿ ಬರೀ ಐದು ರೂಪಾಯಿಯಲ್ಲಿ ಹೊಟ್ಟೆ ತುಂಬಾ ಉಣ್ಣಬಹುದು ಎಂದು ಹೇಳಿದ್ದರು. ಮತ್ತೊಬ್ಬ ಕಾಂಗ್ರೆಸ್ ಮುಖಂಡ ರಾಜ್ ಬಬ್ಬರ್ ಮುಂಬೈನಲ್ಲಿ ಇದಕ್ಕೆ ₹12 ಸಾಕಾಗುತ್ತದೆ ಎಂದು ಹೇಳಿದ್ದರು. ಕಳೆದ ವರ್ಷ ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು ನಮ್ಮ ಯುವಕರು ವಾರಕ್ಕೆ 70 ಗಂಟೆ ಕೆಲಸ ಮಾಡಬೇಕು ಎಂದು ಉಪದೇಶಾಮೃತವನ್ನು ನೀಡಿದ್ದರು. ವಾರದ ಕೆಲಸದ ಸಮಯವನ್ನು 90 ಗಂಟೆಗೆ ಏರಿಸಬೇಕು ಎಂದು 'ಎಲ್ ಅಂಡ್ ಟಿ'ಯ ಮುಖ್ಯಸ್ಥ ಸುಬ್ರಮಣ್ಯನ್ ಹೇಳಿದ್ದಲ್ಲದೆ, ಮನೆಯಲ್ಲಿ ಗಂಡ, ಹೆಂಡತಿ ಎಷ್ಟು ಹೊತ್ತು ಪರಸ್ಪರ ಮುಖ ನೋಡುತ್ತಾ ಕುಳಿತಿರಲು ಸಾಧ್ಯ ಎನ್ನುವ ಮಾತುಗಳನ್ನಾಡಿದ್ದರು. ನಮ್ಮ ಪ್ರಧಾನ ಮಂತ್ರಿಯವರು ನೋಟುಗಳ ಅಮಾನ್ಯೀಕರಣವಾದ ನಂತರ ಜನರು ಎಟಿಎಂಗಳ ಮುಂದೆ ಸಾಲುಗಟ್ಟಿದ್ದರ ಕುರಿತು ವ್ಯಂಗ್ಯದ ನಗೆಬೀರಿದ್ದರು. ಧಾರ್ಮಿಕ ನಾಯಕರ ಅನೈತಿಕ ಅವತಾರಗಳು ಕೂಡ ಅಧಿಕಾರದಿಂದ ಎಲ್ಲ ಕುಕೃತ್ಯಗಳನ್ನೂ ಮೀರಿ ನಿಲ್ಲಬಹುದೆಂಬ ಅಹಂಕಾರ ದಿಂದಲೇ ಕೂಡಿರುತ್ತವೆ. ಜೆಫ್ರಿ ಎಫ್‌ಸ್ಟೈನ್ ಜೊತೆ ಸಖ್ಯ ಬೆಳೆಸಿದವರ ಪಟ್ಟಿಯನ್ನು ನೋಡಿದರೆ ಅಧಿಕಾರದ ನಶೆ ವಿವೇಕವನ್ನು ಕುರುಡಾಗಿಸುವ ಪ್ರಕ್ರಿಯೆಗೆ ಯಾವುದೇ ಕ್ಷೇತ್ರದ ಜನರು ಕೂಡ ಹೊರತಲ್ಲ ಎನ್ನುವುದು ಸಾಬೀತಾಗುತ್ತದೆ.

ಅಧಿಕಾರವನ್ನು ಅನುಭವಿಸುತ್ತಿರುವಾಗಲೂ ವಿವೇಕವನ್ನು ಕಳೆದುಕೊಳ್ಳದೆ ಸಹಸ್ಪಂದನವನ್ನು ಉಳಿಸಿಕೊಳ್ಳಲು ಅಗಾಧವಾದ ಪ್ರಬುದ್ಧತೆ ಬೇಕಾಗುತ್ತದೆ. ಇತಿಹಾಸದಲ್ಲಿಯೇ ಇಂತಹ ನಾಯಕರುಗಳ ಸಂಖ್ಯೆ ಬೆರಳೆಣಿಕೆಯಷ್ಟು ಇರಬಹುದು. ಕಳೆದ 50–60 ವರ್ಷಗಳಲ್ಲಿ ವಿಶ್ವದ ಯಾವುದೇ ದೇಶದಲ್ಲಿಯೂ ಇಂತಹ ನಾಯಕರು ಬಂದಿಲ್ಲ.

ದೇಶವನ್ನು ನಡೆಸಲು ಯಾರಿಗಾದರೂ ಅಧಿಕಾರ ನೀಡುವುದು ಅನಿವಾರ್ಯ ಎಂದಮೇಲೆ, ಅಂತಹ ಅಧಿಕಾರವನ್ನು ನಶೆಯಾಗಲು ಬಿಡದಂತಹ ಪ್ರತಿರೋಧವನ್ನು ಹುಟ್ಟುಹಾಕುವುದು ಮಾತ್ರ ಜನಸಾಮಾನ್ಯರಿಗೆ ಇರುವ ದಾರಿ. ಪ್ರತಿರೋಧ ಎಂದರೆ ಬಂದ್‌ಗಳು, ಮೆರವಣಿಗೆ, ಸತ್ಯಾಗ್ರಹಗಳೇ ಆಗಬೇಕೆಂದಿಲ್ಲ. ನಿರಂತರವಾಗಿ ಎಲ್ಲಾ ನಾಯಕರುಗಳಿಗೆ ಪ್ರಶ್ನೆಗಳನ್ನು ಕೇಳುತ್ತಲೇ ಇರಬೇಕಾಗುತ್ತದೆ. ಅಧಿಕಾರದ ಅಮಲು ಪ್ರಶ್ನೆಗಳನ್ನು, ಪ್ರಶ್ನಿಸುವವರನ್ನು ಹತ್ತಿಕ್ಕುವ ದಾರಿಗಳನ್ನು ಹುಡುಕುತ್ತಲೇ ಇರುತ್ತದೆ. ಪ್ರಶ್ನೆ ಕೇಳುವುದನ್ನು ನಿಲ್ಲಿಸಿದರೆ ಅಧಿಕಾರದ ನಶೆ ಸಂಪೂರ್ಣ ಸ್ಪಂದನವನ್ನು ಕಳೆದುಕೊಂಡು ಕ್ರೌರ್ಯವಾಗಿ ಬದಲಾಗುತ್ತದೆ.

ಕಾಕ್ರೋಚ್ ಜನತಾ ಪಾರ್ಟಿ ಕೂಡ ನಮ್ಮ ಯುವಜನರು ಪ್ರಶ್ನೆಗಳನ್ನು ಎತ್ತಲು ಹುಡುಕಿಕೊಂಡ ಮಾರ್ಗವಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಫುಟ್‌ಬಾಲ್ ಅಂಗಳದಲ್ಲಿ ಹೊಸ ಅಲೆ

ಕರ್ನಾಟಕದ ಕಾರ್ತಿಕ್ ಗೋವಿಂದ ಸ್ವಾಮಿ (ಎಡಬದಿ) ಮತ್ತು ಗೋವಾದ ಎರಿಸ್ಟನ್ ಕೊಸ್ತಾ –ಪ್ರಜಾವಾಣಿ ಸಂಗ್ರಹ

• ಗಿರೀಶ ದೊಡ್ಡಮನಿ

ಫುಟ್‌ಬಾಲ್ ಮತ್ತು ಕ್ರಿಕೆಟ್ ಕ್ರೀಡೆಗಳ ಇಬ್ಬರು ದಿಗ್ಗಜ ಆಟಗಾರರು ಒಂದೇ ಕ್ರೀಡಾಂಗಣದಲ್ಲಿ ಸೇರಿ ಆಡುವುದನ್ನು ಎಲ್ಲಿಯಾದರೂ ನೋಡಿದ್ದೀರಾ ಎಂಬ ಪ್ರಶ್ನೆಗೆ ಬೆಂಗಳೂರಿನ ಕ್ರೀಡಾಪ್ರೇಮಿಗಳು ಥಟ್ ಅಂತ ಉತ್ತರ ಹೇಳಬಲ್ಲರು!

ಹೌದು; ಏಳು ವರ್ಷಗಳ ಹಿಂದೆ ಕ್ರಿಕೆಟ್ ದಂತಕಥೆ ವಿರಾಟ್ ಕೊಹ್ಲಿ ಮತ್ತು ಫುಟ್‌ಬಾಲ್ ದಿಗ್ಗಜ ಸುನಿಲ್ ಚೆಟ್ರಿ ಅವರಿಬ್ಬರೂ ಸೇರಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಡಿದ್ದರು. ಫುಟ್‌ಬಾಲ್ ಆಡಿದ್ದರು. ಇಬ್ಬರೂ ತಾರೆಗಳ ಸ್ನೇಹ ಅಲ್ಲಿಂದ ಇಲ್ಲಿಯವರೆಗೂ ಮತ್ತಷ್ಟು ಗಾಢವಾಗಿದೆ. ಕ್ರಿಕೆಟ್ ಎಷ್ಟೇ ಶ್ರೀಮಂತವಾಗಿ, ಆಕರ್ಷಣೀಯವಾಗಿ ಬೆಳೆದರೂ ಉದ್ಯಾನನಗರಿಯ ಫುಟ್‌ಬಾಲ್ ಕ್ರೀಡೆ ನೆಲಕಚ್ಚಿಲ್ಲ. ಬದಲಿಗೆ ಹೊಸತನದತ್ತ ಮಗ್ಗಲು ಬದಲಾಯಿಸಿದೆ.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಏಳು ವರ್ಷಗಳ ಹಿಂದೆ ಆರಂಭಿಸಿದ 'ಯೂತ್ ಪ್ರೀಮಿಯರ್ ಲೀಗ್' ಟೂರ್ನಿಯು ಈಗ ಫಲ ನೀಡುತ್ತಿದೆ. 7, 9, 11, 13, 15, 17 ಮತ್ತು 21 ವರ್ಷದೊಳಗಿನವರ ವಯೋವರ್ಗಗಳಲ್ಲಿ ನಡೆಯುತ್ತಿದೆ. ಇದರಿಂದಾಗಿ ತಳಮಟ್ಟದಲ್ಲಿ ಫುಟ್‌ಬಾಲ್ ಸದ್ದಿಲ್ಲದೇ ಬೆಳೆಯುತ್ತಿದೆ. ಈ ವಯೋವರ್ಗಗಳಲ್ಲಿ ಸುಮಾರು ಐದು ಸಾವಿರ ಆಟಗಾರರು ಸದ್ಯ ಕಣದಲ್ಲಿದ್ದಾರೆ.

'ಯೂತ್ ಪ್ರೀಮಿಯರ್ ಲೀಗ್ ಆರಂಭಿಸಿದ ದೇಶದ ಮೊದಲ ರಾಜ್ಯ ಕರ್ನಾಟಕ. ಇದರ ಫಲವಾಗಿ ಪ್ರತಿ ವಿಭಾಗದಲ್ಲಿಯೂ ಹೆಚ್ಚಿನ ಸಂಖ್ಯೆಯ ತಂಡಗಳು ಇವೆ. ಅವುಗಳನ್ನು ಟೈರ್ 1, 2 ಮತ್ತು 3 ಎಂದು ವಿಂಗಡಿಸಲಾಗಿದೆ. ಆಯಾ ವರ್ಷದ ಟೂರ್ನಿಗಳಲ್ಲಿ ಉತ್ತಮವಾಗಿ ಆಡಿ ಅಗ್ರಸ್ಥಾನ ಪಡೆದ ತಂಡಗಳಿಗೆ ಬಡ್ತಿ ನೀಡಲಾಗುತ್ತದೆ. ಉಳಿದವನ್ನು ಡಿಮೋಟ್ ಮಾಡಲಾಗುತ್ತದೆ. ಇದರಿಂದಾಗಿ ಗುಣಮಟ್ಟವನ್ನು ಕಾಪಾಡಲು ಸಾಧ್ಯವಾಗುತ್ತಿದೆ' ಎಂದು ಕೆಎಸ್‌ಎಫ್‌ಎ ಪ್ರಧಾನ ಕಾರ್ಯದರ್ಶಿ ಎಂ. ಕುಮಾರ್ ಹೇಳುತ್ತಾರೆ.

13, 15, 17 ಹಾಗೂ 21 ವರ್ಷದ ವಯೋಮಿತಿಗಳಲ್ಲಿ ಅಗ್ರಸ್ಥಾನ ಪಡೆಯುವ ತಂಡಗಳು ಅಖಿಲ ಭಾರತ ಮಟ್ಟದ ಚಾಂಪಿಯನ್‌ಷಿಪ್‌ಗಳಲ್ಲಿ ಆಡುವ ಅರ್ಹತೆ ಗಳಿಸುತ್ತವೆ. ಅಲ್ಲಿ ಉತ್ತಮವಾಗಿ ಆಡುವವರು ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯುವ ಅವಕಾಶಗಳೂ ಇವೆ. ಇದು ಕರ್ನಾಟಕದ ಹೆಮ್ಮೆಯ ಯೋಜನೆಯಾಗಿದೆ. ಬೇರೆ ರಾಜ್ಯಗಳೂ ಈಗ ಅನುಕರಿಸುತ್ತಿವೆ ಎಂದೂ ಅವರು ಹೇಳುತ್ತಾರೆ. ಬೆಂಗಳೂರು ಒಂದೇ ಅಲ್ಲ. ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಈ ಲೀಗ್ ನಡೆಯುತ್ತಿದೆ.

ಫುಟ್‌ಬಾಲ್ ದಿಗ್ಗಜ ಸುನಿಲ್ ಚೆಟ್ರಿ ಜತೆ ಕ್ರಿಕೆಟರ್ ವಿರಾಟ್ ಕೊಹ್ಲಿ

'ತಳಮಟ್ಟದಿಂದ ಕೆಲಸವಾಗಬೇಕಿದೆ'

ಬೆಂಗಳೂರಿನ ಜೀವನಹಳ್ಳಿಯ ಐಟಿಸಿ ಫ್ಯಾಕ್ಟರಿ ಹಿಂಭಾಗದಲ್ಲಿ ಫುಟ್‌ಬಾಲ್ ತರಬೇತಿ ನೀಡುತ್ತಿರುವ ಜೆ.ಜೆ. ಫುಟ್‌ಬಾಲ್ ಅಕಾಡೆಮಿಯ ಕೋಚ್ ಡಿ.ಗುಣಶೇಖರ್ ಅವರು 'ಇಂಡಿಯನ್ ಸೂಪರ್ ಲೀಗ್ ಟೂರ್ನಿ ಆರಂಭವಾದ ನಂತರ ಯುವ ಫುಟ್‌ಬಾಲ್ ಆಟಗಾರರಿಗೆ ಅವಕಾಶಗಳು ಹೆಚ್ಚುತ್ತಿವೆ' ಎನ್ನುತ್ತಾರೆ.

ಲೀಗ್‌ನ ಪ್ರತಿಯೊಂದು ತಂಡ 18 ವರ್ಷದೊಳಗಿನವರ ತಂಡವನ್ನು ಹೊಂದಿದರೆ ಉತ್ತಮ. ಇದರಿಂದ ಪ್ರತಿಭಾಶೋಧದ ಜೊತೆಗೆ ಸೀನಿಯರ್ ತಂಡಕ್ಕೆ ಆಟಗಾರರನ್ನು ಸಿದ್ಧಪಡಿಸಲು ಅವಕಾಶ ಒದಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

ಆದರೆ ಫುಟ್‌ಬಾಲ್ ಕಲಿಯಲು ಬರುವ ಆಟಗಾರರ ಸಂಖ್ಯೆಯಲ್ಲಿ ಹೆಚ್ಚೇನೂ ವ್ಯತ್ಯಾಸವಾಗಿಲ್ಲ ಎನ್ನುತ್ತಾರೆ ಅವರು. 25 ವರ್ಷಗಳಿಂದ ಅವರು ಈ ಕ್ಲಬ್ ನಡೆಸುತ್ತಿದ್ದು, ಬೇಸಿಗೆ ರಜೆಯ ವೇಳೆ 40 ದಿನಗಳ ಮತ್ತು ದಸರಾ ರಜೆ ಅವಧಿಯಲ್ಲಿ 15 ದಿನಗಳ ಶಿಬಿರ ಏರ್ಪಡಿಸುತ್ತಾರೆ. 35 ರಿಂದ 40 ಮಂದಿ ಕಲಿಯಲು ಬರುತ್ತಾರೆ.

'ಈ ಆಟಕ್ಕೆ ಬರುವವರು ಬಡ ಮತ್ತು ಕೆಳಮಧ್ಯಮ ವರ್ಗದವರು. ಇದಕ್ಕೆ ಕ್ರಿಕೆಟ್‌ನಷ್ಟು ಖರ್ಚು ಬೇಡ. ಆದರೆ ಈ ಆಟ ಬೆಳೆಯಲು ತಳಮಟ್ಟದಿಂದ ಕೆಲಸವಾಗಬೇಕಿದೆ. ಹೆಚ್ಚು ಮಕ್ಕಳು ಬರಬೇಕಾದರೆ ಪೋಷಕರ ಪಾತ್ರ ಮುಖ್ಯ. ಈಗಿನ ಪೋಷಕರು ಕ್ರಿಕೆಟ್‌ಗೆ ಹೆಚ್ಚು ಒಲವು ತೋರುತ್ತಾರೆ. ಶಾಲಾ ದಿನಗಳಲ್ಲಿ ಫುಟ್‌ಬಾಲ್ ಆಡಲು ಹೆಚ್ಚು ಸಂಖ್ಯೆಯಲ್ಲಿ ಬರುವವರು ಕಾಲೇಜು ಮುಗಿದ ನಂತರ ಕಡಿಮೆಯಾಗುತ್ತಾರೆ. ಉದ್ಯೋಗ ದೊರೆತ ನಂತರ ಇನ್ನೂ ಕಡಿಮೆಯಾಗುತ್ತಾರೆ. ಹೀಗಾಗಿ ಬೆಳವಣಿಗೆ ಕಡಿಮೆಯಾಗುತ್ತಿದೆ' ಎಂದು ಹೇಳುತ್ತಾರೆ.

ಫುಟ್‌ಬಾಲ್ ಮೈದಾನಗಳೂ ಕಡಿಮೆಯಾಗುತ್ತಿವೆ. ಟರ್ಫ್ ಅಂಕಣಗಳಲ್ಲಿ ಐಟಿ ಉದ್ಯೋಗಿಗಳು ಹಣ ಕೊಟ್ಟು ಆಡುತ್ತಾರೆ ಎಂದು ಗುಣಶೇಖರ್ ವಿವರಿಸುತ್ತಾರೆ.

ಪ್ರತಿ ವರ್ಷ ಎಲ್ಲ ವಯೋಮಿತಿಗಳಲ್ಲಿ 2,000 ರಿಂದ 3,000 ಪಂದ್ಯಗಳು ನಡೆಯುತ್ತಿವೆ ಎಂದೂ ಕೆಎಸ್‌ಎಫ್‌ಎ ದಾಖಲೆಗಳು ಹೇಳುತ್ತವೆ. ಇದರಿಂದಾಗಿ ಇಲ್ಲಿಯ ಕ್ಲಬ್‌ಗಳಲ್ಲಿ ತರಬೇತಿಗೆ ಬರುವವರ ಸಂಖ್ಯೆಯೂ ಕ್ರಮೇಣವಾಗಿ ಹೆಚ್ಚಾಗುತ್ತಿದೆ. ಅಲ್ಲದೇ ಯುರೋಪಿಯನ್ ಫುಟ್‌ಬಾಲ್ ಕ್ಲಬ್‌ಗಳ ಶಾಖೆಗಳೂ ಬೆಂಗಳೂರಿನಲ್ಲಿ ಆರಂಭವಾಗಿವೆ. ಇದರಿಂದಾಗಿ ಹೊಸ ರೀತಿಯ ತರಬೇತಿ ಮತ್ತು ತಂತ್ರಜ್ಞಾನಗಳು ಇಲ್ಲಿಯವರೆಗೆ ಲಭ್ಯವಾಗುತ್ತಿವೆ.

'ನಮ್ಮಲ್ಲಿರುವ ಸಾಂಪ್ರದಾಯಿಕ ಮತ್ತು ಹಳೆಯ ಕ್ಲಬ್‌ಗಳಲ್ಲಿ ಉತ್ತಮ ಕೋಚ್‌ಗಳು ಇದ್ದಾರೆ. ತೆಗೆದುಕೊಳ್ಳುವ ಶುಲ್ಕವೂ ಕಡಿಮೆ. ಈ ಕ್ರೀಡೆಗೆ ಬರುವ ಮಕ್ಕಳಲ್ಲಿ ಬಹುತೇಕರು ಬಡತನದ ಹಿನ್ನೆಲೆಯವರು. ಶುಲ್ಕ ಜಾಸ್ತಿ ಪಡೆಯುವ ಫ್ರ್ಯಾಂಚೈಸಿಗಳಿಗೆ ಸೇರುವುದು ಕಷ್ಟ. ಆದ್ದರಿಂದ ಹಳೆಯ ಕ್ಲಬ್‌ಗಳಲ್ಲಿ ಪ್ರವೇಶ ಪಡೆಯಲು ಬಹಳಷ್ಟು ಇಚ್ಛಿಸುತ್ತಾರೆ' ಎಂದು ಬಿಡಿಎಫ್‌ಎ ಮಾಧ್ಯಮ ನಿರ್ವಹಿಸುವ ಚಿಕ್ಕಚೆನ್ನಯ್ಯ ಹೇಳುತ್ತಾರೆ.

ಕೆಎಸ್‌ಎಫ್‌ಎಯ ದಾಖಲೆಗಳ ಪ್ರಕಾರ, ಪುರುಷರ ವಿಭಾಗದ ಸೂಪರ್ ಡಿವಿಷನ್‌ನಲ್ಲಿ 20, ಡಿ ಮತ್ತು ಸಿ ಡಿವಿಷನ್‌ನಲ್ಲಿ 75 ಕ್ಲಬ್‌ಗಳು ನೋಂದಾಯಿತವಾಗಿವೆ. ಮಹಿಳೆಯರ ವಿಭಾಗದಲ್ಲಿ ಎ ಡಿವಿಷನ್‌ನಲ್ಲಿ 10 ಮತ್ತು ಬಿ ಡಿವಿಷನ್‌ನಲ್ಲಿ 40 ಹಾಗೂ ಸೂಪರ್ ಡಿವಿಷನ್‌ನಲ್ಲಿ 11 ತಂಡಗಳು ನೋಂದಣಿಯಾಗಿವೆ.

ಅಭಿಮಾನಿಗಳೇ ಶಕ್ತಿ : ಬೆಂಗಳೂರಿನಲ್ಲಿ ಕ್ರಿಕೆಟ್ ಎಷ್ಟೇ ಸದ್ದು ಮಾಡಿದರೂ ಫುಟ್‌ಬಾಲ್ ಮಾತ್ರ ತನ್ನ ಅಸ್ತಿತ್ವವನ್ನು ಗಟ್ಟಿಯಾಗಿಯೇ ಉಳಿಸಿಕೊಂಡಿದೆ. ಗೌತಮಪುರ, ಅಲಸೂರು ಮತ್ತಿತರ ಪ್ರದೇಶಗಳಲ್ಲಿ ಈಗಲೂ ಫುಟ್‌ಬಾಲ್ ಲವಲವಿಕೆಯಿಂದ ಪುಟಿಯುತ್ತಲೇ ಇದೆ. ಅದಕ್ಕೆ ಕಾರಣ ಇಲ್ಲಿಯ ಅಭಿಮಾನಿಗಳ ಬತ್ತದ ಉತ್ಸಾಹ.

ಈಚೆಗೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ನಡೆಯುವ ಋತುವಿನಲ್ಲಿಯೇ ಐಎಸ್‌ಎಲ್ ಪಂದ್ಯಗಳೂ ನಡೆದವು. ಕಂಠೀರವ ಕ್ರೀಡಾಂಗಣದಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಪಂದ್ಯಗಳು ನಡೆದಾಗ ಪ್ರೇಕ್ಷಕರ ಗ್ಯಾಲರಿಯಲ್ಲಿ 11 ರಿಂದ 14 ಸಾವಿರದಷ್ಟು ಜನರು ಸೇರಿದ್ದರು. 'ಸಂತೋಷಕ್ಕೆ.. ಹಾಡು ಸಂತೋಷಕ್ಕೆ..' ಎಂಬ ಶಂಕರನಾಗ್ ಅವರ 'ಗೀತಾ' ಚಿತ್ರದ ಹಾಡು ಮೊಳಗಿತ್ತು. ಇನ್ನೊಂದೆಡೆ ಪುನೀತ್ ರಾಜಕುಮಾರ್ ಅವರ ಪೋಸ್ಟರ್ 'ಜೊತೆಯಲಿ..' ಕೂಡ ರಾರಾಜಿಸಿತ್ತು.

ದಶಕಗಳ ಹಿಂದೆ ಬೇರೆ ಬೇರೆ ಕ್ಲಬ್‌ಗಳು, ಸಾರ್ವಜನಿಕ ಉದ್ಯಮಗಳು ಮತ್ತು ಬ್ಯಾಂಕ್‌ಗಳ ತಂಡಗಳ ಪಂದ್ಯಗಳನ್ನು ನೋಡಲು ಜನರು ಕಿಕ್ಕಿರಿದು ಸೇರುತ್ತಿದ್ದರು. ಒಲಿಂಪಿಯನ್ನರನ್ನು ದೇಶಕ್ಕೆ ನೀಡಿದ ಕ್ಲಬ್‌ಗಳೂ ಇಲ್ಲಿವೆ. ಕೋಲ್ಕತ್ತದ ಮೋಹನ್ ಬಾಗನ್, ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್‌ಗಳ ದಿಗ್ಗಜರೊಂದಿಗೆ ಆಡಿದ ಆಟಗಾರರೂ ಇಲ್ಲಿದ್ದಾರೆ.

ಈಗ ಫ್ರ್ಯಾಂಚೈಸಿ ಲೀಗ್‌ಗಳ ಕಾಲ. ಐಎಸ್‌ಎಲ್ ಪಂದ್ಯಗಳೂ ಜನರನ್ನು ಸೆಳೆಯುತ್ತಿವೆ.

'ಎಲ್ಲ ಕ್ಲಬ್‌ಗಳಿಗೂ ಅಭಿಮಾನಿಗಳಿದ್ದಾರೆ. ನಮಗೆ ಕುಟುಂಬವೇ ಇದೆ' ಎಂದು ಬೆಂಗಳೂರು ಎಫ್‌ಸಿ ತಂಡವು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ.

ಆದರೆ ಇಷ್ಟೆಲ್ಲ ಇದ್ದರೂ ಬೆಂಗಳೂರು ಮತ್ತು ಕರ್ನಾಟಕದ ನಗರಗಳಲ್ಲಿ ಫುಟ್‌ಬಾಲ್ ಆಟದ ಮೂಲಸೌಲಭ್ಯಗಳು ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಬೆಂಗಳೂರಿನ ಅಶೋಕನಗರದಲ್ಲಿರುವ ಫುಟ್‌ಬಾಲ್ ಮೈದಾನ ಸುಸ್ಥಿತಿಯಲ್ಲಿ ಇಲ್ಲ. ಅದಕ್ಕಾಗಿಯೇ ಐಎಸ್‌ಎಲ್ ಮತ್ತು ಅಂತರರಾಷ್ಟ್ರೀಯ ಪಂದ್ಯಗಳನ್ನು ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಲಾಗುತ್ತದೆ.

2017ರಲ್ಲಿ ಜೂನಿಯರ್ ಫಿಫಾ ವಿಶ್ವಕಪ್ ಪಂದ್ಯಗಳ ಆಯೋಜನೆಯ ಅವಕಾಶ ಈ ಮೈದಾನಕ್ಕೆ ಸಿಕ್ಕಿತ್ತು. ಆದರೆ ಫಿಫಾ ನೀಡಿದ್ದ ಕಾಲಾವಧಿಯಲ್ಲಿ ಮೈದಾನವನ್ನು ಸಿದ್ಧಗೊಳಿಸಲು ಸ್ಥಳೀಯ ಆಡಳಿತಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಪಂದ್ಯಗಳನ್ನು ಬೇರೆ ನಗರಗಳಿಗೆ ಸ್ಥಳಾಂತರ ಮಾಡಲಾಯಿತು. ಹೋದ ವರ್ಷ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಎಎಫ್‌ಸಿ ಪಂದ್ಯವನ್ನೂ 'ಪಿಚ್ ಅಂತರರಾಷ್ಟ್ರೀಯ ಪಂದ್ಯಕ್ಕೆ ಸೂಕ್ತವಲ್ಲ' ಎಂಬ ಕಾರಣಕ್ಕೆ ಸ್ಥಳಾಂತರ ಮಾಡಲಾಗಿತ್ತು.

ಹುಬ್ಬಳ್ಳಿ, ಮೈಸೂರು, ಬೆಳಗಾವಿ, ಚಿಕ್ಕಮಗಳೂರು, ಮಂಡ್ಯ, ದಾವಣಗೆರೆ ಸೇರಿದಂತೆ ಬಹುತೇಕ ಎಲ್ಲ ಜಿಲ್ಲೆಗಳಲ್ಲಿಯೂ ಫುಟ್‌ಬಾಲ್ ಕ್ರೇಜ್ ಇದ್ದೇ ಇದೆ. ಆದರೆ ಅದಕ್ಕೆ ತಕ್ಕಂತೆ ಸೌಲಭ್ಯಗಳು ಸಿಕ್ಕರೆ ಮಾತ್ರ ಬೆಳವಣಿಗೆ ಸಾಧ್ಯ.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ವರ್ಷದ ಎಲ್ಲ ದಿನಗಳಲ್ಲಿಯೂ ಪಂದ್ಯಗಳು ನಡೆಯುತ್ತವೆ. ಅಲ್ಲದೇ ಇದನ್ನು ಮೇಲ್ದರ್ಜೆಗೇರಿಸಬೇಕು ಎಂಬ ಒತ್ತಾಯವನ್ನು ನಾವು ಸರ್ಕಾರಕ್ಕೆ ಮಾಡುತ್ತಲೇ ಇದ್ದೇವೆ. ಅದು ಕೈಗೂಡಬೇಕಷ್ಟೇ. ಪ್ರಸ್ತುತ ಎಚ್‌ಎಎಲ್, ಸಾಯ್ ಮೈದಾನ, ಕಲ್ಯಾಣನಗರ, ಕಣ್ಣೂರು ಮೈದಾನ, ಹೊಸೂರು ಸರ್ಜಾಪುರ ರಸ್ತೆ, ಬೆಳ್ಳಂದೂರು ಟೆಕ್ ಪಾರ್ಕ್‌ಗಳಲ್ಲಿರುವ ಮೈದಾನಗಳಲ್ಲಿ ಆಡಿಸುತ್ತೇವೆ.

ಎಂ. ಕುಮಾರ್, ಪ್ರಧಾನ ಕಾರ್ಯದರ್ಶಿ, ಕೆಎಸ್‌ಎಫ್‌ಎ

ಸದ್ಯ ಬೆಂಗಳೂರಿನಲ್ಲಿ ಫುಟ್‌ಬಾಲ್ ಬೆಳೆಯುತ್ತಿದೆ. ಈಗೀಗ ಸ್ಥಳೀಯ ಆಟಗಾರರಿಗೆ ಆದ್ಯತೆ ದೊರೆಯುತ್ತಿದೆ. 15–20 ವರ್ಷದಿಂದ ನಾವೂ ಕ್ಲಬ್ ನಡೆಸುತ್ತಿದ್ದೇವೆ. ಫುಟ್‌ಬಾಲ್ ಕ್ಷೇತ್ರದಲ್ಲಿಯೂ ಬೇರೆ ಬೇರೆ ಅವಕಾಶಗಳು ಬೇಕಾದಷ್ಟಿವೆ. ಆಟಗಾರರಾಗಿ ಬೆಳೆಯಬಹುದು. ನಿವೃತ್ತಿ ನಂತರ ರೆಫರಿ, ಸ್ಕೋರರ್, ತಂತ್ರಜ್ಞರು ಇತ್ಯಾದಿ ಉದ್ಯೋಗಾವಕಾಶಗಳೂ ಇವೆ. ನಮ್ಮ ಕ್ಲಬ್‌ನಲ್ಲಿ ಬೇರೆ ಬೇರೆ ರಾಜ್ಯಗಳ ಮಕ್ಕಳು ಸೇರಿದಂತೆ 600ಕ್ಕಿಂತ ಹೆಚ್ಚು ಆಟಗಾರರು ಇದ್ದಾರೆ. ಮಾಧ್ಯಮಗಳಲ್ಲಿ ಕ್ರಿಕೆಟ್‌ಗೆ ಸಿಗುವಷ್ಟು ಪ್ರಚಾರ ಫುಟ್‌ಬಾಲ್‌ಗೆ ಸಿಕ್ಕರೆ ಜನಪ್ರಿಯತೆ ಹೆಚ್ಚುತ್ತದೆ.

ಜಿ.ಕೆ.ಸುಧೀರ್, ಜಿ.ಆರ್.ಕೆ. ಕ್ರೀಡಾ ಯುವ ಸಂಘದ ಬಸವೇಶ್ವರನಗರ ಫುಟ್‌ಬಾಲ್ ಸಂಸ್ಥೆ ಕಾರ್ಯದರ್ಶಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಪಠ್ಯಪುಸ್ತಕ ಖರೀದಿಗೆ ಅನುಕೂಲವಾಯಿತು

ಮೈಸೂರು ಶೇಷಾದ್ರಿಪುರಂ ಪಿಯು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವೆ. ವಿದ್ಯಾರ್ಥಿ ವೇತನದಿಂದ ಕಾಲೇಜು ಶುಲ್ಕ ಹಾಗೂ ಕೆಲವು ಪಠ್ಯಪುಸ್ತಕಗಳ ಖರೀದಿಗೆ ಅನುಕೂಲವಾಯಿತು. ಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ 'ಪ್ರಜಾವಾಣಿ' ಪತ್ರಿಕೆ ತೋರುತ್ತಿರುವ ಕಾಳಜಿಗೆ ಧನ್ಯವಾದಗಳು.

ನಮನ ಎಂ, ಗೋಕುಲಂ

ಕಾಲೇಜು ಶುಲ್ಕ ಭರಿಸಲು ನೆರವು

ನಂಜನಗೂಡಿನ ಯೂನಿಟಿ ಕಾಲೇಜಿನಲ್ಲಿ ಪಿಯುಸಿ ಓದುತ್ತಿರುವೆ. ಕಾಲೇಜಿನ ಶುಲ್ಕ ಭರಿಸಲು 'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನ ತುಂಬಾ ನೆರವಾಯಿತು. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಕೈ ಜೋಡಿಸಿ ಇಂಥ ಸಮಾಜಮುಖಿ ಕಾರ್ಯ ಮಾಡುತ್ತಿರುವುದಕ್ಕೆ ಧನ್ಯವಾದಗಳು. ಇಂತಹ ಕಾರ್ಯ ನಿರಂತರವಾಗಿರಲಿ ಎಂದು ಆಶಿಸುವೆ.

ಅಮಿತ್ ಎಸ್, ನಂಜನಗೂಡು

ರಾಷ್ಟ್ರೀಯ

ಗುಜರಾತ್: ₹1,150 ಕೋಟಿ ಮೌಲ್ಯದ ಕೊಕೇನ್ ವಶ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಮುಂದ್ರಾ ಕರಾವಳಿಯಲ್ಲಿ ಹಡಗೊಂದರಲ್ಲಿದ್ದ ₹1,150 ಕೋಟಿ ಮೌಲ್ಯದ 115 ಕೆ.ಜಿ ಕೊಕೇನ್ ಅನ್ನು ಭಾರತೀಯ ಕರಾವಳಿ ಪಡೆ(ಐಸಿಜಿ) ಮತ್ತು ಗುಜರಾತ್ ಭಯೋತ್ಪಾದನಾ ನಿಗ್ರಹ ದಳ(ಎಟಿಎಸ್) ವಶಪಡಿಸಿಕೊಂಡಿವೆ.

'ಸಾಗರ ಮಾರ್ಗವಾಗಿ ಮಾದಕವಸ್ತು ಸಾಗಣೆ ನಡೆಯುತ್ತಿರುವ ಬಗ್ಗೆ ದೊರಕಿದ ಗುಪ್ತಚರ ಮಾಹಿತಿಯ ಆಧಾರದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು' ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಶೋಧದ ವೇಳೆ ಎಂವಿ ಯುರೋಪ್ ಎಂಬ ಹಡಗಿನಲ್ಲಿ ಅನುಮಾನಾಸ್ಪದ ಚಟುವಟಿಕೆಗಳು ನಡೆಯುತ್ತಿರುವುದು ಪತ್ತೆಯಾಗಿತ್ತು. ಹಡಗಿನಿಂದ ಕೆಲವು ಚೀಲಗಳನ್ನು ಎಸೆಯುತ್ತಿರುವುದನ್ನು ಗಮನಿಸಿದ ಭದ್ರತಾ ಸಿಬ್ಬಂದಿ ಐದು ಚೀಲಗಳನ್ನು ವಶಪಡಿಸಿಕೊಂಡಿದ್ದಾರೆ.

'ಇವುಗಳಲ್ಲಿ ತಲಾ ಒಂದು ಕೆ.ಜಿ ಬಿಳಿ ಪೌಡರ್ ರೀತಿಯ ವಸ್ತುವಿರುವ 115 ಪ್ಯಾಕೆಟ್‌ಗಳಿದ್ದವು. ಅದು ಕೊಕೇನ್ ಎಂದು ಪ್ರಾಥಮಿಕ ಪರೀಕ್ಷೆಯಲ್ಲಿ ದೃಢಪಟ್ಟಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳಂ ಪ್ರವೇಶಿಸದ ಮುಂಗಾರು

ನವದೆಹಲಿ (ಪಿಟಿಐ): ಕೇರಳಂಗೆ ಮುಂಗಾರು ಇನ್ನೂ ಪ್ರವೇಶಿಸಿಲ್ಲ. ಆದರೆ, ನೈರುತ್ಯ ಮತ್ತು ಆಗ್ನೇಯ ಅರಬ್ಬಿ ಸಮುದ್ರ, ಲಕ್ಷದ್ವೀಪ ಪ್ರದೇಶಕ್ಕೆ ಮುಂಗಾರು ಪ್ರವೇಶಿಸಿದೆ.

'ಮುಂದಿನ ಎರಡು–ಮೂರು ದಿನಗಳಲ್ಲಿ ನೈರುತ್ಯ ಮತ್ತು ಆಗ್ನೇಯ ಅರಬ್ಬಿ ಸಮುದ್ರ, ಲಕ್ಷದ್ವೀಪ ಪ್ರದೇಶ, ನೈರುತ್ಯ, ಆಗ್ನೇಯ, ಈಶಾನ್ಯ ಬಂಗಾಳ ಕೊಲ್ಲಿಯಲ್ಲಿ ಮುಂಗಾರು ಮತ್ತಷ್ಟು ಮುನ್ನುಗ್ಗಲು ಅನುಕೂಲಕರ ವಾತವರಣ ಇದೆ' ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ತಿಳಿಸಿದೆ.

'ಮೇ 26ರಂದು ಅಥವಾ ಅದಕ್ಕಿಂತ ನಾಲ್ಕು ದಿನ ಮೊದಲು ಅಥವಾ ನಾಲ್ಕು ದಿನ ನಂತರ ಕೇರಳಂಗೆ ಮುಂಗಾರು ಪ್ರವೇಶಿಸಬಹುದು' ಎಂದು ಐಎಂಡಿ ಈ ಹಿಂದೆ ತಿಳಿಸಿತ್ತು.

ಸಾಮಾನ್ಯವಾಗಿ ಜೂನ್ 1ರಂದು ಕೇರಳಂಗೆ ಮುಂಗಾರು ಪ್ರವೇಶವಾಗುತ್ತದೆ. ಈ ಮೂಲಕ ಮುಂಗಾರು ಋತು (ಜೂನ್‌ನಿಂದ ಸೆಪ್ಟೆಂಬರ್‌ವರೆಗೆ) ಆರಂಭವಾಗುತ್ತದೆ. ಕಳೆದ ವರ್ಷ ಮೇ 24ರಂದು ಮುಂಗಾರು ಪ್ರವೇಶಿಸಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೆಲವು ಮಂದಿ ರಸ್ತೆ ಬಂದ್ ಮಾಡಿ ಪ್ರತಿಭಟನೆ ಮಾಡುತ್ತಿರುವ ಮತ್ತು ಅವರನ್ನು ಪೊಲೀಸರು ತಡೆಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಭಾರತದಲ್ಲಿ ಪ್ರತಿಭಟನೆಗಳು ಸಾಮಾನ್ಯ ಎನ್ನುವಂತಾಗಿವೆ, ಭಾರತದ ಸೇನೆ ಮತ್ತು ಪೊಲೀಸರ ವಿರುದ್ಧ ಅರುಣಾಚಲ ಪ್ರದೇಶದ ಜನರು ಪ್ರತಿಭಟಿಸುತ್ತಿದ್ದಾರೆ; ತಮಗೆ ಸ್ವಾತಂತ್ರ್ಯ ಬೇಕು ಮತ್ತು ಅರುಣಾಚಲ ಪ್ರದೇಶವನ್ನು ಮತ್ತೆ ಚೀನಾಕ್ಕೆ ಸೇರಿಸಬೇಕು ಎನ್ನುವುದು ಅವರ ಬೇಡಿಕೆಯಾಗಿದೆ' ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊ ಕೀಫ್ರೇಮ್‌ಗಳನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಬಳಸಿ ವಿಶ್ಲೇಷಿಸಿದಾಗ, 'ಅರುಣಾಚಲಹೆಡ್‌ಲೈನ್ಸ್' ಎಂಬ ವೆಬ್‌ಸೈಟ್‌ನಲ್ಲಿ 2026ರ ಮೇ 15ರಂದು ಇದೇ ವಿಡಿಯೊ ಅಪ್‌ಲೋಡ್ ಆಗಿರುವುದು ಕಂಡಿತು. ಇತ್ತೀಚೆಗೆ ಜಾರಿಯಾದ ಅರುಣಾಚಲ ಪ್ರದೇಶ ಇನ್ನರ್ ಲೈನ್ ಗೈಡ್‌ಲೈನ್ಸ್–2026 ವಿರೋಧಿಸಿ ಜನ ಪ್ರತಿಭಟನೆ ನಡೆಸಿದರು. ಮಾರ್ಗಸೂಚಿಯಲ್ಲಿನ ಕೆಲವು ಅಂಶಗಳು ಸ್ಥಳೀಯರ ಹಕ್ಕುಗಳಿಗೆ ಧಕ್ಕೆ ತರುವಂತಿವೆ ಎನ್ನುವುದು ಪ್ರತಿಭಟನಕಾರರ ಆರೋಪವಾಗಿತ್ತು ಎಂದೂ ವರದಿ ಉಲ್ಲೇಖಿಸಿದೆ. ಈ ಸುದ್ದಿಯು ಇತರ ಹಲವು ಮಾಧ್ಯಮಗಳಲ್ಲಿಯೂ ವರದಿಯಾಗಿದೆ. ಕೆಲವರು ಈ ವಿಡಿಯೊ ಹಂಚಿಕೊಂಡು, ಜನರು ಸೇನೆ ಮತ್ತು ಪೊಲೀಸರ ವಿರುದ್ಧ ಪ್ರತಿಭಟನೆ ನಡೆಸಿದರು ಎಂದು ಸುಳ್ಳನ್ನು ಬಿತ್ತಲು ಯತ್ನಿಸುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6416

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾನವುಳ್ಳ ಹೆಮ್ಮೆ! (4)
3.ಗಾಳಿಪಟದ ಬುಡಕ್ಕೆ ಕಟ್ಟುವ ಉದ್ದನೆಯ ಪಟ್ಟಿ (4)
5.ಗುಣವಂತ ಹಿಡಿದಿರುವ ದೊಡ್ಡ ಮಡಿಕೆ (3)
6.ತೀರದ ಹತ್ತಿರ ಸಾಗುವಾಗ ಕವಿದ ಅಂಧಕಾರ (3)
8.ರೋಮಾಂಚನ ಎಂದು ಹೀಗೆನ್ನಿ (3)
9.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
10.ಅತಿಯಾದ ಆಸೆ (3)
11.ಕಳವಳದಿಂದ ತಿಂದಿರುವ ತುತ್ತು (3)
12.ಶ್ರೀಕೃಷ್ಣನ ಸ್ನೇಹಿತ (3)
14.ಲಗ್ನಕ್ಕೊಂದು ಪರ್ಯಾಯ ಪದ (3)
16.ವರನಿಗೆ ಕಾಣಿಸಿದ ಕೊಳ (4)
17.ನಗರದಲ್ಲಿರುವ ಸುಸಂಸ್ಕೃತ (4)

ಮೇಲಿಂದ ಕೆಳಕ್ಕೆ

1.ದೇವತೆ ಇಲ್ಲಿಯೇ ಪ್ರತ್ಯಕ್ಷ! (3)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
3.ಬಾದಾರಾಯಣ ಕಾಲದ ಶರ (2)
4.ಈತ ಸಿಟ್ಟಿನ ವ್ಯಕ್ತಿ (3)
7.ರುಚಿಕರವಾದ ಭೋಜನ (5)
8.ಈ ರೀತಿ ಮಾತಿನಲ್ಲಿ ನಯವಾಗಿ ಉಬ್ಬಿಸು (5)
11.ದೇವಾಲಯದ ಗೋಪುರದ ತುದಿ (3)
13.ದಶಕದಿಂದಲೂ ಕಾಡುತ್ತಿರುವ ಸೊಳ್ಳೆ (3)
14.ಮಧುರ ಫಲ ನೀಡುವ ವೃಕ್ಷ (2)
15.ನಾವೆಲ್ಲರೂ ಕುಳಿತ ದೋಣಿ ಉಲ್ಟಾ ಆಗಿದೆಯಲ್ಲಾ! (2)



6415ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪುಷ್ಕರಣಿ 3.ಕಡುಗಲಿ 5.ರಾಯಸ 7.ಹಾವು 8.ಮಿತ 10.ಕಾನನ 11.ಕಾಕಂಬಿ 13.ರಸ 15.ಜಾಣೆ 16.ಬಳಗ 18.ಕರೆಯೋಲೆ 19.ರತ್ನಾಕರ

ಮೇಲಿಂದ ಕೆಳಕ್ಕೆ: 1.ಪುರೋಗಾಮಿ 2.ಣಿರಾ 3.ಕಸ 4.ಲಿಲಾವು 6.ಯವನ 7.ಹಾಹಾಕಾರ 9.ತಪಾಸಣೆ 12.ಕಂಬಳ 14.ಸಡಗರ 15.ಜಾತಕ 16.ಬಲೆ 17.ಗರ

ಸುಡೊಕು 6799

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5		7		2		8	6
6						3	7	4
	7	8	3		9		1	
1		4			5		2	3
				3				
8		7	6				5	9
		3	9		6	5	4	8
5								
	8		5		4		3	2

6798 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಸಹಾಯ ಹಸ್ತ ಪ್ರಾರ್ಥನೆಗಿಂತ ದೊಡ್ಡದು

ನುಡಿ ಬೆಳಗು



ಪಿ.ಚಂದ್ರಿಕಾ

ಪರಮಹಂಸರನ್ನು ನೋಡಲಿಕ್ಕೆ ಅತ್ಯಂತ ದುಃಖಿತನಾಗಿದ್ದ ಭಕ್ತನೊಬ್ಬ ಬರುತ್ತಾನೆ. ಪರಮಹಂಸರು ಪ್ರಾರ್ಥನೆಯಲ್ಲಿ ಮುಳುಗಿಹೋಗಿರುತ್ತಾರೆ. ಅತಿಯಾದ ಚಡಪಡಿಕೆಯಲ್ಲಿದ್ದ ಭಕ್ತ ಕೋಪದಿಂದಲೋ ಅಸಹಾಯಕತೆಯಿಂದಲೋ ಅವರ ಮೇಲೆ ಕೂಗಾಡುತ್ತಾನೆ. ಇದನ್ನು ನೋಡುತ್ತಿದ್ದ ಶಿಷ್ಯ, ಗುರುವನ್ನು ನಿಂದಿಸುವಷ್ಟು ಅಹಂ ಇವನದ್ದೇ ಎಂದು ಅಂದುಕೊಂಡು, ಮಾತಿಗೂ ಅವಕಾಶ ಕೊಡದ ಹಾಗೆ ಅವನನ್ನು ದಬಾಯಿಸಿ ಕಳಿಸಿಬಿಡುತ್ತಾನೆ.

ಪ್ರಾರ್ಥನೆ ಮುಗಿಸಿದ ಪರಮಹಂಸರು ವಿಷಯ ತಿಳಿದು ಹೇಳುತ್ತಾರೆ: 'ನನ್ನ ಬಳಿಗೆ ಬಂದವನನ್ನು ಹೀಗೆ ಗಾಸಿಗೊಳಿಸಿಬಿಟ್ಟರೆ ಹೇಗಪ್ಪಾ? ಅವನು ಎಷ್ಟು ದುಃಖವನ್ನು ಎದೆಯಲ್ಲಿ ಹೊತ್ತು ಬಂದಿದ್ದನೋ? ಕಾಯುವ ತಾಳ್ಮೆಯನ್ನೂ ಕಳಕೊಂಡಿದ್ದನೇನೋ? ಅಂಥವರನ್ನು ನೀನು ಹೀಗೆ ಅಂದಿದ್ದು ಸರಿಯಲ್ಲ. ಎಲ್ಲೂ ಸಿಗದ ಪರಿಹಾರ ನಮ್ಮ ಬಳಿ ಇದೆ ಎಂದು ನಂಬಿ ಬಂದವನನ್ನು ನಾವೂ ಅರ್ಥ ಮಾಡಿಕೊಳ್ಳದಿದ್ದರೆ ಅವನು ಮತ್ತೆಲ್ಲಿಗೆ ಹೋಗಬೇಕು? ಇನ್ನೊಬ್ಬರಿಗೆ ನೋವಾಗದಂತೆ ಬದುಕುವುದೇ ನಮ್ಮ ಧರ್ಮ. ಹೋಗು, ನಾನು ಕ್ಷಮೆ ಕೇಳಿದೆ ಎಂದು ಅವನಲ್ಲಿ ಹೇಳು. ಅವನ ಮನಸ್ಸಿಗೆ ಆದ ನೋವು ಮರೆತುಹೋಗಬೇಕು, ಹಾಗೆ ಮಾತನಾಡಿ ಬಾ' ಎಂದರು.

ಶಿಷ್ಯನಿಗೆ ಜಿಜ್ಞಾಸೆ. ತಪ್ಪು ಮಾಡಿದ್ದು ತಾನು, ಅದಕ್ಕಾಗಿ ಗುರುಗಳು ಯಾಕೆ ಕ್ಷಮೆ ಕೇಳಬೇಕು ಎಂದೆನ್ನಿಸಿತು. ಆದರೂ ಗುರುಗಳು ಹೇಳಿದಂತೆ ಭಕ್ತನಲ್ಲಿಗೆ ಹೋಗಿ ಮಾತನಾಡಿ ತನ್ನ ದುಡುಕಿಗಾಗಿ ಕ್ಷಮೆ ಕೇಳುತ್ತಾನೆ. ಭಕ್ತನು ತಾನೂ ದುಡುಕಬಾರದಿತ್ತು, ಅಷ್ಟು ದೊಡ್ಡವರ ಎದುರು ತಾಳ್ಮೆ ಕಳೆದುಕೊಳ್ಳಬಾರದಿತ್ತು ಎಂದು ಅದಕ್ಕಾಗಿ ಕ್ಷಮೆ ಕೇಳುತ್ತಾನೆ. ವಾಪಸ್ ಬಂದ ಶಿಷ್ಯನನ್ನು ಪರಮಹಂಸರು, 'ಏನೆಲ್ಲಾ ನಡೆಯಿತು, ಆ ವ್ಯಕ್ತಿ ಸಮಾಧಾನಿಯಾದನೆ' ಎಂದು ಕೇಳಿದರು. ಶಿಷ್ಯ, 'ಹೌದು. ನಾನು ಅವನಲ್ಲಿ ನನ್ನ ದುಡುಕಿಗೆ ಕ್ಷಮೆಯನ್ನೂ ಕೇಳಿದೆ' ಎನ್ನುತ್ತಾನೆ. ಪರಮಹಂಸರು ತಕ್ಷಣ, 'ಅವನಲ್ಲಿ ನನ್ನ ಪರವಾಗಿಯೂ ಕ್ಷಮೆ ಕೇಳಿದೆಯೇ?' ಎಂದು ಪ್ರಶ್ನಿಸುತ್ತಾರೆ. ಶಿಷ್ಯ ಗುರುವಿನ ಈ ಪ್ರಶ್ನೆಗೆ ತಬ್ಬಿಬ್ಬಾದರೂ ದೃಢವಾಗಿ, 'ಇಲ್ಲ. ಇದರಲ್ಲಿ ನಿಮ್ಮ ತಪ್ಪಿಲ್ಲ' ಎಂದ. 'ಶಿಷ್ಯ ಮಾಡಿದ ಪ್ರತಿ ತಪ್ಪಿಗೆ ಗುರುವೂ ಹೊಣೆಯೇ. ನಿನ್ನ ತಪ್ಪಿಗೆ ಕ್ಷಮೆ ಸಿಗಬೇಕಾದರೆ ಅವನು ನನ್ನನ್ನೂ ಕ್ಷಮಿಸಬೇಕು ತಿಳಿಯಿತೇ?' ಎಂದರು ಪರಮಹಂಸರು. 'ತಪ್ಪಾ! ಅದು ಹೇಗೆ ಸಾಧ್ಯ? ಇಲ್ಲಿ ನಡೆದದ್ದು ಯಾವುದೂ ನಿಮಗೆ ಗೊತ್ತೇ ಇಲ್ಲ. ನೀವು ಜಗತ್ತಿನ ಆತ್ಯಂತಿಕ ಸ್ಥಿತಿಯಾದ ಪ್ರಾರ್ಥನೆಯಲ್ಲಿದ್ದಿರಿ' ಎಂದ. ಪರಮಹಂಸರು, 'ಪ್ರಾರ್ಥನೆ ಆತ್ಯಂತಿಕ ಸ್ಥಿತಿ ಎಂದು ನಿನಗೆ ಯಾರು ಹೇಳಿದರು? ದುಃಖಿತರ ಅಳಲನ್ನು ತೊಡೆಯಲು ಮುಂದೆ ಚಾಚಿದ ಒಂದು ಕೈ ಪ್ರಾರ್ಥನೆಯಲ್ಲಿ ಮಗ್ನವಾಗಿರುವ ಎರಡು ಕೈಗಳಿಗಿಂತ ಅಧಿಕ ಸುಕೃತಶಾಲಿ ಎನ್ನುವುದನ್ನು ಮರೆಯಬೇಡ. ಎದುರು ಜೀವದ ಮೇಲೆ ಅಷ್ಟು ಪ್ರೀತಿಯಿಲ್ಲದಿದ್ದರೆ ಹೇಗೆ?' ಎಂದರು.

ಶಿಷ್ಯ ಗುರುವಿನ ಕ್ಷಮೆಯನ್ನೂ ಭಕ್ತನಿಗೆ ತಲುಪಿಸಿದ. ಆ ಭಕ್ತ ಓಡಿ ಬಂದು ಗುರುವಿನ ಪಾದಗಳಿಗೆ ಎರಗಿದ. ಪರಮಹಂಸರು ಕೇಳಿದರು, 'ನೀನು ನನ್ನ ಕ್ಷಮಿಸಿದ್ದೀಯ ಅಲ್ಲವೇ?' ಭಕ್ತ ಅಳುತ್ತಾ ಹೇಳಿದ: 'ಇದೆಂಥಾ ಮಾತು. ನಾನು ತುಂಬಾ ಸಣ್ಣವನು'. ಪರಮಹಂಸರು ಶಿಷ್ಯನ ಕಡೆಗೆ ನೋಡುತ್ತಾ ಎಂದರು: 'ನಮ್ಮ ತಪ್ಪಿಗೆ ಕ್ಷಮೆ ಸಿಕ್ಕಿತು'.

ಪ್ರೀತಿಯೊಂದೇ ಎಲ್ಲವನ್ನೂ ಗೆಲ್ಲಬಲ್ಲ ಅಸ್ತ್ರ ಅಲ್ಲವೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

28 ಮೇ 2026 ಗುರುವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ದ್ವಾದಶಿ ಗಂ. 07-58 ನಕ್ಷತ್ರ : ಚಿತ್ತಾ ಗಂ. 08-09 ಯೋಗ : ವರಿಯಾನ್ ಗಂ. 27-55 ಕರಣ : ಬಾಲವ ಗಂ. 07-58, ವೃಷಭ ಮಾಸದ 14 ನೇ ದಿನ. ಮಳೆ ನಕ್ಷತ್ರ : ರೋಹಿಣಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-06 ಸೂರ್ಯಾಸ್ತ : 06-49 ಮುಸ್ಲಿಂ ದಿನಾಂಕ : 11 ದುಲ್ ಹಿಜ್ಜಾ ಅದೃಷ್ಟ ಸಂಖ್ಯೆ : 8, 9

ಮೇಷ: ನಿಮ್ಮ ಅಭಿವೃದ್ಧಿಗೆ ಬೇಕಾದ ಹಲವಾರು ಆಸಕ್ತಿದಾಯಕ ವಿಚಾರಗಳು ನಿಮ್ಮ ಕಿವಿಗೆ ಬೀಳಲಿವೆ. ಜವಳಿ ವ್ಯಾಪಾರಿಗಳಿಗೆ ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಅಧಿಕ ಮಟ್ಟದಲ್ಲಿ ಫಲ ಕೊಡಲಿದೆ.

ವೃಷಭ: ಈ ದಿನದ ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲಕರವಾಗಿದೆ. ವಿದ್ಯೆ ಮತ್ತು ಬುದ್ಧಿವಂತಿಕೆಯನ್ನು ಸರಿಯಾದ ಮಾರ್ಗದಲ್ಲಿ ಬಳಸುವ ಬಗ್ಗೆ ತೀರ್ಮಾನಿಸಿ. ವಾಹನ ಚಾಲನೆಯಲ್ಲಿ ಜಾಗರೂಕತೆ.

ಮಿಥುನ: ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆ ತಾಯಿಯ ಆಶೀರ್ವಾದ ಮತ್ತು ಆರ್ಥಿಕ ಸಹಾಯ ಸಹಕಾರ ದೊರೆಯಲಿದೆ. ಬಾಕಿಯುಳಿದ ಕಾರ್ಯಕ್ಕೆ ಇಂದು ಹೊಸ ಜೀವ ಬರುವುದು. ಕ್ರೀಡಾಪಟುಗಳಿಗೆ ಎಲ್ಲ ಸ್ಪರ್ಧೆಗಳಲ್ಲೂ ಜಯ.

ಕರ್ಕಾಟಕ: ಹೂವಿನ ಜೊತೆಯಲ್ಲಿ ನಾರು ಸ್ವರ್ಗ ಸೇರಿತು ಎಂಬಂತೆ ಪ್ರಭಾವಿ ವ್ಯಕ್ತಿಗಳ ಜತೆಗಿನ ಒಡನಾಟ ಮತ್ತು ಓಡಾಟ ನಿಮಗೆ ಹೆಚ್ಚಿನ ಸ್ಥಾನಮಾನ ತಂದು ಕೊಡಲಿದೆ. ವಿದ್ಯಾರ್ಥಿಗಳಿಗೆ ಸಾಧನೆಗಾಗಿ ಹೆಚ್ಚಿನ ಅವಕಾಶ ಸಿಗುವುದು.

ಸಿಂಹ: ಆಹಾರ ಪದಾರ್ಥಗಳ ವ್ಯಾಪಾರ ಮಾಡುವವರು ಗುಣಮಟ್ಟವನ್ನು ಕಾಪಾಡಿಕೊಳ್ಳುವುದು ಉತ್ತಮ ಹಾಗೂ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ವಿವಾಹದ ವಿಚಾರದಲ್ಲಿ ಇನ್ನೊಮ್ಮೆ ಯೋಚಿಸಿ ತೀರ್ಮಾನಿಸಿರಿ.

ಕನ್ಯಾ: ಸ್ವಂತ ಉದ್ಯಮಿಗಳಿಗೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಎಲ್ಲಾ ರೀತಿಯ ಸಹಾಯ ಸಹಕಾರ ಒದಗಿ ಬರುವುದು. ನಿಮ್ಮ ಸಹೋದರಿಯ ನಿಶ್ಚಿತಾರ್ಥ ಅಥವಾ ವಿವಾಹದ ಸಲುವಾಗಿ ತಯಾರಿಯನ್ನು ನಡೆಸುವಿರಿ.

ತುಲಾ: ದೇವರ ಕೆಲಸಗಳಿಗಾಗಿ ಅಥವಾ ದೇವರ ದರ್ಶನಕ್ಕಾಗಿ ಹಣ ವ್ಯಯ ಆಗುವ ಲಕ್ಷಣವಿದೆ. ಆರಂಭದಲ್ಲಿ ಕೆಲಸಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ನಿಮ್ಮಲ್ಲಿ ಧೈರ್ಯ ಹೆಚ್ಚುತ್ತದೆ. ಮುಕ್ತಾಯದ ಹಂತದ ಬಗ್ಗೆ ಗಮನವಿರಲಿ.

ವೃಶ್ಚಿಕ: ಕೃಷಿಕರು ಈಗಿನ ಕಾಲಕ್ಕೆ ತಕ್ಕಂತೆಯೇ ಯಂತ್ರೋಪಕರಣಗಳ ಬಳಕೆ ಮಾಡಿಕೊಳ್ಳುವ ಬಗ್ಗೆ ಹೆಚ್ಚಿನ ಗಮನಹರಿಸಿ. ಅನಿರೀಕ್ಷಿತ ಉಡುಗೊರೆ ಸಿಗಲಿದೆ. ಎಂಟು ವರ್ಷದ ಒಳಗಿನ ಮಕ್ಕಳು ಶೀತದಿಂದ ಬಳಲುವಂತಾಗಬಹುದು.

ಧನು: ಎಂಜಿನಿಯರಿಂಗ್ ಕೆಲಸಗಾರರು ತಮ್ಮ ಕಾರ್ಯದಲ್ಲಿ ಚಾಣಕ್ಯ ನೀತಿ ಅನುಸರಿಸುವುದರಿಂದ ವ್ಯವಹಾರದಲ್ಲಿ ಪ್ರಶಂಸೆ ಹಾಗೂ ಯಶಸ್ಸು ಕಾಣುವಿರಿ ಹಾಗೂ ಇನ್ನು ಯಶಸ್ಸಿನ ಹೊಸ ಮಾರ್ಗಗಳು ನಿಮಗಿಂದು ಅರಿವಾಗುವುದು.

ಮಕರ: ದಿನದ ಅಂತ್ಯದಲ್ಲಿ ನಾಳೆಯ ದಿನದ ಅಧಿಕವಾದ ಕೆಲಸಗಳ ಬಗ್ಗೆ ಗಮನ ಹರಿಸುವುದು ಉತ್ತಮ. ವಿವಿಧ ರೀತಿಯ ಬರವಣಿಗೆ ಮುಖಾಂತರ ಹೆಚ್ಚುವರಿ ಆದಾಯವಿರುವುದು. ಮಕ್ಕಳಿಂದ ನಿಮಗೆ ಸಂತೋಷವಾಗುವುದು.

ಕುಂಭ: ಆಪ್ತರ ಸಕಾಲಿಕ ಸಹಾಯಕ್ಕೆ ಧನ್ಯವಾದ ತಿಳಿಸಲು ಮರೆಯದಿರಿ ಮತ್ತು ಅವರ ಸಂಪರ್ಕವನ್ನು ಭದ್ರ ಮಾಡಿಕೊಳ್ಳಿ. ಸಹೋದರರ ಆಗಮನದಿಂದ ಸಂತೋಷ ಇರಲಿದೆ. ಕೌಟುಂಬಿಕವಾದ ಶುಭ ಸಮಾಚಾರ ಕೇಳಿಬರಲಿದೆ.

ಮೀನ: ನೀವು ಮಾಡುತ್ತಿರುವ ಕೆಲಸದಲ್ಲಿ ನಿಮ್ಮ ಗಮನಕ್ಕೆ ಬರುವ ತಪ್ಪುಗಳನ್ನು ಪುನರಾವರ್ತನೆಯಾಗದಂತೆ ಗಮನಿಸಿದರೆ ಯಶಸ್ಸಿನ ದಾರಿ ಕಾಣಬಹುದು. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಮೇಲೆ ಅಧಿಕವಾದ ಶ್ರಮವಹಿಸಿ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,913
ಇಂದಿನ ಅಂತ್ಯ: 23,907
ದಿನದ ಕನಿಷ್ಠ: 23,858
6

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹620
12 ಕ್ಕೆ ₹86
ಮೈಸೂರು: 100 ಕ್ಕೆ ₹630

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹222-600
ದ್ವಿತಳಿ (ಬಿ.ವಿ) ₹334-812

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹247
ಆರ್‌ಎಸ್‌ಎಸ್-5 ₹238
ಗುಡ್ ಲಾಟ್ ₹205

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹23,250
ಎಸಿ ₹14,140
ಆರ್‌ಪಿ ₹18,400
ಆರ್‌ಸಿ ₹9,850

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1640 (1640)
ಸೋಯಾ (ರಿಫೈನ್ಡ್) ₹1500 (1510)
ಸೂರ್ಯಕಾಂತಿ (ರಿಫೈನ್ಡ್) ₹1650 (1655)
ಪಾಮೋಲಿನ್ ₹1490 (1490)

ವೆಚ್ಚ ಏರಿಕೆ, ವಿಮಾನ ಸೇವೆ ಕಡಿತ

ಯುದ್ಧ: ವಿವಿಧ ವಿಮಾನ ಕಂಪನಿಗಳಿಂದ ಪ್ರಯಾಣ ಸೇವೆ ತಗ್ಗಿಸುವ ಹೇಳಿಕೆ

ಮುಖ್ಯಾಂಶಗಳು
- ಯುದ್ಧದಿಂದಾಗಿ ವಿಮಾನ ಇಂಧನ ಬೆಲೆ ಏರಿಕೆ
- ಕಂಪನಿಗಳ ಕಾರ್ಯಾಚರಣೆ ವೆಚ್ಚ ಜಾಸ್ತಿ
- ಮಾರ್ಗಗಳ ಮೇಲಿನ ನಿರ್ಬಂಧದಿಂದ ಸಮಸ್ಯೆ

ನವದೆಹಲಿ/ಮುಂಬೈ (ಪಿಟಿಐ): ವಿಮಾನ ಇಂಧನ ಬೆಲೆಯಲ್ಲಿನ ಹೆಚ್ಚಳ ಹಾಗೂ ಪ್ರಯಾಣಿಕರ ಸಂಖ್ಯೆಯಲ್ಲಿನ ಇಳಿಕೆಯ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಉದ್ದೇಶದಿಂದ ದೇಶಿ ವಿಮಾನ ಸಂಚಾರವನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಲು ಏರ್ ಇಂಡಿಯಾ, ಇಂಡಿಗೊ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಗಳು ತೀರ್ಮಾನಿಸಿವೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮವಾಗಿ ವಿಮಾನಯಾನ ಸೇವಾ ಕಂಪನಿಗಳು ಇಂಧನ ಬೆಲೆ ಹೆಚ್ಚಳ, ಸಂಚಾರ ನಿರ್ಬಂಧ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ.

ಈ ಸಮಸ್ಯೆಗಳಿಂದಾಗಿ ಕಂಪನಿಗಳ ಕಾರ್ಯಾಚರಣೆ ವೆಚ್ಚ ಜಾಸ್ತಿಯಾಗಿದೆ.

ವೆಚ್ಚ ಜಾಸ್ತಿ ಆಗುತ್ತಿರುವ ಕಾರಣದಿಂದಾಗಿ ಈ ಮೂರು

ಕಂಪನಿಗಳು ಮುಂದಿನ ತಿಂಗಳುಗಳಲ್ಲಿ ದೇಶಿ ವಿಮಾನಯಾನ ಸೇವೆಗಳಲ್ಲಿ ಒಂದಿಷ್ಟು ಬದಲಾವಣೆಗಳನ್ನು ತರಲಿವೆ. ಏರ್ ಇಂಡಿಯಾ ಕಂಪನಿಯು ಜೂನ್ ಮತ್ತು ಜುಲೈಗೆ ಅನ್ವಯವಾಗುವಂತೆ ದೇಶಿ ವಿಮಾನ ಸಂಚಾರವನ್ನು ಶೇ 22ರಷ್ಟು ಕಡಿಮೆ ಮಾಡಲಿದೆ, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಯು ಜೂನ್ ತಿಂಗಳಲ್ಲಿ ಸಂಚಾರವನ್ನು ಶೇ 10ರಷ್ಟು ತಗ್ಗಿಸಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇಂಡಿಗೊ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಅನ್ವಯವಾಗುವಂತೆ ಶೇ 12ರಿಂದ ಶೇ 15ರಷ್ಟು ವಿಮಾನ ಸಂಚಾರವನ್ನು ಕಡಿಮೆ ಮಾಡಲಿದೆ.

ಏರ್ ಇಂಡಿಯಾ ಕಂಪನಿಯು ಪ್ರತಿವಾರ ಸರಿಸುಮಾರು 3,600 ವಿಮಾನ ಹಾರಾಟ ಸೇವೆಗಳನ್ನು ಒದಗಿಸುತ್ತದೆ. ಇದರಲ್ಲಿ ಶೇ 22ರಷ್ಟು ಸೇವೆಗಳು ಕಡಿಮೆ ಆಗಲಿರುವುದರ ಪರಿಣಾಮವಾಗಿ 790 ಸೇವೆಗಳು ಕಡಿಮೆ ಆಗಲಿವೆ.

‘ಏರ್ ಇಂಡಿಯಾ ಕಂಪನಿಯು ಬೇಡಿಕೆ ಹಾಗೂ ಕಾರ್ಯಾಚರಣೆ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತ ಇರಲಿದೆ. ಪರಿಸ್ಥಿತಿಯಲ್ಲಿ ಸ್ಥಿರತೆ ಕಂಡುಬಂದಾಗ ವಿಮಾನ ಹಾರಾಟ ಪ್ರಮಾಣವು ಮೊದಲಿನಂತಾಗಬಹುದು’ ಎಂದು ಕಂಪನಿ ಹೇಳಿದೆ.

ಇಂಡಿಗೊ ಕಂಪನಿಯು ದೇಶಿ ಮಾರ್ಗಗಳಲ್ಲಿ ವಾರಕ್ಕೆ ಅಂದಾಜು 13 ಸಾವಿರ ವಿಮಾನ ಹಾರಾಟ ಸೇವೆ ಒದಗಿಸುತ್ತಿದೆ. ಇದರಲ್ಲಿ ಶೇ 15ರಷ್ಟು ಕಡಿಮೆ ಆದಲ್ಲಿ, ವಾರಕ್ಕೆ 2,000 ವಿಮಾನ ಹಾರಾಟ ಸೇವೆಗಳನ್ನು ಕಡಿಮೆ ಮಾಡಿದಂತಾಗುತ್ತದೆ.

ಮೇ 13ರಂದು ನೀಡಿದ ಹೇಳಿಕೆಯೊಂದರಲ್ಲಿ ಏರ್ ಇಂಡಿಯಾ ಕಂಪನಿಯು, ಅಂತರರಾಷ್ಟ್ರೀಯ ಮಾರ್ಗಗಳಲ್ಲಿನ ವಿಮಾನ ಸೇವೆಗಳನ್ನು ಕೂಡ ಜೂನ್-ಆಗಸ್ಟ್ ಅವಧಿಯಲ್ಲಿ ಕಡಿಮೆ ಮಾಡುವುದಾಗಿ ತಿಳಿಸಿದೆ.

ಕಂಪನಿಯು ದೆಹಲಿ–ಷಿಕಾಗೊ, ದೆಹಲಿ–ನೆವಾರ್ಕ್, ಮುಂಬೈ–ನ್ಯೂಯಾರ್ಕ್, ದೆಹಲಿ–ಶಾಂಘೈ, ಚೆನ್ನೈ–ಸಿಂಗಪುರ, ಮುಂಬೈ–ಢಾಕಾ, ದೆಹಲಿ–ಮಾಲಿ ಸೇವೆ ತಾತ್ಕಾಲಿಕವಾಗಿ ನಿಲ್ಲಿಸಲಿದೆ.

ಚಿಟಿಕೆ ಸುದ್ದಿ

ಹಮಾಸ್ ನಾಯಕನ ಹತ್ಯೆ

ದಾರ್ ಅಲ್–ಬಲಾ/ಪ್ಯಾರಿಸ್ (ಎಪಿ/ಎಎಫ್‌ಪಿ): ಗಾಜಾ ಪಟ್ಟಿಯ ಮೇಲಿನ ದಾಳಿ ಮುಂದುವರಿಸಿರುವ ಇಸ್ರೇಲ್, ಹಮಾಸ್ ಬಂಡುಕೋರ ಸಂಘಟನೆಯ ಸೇನಾ ವಿಭಾಗದ ಹೊಸ ನಾಯಕ ಮೊಹಮ್ಮದ್ ಒದೆಹ್ ಹತ್ಯೆ ಮಾಡಿದೆ.

ಈ ಬಗ್ಗೆ ಇಸ್ರೇಲ್ ಬುಧವಾರ ಮಾಹಿತಿ ನೀಡಿದೆ. ಒದೆಹ್ ಅವರು ಮೃತಪಟ್ಟಿರುವುದನ್ನು ಕುಟುಂಬಸ್ಥರು ಖಚಿತಪಡಿಸಿದ್ದಾರೆ. ಆದರೆ, ಸಂಘಟನೆಯು ಪ್ರತಿಕ್ರಿಯೆ ನೀಡಿಲ್ಲ.

‘ಗಾಜಾ ಮೇಲೆ ಮಂಗಳವಾರ ನಡೆಸಿದ ದಾಳಿಯಲ್ಲಿ ಒದೆಹ್‌ನನ್ನು ಹತ್ಯೆ ಮಾಡಲಾಗಿದೆ. ಈತ 2023ರ ಅಕ್ಟೋಬರ್‌ನಲ್ಲಿ ಇಸ್ರೇಲ್ ಮೇಲೆ ನಡೆಸಿದ ದಾಳಿಯ ಯೋಜನಾಕರ್ತರಲ್ಲಿ ಒಬ್ಬನಾಗಿದ್ದ’ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಟ್ಜ್ ಮಾಹಿತಿ ನೀಡಿದರು. ಈತ ಹಮಾಸ್‌ನ ಸೇನಾ ವಿಭಾಗದ ನಾಯಕ ಎನ್ನುವ ಬಗ್ಗೆ ಸಂಘಟನೆಯಾಗಲಿ, ಕುಟುಂಬಸ್ಥರಾಗಲಿ ಸ್ಪಷ್ಟನೆ ನೀಡಿಲ್ಲ.

‘ಯುದ್ಧದಿಂದಾಗಿ ವಿಮಾ ವಲಯದ ಮೇಲೆ ಪರಿಣಾಮ’

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ದೀರ್ಘ ಅವಧಿಗೆ ಮುಂದುವರಿದರೆ ಜನರ ಆದಾಯ ಕಡಿಮೆ ಆಗಬಹುದು, ಅದರಿಂದಾಗಿ ದೇಶದ ವಿಮಾ ವಲಯದ ಬೆಳವಣಿಗೆ ಕಡಿಮೆ ಆಗಬಹುದು ಎಂದು (ಎಲ್‌ಐಸಿ) ಸಿಇಒ ಆರ್. ದೊರೈಸ್ವಾಮಿ ಅವರು ಹೇಳಿದ್ದಾರೆ.

‘ನಾವೆಲ್ಲ ಬಹಳ ಕಷ್ಟದ ಸ್ಥಿತಿಯಲ್ಲಿದ್ದೇವೆ. ದೇಶವು ಇದುವರೆಗೆ ಯುದ್ಧದ ಪೂರ್ಣ ಪರಿಣಾಮದಿಂದ ಗ್ರಾಹಕರನ್ನು ರಕ್ಷಿಸುವ ಕೆಲಸ ಮಾಡಿದೆ’ ಎಂದು ಅವರು ಹೇಳಿದ್ದಾರೆ. ಬಿಕ್ಕಟ್ಟು ಬಹುಕಾಲ ಮುಂದುವರಿದಲ್ಲಿ ವ್ಯಕ್ತಿಗಳ ವೆಚ್ಚ ಹಾಗೂ ಉಳಿತಾಯದ ಮೇಲೆ ಪರಿಣಾಮ ಆಗಲಿದೆ ಎಂದು ಅವರು ತಿಳಿಸಿದ್ದಾರೆ.

ಅಹಿಂದ ನಾಯಕ ಎನಿಸಿರುವ ಸಿದ್ದರಾಮಯ್ಯನವರನ್ನು ಅಧಿಕಾರದಿಂದ ಇಳಿಸಿದರೆ ಭವಿಷ್ಯದಲ್ಲಿ ಕಾಂಗ್ರೆಸ್‌ಗೆ ಹಿನ್ನಡೆ

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಬೈಜು ರವೀಂದ್ರನ್‌ಗೆ ಜೈಲು ಶಿಕ್ಷೆ

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯ ಸಂಸ್ಥಾಪಕ ಬೈಜು ರವೀಂದ್ರನ್ ಅವರಿಗೆ ಸಿಂಗಪುರದ ನ್ಯಾಯಾಲಯವೊಂದು ನ್ಯಾಯಾಂಗ ನಿಂದನೆಯ ತಪ್ಪು ಮಾಡಿದ್ದಕ್ಕಾಗಿ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ಕೆಲವು ವಿವರಗಳನ್ನು ಬಹಿರಂಗಪಡಿಸುವಂತೆ ನೀಡಿದ್ದ ಆದೇಶವನ್ನು ರವೀಂದ್ರನ್ ಅವರು ಪಾಲಿಸಿಲ್ಲ ಎಂಬುದಕ್ಕೆ ಸಂಬಂಧಿಸಿದಂತೆ ಅವರಿಗೆ ಈ ಶಿಕ್ಷೆ ವಿಧಿಸಲಾಗಿದೆ. ಆದರೆ ತಾವು ತಪ್ಪು ಮಾಡಿಲ್ಲ, ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಆಲೋಚನೆ ಇದೆ ಎಂದು ರವೀಂದ್ರನ್ ಹೇಳಿದ್ದಾರೆ.

ಈ ಆದೇಶವು ರವೀಂದ್ರನ್ ಅವರಿಗೆ ಇದುವರೆಗೆ ಎದುರಾದ ಅತ್ಯಂತ ಗಂಭೀರವಾದ ಕಾನೂನಾತ್ಮಕ ಹಿನ್ನಡೆ ಎಂದು ಹೇಳಲಾಗಿದೆ.

ರವೀಂದ್ರನ್ ಅವರು ಅಧಿಕಾರಿಗಳ ಎದುರು ಶರಣಾಗಬೇಕು, ಕಾನೂನು ಪ್ರಕ್ರಿಯೆಗಳ ವೆಚ್ಚವಾಗಿ 90 ಸಾವಿರ ಸಿಂಗಪುರ ಡಾಲರ್ ಪಾವತಿಸಬೇಕು, ಸಿಂಗಪುರದ ಬೀಆರ್ ಇನ್ವೆಸ್ಟ್‌ಕೊ ಕಂಪನಿಯ ಮಾಲೀಕ ತಾವು ಎಂಬುದನ್ನು ಹೇಳುವ ದಾಖಲೆಗಳನ್ನು ಒದಗಿಸಬೇಕು ಎಂದು ಕೋರ್ಟ್ ಸೂಚಿಸಿದೆ.

ಕತಾರ್ ಇನ್ವೆಸ್ಟ್‌ಮೆಂಟ್ ಅಥಾರಿಟಿಯ ಅಂಗಸಂಸ್ಥೆಯೊಂದು ಈ ಪ್ರಕರಣವನ್ನು ಕೋರ್ಟ್ ಅಂಗಳಕ್ಕೆ ತಂದಿತ್ತು. ಈ ಅಂಗಸಂಸ್ಥೆಯು ಬೈಜುಸ್ ಕಂಪನಿಯಲ್ಲಿ ಹೂಡಿಕೆ ಮಾಡಿದೆ.

ಸಿಂಗಪುರದ ನ್ಯಾಯಾಲಯ ನೀಡಿರುವ ಆದೇಶವು ‘ವಂಚನೆ, ಅಪ್ರಾಮಾಣಿಕತೆ ಅಥವಾ ತಪ್ಪು ಮಾಡಿರುವುದನ್ನು ಹೇಳುತ್ತಿಲ್ಲ. ಅದು ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದ ಒಂದು ಪ್ರಕ್ರಿಯೆ ಮಾತ್ರ’ ಎಂದು ರವೀಂದ್ರನ್ ಅವರು ಹೇಳಿದ್ದಾರೆ.

ಇನ್ಫಿ ಹಿಂದಿಕ್ಕಿದ ಅದಾನಿ ಪವರ್

ನವದೆಹಲಿ (ಪಿಟಿಐ): ಮಾರುಕಟ್ಟೆ ಬಂಡವಾಳದ ಆಧಾರದಲ್ಲಿ ಈಗ ಅದಾನಿ ಪವರ್ ಕಂಪನಿಯು ಐ.ಟಿ ಸೇವಾ ಕಂಪನಿ ಇನ್ಫೊಸಿಸ್‌ಗಿಂತ ಮುಂದೆ ಸಾಗಿದೆ.

ಅದಾನಿ ಪವರ್ ಕಂಪನಿಯ ಷೇರುಮೌಲ್ಯವು ಶೇ 1.72ರಷ್ಟು ಹೆಚ್ಚಳ ಕಂಡಿದೆ. ಕಂಪನಿಯು ಈಗ ಮಾರುಕಟ್ಟೆ ಬಂಡವಾಳದ ಆಧಾರದಲ್ಲಿ ದೇಶದ 11ನೆಯ ಅತಿದೊಡ್ಡ ಕಂಪನಿಯಾಗಿದೆ.

ಬುಧವಾರದ ವಹಿವಾಟಿನ ಅಂತ್ಯದ ಹೊತ್ತಿಗೆ ಅದಾನಿ ಪವರ್ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹4.79 ಲಕ್ಷ ಕೋಟಿ ಆಗಿದೆ. ಇನ್ಫೊಸಿಸ್‌ನ ಮಾರುಕಟ್ಟೆ ಬಂಡವಾಳ ಮೌಲ್ಯವು ₹4.70 ಲಕ್ಷ ಕೋಟಿ ಆಗಿದೆ.

ಈ ವರ್ಷದಲ್ಲಿ ಇದುವರೆಗೆ ಅದಾನಿ ಪವರ್ ಕಂಪನಿಯ ಷೇರುಮೌಲ್ಯವು ಶೇ 74ರಷ್ಟು ಜಾಸ್ತಿ ಆಗಿದೆ. ಇನ್ಫೊಸಿಸ್‌ನ ಷೇರುಮೌಲ್ಯವು ಶೇ 28ರಷ್ಟು ಕಡಿಮೆ ಆಗಿದೆ.

ಅದಾನಿ ಸಮೂಹದ ಎಲ್ಲ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹19.44 ಲಕ್ಷ ಕೋಟಿ ಆಗಿದೆ.

ವ್ಯಾಪಾರ ಒಪ್ಪಂದದ ವಿವರಗಳನ್ನು ಅಂತಿಮಗೊಳಿಸಲು ಚರ್ಚೆ: ಕೇಂದ್ರ

ಮಾತುಕತೆಗೆ ಬರಲಿದೆ ಅಮೆರಿಕ ನಿಯೋಗ

ನವದೆಹಲಿ (ಪಿಟಿಐ): ಮಧ್ಯಂತರ ವ್ಯಾಪಾರ ಒಪ್ಪಂದದ ವಿವರಗಳನ್ನು ಅಂತಿಮಗೊಳಿಸುವ ಬಗ್ಗೆ ಚರ್ಚಿಸಲು ಅಮೆರಿಕದ ತಂಡವೊಂದು ಜೂನ್ 1ರಿಂದ 4ರವರೆಗೆ ಭಾರತಕ್ಕೆ ಭೇಟಿ ನೀಡಲಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಬುಧವಾರ ತಿಳಿಸಿದೆ.

ಅಮೆರಿಕದ ತಂಡವು ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ (ಬಿಟಿಎ) ಸಂಬಂಧಿಸಿದ ಮಾತುಕತೆಗಳನ್ನು ಮುಂದಕ್ಕೆ ಒಯ್ಯುವ ಉದ್ದೇಶ ಹೊಂದಿದೆ ಎಂದು ಸಚಿವಾಲಯ ಹೇಳಿದೆ.

ಮಧ್ಯಂತರ ವ್ಯಾಪಾರ ಒಪ್ಪಂದದ ಚೌಕಟ್ಟನ್ನು ಅಂತಿಮಗೊಳಿಸಲಾಗಿದೆ ಎಂದು ಭಾರತ ಮತ್ತು ಅಮೆರಿಕ ಫೆಬ್ರುವರಿ 7ರಂದು ಜಂಟಿ ಹೇಳಿಕೆ ಬಿಡುಗಡೆ ಮಾಡಿವೆ. ಈಗ ಎರಡೂ

ದೇಶಗಳು ಈ ಒಪ್ಪಂದದ ಕಾನೂನು ಪಠ್ಯವನ್ನು ಅಂತಿಮಗೊಳಿಸಬೇಕಿದೆ.

ಆ ಚೌಕಟ್ಟಿನ ಪ್ರಕಾರ ಅಮೆರಿಕವು ಭಾರತದ ಸರಕುಗಳ ಮೇಲಿನ ಸುಂಕವನ್ನು ಶೇ 50ರಿಂದ ಶೇ 18ಕ್ಕೆ ಇಳಿಸಲು ಒಪ್ಪಿದೆ. ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ಕಾರಣಕ್ಕೆ ಭಾರತದ ಸರಕುಗಳ ಮೇಲೆ ಹೇರಿದ್ದ ಶೇ 25ರಷ್ಟು ಹೆಚ್ಚುವರಿ ಸುಂಕವನ್ನು ಅಮೆರಿಕ ಹಿಂಪಡೆದಿದೆ. ಇನ್ನುಳಿದ ಶೇ 25ರಷ್ಟು ಸುಂಕವನ್ನು ಶೇ 18ಕ್ಕೆ ತರಲು ಅಮೆರಿಕ ಒಪ್ಪಿದೆ.

ಆದರೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜಾರಿಗೆ ತಂದ ಪ್ರತಿಸುಂಕವನ್ನು ಅಲ್ಲಿನ ಸುಪ್ರೀಂ ಕೋರ್ಟ್ ಫೆಬ್ರುವರಿ 20ರಂದು ರದ್ದುಪಡಿಸಿತು. ನಂತರದಲ್ಲಿ ಟ್ರಂಪ್ ಅವರು ಎಲ್ಲ ದೇಶಗಳ ಸರಕುಗಳ ಮೇಲೆ 150 ದಿನಗಳವರೆಗೆ ಶೇ 10ರಷ್ಟು ಸುಂಕ ವಿಧಿಸುವುದಾಗಿ ಹೇಳಿದರು.

ಈ ವಿದ್ಯಮಾನಗಳ ಕಾರಣದಿಂದಾಗಿ ಭಾರತ ಮತ್ತು ಅಮೆರಿಕದ ಅಧಿಕಾರಿಗಳ ನಡುವೆ ಫೆಬ್ರುವರಿಯಲ್ಲಿ ನಡೆಯಬೇಕಿದ್ದ ಮಾತುಕತೆಯನ್ನು ಮುಂದೂಡಲಾಯಿತು. ಎರಡೂ ದೇಶಗಳ ಅಧಿಕಾರಿಗಳು ಕಳೆದ ತಿಂಗಳು ವಾಷಿಂಗ್ಟನ್‌ನಲ್ಲಿ ಭೇಟಿಯಾಗಿದ್ದರು.

‘ಮಾತುಕತೆಯನ್ನು ಮುಂದಕ್ಕೆ ಒಯ್ಯಲು ಅಮೆರಿಕದ ತಂಡವು ಭಾರತಕ್ಕೆ ಭೇಟಿ ನೀಡುತ್ತಿದೆ’ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ. ಒಪ್ಪಿಕೊಂಡ ಚೌಕಟ್ಟಿನ ಅನ್ವಯ ಭಾರತವು ಅಮೆರಿಕದ ಕೈಗಾರಿಕಾ ಸರಕುಗಳು ಹಾಗೂ ಅಲ್ಲಿನ ಆಹಾರ ಮತ್ತು ಕೃಷಿ ಉತ್ಪನ್ನಗಳ ಮೇಲಿನ ಸುಂಕವನ್ನು ತಗ್ಗಿಸಲು ಸಮ್ಮತಿ ಸೂಚಿಸಿದೆ.

ಭಾರತದ ಜೊತೆಗಿನ ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಮುಂಬರುವ ತಿಂಗಳುಗಳಲ್ಲಿ ಪೂರ್ಣಗೊಳಿಸುವ ಆಶಾವಾದವನ್ನು ಭಾರತದಲ್ಲಿನ ಅಮೆರಿಕದ ರಾಯಭಾರಿ ಸರ್ಜಿಯೊ ಗೋರ್ ವ್ಯಕ್ತಪಡಿಸಿದ್ದಾರೆ.

ಅಮೆರಿಕ ಜತೆ ಮತ್ತೆ ಯುದ್ಧ ನಡೆಯುವ ಸಾಧ್ಯತೆ ಇಲ್ಲ: ಇರಾನ್

ಟೆಹರಾನ್/ವಾಷಿಂಗ್ಟನ್ (ಎಎಫ್‌ಪಿ/ಎಪಿ): ‘ಅಮೆರಿಕ ಜತೆ ಮತ್ತೊಮ್ಮೆ ಯುದ್ಧ ನಡೆಸುವ ಸಾಧ್ಯತೆ ಕಡಿಮೆ. ಆದರೆ, ನಾವು ಯಾವುದೇ ಸಂದರ್ಭಕ್ಕೂ ಸಿದ್ಧರಿದ್ದೇವೆ’ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಬುಧವಾರ ಹೇಳಿದೆ.

ಏಪ್ರಿಲ್‌ನಿಂದ ಇರಾನ್ ಮತ್ತು ಅಮೆರಿಕ ಮಧ್ಯೆ ಕದನ ವಿರಾಮ ಏರ್ಪಟ್ಟಿತ್ತು. ಆದರೆ, ಇದನ್ನು ಉಲ್ಲಂಘಿಸಿ ಅಮೆರಿಕವು ಮಂಗಳವಾರ ಇರಾನ್‌ಗೆ ವೈಮಾನಿಕ ದಾಳಿ ನಡೆಸಿತ್ತು. ‘ಸ್ವಯಂ ರಕ್ಷಣೆ’ಗಾಗಿ ದಾಳಿ ನಡೆಸಿದ್ದೇವೆ ಎಂದು ಅಮೆರಿಕ ಹೇಳಿತ್ತು. ಇದಾದ ಮರುದಿನವೇ ಇರಾನ್ ರೆವಲ್ಯೂಷರಿ ಗಾರ್ಡ್ ಈ ಹೇಳಿಕೆ ನೀಡಿದೆ.

‘ಶತ್ರುಗಳು ದುರ್ಬಲಗೊಂಡಿದ್ದಾರೆ. ಆದ್ದರಿಂದ ಯುದ್ಧ ನಡೆಸುವ ಸಾಧ್ಯತೆ ಕಡಿಮೆಯೇ ಇದೆ. ಆದರೆ, ನಮ್ಮ ಸೇನಾ ಪಡೆಗಳು ಶಸ್ತ್ರಸಜ್ಜಿತರಾಗಿ ನಮ್ಮ ಆದೇಶಕ್ಕೆ ಕಾಯುತ್ತಾ ಇದ್ದಾರೆ’ ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್‌ನ ನೌಕಾ ಪಡೆಯ ರಾಜಕೀಯ ಮುಖ್ಯಸ್ಥ ಮೊಹಮ್ಮದ್ ಅಕ್ಬರ್‌ಜಾದೆ ಹೇಳಿಕೆ ನೀಡಿದ್ದಾರೆ.

‘ಚಹಬಹಾರ್‌ನಿಂದ ಮಹಶಹರ್‌ವರೆಗಿನ ಪ್ರದೇಶವನ್ನು ಸ್ಮಶಾನವಾಗಿಸಲು ನಾವು ಬಿಡುವುದಿಲ್ಲ. ಇದರಲ್ಲಿ ಅನುಮಾನವೇ ಬೇಡ’ ಎಂದಿದ್ದಾರೆ. ಈ ಪ್ರದೇಶಗಳು ಇರಾನ್‌ನ ದಕ್ಷಿಣ ಭಾಗ ಎರಡು ತುದಿಗಳಾಗಿದ್ದಾವೆ.

ಸ್ತ್ರೀಯರಿಗೆ ಶೇ 33ರಷ್ಟು ಸೀಟು: ಟಿಡಿಪಿ

ಹೈದರಾಬಾದ್: ಆಂಧ್ರ ಪ್ರದೇಶದ ಆಡಳಿತಾರೂಢ ‘ತೆಲುಗು ದೇಶಂ ಪಕ್ಷವು’ 2029ರ ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರಿಗೆ ಪಕ್ಷದಿಂದ ಶೇ 33ರಷ್ಟು ಟಿಕೆಟ್ ಮೀಸಲಿರಿಸುವುದಾಗಿ ಹೇಳಿದೆ.

ಟಿಡಿಪಿಯ ವಾರ್ಷಿಕ ಮಹಾ ಅಧಿವೇಶನ 2026ರ ಮಹಾನಾಡು ಕಾರ್ಯಕ್ರಮದ ಮೊದಲ ದಿನವೇ ಈ ಮಹತ್ವದ ಘೋಷಣೆ ಮಾಡಲಾಗಿದೆ. ಈ ಬಾರಿಯ ಸಮಾವೇಶವನ್ನು ‘ಸ್ತ್ರೀ ಶಕ್ತಿ’ ಎಂಬ ವಿಷಯದ ಅಡಿಯಲ್ಲಿ ಆಯೋಜಿಸಲಾಗಿದೆ.

‘ಎನ್‌ಡಿಎ ಸರ್ಕಾರ ಈಗಾಗಲೇ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸುವ ಮೂಲಕ ಐತಿಹಾಸಿಕ ಹೆಜ್ಜೆ ಇಟ್ಟಿದೆ’ ಎಂದು ಪಕ್ಷದ ಕಾರ್ಯಾಧ್ಯಕ್ಷ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರಾದ ನಾರಾ ಲೋಕೇಶ್ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
27-05-2026

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಪಾಮ್ ವಾರದ ಡೆಲಿವರಿ	1488 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1555)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,54,900 (1,57,200)
ಬೆಳ್ಳಿ ಕೆ.ಜಿಗೆ	2,60,500 (2,66,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

‘ಸಾರ್ಥಕ್–ಪಿಡಿಎಸ್’: ವಿಸ್ತರಣೆಗೆ ಕೇಂದ್ರ ಅಸ್ತು

ನವದೆಹಲಿ: ತಂತ್ರಜ್ಞಾನ ಅಳವಡಿಕೆ ಮೂಲಕ ಪಡಿತರ ವ್ಯವಸ್ಥೆಯಲ್ಲಿ ಸುಧಾರಣೆ ತರುವುದು ಹಾಗೂ ಆಹಾರ ಧಾನ್ಯಗಳ ಕಳ್ಳತನಕ್ಕೆ ಕಡಿವಾಣ ಹಾಕುವ ಉದ್ದೇಶದ ‘ಸಾರ್ಥಕ್–ಪಿಡಿಎಸ್’ ಯೋಜನೆಯನ್ನು 5 ವರ್ಷಗಳವರೆಗೆ ವಿಸ್ತರಿಸುವುದಕ್ಕೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಕುರಿತ ಸಂಪುಟ ಸಮಿತಿ (ಸಿಸಿಇಎ) ಸಭೆಯು, ₹25,530 ಕೋಟಿ ಗಾತ್ರದ ಯೋಜನೆಯನ್ನು 2031ರ ಮಾರ್ಚ್‌ವರೆಗೆ ವಿಸ್ತರಿಸಲು ಒಪ್ಪಿಗೆ ನೀಡಿತು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ‘ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ಸಾಗಣೆ ಹಾಗೂ ನಿರ್ವಹಣೆಗೆ ಕೇಂದ್ರ ಸರ್ಕಾರ ನೀಡುತ್ತಿರುವ ನೆರವಿಗೆ ಸಂಬಂಧಿಸಿದ ನಿಯಮಗಳ ಪರಿಷ್ಕರಣೆಗೂ ಸಭೆ ಅನುಮೋದನೆ ನೀಡಿತು’ ಎಂದರು. ‘ಆಹಾರ ಧಾನ್ಯಗಳ ಸಾಗಣೆ ವೆಚ್ಚ ಭರಿಸಲು ರಾಜ್ಯಗಳು ಸಂಕಷ್ಟ ಎದುರಿಸುತ್ತಿದ್ದವು. ಈಗ ರಾಜ್ಯಗಳಿಗೆ ನೆರವು ನೀಡಲಾಗುತ್ತದೆ. ನ್ಯಾಯ ಬೆಲೆ ಅಂಗಡಿಕಾರರಿಗೆ ನೀಡುವ ಗೌರವ ಧನವನ್ನು ಕೂಡ ಹೆಚ್ಚಿಸಲಾಗುತ್ತದೆ’ ಎಂದು ತಿಳಿಸಿದರು.

ಮೂರು ಹಂತಗಳ ಯೋಜನೆ ಘೋಷಣೆ

ಚಂದ್ರನಲ್ಲಿ ಶಾಶ್ವತ ನೆಲೆ: ನಾಸಾ

ವಾಷಿಂಗ್ಟನ್ (ಪಿಟಿಐ): ಚಂದ್ರನ ಅಂಗಳದಲ್ಲಿ ಶಾಶ್ವತ ನೆಲೆ ಸ್ಥಾಪಿಸುವುದಕ್ಕಾಗಿ ನಾಸಾ ಮೂರು ಹಂತಗಳ ಬಾಹ್ಯಾಕಾಶ ಕಾರ್ಯಕ್ರಮವನ್ನು ಘೋಷಿಸಿದೆ.

20 ಶತಕೋಟಿ ಡಾಲರ್ (ಅಂದಾಜು ₹1.90 ಲಕ್ಷ ಕೋಟಿ) ವೆಚ್ಚದ ಯೋಜನೆ ಇದಾಗಿದೆ. ಚಂದ್ರನ ಮೇಲ್ಮೈನಲ್ಲಿ ನಿರಂತರವಾಗಿ ಪ್ರಯೋಗಗಳನ್ನು ಕೈಗೊಳ್ಳುವುದಕ್ಕೆ ಅನುಕೂಲವಾಗುವಂತೆ ರೋವರ್‌ಗಳು, ಡ್ರೋನ್‌ಗಳು ಸೇರಿ ವಿವಿಧ ಸಾಧನಗಳನ್ನು ಈ ನೆಲೆ ಒಳಗೊಂಡಿರಲಿದೆ. ಅತ್ಯಂತ ಅಪಾಯಕಾರಿ ಪರಿಸರದಲ್ಲಿ ಕೂಡ ಈ ಸಾಧನಗಳ ಕಾರ್ಯಾಚರಣೆ ಹಾಗೂ ಪ್ರಯೋಗ ಕೈಗೊಳ್ಳುವುದಕ್ಕೆ ಪೂರಕವಾಗಿರುವ ನೆಲೆಯನ್ನು ನಿರ್ಮಿಸಲು ನಾಸಾ ಯೋಜಿಸಿದೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ನಾಸಾ ಆಡಳಿತಾಧಿಕಾರಿ ಜೇರ್ಡ್ ಐಸಾಕ್‌ಮನ್, ‘ಚಂದ್ರನಲ್ಲಿನ ಉದ್ದೇಶಿತ ಈ ನೆಲೆಯು ಮತ್ತೊಂದು ಆಕಾಶಕಾಯದಲ್ಲಿ ಅಮೆರಿಕ ಮಾತ್ರವಲ್ಲದೇ ಮನುಕುಲ ನಿರ್ಮಿಸಲಿರುವ ಮೊಟ್ಟಮೊದಲ ತಾಣವಾಗಲಿದೆ’ ಎಂದರು.

‘ಮುಂದಿನ ಮಾರ್ಚ್ ವೇಳೆಗೆ ‘ಚಂದ್ರನ ನೆಲೆ’ ಸ್ಥಾಪಿಸಲು ಯೋಜನೆ ಸಿದ್ಧಪಡಿಸಲಾಗಿದೆ. 2028ರಲ್ಲಿ ಗಗನಯಾನಿಗಳನ್ನು ಈ ನೆಲೆಯಲ್ಲಿ ಇಳಿಸುವ ಗುರಿ ಹೊಂದಲಾಗಿದೆ’ ಎಂದೂ ಹೇಳಿದರು.

‘ಚಂದ್ರನ ನೆಲೆ’ ಕಾರ್ಯಕ್ರಮದ ಎರಡನೇ ಹಂತದ ನಿರ್ಮಾಣ ಕಾರ್ಯವನ್ನು 2029 ಹಾಗೂ 2030ರ ನಡುವೆ ಕೈಗೆತ್ತಿಕೊಳ್ಳಲಾಗುವುದು. ಈ ಹಂತದಲ್ಲಿ ಪವರ್ ಗ್ರಿಡ್‌ವೊಂದನ್ನು ಸಹ ಸ್ಥಾಪಿಸಲಾಗುವುದು ಎಂದು ತಿಳಿಸಿದರು.

2032ರಿಂದ ಮೂರನೇ ಹಂತದ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು. ಚಂದ್ರನತ್ತ ಗಗನಯಾನಿಗಳನ್ನು ಕಳುಹಿಸುವುದು, ನಿರಂತರವಾಗಿ ಪ್ರಯೋಗಗಳು ಹಾಗೂ ಸಂಶೋಧನೆ ಕೈಗೊಳ್ಳುವುದು ಮುಂದುವರಿಯಲಿದೆ ಎಂದೂ ತಿಳಿಸಿದರು.

ಕಾಳ್ಗಿಚ್ಚಿನ ಕೆನ್ನಾಲಗೆ

ಪಿಟಿಐ ಚಿತ್ರ

ಹಿಮಾಚಲ ಪ್ರದೇಶದ ಸೋಲನ್ ಜಿಲ್ಲೆಯ ಕಸೌಲಿಯಲ್ಲಿ ಬುಧವಾರ ಕಾಳ್ಗಿಚ್ಚು ತನ್ನ ಕೆನ್ನಾಲಗೆಯನ್ನು ತೋರಿಸಿದ ಬಗೆ

ಅಡಿಕೆ ಧಾರಣೆ

ಕೊಪ್ಪ		ರಾಶಿ	47699-51699	ತಟ್ಟಿಬೆಟ್ಟೆ	41819-48599
ಬೆಟ್ಟೆ	51009-61299	ಸಿಪ್ಪೆಗೋಟು	13269-21089	**ಶಿರಸಿ**	
ಗೊರಬಲು	37629-39700	**ಪುತ್ತೂರು**		ಬೆಟ್ಟೆ	40799-46500
ರಾಶಿ	39000-54000	ಕೋಕ	20000-33500	ಬಿಳಿಗೋಟು	23009-35500
ಸರಕು	47709-85429	ಹೊಸತು	30000-45000	ಚಾಲಿ	43099-46701
ಕುಮಟಾ		ಹಳತು	49000-53500	ಕೆಂಪುಗೋಟು	29300-35699
ಬೆಟ್ಟೆ	42719-42719	**ಸಿದ್ದಾಪುರ**		ರಾಶಿ	50500-53100
ಚಿಪ್ಪು	28029-33699	ಬಿಳಿಗೋಟು	24109-32609	**ಶಿವಮೊಗ್ಗ**	
ಕೋಕ	16899-33099	ಚಾಲಿ	39099-46039	ಸರಕು/ಹಸ	64199-96439
ಫ್ಯಾಕ್ಟರಿ	13019-27500	ಕೋಕ	22600-24699	ಬೆಟ್ಟೆ	54299-63199
ಹಳೆಚಾಲಿ	46029-47898	ಕೆಂಪುಗೋಟು	28699-35600	ರಾಶಿಇಡಿ	44069-53511
ಹೊಸಚಾಲಿ	38611-45699	ರಾಶಿ	49099-52399	ಗೊರಬಲು	19010-40659

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Teachers/ Professors

REQUIRED TEACHERS
For NGO-supported School Programme in Bengaluru.
Qualified teachers required for English and Mathematics (Classes I–VII).
Must know Kannada & English.
Retired teachers welcome.
Competitive remuneration.
Send CV to:
seniorcitizensbangalore@gmail.com
www.seniorsforchange.org

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಮೊದಲ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 7090177446

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 09.06.2026,22.06.2026 10ದಿನಗಳು ಅಯೋಧ್ಯೆ,ಅಖಂಡ ನೇಪಾಳ ರಾಷ್ಟ್ರ ಪ್ರವಾಸ ಕಠ್ಮಂಡು ಪೋಕ್ರಾ,ಮುಕ್ತಿನಾಥ, ಮನಕಾಮನದೇವಿ,ಚಿತ್‌ವಾನ್ ಜನಕಪುರಿ,ಸೀತಾಮರಿ. 22.06.2026 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯ ಪ್ರವಾಸ.22.06.2026 12ದಿನಗಳು ಅಖಂಡ ಗುಜರಾತ್ ರಾಜ್ಯ,ಮಧ್ಯಪ್ರದೇಶ ಉಜ್ಜಯಿನಿ ಓಂಕಾರ್.8073824856 9206979202 9743148634

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಎಸ್‌ಐಆರ್‌ಗೆ ‘ಸುಪ್ರೀಂ’ ಬಲ

ಒಂದನೇ ಪುಟದಿಂದ...

ತೀರ್ಪಿನ ಪೂರ್ಣ ವಿವರ ಇನ್ನಷ್ಟೆ ಲಭ್ಯವಾಗಬೇಕಿದೆ. ವ್ಯಾಪಕವಾಗಿ ನಡೆದ ವಾದ–ಪ್ರತಿವಾದಗಳನ್ನು ಆಲಿಸಿದ್ದ ಸುಪ್ರೀಂ ಕೋರ್ಟ್, ಜನವರಿ 29ರಂದು ತನ್ನ ತೀರ್ಪನ್ನು ಕಾದಿರಿಸಿತ್ತು.

‘ಮತದಾರರ ಪಟ್ಟಿಯಿಂದ ವ್ಯಕ್ತಿಯೊಬ್ಬರ ಹೆಸರನ್ನು ತೆಗೆದು ಹಾಕಿರುವುದು ಆ ವ್ಯಕ್ತಿಯು ಈ ದೇಶದ ಪ್ರಜೆಯಲ್ಲ ಎಂಬುದಾಗಿ ಘೋಷಿಸಿದಂತೆ ಆಗುವುದಿಲ್ಲ’ ಎಂದೂ ಹೇಳಿದೆ.

ನಾಲ್ಕು ದಶಕಗಳ ನಂತರ ಎಸ್‌ಐಆರ್ ನಡೆಸಲಾಗಿದೆ. ಈ ಹಿಂದಿನ ವರ್ಷಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮತದಾರರ ಹೆಸರುಗಳನ್ನು ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ ಇಲ್ಲವೇ ತೆಗೆದು ಹಾಕಲಾಗಿದೆ. ವೇಗವಾದ ನಗರೀಕರಣ, ವಲಸೆಯಿಂದಾಗಿ ಮತದಾರರ ಪಟ್ಟಿಯಲ್ಲಿ ಹೆಸರುಗಳ ಪುನರಾವರ್ತನೆ ಅಥವಾ ದೋಷಗಳು ಇರುವ ಸಾಧ್ಯತೆ ಇರುತ್ತದೆ. ಹೀಗಾಗಿ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸುವ ಅಗತ್ಯತೆ ಇದೆ ಎಂಬುದಾಗಿ ಆಯೋಗ ನೀಡಿರುವ ಕಾರಣಗಳು ತೃಪ್ತಿಕರವಾಗಿವೆ ಎಂದು ನ್ಯಾಯಪೀಠ ಹೇಳಿದೆ.

ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನು ಬಿಜೆಪಿ ಸ್ವಾಗತಿಸಿದ್ದರೆ, ವಿರೋಧ ಪಕ್ಷಗಳು ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿವೆ.

ಪೀಠ ಹೇಳಿದ್ದು...

- ಎಸ್‌ಐಆರ್ ಎಂಬುದು ಕೇವಲ ಆಡಳಿತಾತ್ಮಕ ಉದ್ದೇಶದಿಂದ ಕೈಗೊಳ್ಳುವ ಪ್ರಕ್ರಿಯೆಯಷ್ಟೆ ಎಂದು ನಿರ್ಣಯಿಸಲು ಸಾಧ್ಯ ಇಲ್ಲ. ಆಯೋಗವು ತನ್ನ ಶಾಸನಬದ್ಧ ಅಧಿಕಾರ ಮೀರಿ ಕಾರ್ಯ ನಿರ್ವಹಿಸಿದೆ ಎಂಬ ವಾದವನ್ನೂ ಒಪ್ಪಲಾಗದು
- ನ್ಯಾಯಸಮ್ಮತ ಮತ್ತು ಮುಕ್ತ ಚುನಾವಣೆಯು ಯಾಂತ್ರಿಕವಾಗಿ ನಡೆಯುವ ಮತದಾನ ಪ್ರಕ್ರಿಯೆಯನ್ನಷ್ಟೆ ಅವಲಂಬಿಸಿಲ್ಲ. ಮೂಲಭೂತವಾಗಿ ಮತದಾರರ ಪಟ್ಟಿಗಳ ಸಮಗ್ರತೆ, ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಅವಲಂಬಿಸಿದೆ
- ಬಿಹಾರದಲ್ಲಿ ವಾಸವಾಗಿದ್ದರೂ ಕೆಲವರ ಹೆಸರನ್ನು ಮತದಾರರ ಪಟ್ಟಿಯಿಂದ ತಪ್ಪಾಗಿ ತೆಗೆದುಹಾಕಿದ್ದ ಪಕ್ಷದಲ್ಲಿ, ಅಂಥವರು ತಮ್ಮ ಹೆಸರನ್ನು ಪುನಃ ಮತದಾರರ ಪಟ್ಟಿಗೆ ಸೇರಿಸಲು ಕೋರಿ ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ
- ವಿಧಾನಸಭೆ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಚುನಾವಣೆ ನಡೆಯುವುದರ ಒಳಗಾಗಿ ಸಂಬಂಧಪಟ್ಟ ಪ್ರಾಧಿಕಾರವು ಪೌರತ್ವ ನಿರ್ಧರಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು
- ಯಾವುದೇ ವ್ಯಕ್ತಿಯ ಪೌರತ್ವವನ್ನು ಪ್ರಾಧಿಕಾರವು ದೃಢಪಡಿಸಿದಲ್ಲಿ ತಕ್ಷಣವೇ ಆತನ/ಆಕೆಯ ಹೆಸರನ್ನು ಮತದಾರರ ಪಟ್ಟಿಯಲ್ಲಿ ಪುನಃ ಸೇರಿಸಬೇಕು

ಆಕ್ಷೇಪವೇನಿತ್ತು?

ಕಳೆದ ವರ್ಷ ಬಿಹಾರದಲ್ಲಿ ವಿಧಾನಸಭೆ ಚುನಾವಣೆಗೂ ಮುನ್ನ ಚುನಾವಣಾ ಆಯೋಗ ಎಸ್‌ಐಆರ್ ಘೋಷಿಸಿತ್ತು. ಆಗ ಇದನ್ನು ಪ್ರಶ್ನಿಸಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಹಾಗೂ ಸಾಮಾಜಿಕ ಹೋರಾಟಗಾರರಿಂದ ಅರ್ಜಿಗಳು ಸಲ್ಲಿಕೆಯಾಗಿದ್ದವು.

‘ಎಸ್‌ಐಆರ್ ಎಂಬುದು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ರೀತಿಯ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆ ಹೆಸರಿನಲ್ಲಿ ಚುನಾವಣಾ ಆಯೋಗವು ಮತದಾರರ ಪೌರತ್ವ ಪರಿಶೀಲಿಸುತ್ತದೆ. ಆದರೆ, ಪೌರತ್ವವನ್ನು ಪರಿಶೀಲಿಸುವ ಹಾಗೂ ನಿರ್ಧರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ’ ಎಂದು ಅರ್ಜಿದಾರರು ಆರೋಪಿಸಿದ್ದರು.

‘ವ್ಯಕ್ತಿಯು ಮತದಾನ ಮಾಡಲು ಅರ್ಹ ಆಗಿರುವನೇ/ಆಗಿರುವಳೇ ಎಂಬುದನ್ನು ನಿರ್ಧರಿಸುವ ಸೀಮಿತ ಉದ್ದೇಶಕ್ಕಾಗಿ ಮತದಾರನ/ಮತದಾರಳ ಪೌರತ್ವವನ್ನು ಪರಿಶೀಲಿಸುವ ಅಧಿಕಾರವನ್ನು ಚುನಾವಣಾ ಆಯೋಗ ಹೊಂದಿದೆ’ ಎಂದು ನ್ಯಾಯಪೀಠ ಹೇಳಿದೆ. ‘ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಂಡಾಗ ಸಂಬಂಧಪಟ್ಟ ವ್ಯಕ್ತಿ ಭಾರತೀಯ ಪೌರತ್ವ ಹೊಂದಿದ್ದಾನೆ/ಹೊಂದಿದ್ದಾಳೆ ಎಂದು ಊಹಿಸಲಾಗುತ್ತದೆ. ಆದರೆ, ಸಮರ್ಪಕ ತನಿಖೆ/ಪರಿಶೀಲನೆ ಮೂಲಕ ಈ ಊಹೆಯನ್ನು ಅಲ್ಲಗಳೆಯಬಹುದು ಇಲ್ಲವೇ ನಿರಾಕರಿಸಬಹುದು’ ಎಂದೂ ಪೀಠ ಹೇಳಿದೆ.

ಪ್ರಮುಖ 3 ಪ್ರಶ್ನೆಗಳ ಪರಿಶೀಲನೆ

ಎಸ್‌ಐಆರ್ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳಲ್ಲಿ ಉಲ್ಲೇಖಿಸಲಾಗಿದ್ದ ಅಂಶಗಳ ಪೈಕಿ ಮೂರು ಪ್ರಮುಖ ಪ್ರಶ್ನೆಗಳನ್ನು ನ್ಯಾಯಪೀಠ ಪರಿಶೀಲಿಸಿದೆ.

ಎಸ್‌ಐಆರ್‌ನಂತಹ ಪ್ರಕ್ರಿಯೆ ನಡೆಸಲು ಚುನಾವಣಾ ಆಯೋಗಕ್ಕೆ ಅಧಿಕಾರ ಇದೆಯೇ ಎಂಬುದು ಮೊದಲನೆ ಪ್ರಶ್ನೆಯಾಗಿದ್ದರೆ, ಎಸ್‌ಐಆರ್ ಭಾಗವಾಗಿ ನಡೆಸುತ್ತಿದ್ದ ಪರಿಶೀಲನೆಯ ಉದ್ದೇಶ ನ್ಯಾಯಬದ್ಧವಾಗಿತ್ತೇ ಎಂಬುದು ಎರಡನೇ ಪ್ರಶ್ನೆಯಾಗಿತ್ತು. ಈ ಪ್ರಕ್ರಿಯೆಗಾಗಿ ಅನುಸರಿಸಿದ್ದ ವಿಧಾನವು ಪ್ರಜಾ ಪ್ರಾತಿನಿಧ್ಯ ಕಾಯ್ದೆಗೆ ವಿರುದ್ಧವಾಗಿತ್ತೇ ಅಥವಾ ಕಾಯ್ದೆ ಅವಕಾಶಗಳನ್ನು ಉಲ್ಲಂಘಿಸಿತ್ತೇ ಎಂಬುದು ಮೂರನೇ ಪ್ರಶ್ನೆ.

ವಿಚಾರಣೆ ಬಳಿಕ, ಎಸ್‌ಐಆರ್ ಕೈಗೊಳ್ಳುವುದಕ್ಕೆ ಚುನಾವಣಾ ಆಯೋಗ ನೀಡಿದ ಕಾರಣಗಳನ್ನು ಒಪ್ಪಿರುವುದಾಗಿ ನ್ಯಾಯಪೀಠ ಹೇಳಿದೆ.

ಸಂವಿಧಾನದಲ್ಲಿನ ಅವಕಾಶಗಳು ಹಾಗೂ ಕಾಯ್ದೆಯಲ್ಲಿ ಸೆಕ್ಷನ್‌ಗಳನ್ನು ಪರಿಶೀಲಿಸಿದ ಬಳಿಕ, ಎಸ್‌ಐಆರ್ ಪ್ರಕ್ರಿಯೆಯಿಂದ ಪ್ರಜಾಪ್ರಾತಿನಿಧ್ಯ ಕಾಯ್ದೆಯ ಉಲ್ಲಂಘನೆಯಾಗಿಲ್ಲ ಹಾಗೂ ಇದು ಕಾನೂನುಬದ್ಧವಾಗಿಯೇ ನಡೆದಿದೆ’ ಎಂದು ತೀರ್ಪಿನಲ್ಲಿ ಹೇಳಿದೆ.

‘ಯಾವುದೇ ಸಮಯದಲ್ಲಿ ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಚುನಾವಣಾ ಆಯೋಗಕ್ಕೆ ಶಾಸನಬದ್ಧ ಅಧಿಕಾರ ಇದೆ. ಹೀಗಾಗಿ ಆಯೋಗವು ತನ್ನ ಅಧಿಕಾರ ವ್ಯಾಪ್ತಿ ಮೀರಿ ನಡೆದುಕೊಂಡಿದೆ ಎಂದು ಹೇಳಲು ಸಾಧ್ಯ ಇಲ್ಲ’ ಎಂದೂ ಪೀಠ ಹೇಳಿದೆ.

ಇದೇ ರೀತಿ ತೀರ್ಪು ಬರಲಿದೆ ಎಂಬುದು ಬಹಳ ದಿನಗಳ ಮೊದಲೇ ನನಗೆ ಸ್ಪಷ್ಟ ವಾಗಿತ್ತು. ಹೀಗಾಗಿ, ತೀರ್ಪು ಪ್ರಕಟಗೊಂಡರೂ ನ್ಯಾಯಾಲಯದಿಂದ ನಾನು ದೂರವೇ ಉಳಿದಿದ್ದೆ. ಎಸ್‌ಐಆರ್ ಸಾಂವಿಧಾನಿಕವಾಗಿದೆ ಎಂದು ಸುಪ್ರೀಂ ಘೋಷಿಸಿರುವುದು ಸುದ್ದಿಯಲ್ಲ. ಈ ದೇಶದಲ್ಲಿ ಪ್ರಸ್ತುತ, ಯಾರು ಮತ ಚಲಾಯಿಸಬೇಕು ಹಾಗೂ ಯಾರು ಚಲಾಯಿಸಬಾರದು ಎಂಬುದನ್ನು ಬಿಜೆಪಿ ನಿರ್ಧರಿಸುತ್ತಿದೆ. ಇದೇ ನಿಜವಾದ ಸುದ್ದಿ

ಯೋಗೇಂದ್ರ ಯಾದವ್, ಸಾಮಾಜಿಕ ಹೋರಾಟಗಾರ ಹಾಗೂ ಅರ್ಜಿದಾರ ಎಸ್‌ಐಆರ್

ಕಾನೂನುಬದ್ಧ ಮತ್ತು ಸಾಂವಿಧಾನಿಕ ಪ್ರಕ್ರಿಯೆ ಎಂದು ಸುಪ್ರೀಂ ಕೋರ್ಟ್ ಘೋಷಿಸಿದೆ. ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷದಿಂದ ಎಸ್‌ಐಆರ್‌ಗೆ ವಿರೋಧ ವ್ಯಕ್ತವಾಗಿತ್ತು. ಅವರು ಭಾರತೀಯ ಮತದಾರರ ಪರ ಅಲ್ಲ, ಬದಲಾಗಿ ನುಸುಳುಕೋರರ ಪರವಾಗಿ ಇದ್ದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ

ಪ್ರದೀಪ್ ಭಂಡಾರಿ, ಬಿಜೆಪಿ ರಾಷ್ಟ್ರೀಯ ವಕ್ತಾರ

ಬಿಹಾರದಲ್ಲಿನ ಎಸ್‌ಐಆರ್ ಕುರಿತಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಚುನಾವಣಾ ಆಯೋಗ ಕೈಗೊಂಡಿದ್ದ ಅತಾರ್ಕಿಕ, ಅವಸರದ ಮತ್ತು ಪಕ್ಷಪಾತದಿಂದ ಕೂಡಿದ ಪ್ರಕ್ರಿಯೆಗೆ ಅನುಮೋದನೆ ನೀಡಿದಂತಾಗಿದೆ. ಆಯೋಗದ ಇಂತಹ ಕ್ರಮದಿಂದಾಗಿ ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಅರ್ಹ ಮತದಾರರಿಗೆ ತಮ್ಮ ಹಕ್ಕು ಚಲಾಯಿಸಲು ಸಾಧ್ಯವಾಗಿಲ್ಲ

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

ಆಧಾರ್ ಪೌರತ್ವದ ಪುರಾವೆಯಲ್ಲ: ‘ಸುಪ್ರೀಂ’

ನವದೆಹಲಿ (ಪಿಟಿಐ): ಆಧಾರ್ ಕಾರ್ಡ್ ವ್ಯಕ್ತಿಯ ಪೌರತ್ವ ನಿರ್ಧರಿಸುವ ಪುರಾವೆಯಲ್ಲ. ಈ ಕಾರ್ಡ್‌ಗೆ ಸಂಬಂಧಿಸಿದ ಕಾಯ್ದೆಯ ಅವಕಾಶಗಳು ಕೂಡ ಇದನ್ನು ಪೌರತ್ವ ಅಥವಾ ವಾಸಸ್ಥಳ ಕುರಿತ ಪುರಾವೆಯನ್ನಾಗಿ ಪರಿಗಣಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಮಹತ್ವದ ತೀರ್ಪು ನೀಡಿದೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ, ಮತ ಚಲಾಯಿಸುವ ಹಕ್ಕು ಹೊಂದಿರುವ ಕುರಿತು ಅರ್ಹತೆ ಸಾಬೀತುಪಡಿಸುವುದಕ್ಕೆ ಆಧಾರ್‌ಅನ್ನು ಪ್ರಾಥಮಿಕ ದಾಖಲೆಯಾಗಿ ಪರಿಗಣಿಸದಿರುವ ಚುನಾವಣಾ ಆಯೋಗದ ನಿರ್ಧಾರ ಸರಿ ಇದೆ ಎಂದೂ ಸುಪ್ರೀಂ ಹೇಳಿದೆ.

ಎಸ್‌ಐಆರ್ ನಡೆಸುವುದಕ್ಕೆ ಚುನಾವಣಾ ಆಯೋಗಕ್ಕೆ ಅಧಿಕಾರ ಇದೆ ಎಂದು ತೀರ್ಪು ನೀಡಿರುವ ನ್ಯಾಯಾಲಯವು, ಆಧಾರ್ ಕಾರ್ಡ್ ಕುರಿತು ಈ ಸ್ಪಷ್ಟನೆ ನೀಡಿದೆ. ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದ ಪೀಠವು, ಈ ಕುರಿತು ಪ್ರತ್ಯೇಕ ತೀರ್ಪು ಪ್ರಕಟಿಸಿದೆ.

ಎಸ್‌ಐಆರ್ ವೇಳೆ, ಯಾವ ದಾಖಲೆಗಳನ್ನು ಪುರಾವೆಯಾಗಿ ಪರಿಗಣಿಸಲಾಗುವುದು ಎಂಬ ಬಗ್ಗೆ ಆಯೋಗ ತಿಳಿಸಿತ್ತು. ಈ ಪೈಕಿ, ಪೌರತ್ವ ನಿರ್ಧರಿಸುವುದಕ್ಕೆ ಆಧಾರ್ ಕಾರ್ಡ್ ಪುರಾವೆಯಾಗುವುದಿಲ್ಲ ಎಂದೂ ಹೇಳಿತ್ತು.

ಅರ್ಜಿ ವರ್ಗಾವಣೆಗೆ ಮನವಿ

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ –2026

ನವದೆಹಲಿ (ಪಿಟಿಐ): ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ –2026ಕ್ಕೆ ಸಂಬಂಧಿಸಿ, ದೇಶದ ವಿವಿಧ ಹೈಕೋರ್ಟ್‌ಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸುಪ್ರೀಂಕೋರ್ಟ್‌ಗೆ ವರ್ಗಾಯಿಸುವಂತೆ ಕೇಂದ್ರ ಸರ್ಕಾರ ಬುಧವಾರ ಮನವಿ ಮಾಡಿದೆ.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಸಿಜೆಐ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠದ ಮುಂದೆ ಮನವಿ ಸಲ್ಲಿಸಿದ್ದಾರೆ.

‘ಅರ್ಜಿಗಳನ್ನು ಶುಕ್ರವಾರ ಪಟ್ಟಿ ಮಾಡಿ, ನೋಟಿಸ್ ಜಾರಿಗೊಳಿಸಿದರೆ ನಾವು ಹೈಕೋರ್ಟ್‌ಗಳಿಗೆ ವಿಚಾರಣೆ ಮುಂದೂಡುವಂತೆ ಮನವಿ ಸಲ್ಲಿಸುತ್ತೇವೆ’ ಎಂದು ತುಷಾರ್ ಮೆಹ್ತಾ ಹೇಳಿದರು. ‘ಈ ಮಸೂದೆಯ ಸಾಂವಿಧಾನಿಕ ಸಿಂಧುತ್ವದ ಬಗ್ಗೆ ಹೈಕೋರ್ಟ್‌ಗಳು ವಿಭಿನ್ನ ದೃಷ್ಟಿಕೋನ ತಳೆಯಬಹುದು’ ಎಂದು ಅವರು ಪೀಠದ ಗಮನಕ್ಕೆ ತಂದರು.

‘ಕೆಲವೊಮ್ಮೆ ನಾವು ಹೈಕೋರ್ಟ್ ದೃಷ್ಟಿಕೋನದ ಲಾಭ ಪಡೆಯಬಹುದು’ ಎಂದು ಸಿಜೆಐ ಹೇಳಿದರು.

‘ಹಕ್ಕಿನ ಉಲ್ಲಂಘನೆ’

ಮಸೂದೆಯಲ್ಲಿ ಸ್ವಯಂ ಗುರುತಿಸಿಕೊಳ್ಳುವಿಕೆಯನ್ನು ರದ್ದುಗೊಳಿಸಿರುವುದು ಟೀಕೆಗೆ ಕಾರಣವಾಗಿದೆ. ಇದು ವ್ಯಕ್ತಿಯ ಘನತೆ, ಖಾಸಗೀತನ, ದೇಹದ ಮೇಲಿನ ಹಕ್ಕಿನ ಉಲ್ಲಂಘನೆ ಆಗಿದೆ ಎಂದು ಅರ್ಜಿದಾರರು ದೂರಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತ್ತು.

ಯುಸಿಸಿಗೆ ಅನುಮೋದನೆ

ಅಸ್ಸಾಂ

ಗುವಾಹಟಿ (ಪಿಟಿಐ): ವಿರೋಧ ಪಕ್ಷಗಳ ಆಕ್ಷೇಪದ ನಡುವೆ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮಸೂದೆಗೆ ಅಸ್ಸಾಂ ವಿಧಾನಸಭೆಯು ಬುಧವಾರ ಅಂಗೀಕಾರ ನೀಡಿದೆ.

ವಿವಾಹ, ವಿಚ್ಛೇದನ ಹಾಗೂ ಸಹ–ಜೀವನದ ಸಂಬಂಧಗಳಿಗೆ ಧರ್ಮಾತೀತವಾಗಿ ಏಕರೂಪದ ಕಾನೂನು ಚೌಕಟ್ಟು ರೂಪಿಸುವ ಪ್ರಸ್ತಾವವನ್ನು ಈ ಮಸೂದೆ ಒಳಗೊಂಡಿದೆ.

ಈ ಮೂಲಕ ಯುಸಿಸಿಗೆ ಅಂಗೀಕಾರ ನೀಡಿದ ಮೂರನೇ ರಾಜ್ಯವೆಂದು ಅಸ್ಸಾಂ ಗುರುತಿಸಿಕೊಂಡಿದೆ. ಇದಕ್ಕೂ ಮುನ್ನ ಉತ್ತರಾಖಂಡ ಹಾಗೂ ಗುಜರಾತ್ ರಾಜ್ಯಗಳು ಯುಸಿಸಿ ಅಂಗೀಕರಿಸಿದ್ದವು. ಅಸ್ಸಾಂ ವಿಧಾನ ಸಭೆಯಲ್ಲಿ ಮಸೂದೆ ಕುರಿತಾದ ವಿಸ್ತೃತ ಚರ್ಚೆಯ ಬಳಿಕವೂ ವ್ಯಾಪಕ ಸಮಾಲೋಚನೆಗಾಗಿ ಮಸೂದೆಯನ್ನು ಆಯ್ಕೆ ಸಮಿತಿಗೆ ಕಳುಹಿಸಬೇಕೆಂದು ವಿರೋಧ ಪಕ್ಷಗಳ ಸದಸ್ಯರು ಪಟ್ಟು ಹಿಡಿದಿದ್ದರು.

ಮಸೂದೆ ಅಂಗೀಕಾರಕ್ಕೆ ಸ್ಪೀಕರ್ ರಣಜೀತ್ ಕುಮಾರ್ ದಾಸ್ ಅನುಮತಿಸಿದ್ದು, ಧ್ವನಿಮತದ ಮೂಲಕ ಮಸೂದೆಗೆ ಅನುಮೋದನೆ ದೊರೆತಿದೆ.

ಬೇಡಿಕೆ ಇಟ್ಟಿದ್ದ ಕಾಂಗ್ರೆಸ್’

1925ರಲ್ಲಿ ಮೊದಲಿಗೇ ತಾನೇ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಪ್ರತಿಪಾದಿಸಿದ್ದ ಕಾಂಗ್ರೆಸ್, ಇದೀಗ ಒಂದು ನಿರ್ದಿಷ್ಟ ಸಮುದಾಯದ ಪ್ರತಿನಿಧಿಯಾಗಿ ಬದಲಾಗಿದೆ. ಹೀಗಾಗಿ ಕಾಂಗ್ರೆಸ್ ಇನ್ನು ಮುಂದೆ ಜಾತ್ಯತೀತ ಎನಿಸಿಕೊಳ್ಳುವುದಿಲ್ಲ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

ದೇಶ ತೊರೆಯುತ್ತಿರುವ ಅಕ್ರಮ ವಲಸಿಗರು

ನವದೆಹಲಿ (ಎಎಫ್‌ಪಿ): ಬಾಂಗ್ಲಾ ನುಸುಳುಕೋರರು, ರೋಹಿಂಗ್ಯಾ ನಿರಾಶ್ರಿತರು ಸೇರಿ ‘ಅಕ್ರಮ ವಲಸಿಗರನ್ನು ಬಂಧಿಸಿಡುವ ಕೇಂದ್ರ’ಗಳನ್ನು ತೆರೆಯಲು ಕೇಂದ್ರ ಸರ್ಕಾರ ಆದೇಶಿಸಿದ ಬೆನ್ನಲ್ಲೇ, ದೇಶದ ಗಡಿ ಭಾಗದ ಪ್ರದೇಶಗಳಿಂದ ಅಪಾರ ಸಂಖ್ಯೆಯ ಜನರು ಬಾಂಗ್ಲಾದೇಶಕ್ಕೆ ಮರಳುತ್ತಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಆಡಳಿತಕ್ಕೆ ಬಂದ ಬೆನ್ನಲ್ಲೇ, ಅಕ್ರಮ ವಲಸಿಗರ ವಿರುದ್ಧದ ಕಾರ್ಯಾಚರಣೆ ತೀವ್ರಗೊಂಡಿದೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.7/ಪಂ.ರಾ.ಇಂ/ವಿ.ಹಾ/ಪಿ.ಬಿ–2/ಟೆಂಡರ/2026–27/1021 ದಿನಾಂಕ : 25–05–2026

ಇ–ಟೆಂಡರ್ ಪ್ರಕಟಣೆ

ದಿನಾಂಕ : 22–05–2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿ ಇಂಡೆಂಟ್ ಸಂಖ್ಯೆ 19965/CALL-3 (3ನೇ ಕರೆ) ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **01–06–2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬಸೈಟ್ http://www.kppp.karnatak.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತರಾಜ ಇಂಜಿನೀಯರಿಂಗ್ ವಿಭಾಗ,
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/115/2026–27 ಹಾವೇರಿ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ದೊಡ್ಡತೋಗೂರು
ದೂ.ಸಂ: 080–22111177
ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 100
e-Mail:ka.doddathoguru.tp@gmail.com | Web: www.doddathoguru.mrc.gov.in
ಸಂ.ದೊಪಪಂ/ತಾ.ಶಾ/ಟೆ.ಪ್ರ/04/2026–27 ದಿನಾಂಕ: 27.05.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ದೊಡ್ಡತೋಗೂರು ಮತ್ತು ಬೆಟ್ಟದಾಸನಪುರ ಪ್ರದೇಶದ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ಪಟ್ಟಣ ಪಂಚಾಯಿತಿಯ ಸ್ವಂತ ನಿಧಿಯಡಿಯ ಈ ಕೆಳಕಂಡ ಇಂಡೆಂಟ್ ಸಂಖ್ಯೆಗಳ ಕಾಮಗಾರಿಗಳ ಟೆಂಡರ್ ಆಹ್ವಾನಿಸಲು ಉದ್ದೇಶಿಸಲಾಗಿದ್ದು, ಅದರಂತೆ ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ ಆಸಕ್ತಿಯುಳ್ಳವರು ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆದು ಭಾಗವಹಿಸಬಹುದಾಗಿರುತ್ತದೆ.

Sl No	Indent No.
01	DMA/2026-27/OW/WORK INDENT 58572
02	DMA/2026-27/WS/WORK INDENT 58400
03	DMA/2026-27/WS/WORK INDENT 58401

1. ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 15.06.2026ರ ಸಂಜೆ 5.00 ಗಂಟೆಯವರೆಗೆ. 2.** ಟೆಂಡರ್‌ನ್ನು ತೆರೆಯುವ **ದಿನಾಂಕ: 18.06.2026ರ ಬೆಳಿಗ್ಗೆ 11.30 ಗಂಟೆ ನಂತರ** ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. **3.** ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಪಟ್ಟಣ ಪಂಚಾಯಿತಿಯ ತಾಂತ್ರಿಕ ಶಾಖೆಯಲ್ಲಿ ಮಾಹಿತಿ ಪಡೆಯ ಬಹುದಾಗಿರುತ್ತದೆ. **4.** ದೂರವಾಣಿ ಸಂಖ್ಯೆ: 080–22111177. ಇ–ಮೇಲ್: **ka.doddathoguru.tp@gmail.com**

ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ದೊಡ್ಡತೋಗೂರು.
ವಾಸಾಸಂಇ/ವಾಪ್ರ/ಜಿಎ/858/2026–27
ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ದೊಡ್ಡತೋಗೂರು.

ಕರ್ನಾಟಕ ಸರ್ಕಾರ ಸಚಿವಾಲಯ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಕಾರ್ಯಕಾರಿ)
ವಿಧಾನಸೌಧ, ಬೆಂಗಳೂರು.

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಟೆಂಡರಿಂಗ್ ಮೂಲಕ ಮಾತ್ರ)
ಇ–ಟೆಂಡರ್ ಅಧಿಸೂಚನೆ ಸಂಖ್ಯೆ: ಸಿಆಸುಇ 62 ಡಿಸಭೆ 2026, ದಿನಾಂಕ: 21.05.2026
ಇ–ಟೆಂಡರ್ ಪ್ರಕಟಣೆ ಸಂಖ್ಯೆ: DPAR/2026-27/SE0068, **ದಿನಾಂಕ: 22.05.2026**

ಕರ್ನಾಟಕ ಸರ್ಕಾರ ಸಚಿವಾಲಯದ ಸಿಆಸುಇ(ಕಾರ್ಯಕಾರಿ) ವಿಭಾಗದಿಂದ ವಿಧಾನಸೌಧ, ರಾಜಭವನ ಹಾಗೂ ಇನ್ನಿತರ ಕಡೆಗಳಲ್ಲಿ ನಡೆಯುವ ಪ್ರಮಾಣ ವಚನ ಸ್ವೀಕಾರ ಮುಂತಾದ ಸಮಾರಂಭಗಳಿಗೆ ಶಾಮಿಯಾನ, ವೇದಿಕೆ ಮತ್ತು ಇನ್ನಿತರ ಪೀಠೋಪಕರಣಗಳನ್ನು ದರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ಪಡೆಯಲು ಅನುಭವಸ್ಥ ಸಂಸ್ಥೆಗಳಿಂದ ಇ–ಟೆಂಡರ್‌ನ್ನು ಕರೆಯಲಾಗಿದೆ.

ಇ–ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅನುಭವಸ್ಥ/ಅರ್ಹ ಗುತ್ತಿಗೆದಾರರು ಇ–ಟೆಂಡರ್‌ನಲ್ಲಿ ಸೂಚಿಸಿರುವ ನಿಬಂಧನೆ/ಷರತ್ತುಗಳಿಗನುಸಾರ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು.

ಇ–ಟೆಂಡರ್‌ನೊಂದಿಗೆ **ಇ.ಎಂ.ಡಿ. (ಠೇವಣಿ) ಮೊತ್ತ ರೂ.2,00,000/–** ಗಳನ್ನು ಇ–ವಿಧಾನದ ಮೂಲಕ ಪಾವತಿಸತಕ್ಕದ್ದು.

1) ಇ–ಟೆಂಡರ್‌ನ ಪೂರ್ವಭಾವಿ ಸಭೆ ದಿನಾಂಕ: **03.06.2026 ಅಪರಾಹ್ನ 3.30 ಗಂಟೆಗೆ.** 2) ಭರ್ತಿ ಮಾಡಿದ ಇ–ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: **20.06.2026 ರ ಸಂಜೆ 5.00 ಗಂಟೆಗೆ.** 3) ಇ–ಟೆಂಡರ್‌ನ ತಾಂತ್ರಿಕ ಲಕೋಟೆಯನ್ನು ತೆರೆಯುವ ದಿನಾಂಕ: **22.06.2026ರ ಮಧ್ಯಾಹ್ನ 12.00 ಗಂಟೆಗೆ.** 4) ಇ–ಟೆಂಡರ್‌ನ ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ: **25.06.2026ರ ರ ಮಧ್ಯಾಹ್ನ 12.00 ಗಂಟೆಗೆ.**

ಹೆಚ್ಚಿನ ವಿವರಗಳನ್ನು https://kppp.karnataka.gov.in ಇಲ್ಲಿಗೆ ಲಾಗಿನ್ ಆಗಿ ಪಡೆಯಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ **ದೂರವಾಣಿ ಸಂಖ್ಯೆ: 22033440 ಅಥವಾ 22033208** ಅನ್ನು ಸಂಪರ್ಕಿಸಬಹುದು.

ಸಹಿ/–
(ಕೆ.ಎನ್.ಮೂರ್ತಿ)
ಸರ್ಕಾರದ ಉಪ ಕಾರ್ಯದರ್ಶಿ
ಸಿಆಸುಇ(ಕಾರ್ಯಕಾರಿ)(ಪ್ರ)
ವಾಸಾಸಂಇ/ವಾ.ಪ್ರ/824/ಎಂಎಎ/26–27

ಕರ್ನಾಟಕ ಸರ್ಕಾರ (ಪೊಲೀಸ್ ಇಲಾಖೆ)
ಪೊಲೀಸ್ ಮಹಾನಿರೀಕ್ಷಕರು, ಪೂರ್ವ ವಲಯ ಕಛೇರಿ, ದಾವಣಗೆರೆ–577006
ದೂರವಾಣಿ ಸಂಖ್ಯೆ:08192–237830
ಸಂಖ್ಯೆ:68/ಸಂಗ್ರಹ/ಪೂವ//2025–26 ದಿನಾಂಕ:22/05/2026

ಇ–ಟೆಂಡರ್ ಪ್ರಕಟಣೆ

ಈ ಘಟಕಕ್ಕೆ 10 ಸಂಖ್ಯೆಯ ಡ್ರೋಣ್ ಕ್ಯಾಮರಾಗಳನ್ನು ಖರೀದಿಸಲು ಕೆಟಿಪಿಪಿ ನಿಯಮಗಳಡಿ ದಿನಾಂಕ: 22/05/2026 ರಂದು ಟೆಂಡರ್ ನಂ :KSP/2025-26/IND0527/CALL-2ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 05/06/2026 ರಂದು ಆಗಿರುತ್ತದೆ. ಹೆಚ್ಚಿನ ವಿವರಗಳನ್ನು www.kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

ವಾಸಾಇ/ಡಿವಿಜಿ/107/ಕೆಎಸ್‌ಎಂಸಿಎ/2026–27
ಸಹಿ/– ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
No.:KREIS/EDN/TRNG/2/2026-EDU-320470 Date:27.05.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿನ ಮೈಸೂರು ವಿಭಾಗದ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ **6 ಮತ್ತು 7ನೇ ತರಗತಿ ವಿದ್ಯಾರ್ಥಿಗಳು ಗಣಿತ ವಿಷಯಗಳನ್ನು ಪ್ರಾಯೋಗಿಕವಾಗಿ ಅಭ್ಯಾಸ ಮಾಡಲು Mathematics Lab Items** ಗಳನ್ನು ಸರಬರಾಜು ಮಾಡಲು ಅರ್ಹ ಏಜೆನ್ಸಿಯನ್ನು ನೇಮಿಸಲು ಟೆಂಡರ್ ಸಂಖ್ಯೆ: **KREIS/2026-27/IND0096** ಇ–ಪೋರ್ಟಲ್ **https://kppp.karnataka.gov.in** ಮುಖಾಂತರ ದಿನಾಂಕ 27.05.2026ರಂದು ಆಹ್ವಾನಿಸಲಾಗಿದ್ದು, **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 11.06.2026 ಆಗಿದ್ದು,** ಹೆಚ್ಚಿನ ವಿವರಗಳನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
DIPR/CP/YC/862/2026-27 ಕವಶಿಸಸಂ, ಬೆಂಗಳೂರು

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ.
ಸಂಖ್ಯೆ:ಸಅಸಂ.ಚನ್ನಗಿರಿ:ಟೆಂಡರ್.ಸಿ.ಆರ್–01/2026–27–1. ದಿ: 20.05.2026

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಕಾಲ್–2)

2026–27ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ “Raising of plantation and Maintenance of plantation in limits of the Deputy Conservator of Forests, Bhadravathi Division, Bhadravathi for the year 2026-27" ಕುರಿತು ಸಂಬಂಧಪಟ್ಟ ಅರ್ಹ ಗುತ್ತಿಗೆದಾರರಿಂದ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ:09–06–2026ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಕಾಮಗಾರಿಯ ಅಂದಾಜು ಮೊತ್ತ:–872.79753 ಲಕ್ಷಗಳು

1. "Raising of plantation and Maintenance of plantation in limits of the Deputy Conservator of Forests, Bhadravathi Division, Bhadravathi for the year 2026-27"

*) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09–06–2026. 16:00
*) ತಾಂತ್ರಿಕ ಬಿಡ್ಡು ತೆರೆಯುವ: 10–06–2026 16:30.
*) ಆರ್ಥಿಕ ಬಿಡ್ಡು ತೆರೆಯುವ: 10–06–2026 17:00.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/126/05/296

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಸರ್ವಜ್ಞನಗರ ವಿಭಾಗ, 9ನೇ ಸಿ ಮುಖ್ಯರಸ್ತೆ, ಹೆಚ್‌ಆರ್‌ಬಿಆರ್ ಬಡಾವಣೆ, 1ನೇ ಹಂತ ಕಲ್ಯಾಣನಗರ, ಬೆಂಗಳೂರು – 560 043.
ಸಂಖ್ಯೆ:ಕಾಪಾಅ/ಸನವಿ/ಕೆಪಿಪಿಪಿ/ಟೆಂಡರ್/03/2026–27 ದಿನಾಂಕ: 27–05–2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ವಲಯ–1 ಬೆಂಗಳೂರು ಉತ್ತರ ನಗರ ಪಾಲಿಕೆ, ಬೆಂಗಳೂರು ಇವರು ಬೆಂ.ಉ.ನ.ಪಾ ಅಥವಾ ತತ್ಸಮಾನವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

Sl No.	ಕಾಮಗಾರಿಗಳ ಹೆಸರು
1.	ಸರ್ವಜ್ಞನಗರ ವಿಭಾಗದಲ್ಲಿ ಸಂಚಾರಿ ಪೊಲೀಸರ ಕೋರಿಕೆಯಂತೆ ರಂಬ್ಲರ್ ಸ್ಟ್ರಿಪ್‌ಗಳಿಗೆ ಥರ್ಮೋಪ್ಲಾಸ್ಟಿಕ್ ಬಣ್ಣ ಬಳಿಯುವುದು, ಪಥ ಗುರುತಿಸುವಿಕೆ, ಜಂಕ್ಷನ್ ಗುರುತಿಸುವಿಕೆ, ವಿವಿಧ ಮಾದರಿಯ ಸೂಚನಾ ಫಲಕಗಳು, ಪೆಲಿಕನ್ ಸಿಗ್ನಲ್‌ಗಳು ಮತ್ತು ಕರ್ಬ್ ಕಲ್ಲುಗಳು, ಹೆಚ್‌ಆರ್‌ಪಿಸಿ ಮತ್ತು ಇತರೆ ಸುರಕ್ಷಾ ಪೀಠೋಪಕರಣಗಳನ್ನು ಒದಗಿಸುವುದು. **ಕಾಮಗಾರಿ ಅಂದಾಜು ಮೊತ್ತ ₹.320.00 ಲಕ್ಷಗಳು, ಇಎಂಡಿ : ₹.4,80,000.00** ಟೆಂಡರ್ ಅರ್ಜಿಯ ಶುಲ್ಕ ರೂಗಳಲ್ಲಿ (ಹಿಂದಿರುಗಿಸುವುದಿಲ್ಲ) ಜಿಎಸ್‌ಟಿ ಸೇರಿದಂತೆ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಂತೆ 1 ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ **₹.3,80,000.00** ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಮುಂಚೆ ಸಲ್ಲಿಸುವುದು.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **11–06–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.(2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **17–06–2026**ರ ಮಧ್ಯಾಹ್ನ **3:00** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ, ಬಿಡಿಎ ಬಿಲ್ಡಿಂಗ್, 9ನೇ ಸಿ ಮುಖ್ಯರಸ್ತೆ, ಹೆಚ್‌ಆರ್‌ಬಿಆರ್ ಬಡಾವಣೆ, 1ನೇ ಹಂತ, ಬಾಣಸವಾಡಿ, ಬೆಂಗಳೂರು ಇಲ್ಲಿ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **29–06–2026**ರ ಸಂಜೆ **4:00** ಗಂಟೆಯವರೆಗೆ. (4) ಆರ್ಥಿಕ ಬಿಡ್‌ಗಳನ್ನು ದಿನಾಂಕ: **30–06–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಸರ್ವಜ್ಞನಗರ ವಿಭಾಗ, ವಲಯ–1, ಬೆಂ.ಉ.ನ.ಪಾ

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು
ನಂ. 30, ಪ್ರಸನ್ನಕುಮಾರ ಬ್ಲಾಕ್, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು – 560 009
No.KSHEC/4/Karnatak Unnata Shikshana/2026/1591(a) Date : 26.05.2026

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ Design, printing & supply of "Karnataka Unnata Shikshana" Quarterly magazine, published by KSHEC ಟೆಂಡರ್ ಕರೆಯಲಾಗಿದ್ದು KSHEC/2026-27/SE0009, E-Procurement Portal ನಲ್ಲಿ ದ್ವಿ ಲಕೋಟೆ ಮೂಲಕ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನ್ನು ಸಂಪರ್ಕಿಸಬಹುದಾಗಿದೆ

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು,
DIPR/CP/847/NR/2026-27 ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು
ಕಾರ್ಯನಿರ್ವಾಹಕ ನಿರ್ದೇಶಕರರವರ ಕಛೇರಿ, ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು–570010
ಫೋನ್ 0821–2440752 ವೆಬ್‌ಸೈಟ್ www.mysuruzoo.info
ಇ–ಮೇಲ್: zoomysore@gmail.com
ಸಂಖ್ಯೆ.ಎಂವೈಜೆಡ್/ಟೆಂಡರ್/2026–27 ದಿನಾಂಕ: 26.05.2026

ಈ ಕೆಳಕಂಡ ಯೂನಿಟ್–1,2,3,4 ಮತ್ತು 5ರ ಆಹಾರ ಸಂಕೀರ್ಣ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ ಹೊರಡಿಸಿರುವ ಟೆಂಡರ್ ಪ್ರಕಟಣೆ (1ನೇ ಕರೆ) (ಇ ಪ್ರಕ್ಯೂಮೆಂಟ್ ಪದ್ಧತಿಯಲ್ಲಿ ಮಾತ್ರ)

ಈ ಕಛೇರಿ ಟೆಂಡರ್ ಪ್ರಕಟಣೆಯ 1) Unit-1 Supply of Clean Buffalo Meat/Bovine Liver and Heart Indent No.81/26-27 Dt.26.05.26 2) Unit-2 Supply of Fish, Prawns and Dressed Skinless Chicken Indent No. 82/26-27 Dt.26.05.26 3) Unit-3 Supply of Reed Grass and other grass Indent No. 83/26-27 Dt.26.05.26 2 4) Unit-4 Supply of Food Grains Mysuru Indent No.84/26-27 Dt.26.05.26. 5) Unit-5 Supply of Miscelaneous articles Indent No.85/26-27 Dt.26.05.26 ಅನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕವನ್ನು ಹಾಗೂ ಇತರೆ ಇ–ಪೋರ್ಟಲ್ (https://kppp karnataka.gov.in) ನಲ್ಲಿ ಪಡೆಯಬಹುದು.

ಸಹಿ/–
ಕಾರ್ಯನಿರ್ವಹಕ ನಿರ್ದೇಶಕರು
ವಾಸಾಸಂಇ/ಮೈಸೂರು/ಶಿರಡಿ ಸಾಯಿ/236/2026–27 ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

KSIIDC
ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
‘ಖನಿಜ ಭವನ’, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1
ದೂ: 080–22258131/32/33, ಇ–ಮೇಲ್: murthy.ksiidc@gmail.com / info@ksiidc.com ವೆಬ್‌ಸೈಟ್: http://ksiidc.karnataka.gov.in

ಕಚೇರಿ ಸ್ಥಳಾವಕಾಶ ಬಾಡಿಗೆಗೆ / ಗುತ್ತಿಗೆಗೆ ದೊರೆಯುತ್ತದೆ

ಐಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು ಇಲ್ಲಿರುವ ಆಧುನಿಕ ಕಚೇರಿ ಸಂಕೀರ್ಣದಲ್ಲಿನ 6ನೇ ಮಹಡಿ, ದಕ್ಷಿಣ ಬ್ಲಾಕ್‌ನಲ್ಲಿರುವ 13,863 ಚ.ಅಡಿ ವಿಸ್ತೀರ್ಣದ ಕಚೇರಿ ಸ್ಥಳ ಮಾಸಿಕ ಬಾಡಿಗೆ ಆಧಾರದ ಮೇಲೆ ಸ್ವಾಧೀನಕ್ಕೆ ಲಭ್ಯವಿದೆ.

ಸ್ವತ್ತಿನ ವಿವರಗಳು:
- **ಇರುವ ಸ್ಥಳ:** ಐಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು.
- **ಮಹಡಿ:** 6ನೇ ಮಹಡಿ–ದಕ್ಷಿಣ ಬ್ಲಾಕ್.
- **ವಿಸ್ತೀರ್ಣ:** 13,863 ಚ.ಅಡಿ.
- **ಬಳಕೆ:** ಕಚೇರಿ ಸ್ಥಳ
- **ಲಭ್ಯತೆ:** ತಕ್ಷಣ

ಹೆಚ್ಚಿನ ವಿವರಗಳಿಗಾಗಿ ಉಪ ಪ್ರಧಾನ ವ್ಯವಸ್ಥಾಪಕರು (ಮೊಬೈಲ್ ಸಂಖ್ಯೆ: 98458–33566) ಇವರನ್ನು ಸಂಪರ್ಕಿಸುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಸಿ ಮತ್ತು ಆ)

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ’ ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ, ಜಿಕೆವಿಕೆ, ಬೆಂಗಳೂರು–560065.
ಸಂಖ್ಯೆ.ಆಅ/ಟಿ.ಎನ್/ಎಂ.ಪಿ. ಹಾಸ್ಟಲ್/2026–27 ದಿನಾಂಕ : 25–05–2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಮಾನವ ಸಂಪನ್ಮೂಲ ಪೂರೈಕೆ ಮಾಡಲು ಅರ್ಹ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ದ್ವಿಲಕೋಟೆಯ ನಿಯಮಗಳು, ಷೆಡ್ಯೂಲ್ ಮತ್ತಿತರ ವಿವರಗಳು ವೆಬ್‌ಸೈಟ್: **www.kppp.karnataka.gov.in.** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಕೆಪಿಪಿ ಮಾದರಿಯಂತೆ ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಕ್ರಮ ಸಂಖ್ಯೆ	ಕೆಲಸದ ವಿವರ	ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)
1.	ಕೃಷಿ ವಿಶ್ವವಿದ್ಯಾನಿಲಯದ ವಿವಿಧ ಆವರಣಗಳ ವಿದ್ಯಾರ್ಥಿನಿಲಯಗಳಿಗೆ ಮಾನವ ಸಂಪನ್ಮೂಲವನ್ನು ಒದಗಿಸುವ ಕೆಲಸ.	313.00	4,69,500/-

ಕೆಲಸಕ್ಕೆ ಮೀಸಲಿಟ್ಟ ಅವಧಿ 1 ವರ್ಷ: ಈ ಟೆಂಡರ್ ದ್ವಿಲಕೋಟೆ ಟೆಂಡರಾಗಿದ್ದು, ನಿಯಮಗಳನ್ನು ಇ–ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. **ಷೆಡ್ಯೂಲ್ ವಿವರ (1)** ಪ್ರಿಬಿಡ್ ಮೀಟಿಂಗ್ ದಿನಾಂಕ : **03–06–2026 ರ ಬೆಳಗ್ಗೆ 10.30 ಗಂಟೆಗೆ. (2)** ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 05–06–2026 ರ ಸಂಜೆ: 4.00 ಗಂಟೆಯವರೆಗೆ. (3)** ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ : 08–06–2026 ರ ಬೆಳಗ್ಗೆ 10.30 ಗಂಟೆಗೆ. (4)** ಹಣಕಾಸಿನ ಬಿಡ್ಡನ್ನು ತೆರೆಯುವ **ದಿನಾಂಕ: 11–06–2026 ರ ಬೆಳಗ್ಗೆ 10.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: **080–23332765**ರಲ್ಲಿ ಸಂಪರ್ಕಿಸುವುದು. ಕೆಪಿಪಿ ಪೋರ್ಟಲ್‌ನ ಸಹಾಯವಾಣಿ **support@eprochelpdesk.com** ಮತ್ತು 8046010000/ 8068948777.

ಸಹಿ/–
DIPR/CP/RO833/AAPL/2026-27 ಆಸ್ತಿ ಅಧಿಕಾರಿಗಳು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 1/2026–27 ದಿನಾಂಕ: 27–05–2026 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಗಳಲ್ಲಿ ದರ್ಜೆ–II ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಾರದರ್ಶಕ ಕಾಯಿದೆ KW-4ರ ಅನ್ವಯ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು E-Procurement PlatForm (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿವೆ. (1)ಟೆಂಡರ್ ಪ್ರೊಸೆಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು (2) E-Procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ: ದಿನಾಂಕ: 27–05–2026 ರಿಂದ ದಿನಾಂಕ: 03–06–2026 ವರೆಗೆ ಸಂಜೆ 4.00 ಘಂಟೆವರೆಗೆ (3) ಪ್ರೀ–ಬಿಡ್ ಮೀಟಿಂಗ್ ದಿನಾಂಕ: 30–05–2026 ಮಧ್ಯಾಹ್ನ 03.00 ಘಂಟೆಗೆ (4) ಟೆಂಡರ್ ತೆರೆಯುವ ದಿನಾಂಕ: 05–06–2026 ಬೆಳಿಗ್ಗೆ 11.00 ಘಂಟೆಗೆ (5) ಕಾಮಗಾರಿಗಳ ಸಂಖ್ಯೆ: 02 (ಎರಡು) (6) ಕೆಲಸದ ಕಾಲಮಿತಿ : 11 ತಿಂಗಳು (ಮಳೆಗಾಲ ಸೇರಿ) (7) ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಮೊತ್ತ: ರೂ.421.27 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (8) ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ: ರೂ. 421.23 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (9) ಇ.ಎಂ.ಡಿ. ಮೊತ್ತ ರೂ. 6.32 ಲಕ್ಷಗಳು (10)ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆ ದರ್ಜೆ–II ಮತ್ತು ಮೇಲ್ಪಟ್ಟ ವರ್ಗ. ಸೂಚನೆ: 1. ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2. ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು KPP portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/173/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.
ಸಂಖ್ಯೆ:ಲೋಇ/ಬಾವಿ/ಪಿಬಿ/ಕೆಡಬ್ಲು/2026–27/0794 ದಿನಾಂಕ:27–05–2026

ಅವಧಿ ವಿಸ್ತರಣೆ ಪ್ರಕಟಣೆ:–

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ 2000ರ ನಿಯಮದಂತೆ ಸ್ಟಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟೆ ವಿಭಾಗದ ಅಡಿಯಲ್ಲಿಯ:ಟೆಂಡರ ಪ್ರಕಟಣೆ ಸಂ:0456 **ದಿನಾಂಕ: 07–05–2026** ರಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಟೆಂಡರ ಅವಧಿ ವಿಸ್ತರಣೆ ಮಾಡಲಾಗಿದೆ.

ವರ್ಕ ಇಂಡೆಂಟ್ ನಂ: **ಸಾಮಾನ್ಯ: 31117**

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ. 400.00 ಲಕ್ಷಗಳವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.

ಅ)ಪ್ರೀ ಬಿಡ್ ಮೀಟಿಂಗ್:10–06–2026 ರಂದು ಬೆಳಿಗ್ಗೆ 11–30 ಘಂಟೆಯವರೆಗೆ ಬ)ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ:11–06–2026 ರಂದು ಸಂಜೆ 5–30 ಘಂಟೆಯವರೆಗೆ, ಕ)ಟೆಂಡರ ಸ್ವೀಕರಿಸುವ ದಿನಾಂಕ: 12–06–2026 ರಂದು ಸಂಜೆ 4–00 ಘಂಟೆಯವರೆಗೆ, ಡ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15–06–2026 ರಂದು ಸಂಜೆ 4.30 ಘಂಟೆಯವರೆಗೆ, ಚ) ಆರ್ಥಿಕ ಬಿಡ್ ತೆರೆಯುವ ದಿನಾಂಕ:16–06–2026 ರಂದು ಸಂಜೆ 4.30 ಘಂಟೆಯವರೆಗೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.
DIPR/BGK/RO-NO-65/KSMCA/2026-27

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2026–27/1219 ದಿನಾಂಕ:26/05/2026

ಇ–ಟೆಂಡರ್/ಮರುಟೆಂಡರ್/ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 2 ಕಾಮಗಾರಿಗಳು, 5054–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ–ಬಂಡವಾಳ ವೆಚ್ಚ ಅಡಿ 1 ಕಾಮಗಾರಿ, 4059–ಎಸ್.ಸಿ.ಪಿ.(CMIDP) 1 ಕಾಮಗಾರಿ, 8443–ಠೇವಣಿ ವಂತಿಕೆ ಅಡಿ 1 ಕಾಮಗಾರಿ ಹಾಗೂ 3054–ಜಿಮುರ ಸೇತುವೆ ನಿರ್ವಹಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 6 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 6.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 180.00 ಲಕ್ಷ ಇರುವ ಕಾಮಗಾರಿಗಳಿಗೆ ಇ–ಟೆಂಡರ್/ಮರುಟೆಂಡರ್ /ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:11–06–2026 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:12–06–2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 15–06–2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):17–06–2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ”, 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-326/KSMCA/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ
ಸಂ: 10/2026–2027 ದಿನಾಂಕ:26.05.2026

ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರುಗಳ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW–4 ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು.

ಕ್ರ.ಸಂ. (1) ಮತ್ತು (3) ಕಾಮಗಾರಿಗಳಿಗೆ ಮಾತ್ರ

ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್ಲಿ ದಿನಾಂಕ: 04.06.2026 ರಂದು ಬೆಳಿಗ್ಗೆ 11–00 ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ 30.05.2026 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ; 08.06.2026 ಸಂಜೆ 4.00 ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09.06.2026 ಸಂಜೆ 4.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 10.06.2026 ಸಂಜೆ 4.31 ಗಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.06.2026 ಬೆಳಿಗ್ಗೆ 11.00ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 6/4 ತಿಂಗಳು ಒಟ್ಟು 2 (ಎರಡು),

ಕ್ರ.ಸಂ. (2) ಕಾಮಗಾರಿಗೆ ಮಾತ್ರ

ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್ಲಿ ದಿನಾಂಕ: 10.06.2026 ರಂದು ಬೆಳಿಗ್ಗೆ 11–00 ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ 30.05.2026 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ; 15.06.2026 ಸಂಜೆ 4.00 ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16.06.2026 ಸಂಜೆ 4.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 17.06.2026 ಸಂಜೆ 4.31 ಗಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.06.2026 ಬೆಳಿಗ್ಗೆ 11.00ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 9 ತಿಂಗಳು ಒಟ್ಟು 1 (ಒಂದು),

ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.300.00 ಲಕ್ಷಗಳು ಕನಿಷ್ಠ ಅಂದಾಜು ಮೊತ್ತ ರೂ.200.00 ಲಕ್ಷಗಳು ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/156/2026–27

26 ವಿಭಾಗಗಳಲ್ಲಿ ಪ್ರಶಸ್ತಿ | 21 ತಾಂತ್ರಿಕ ತೀರ್ಪುಗಾರರು | 7 ಮುಖ್ಯ ತೀರ್ಪುಗಾರರು

4ನೇ ಆವೃತ್ತಿ ಜೂನ್ 19ಕ್ಕೆ

CASAGRAND
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಪ್ರಜಾವಾಣಿ ಸಿನಿ ಸಮ್ಮಾನ: ನಾಮನಿರ್ದೇಶಿತರು

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ 4ನೇ ಆವೃತ್ತಿಗೆ ದಿನಗಣನೆ ಶುರುವಾಗಿದೆ. 2025ನೇ ಸಾಲಿನ ಪ್ರಶಸ್ತಿಗಳಿಗೆ ನಾಮನಿರ್ದೇಶನಗೊಂಡವರ ವಿವರಗಳನ್ನು ತಿಳಿಸುವ ಸಮಯ ಇದು. 15 ವಿಭಾಗಗಳಲ್ಲಿ ಪ್ರತಿಭಾವಂತರನ್ನು ಆಯ್ಕೆ ಮಾಡಲು ಪರಿಣತರ ತಂಡವು ನಾಮನಿರ್ದೇಶನಗಳನ್ನು ಮಾಡಿದೆ. ಮೊದಲ ಹಂತವಾಗಿ ಅತ್ಯುತ್ತಮ ಸಿನಿಮಾ, ಅತ್ಯುತ್ತಮ ನಟ, ಅತ್ಯುತ್ತಮ ನಟಿ, ಅತ್ಯುತ್ತಮ ನಿರ್ದೇಶನ ವಿಭಾಗದ ನಾಮನಿರ್ದೇಶಿತರ ಹೆಸರು/ಸಿನಿಮಾಗಳನ್ನು ಪ್ರಕಟಿಸಲಾಗಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರ ಹೆಸರುಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು

‘ಸಿನಿ ಸಮ್ಮಾನ’ದ ಇನ್ನಷ್ಟು ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅತ್ಯುತ್ತಮ ನಟ

ನಟ	ಚಿತ್ರ
ರಿಷಬ್ ಶೆಟ್ಟಿ	ಕಾಂತಾರ: ಚಾಪ್ಟರ್–1
ವಿಜಯ ರಾಘವೇಂದ್ರ	ರಿಪ್ಪನ್ ಸ್ವಾಮಿ
ಕಿಶೋರ್ ಕುಮಾರ್	ಅನಾಮಧೇಯ ಅಶೋಕ್ ಕುಮಾರ್
ವಿನೋದ್ ಪ್ರಭಾಕರ್	ಮಾದೇವ
ಶನೀಲ್ ಗೌತಮ್	ಸು ಫ್ರಮ್ ಸೋ
ನವೀನ್ ಶಂಕರ್	ನೋಡಿದವರು ಏನಂತಾರೆ
ಮೌನೇಶ್ ನಟರಂಗ	ಹೆಬ್ಬುಲಿ ಕಟ್
ಅತೀಶ್ ಎಸ್.ಶೆಟ್ಟಿ	ಮಿಥ್ಯ

ಅತ್ಯುತ್ತಮ ನಟಿ

ನಟಿ	ಚಿತ್ರ
ಆಶಿಕಾ ರಂಗನಾಥ್	ಗತವೈಭವ
ರುಕ್ಮಿಣಿ ವಸಂತ್	ಕಾಂತಾರ: ಚಾಪ್ಟರ್ 1
ಅದಿತಿ ಪ್ರಭುದೇವ	ದಿಲ್ಮಾರ್
ಸಂಧ್ಯಾ ಅರಕೆರೆ	ಸು ಫ್ರಮ್ ಸೋ
ಸಂಪದಾ	ಎಕ್ಕ
ಪ್ರಿಯಾಂಕಾ ಆಚಾರ್	ಏಳುಮಲೆ
ಸಂಜನಾ ದಾಸ್	ಕಂಗ್ರಾಜುಲೇಷನ್ಸ್ ಬ್ರದರ್
ರಷ್ಮಿತಾ ಗೌಡ	ಅರಸಯ್ಯನ ಪ್ರೇಮ ಪ್ರಸಂಗ

ಅತ್ಯುತ್ತಮ ಚಿತ್ರ

ಕಾಂತಾರ: ಚಾಪ್ಟರ್ 1 | ಸು ಫ್ರಮ್ ಸೋ | ಏಳುಮಲೆ | 45 | ಮಾದೇವ | ಗ್ರೀನ್ ಗರ್ಲ್ | ಎಕ್ಕ | ವನ್ಯಾ

ವಿಜೇತರ ಆಯ್ಕೆ ಹೀಗಿರಲಿದೆ...

ಆಯ್ಕೆ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಪರಿಣತರು ನಾಮನಿರ್ದೇಶನಕ್ಕೆ ಆಯ್ಕೆ ಮಾಡಿದವರ ಹೆಸರುಗಳನ್ನು ಮುಖ್ಯ ತೀರ್ಪುಗಾರರು ಅನುಮೋದಿಸಿದ್ದಾರೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ-ಸಂಸ್ಥೆಗಳ ಒಂದು ಸಾವಿರಕ್ಕೂ ಹೆಚ್ಚು ಸದಸ್ಯರು ವೋಟ್ ಮೂಲಕ ಆಯ್ಕೆ ಮಾಡಲಿದ್ದಾರೆ.

ಅತ್ಯುತ್ತಮ ನಿರ್ದೇಶನ

ನಿರ್ದೇಶಕ	ಚಿತ್ರ
ಪುನೀತ್ ರಂಗಸ್ವಾಮಿ	ಏಳುಮಲೆ
ರಿಷಬ್ ಶೆಟ್ಟಿ	ಕಾಂತಾರ: ಚಾಪ್ಟರ್ 1
ಅನೀಶ್ ಪೂಜಾರಿ ವೇಣೂರು	ದಸ್ಕತ್
ಭೀಮರಾವ್ ಪಿ.	ಹೆಬ್ಬುಲಿ ಕಟ್
ಸಾಗರ್ ಕುಮಾರ್	ಅನಾಮಧೇಯ ಅಶೋಕ್ ಕುಮಾರ್
ಕಿಶೋರ್ ಮೂಡಬಿದ್ರೆ	ರಿಪ್ಪನ್ ಸ್ವಾಮಿ
ಬಿ.ನವೀನ್ ರೆಡ್ಡಿ	ಮಾದೇವ
ವಂಶಿ ಕೃಷ್ಣ	ಫೈರ್ ಫ್ಲೈ

ಇ.ಡಿ ದಾಳಿ: ಪಿಣರಾಯಿ ಬೆಂಬಲಿಗರ ದಾಂದಲೆ

ಬಾಟಲಿ, ಕಲ್ಲು ತೂರಾಟ ನಡೆಸಿ ಸಿಆರ್‌ಪಿಎಫ್ ಯೋಧನ ಮೇಲೆ ಹಲ್ಲೆ

ತಿರುವನಂತಪುರ (ಪಿಟಿಐ): ಕೊಚ್ಚಿನ್ ಮಿನರಲ್ಸ್ ಆ್ಯಂಡ್ ರೂಟೈಲ್ ಲಿಮಿಟೆಡ್‌ನ (ಸಿಎಂಆರ್‌ಎಲ್) ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೇರಳಂ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನಿವಾಸದ ಮೇಲೆ ಬುಧವಾರ ದಾಳಿಗೆ ಮುಂದಾದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ವಾಹನಕ್ಕೆ ಮುತ್ತಿಗೆ ಹಾಕಿದ ಸಿಪಿಎಂ ಕಾರ್ಯಕರ್ತರು, ಬಾಟಲಿ, ಕಲ್ಲುಗಳನ್ನು ಎಸೆದು ಭಾರಿ ದಾಂದಲೆ ನಡೆಸಿದ್ದಾರೆ.

ಸಿಪಿಎಂ ಕಾರ್ಯಕರ್ತರು ನಡೆಸಿದ ದಾಳಿಯಲ್ಲಿ ಇ.ಡಿ ತಂಡದ ಮೂರು ಕಾರುಗಳ ಗಾಜು ಪುಡಿಯಾಗಿವೆ. ಒಂದು ಕಾರಿನಲ್ಲಿದ್ದ ಚಾಲಕನಿಗೆ ಗಾಯವಾಗಿದೆ. ನಿವಾಸದ ಹೊರಗೆ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸರಿಂದ ಹೆಲ್ಮೆಟ್ ಕಸಿದುಕೊಂಡ ಕಾರ್ಯಕರ್ತರು, ಅದನ್ನು ಬಳಸಿ ಇ.ಡಿ ತಂಡದ ಭದ್ರತೆಗೆ ನಿವಾಸದ ಆವರಣದಲ್ಲಿ ನಿಂತಿದ್ದ ಸಿಆರ್‌ಪಿಎಫ್ ಯೋಧನ ಮೇಲೂ ಹಲ್ಲೆ ನಡೆಸಿದ್ದಾರೆ.

ಸಿಎಂಆರ್‌ಎಲ್ ಕಂಪನಿಯು ಪಿಣರಾಯಿ ವಿಜಯನ್ ಅವರ ಪುತ್ರಿ ಟಿ. ವೀಣಾ ವಿಜಯನ್ ಮಾಲೀಕತ್ವದ ಐ.ಟಿ ಕಂಪನಿಗೆ, ಯಾವುದೇ ಸೇವೆ ಪಡೆಯದೆ ₹2.78 ಕೋಟಿ ಹಣ ವರ್ಗಾಯಿಸಿರುವ ಆರೋಪವನ್ನು ಎದುರಿಸುತ್ತಿದೆ. ಇದರ ತನಿಖೆಗಾಗಿ ಇ.ಡಿ ಅಧಿಕಾರಿಗಳು ಇಲ್ಲಿನ ಬೇಕರಿ ಜಂಕ್ಷನ್‌ನಲ್ಲಿರುವ ಪಿಣರಾಯಿ ಅವರ ಬಾಡಿಗೆ ಮನೆಗೆ ಬಂದಿದ್ದರು. ಸಿಪಿಎಂ ಕಾರ್ಯಕರ್ತರಿಂದ ತುಂಬಿದ್ದ ಪಿಣರಾಯಿ ನಿವಾಸದ ಆವರಣವು ಕ್ಷಣ ಮಾತ್ರದಲ್ಲಿ ಸಮರ ಕಣವಾಗಿ ಬದಲಾಯಿತು.

> ಇ.ಡಿ ದಾಳಿಯಿಂದ ನನ್ನನ್ನು ಅಥವಾ ಸಿಪಿಎಂ ಅನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ. ಯಾರೂ ಅಂತಹ ಭ್ರಮೆಗಳನ್ನು ಇಟ್ಟುಕೊಳ್ಳಬಾರದು
> **ಪಿಣರಾಯಿ ವಿಜಯನ್,** ಸಿಪಿಎಂ ಮುಖಂಡ

> ಹಿಂಸಾಚಾರವೇ ಭ್ರಷ್ಟರ ಕೊನೆಯ ಆಶ್ರಯ ತಾಣ. ಪಿಣರಾಯಿ ನಿವಾಸದ ಎದುರು ಸಿಪಿಎಂ ನಡೆಸಿದ ದಾಂದಲೆಯು ಕಾನೂನು ಸುವ್ಯವಸ್ಥೆ ಮೇಲಿನ ದಾಳಿಯಾಗಿದೆ
> **ರಾಜೀವ್ ಚಂದ್ರಶೇಖರ್,** ರಾಜ್ಯ ಘಟಕದ ಬಿಜೆಪಿ ಅಧ್ಯಕ್ಷ, ಕೇರಳಂ

ಏಕಕಾಲದಲ್ಲಿ ದಾಳಿ: ಕಣ್ಣೂರಿನಲ್ಲಿರುವ ಪಿಣರಾಯಿ ಅವರ ನಿವಾಸ, ಕೋಯಿಕ್ಕೋಡ್‌ನಲ್ಲಿರುವ ಪಿಣರಾಯಿ ಅವರ ಅಳಿಯ, ಮಾಜಿ ಸಚಿವ ಪಿ.ಎ. ಮೊಹಮ್ಮದ್ ರಿಯಾಸ್ ಅವರ ನಿವಾಸ ಸೇರಿ, ತಿರುವನಂತಪುರ, ಎರ್ನಾಕುಳಂ, ಬೆಂಗಳೂರು ಸೇರಿದಂತೆ 10 ಕಡೆಗಳಲ್ಲಿ ಪಿಣರಾಯಿ ಮತ್ತು ಅವರ ಸಂಬಂಧಿಕರ ಮನೆಗಳ ಮೇಲೆ ಇ.ಡಿ ಬುಧವಾರ ಬೆಳಿಗ್ಗೆ 7 ಗಂಟೆಗೆ ಏಕಕಾಲದಲ್ಲಿ ದಾಳಿ ನಡೆಸಿತು.

ಭದ್ರತೆಗಾಗಿ ಶಸ್ತ್ರಸಜ್ಜಿತ ಸಿಬ್ಬಂದಿ ನಿಯೋಜಿಸಲಾಗಿತ್ತು. ತಿರುವನಂತಪುರದ ಬೇಕರಿ ಜಂಕ್ಷನ್ ಬಳಿಯ ಮನೆಗೆ ಇ.ಡಿ ತಂಡ ಬಂದಾಗ, ಪಿಣರಾಯಿ ಮತ್ತು ಅವರ ಕುಟುಂಬ ಸದಸ್ಯರು ಒಳಗಿದ್ದರು. ಸಿಪಿಎಂ ಕಾರ್ಯಕರ್ತರು ದಾಂದಲೆ ನಡೆಸಿದ ಬೆನ್ನಲ್ಲೇ, ಶೋಧ ಕೈಗೊಳ್ಳದೆ ಇ.ಡಿ ತಂಡ ಮರಳಿತು. ದಾಂದಲೆ ಬಗ್ಗೆ ಪೊಲೀಸರಿಗೆ ಇ.ಡಿ ದೂರು ನೀಡಿದೆ ಎಂದು ಮೂಲಗಳು ತಿಳಿಸಿವೆ.

ತಿರುವನಂತಪುರದಲ್ಲಿ ಇ.ಡಿ ಅಧಿಕಾರಿಗಳ ಕಾರಿಗೆ ಸಿಪಿಎಂ ಕಾರ್ಯಕರ್ತರು ಮುತ್ತಿಗೆ ಹಾಕಿ, ಜಖಂಗೊಳಿಸಿದರು – ಪಿಟಿಐ ಚಿತ್ರ

ಇ.ಡಿ ತನಿಖೆ ಏನು?

ಸಿಎಂಆರ್‌ಎಲ್ ಕಂಪನಿಯಿಂದ, ಪಿಣರಾಯಿ ವಿಜಯನ್ ಅವರ ಪುತ್ರಿ ಟಿ. ವೀಣಾ ಅವರ ಒಡೆತನದ ಬೆಂಗಳೂರಿನಲ್ಲಿರುವ ಎಕ್ಸಾಲಾಜಿಕ್ ಸೊಲ್ಯೂಷನ್ಸ್ ಸಂಸ್ಥೆಗೆ 2018 ಮತ್ತು 2019ರಲ್ಲಿ ಒಟ್ಟು ₹2.78 ಕೋಟಿ ಹಣ ಅಕ್ರಮವಾಗಿ ವರ್ಗಾವಣೆ ಆಗಿದೆ ಎಂಬ ದೂರಿನ ಬಗ್ಗೆ ಇ.ಡಿ ತನಿಖೆ ನಡೆಸುತ್ತಿದೆ.

ಇ.ಡಿ ತನಿಖೆ ರದ್ದುಮಾಡುವಂತೆ ಕೋರಿ ಸಿಎಂಆರ್‌ಎಲ್ ಕಂಪನಿ ಸಲ್ಲಿಸಿದ್ದ ಮನವಿಯನ್ನು ಕೇರಳಂ ಹೈಕೋರ್ಟ್ ಮಂಗಳವಾರ ವಜಾಗೊಳಿಸಿತ್ತು.

ಸಿಪಿಎಂ ಪ್ರತಿಭಟನೆ

ಕಣ್ಣೂರಿನಲ್ಲಿ ಪಿಣರಾಯಿ ವಿಜಯನ್ ಅವರ ನಿವಾಸದ ಎದುರು ಜಮಾಯಿಸಿದ ಸಿಪಿಎಂ ಕಾರ್ಯಕರ್ತರು, ಇ.ಡಿ ಮತ್ತು ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಕೇಂದ್ರದ ಬಿಜೆಪಿ ಸರ್ಕಾರ, ಕೇರಳಂನ ಸಿಪಿಎಂ ಮುಖಂಡರನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದೆ. ಇ.ಡಿಯನ್ನು ರಾಜಕೀಯ ಪ್ರೇರಿತ ದಾಳಿಗಳಿಗೆ ಬಳಸಿಕೊಳ್ಳುತ್ತಿದೆ’ ಎಂದು ದೂರಿದರು.

ದೆಹಲಿಯಲ್ಲಿ ಇ.ಡಿ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ ಬೇಬಿ ಅವರನ್ನು ಪೊಲೀಸರು ವಶಕ್ಕೆ ಪಡೆದರು. ‘ಸಿಪಿಎಂ ಮುಖಂಡರ ಮೇಲಿನ ಇ.ಡಿ ದಾಳಿಯು ಕೇಂದ್ರದ ಬಿಜೆಪಿ ಸರ್ಕಾರದ ಹೇಯ ಕೃತ್ಯ’ ಎಂದು ಆರೋಪಿಸಿದ ಬೇಬಿ, ‘ಇದೊಂದು ರಾಜಕೀಯ ಪ್ರೇರಿತ ದಾಳಿ ಎನ್ನುವುದನ್ನು ಸಿಪಿಎಂ ಜನರ ಎದುರು ಸಾಬೀತುಪಡಿಸಲಿದೆ’ ಎಂದರು.

ಕೇರಳಂನ ಹೊಸ ಮುಖ್ಯಮಂತ್ರಿ ವಿ.ಡಿ ಸತೀಶನ್ ಅವರ ಸಂಪುಟದಲ್ಲಿರುವ ಇಬ್ಬರು ಸಚಿವರು ಸಹ ಸಿಎಂಆರ್‌ಎಲ್ ಕಂಪನಿಯಿಂದ ಹಣ ಪಡೆದಿದ್ದು, ಈ ಬಗ್ಗೆಯೂ ತನಿಖೆ ನಡೆಯಬೇಕು ಎಂದು ಅವರು ಒತ್ತಾಯಿಸಿದರು.

‘ದೇವರ ಕೃತ್ಯ’: ನಿಲುವು ಬದಲಿಸಿದ ಎನ್‌ಎಚ್‌ಎಐ

ಶಿಮ್ಲಾ (ಪಿಟಿಐ): ಇಲ್ಲಿಗೆ ಸಮೀಪದ ಢಲ್ಲಿ ಬಳಿ ಭೂಕುಸಿತದಿಂದ ಕೃಷಿ ಭೂಮಿ ಹಾಗೂ ಸೇಬು ಮರಗಳಿಗೆ ಹಾನಿಯಾಗಿದ್ದನ್ನು ‘ದೇವರ ಕೃತ್ಯ’ ಎಂದಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಇದೀಗ ತನ್ನ ನಿಲುವು ಬದಲಾಯಿಸಿದೆ.

ಭೂಕುಸಿತದಿಂದ ಹಾನಿಗೀಡಾದ ಜಮೀನನ್ನು ಖರೀದಿಸಲು ಎನ್‌ಎಚ್‌ಎಐ ನಿರ್ಧರಿಸಿದ್ದು, ಈ ಖರೀದಿ ಮೊತ್ತದ ಜೊತೆಗೆ ಸೇಬಿನ ಮರಗಳಿಗಾದ ನಷ್ಟವನ್ನು ಪರಿಗಣಿಸಿ, ಕೃಷಿ ಭೂಮಿಯ ಮಾಲೀಕ ನರಿಂದರ್ ಸಿಂಗ್ ರಾಥೋಡ್ ಅವರಿಗೆ ₹1.80 ಕೋಟಿ ಪರಿಹಾರ ನೀಡಲು ಸಮ್ಮತಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಪ್ರಾಧಿಕಾರವು ನಷ್ಟ ಪರಿಹಾರ ಪಾವತಿಸಲು ಸಮ್ಮತಿಸಿದ ಬಳಿಕ ಎನ್‌ಜಿಟಿಯಲ್ಲಿನ ಪ್ರಕರಣ ವಾಪಸ್ ಪಡೆಯುವುದಾಗಿ ನರಿಂದರ್ ಹೇಳಿದ್ದಾರೆ.

ಶಕ್ರಾಲ ಗ್ರಾಮದಿಂದ ಢಲ್ಲಿವರೆಗೆ ಚತುಷ್ಪಥ ರಸ್ತೆ ಕಾಮಗಾರಿ ಕೈಗೊಂಡಿದ್ದ ಎನ್‌ಎಚ್‌ಎಐ ಮತ್ತು ಅದರ ಏಜೆನ್ಸಿಗಳ ವಿರುದ್ಧ ನರಿಂದರ್ ಸಿಂಗ್ ಅವರು ರಾಷ್ಟ್ರೀಯ ಹಸಿರು ನ್ಯಾಯಪೀಠದಲ್ಲಿ (ಎನ್‌ಜಿಟಿ) ಪ್ರಕರಣ ದಾಖಲಿಸಿದ್ದರು.

‘ಪ್ರಾಧಿಕಾರ ಮತ್ತು ಅದರ ಏಜೆನ್ಸಿಗಳು ಇಳಿಜಾರಿನ ಪ್ರದೇಶವನ್ನು ಸರಿಯಾಗಿ ಬಲಪಡಿಸದೆ, ಭಾರಿ ಪ್ರಮಾಣದ ನಿರ್ಮಾಣ ಕಾರ್ಯಗಳನ್ನು ಕೈಗೊಂಡಿದ್ದವು. ಇದರಿಂದ ಶಿಮ್ಲಾದ ಗ್ರಾಮೀಣ ಭಾಗದಲ್ಲಿ ಕೃಷಿ ಭೂಮಿಗೆ ಹಾನಿ ಉಂಟಾಗಿ, 2025ರ ಮೇ ತಿಂಗಳಲ್ಲಿ ಭೂಕುಸಿತ ಸಂಭವಿಸಿದೆ’ ಎಂದು ಭೂ ಮಾಲೀಕರು ಅರ್ಜಿಯಲ್ಲಿ ದೂರಿದ್ದರು.

ಹೆದ್ದಾರಿ ಪ್ರಾಧಿಕಾರದ ಕಾಮಗಾರಿಯಿಂದಾಗಿ ಭೂಕುಸಿತ ಸಂಭವಿಸಿದ್ದು, ಇದರಿಂದಾಗಿ 440 ಸೇಬಿನ ಮರಗಳಿಗೆ ಹಾನಿಯಾಗಿದ್ದು, ಪರಿಹಾರವನ್ನು ಕೋರಿದ್ದರು.

ಎನ್‌ಎಚ್‌ಎಐ ಮೇ 19ರಂದು ಎನ್‌ಜಿಟಿಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಪರಿಹಾರ ನೀಡಲು ನಿರಾಕರಿಸಿತ್ತು. ಭೂಕುಸಿತವನ್ನು ದೇವರ ಕೃತ್ಯ ಎಂದು ಹೇಳಿತ್ತು. ಆದರೆ, ಇದೀಗ ತನ್ನ ನಿಲುವು ಬದಲಿಸಿಕೊಂಡಿದ್ದು, ಲೋಕೋಪಯೋಗಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯ ಮೌಲ್ಯಮಾಪನದಂತೆ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡಲು ಮುಂದಾಗಿದೆ.

‘ನಮ್ಮ ಕುಟುಂಬ ಇಲ್ಲಿಯೇ ನೆಲಸಿದೆ. ತಲೆಮಾರುಗಳಿಂದಲೂ ಹಣ್ಣು ಬೆಳೆಯುತ್ತಿದೆ. ಆದರೆ, ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ಸುರಂಗ ಕೊರೆದ ಬಳಿಕವಷ್ಟೇ ‘ದೇವರ ಕೃತ್ಯ’ ನಡೆಯಿತು’ ಎಂದಿದ್ದಾರೆ ನರಿಂದರ್.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ: ವೈದ್ಯ, ಉಪನ್ಯಾಸಕಿ ಬಂಧನ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ನೀಟ್–ಯುಜಿ 2026ರ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಿಬಿಐ ಬುಧವಾರ ಪುಣೆಯ ಪ್ರಮುಖ ತರಬೇತಿ ಕೇಂದ್ರ, ಡಾ. ಅಭಂಗ್ ಪ್ರಭು ಮೆಡಿಕಲ್ ಅಕಾಡೆಮಿಯ (ಎಪಿಎಂಎ) ವೈದ್ಯ ಹಾಗೂ ಭೌತವಿಜ್ಞಾನ ಉಪನ್ಯಾಸಕಿಯನ್ನು ಬಂಧಿಸಿದೆ.

ಲಾತೂರ್ ಮೂಲದ ವೈದ್ಯ ಮನೋಜ್ ಶಿರೂರೆ ಮತ್ತು ಉಪನ್ಯಾಸಕಿ ತೇಜಸ್ ಹರ್ಷದ್‌ಕುಮಾರ್ ಶಾ ಬಂಧಿತ ಆರೋಪಿಗಳು.

ಡಾ. ಮನೋಜ್ ಅವರು, ಜಾಲದ ಪ್ರಮುಖ ಆರೋಪಿ ಪಿ.ವಿ ಕುಲಕರ್ಣಿ ಅವರಿಂದ ರಸಾಯನವಿಜ್ಞಾನದ ಪ್ರಶ್ನೆ ಪತ್ರಿಕೆ ಪಡೆದು, ತರಬೇತಿ ಕೇಂದ್ರದ ಮಾಲೀಕನ ಪುತ್ರ ಹಾಗೂ ಅಲ್ಲಿನ ಇಬ್ಬರು ವಿದ್ಯಾರ್ಥಿಗಳಿಗೆ ಪೂರೈಸಿರುವುದು ಸಿಬಿಐ ತನಿಖೆಯಲ್ಲಿ ತಿಳಿದುಬಂದಿದೆ. ಈಗಾಗಲೇ ಸಿಬಿಐ ಬಂಧಿಸಿರುವ ಆರೋಪಿ ಮನೀಶಾ ಹವಾಲ್ದಾರ್ ಅವರಿಂದ ಭೌತವಿಜ್ಞಾನ ಪ್ರಶ್ನೆಪತ್ರಿಕೆಯನ್ನು ಸೋರಿಕೆ ಮಾಡಿದ ಆರೋಪವನ್ನು ತೇಜಸ್ ಹರ್ಷದ್ ಕುಮಾರ್ ಎದುರಿಸುತ್ತಿದ್ದಾರೆ.

ಈ ಮೂಲಕ, ಪ್ರಕರಣದಲ್ಲಿ ಸಿಬಿಐ ಇದುವರೆಗೆ ಬಂಧಿಸಿದ ಆರೋಪಿಗಳ ಸಂಖ್ಯೆ 13ಕ್ಕೆ ಏರಿದೆ.

ರಸಾಯನ ವಿಜ್ಞಾನ ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಸಿಬಿಐ ಈಗಾಗಲೇ ಕುಲಕರ್ಣಿ ಅವರನ್ನು ಬಂಧಿಸಿದೆ. ಪ್ರಾಣಿವಿಜ್ಞಾನ ಮತ್ತು ಸಸ್ಯವಿಜ್ಞಾನ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ ಆರೋಪದಡಿ ಮನೀಶಾ ಗುರುನಾಥ್ ಮಂಧಾರೆ ಅವರನ್ನೂ ವಶಕ್ಕೆ ಪಡೆಯಲಾಗಿದೆ. ಇದುವರೆಗೆ ದೇಶದ 49 ಕಡೆಗಳಲ್ಲಿ ಶೋಧ ನಡೆಸಲಾಗಿದ್ದು, ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಬಿಐ ಮೂಲಗಳು ತಿಳಿಸಿವೆ.

ಸಿಬಿಎಸ್‌ಇ, ಕೇಂದ್ರ ಸರ್ಕಾರಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಶ್ನೆ

ತಪ್ಪಿತಸ್ಥ ಕಂಪನಿಗೇಕೆ ಮತ್ತೆ ‘ಒಎಸ್‌ಎಂ’ ಗುತ್ತಿಗೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ತೆಲಂಗಾಣದಲ್ಲಿ ಸಿಬಿಎಸ್‌ಇ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಕಳಪೆ ನಿರ್ವಹಣೆಯ ದಾಖಲೆಯನ್ನು ಹೊಂದಿರುವ ಕಂಪನಿಗೆ, ಈ ಬಾರಿಯ ಉತ್ತರ ಪತ್ರಿಕೆಗಳ ‘ಆನ್ ಸ್ಕ್ರೀನ್ ಮಾರ್ಕಿಂಗ್’ (ಒಎಸ್‌ಎಂ) ಜವಾಬ್ದಾರಿ ವಹಿಸಿದ್ದ ಸಿಬಿಎಸ್‌ಇ ನಿರ್ಧಾರವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಪ್ರಶ್ನಿಸಿದ್ದಾರೆ.

ಇದೇ ವೇಳೆ, ಸಿಬಿಎಸ್‌ಇ ಫಲಿತಾಂಶಗಳ ಅವ್ಯವಸ್ಥೆಗೆ ಕಾರಣವಾದ ಅಪರಾಧಿಗಳನ್ನು ಪತ್ತೆ ಹಚ್ಚುವುದಕ್ಕಾಗಿ ಪ್ರಕರಣವನ್ನು ನ್ಯಾಯಾಂಗ ತನಿಖೆ ಮತ್ತು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸುವಂತೆ ಕೇಂದ್ರ ಸರ್ಕಾರವನ್ನು ಅವರು ಒತ್ತಾಯಿಸಿದ್ದಾರೆ.

‘ಸಿಬಿಎಸ್‌ಇ ಪರೀಕ್ಷಾ ಫಲಿತಾಂಶದಲ್ಲಿ ಬೃಹತ್ ಅಕ್ರಮ ನಡೆದಿದ್ದು, ದೇಶದಾದ್ಯಂತ ಲಕ್ಷಾಂತರ ಮಕ್ಕಳು ಮತ್ತು ಅವರ ಪೋಷಕರು ಆಘಾತಕ್ಕೊಳಗಾಗಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ಒಂದೂ ಮಾತು ಆಡುವುದಿಲ್ಲ, ಹೊಣೆಗಾರಿಕೆಯನ್ನೂ ಪ್ರದರ್ಶಿಸಿಲ್ಲ. ಇದು ನಾಚಿಕೆಗೇಡು’ ಎಂದು ರಾಹುಲ್ ದೂರಿದ್ದಾರೆ.

ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಈ ವಿಷಯದ ಕುರಿತು ವಿಡಿಯೊವೊಂದನ್ನು ಪೋಸ್ಟ್ ಮಾಡಿರುವ ಅವರು, ‘ಈ ಸಂಚಿನ ಮೂಲವನ್ನು ಹುಡುಕಿ ಭ್ರಷ್ಟಾಚಾರವನ್ನು ಬುಡಸಹಿತ ಕಿತ್ತು ಹಾಕಲು ಬದ್ಧನಾಗಿರುವುದರಿಂದ, ‘ಝೆನ್ ಜೀ’ ಪೀಳಿಗೆಯ ಕಠಿಣ ಪರಿಶ್ರಮ ಮತ್ತು ಭವಿಷ್ಯವನ್ನು ಯಾರೂ ಕದಿಯಲು ಸಾಧ್ಯವಿಲ್ಲ’ ಎಂದು ಅವರು ಪ್ರತಿಪಾದಿಸಿದ್ದಾರೆ.



ರಾಹುಲ್ ಗಾಂಧಿ

‘ಮೌಲ್ಯಮಾಪನ ಮಾಡಿರುವ ತಮ್ಮ ಉತ್ತರ ಪತ್ರಿಕೆಗಳನ್ನು ಸರಿಯಾಗಿ ಸ್ಕ್ಯಾನ್ ಮಾಡಿಲ್ಲ ಮತ್ತು ಅಂಕಗಳನ್ನು ಸರಿಯಾಗಿ ನಮೂದಿಸಿಲ್ಲ’ ಎಂದು ನಿರೀಕ್ಷಿತ ಅಂಕಗಳನ್ನು ಪಡೆಯದ ಹೆಚ್ಚಿನ ವಿದ್ಯಾರ್ಥಿಗಳು ದೂರಿದ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ಈ ಹೇಳಿಕೆ ನೀಡಿದ್ದಾರೆ.

‘ಒಎಸ್‌ಎಂ ಹೊಣೆ ಹೊತ್ತಿರುವ ಕೋಎಂಪ್ಟ್ ಕಂಪನಿ 2019ರಲ್ಲಿ ತೆಲಂಗಾಣದಲ್ಲಿ ‘ಗ್ಲೊಬರೆನಾ’ ಹೆಸರಿನಲ್ಲಿ ಕೆಲಸ ಮಾಡಿದೆ. ಆ ಕಂಪನಿ ಮೇಲೆ ಗಂಭೀರ ಆರೋಪಗಳು ಬಂದಿದ್ದವು’ ಎಂದು ರಾಹುಲ್ ವಿಡಿಯೊದಲ್ಲಿ ಹೇಳಿದ್ದಾರೆ. ಈ ವಿಷಯವಿನ್ನೂ ಸಾರ್ವಜನಿಕವಾಗಿ ಉಳಿದಿದೆ ಎಂದಿದ್ದಾರೆ.

‘ಈಗ ಕಂಪನಿ ಹೆಸರು ಬದಲಾಗಿದೆ. ಆದರೆ ಉದ್ದೇಶ, ಸ್ವಭಾವ ಹಾಗೇ ಇದೆ. ಎಲ್ಲರಿಗೂ ಆ ಕಂಪನಿಯ ಇತಿಹಾಸ ತಿಳಿದೆ. ಆದರೂ, 18 ಲಕ್ಷ ಮಕ್ಕಳ ಭವಿಷ್ಯವನ್ನು ಅಂತಹ ಕಂಪನಿ ಕೈಗೆ ಕೊಡಲಾಯಿತು. ಈ ಬಗ್ಗೆ ಯಾರೂ ಮಾತನಾಡಲಿಲ್ಲ. ಇದು ಆಕಸ್ಮಿಕವಾಗಿ ಆಗಿಲ್ಲ, ಉದ್ದೇಶ ಪೂರ್ವಕವಾಗಿ ಮಾಡಿರುವ ಪಿತೂರಿ’ ಎಂದು ಹೇಳಿದ್ದಾರೆ.

ಸಿಬಿಎಸ್‌ಇ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಈ ವಿಡಿಯೊವನ್ನು ಹಂಚಿಕೊಂಡು, ಕೋಎಂಪ್ಟ್ ಕಂಪನಿಗೆ ಸಿಬಿಎಸ್‌ಇ ಏಕೆ ಈ ಗುತ್ತಿಗೆ ನೀಡಿದೆ ಮತ್ತು ಯಾರಿಂದ ನೀಡಲಾಗಿದೆ ಎಂದು ಸರ್ಕಾರ ಮತ್ತು ಪ್ರಧಾನಿಯನ್ನು ಕೇಳಬೇಕೆಂದು ಅವರು ಹೇಳಿದ್ದಾರೆ.

‘ಯಾವ ಕಾರ್ಯವಿಧಾನಗಳನ್ನು ತಪ್ಪಿಸಿ ಈ ಗುತ್ತಿಗೆಯನ್ನು ಕೋಎಂಪ್ಟ್ ಕಂಪನಿಗೆ ನೀಡಲಾಗಿದೆ’ ಮತ್ತು ಸಿಬಿಎಸ್‌ಇ ಇದನ್ನು ಏಕೆ ಪತ್ತೆ ಮಾಡಲಿಲ್ಲ. ಹಿನ್ನೆಲೆಯನ್ನು ಏಕೆ ಪರಿಶೀಲಿಸಿಲ್ಲ’ ಎಂಬ ಪ್ರಶ್ನೆಗಳನ್ನು ಸರ್ಕಾರಕ್ಕೆ ಕೇಳುವಂತೆ ರಾಹುಲ್ ಸಲಹೆ ನೀಡಿದ್ದಾರೆ.

ತ್ರಿಭಾಷೆ: ಪ್ರತಿಕ್ರಿಯಿಸಲು ಸಿಬಿಎಸ್‌ಇ, ಎನ್‌ಸಿಇಆರ್‌ಟಿಗೆ ಸೂಚನೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 9ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಸಕ್ತ ಸಾಲಿನಿಂದ ತೃತೀಯ ಭಾಷೆ ಕಡ್ಡಾಯ ಗೊಳಿಸಿರುವ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯಿಸುವಂತೆ ಸುಪ್ರೀಂ ಕೋರ್ಟ್ ಬುಧವಾರ ಕೇಂದ್ರ ಸರ್ಕಾರ, ಸಿಬಿಎಸ್‌ಇ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ, ಮತ್ತು ತರಬೇತಿ ಪರಿಷತ್‌ಗೆ (ಎನ್‌ಸಿಇಆರ್‌ಟಿ) ಸೂಚಿಸಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ, ವಿಪುಲ್ ಎಂ. ಪಂಚೋಲಿ ಅವರ ಪೀಠ ಈ ಕುರಿತು ವಿಚಾರಣೆ ನಡೆಸಿತು.

ಹೊಸ ನಿಯಮ ಜಾರಿಗೆ ಹಮ್ಮಿಕೊಂಡಿರುವ ಲಾಜಿಸ್ಟಿಕ್ ಯೋಜನೆ ಕುರಿತ ವರದಿ ಸಲ್ಲಿಸುವಂತೆ ಪೀಠವು, ಕೇಂದ್ರದ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರಿಗೆ ಹೇಳಿತು.

ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ‘ಈ ವಿಷಯವ ಕೆಲ ಮಹತ್ವದ ಸಾಂವಿಧಾನಿಕ ಪ್ರಶ್ನೆಗಳನ್ನು ಒಳಗೊಂಡಿದೆ. ಆದಾಗ್ಯೂ, ತೃತೀಯ ಭಾಷೆಗೆ ಸಂಬಂಧಿಸಿದ ಪಠ್ಯ ಪುಸ್ತಕಗಳು ಇಲ್ಲಿಯವರೆಗೆ ಲಭ್ಯವಾಗಿಲ್ಲ’ ಎಂದು ಹೇಳಿದರು.

‘ಈ ವಿಷಯವು ಗಂಭೀರ ಸಮಸ್ಯೆಗಳಿಗೆ ಕಾರಣವಾಗಲಿದೆ’ ಎಂದು ವಾದಿಸಿದ ಅವರು, ಭಾಷೆಯ ಕಲಿಕೆ ಎಂಬುದು ಆಯ್ಕೆಯ ವಿಷಯವಾಗಬೇಕೇ ಹೊರತು ಕಡ್ಡಾಯವಾಗಬಾರದು ಎಂದರು.

ತ್ರಿಭಾಷಾ ಸೂತ್ರವನ್ನು ಸಿಬಿಎಸ್‌ಇ ಜುಲೈ 1ರಿಂದಲೇ ಜಾರಿಗೊಳಿಸಲು ನಿರ್ಧರಿಸಿದ್ದು, ಅದಕ್ಕೆ ತಡೆ ನೀಡುವಂತೆ ಅರ್ಜಿದಾರರ ಪರ ವಕೀಲರು ಕೋರಿದರು. ಆದರೆ, ಮಧ್ಯಂತರ ಆದೇಶ ಹೊರಡಿಸಲು ನಿರಾಕರಿಸಿದ ಪೀಠ, ವಿಚಾರಣೆಯನ್ನು ಜುಲೈ ಎರಡನೇ ವಾರಕ್ಕೆ ಮುಂದೂಡಿತು.

ವೈಭವ್ ವಿಕ್ರಮ; ರಾಯಲ್ಸ್ ವಿಜಯ

ಕ್ವಾಲಿಫಯರ್–2ಗೆ ಪರಾಗ್ ಪಡೆ • ಜುರೇಲ್ ಅರ್ಧಶತಕ • ಆರ್ಚರ್‌ಗೆ 3 ವಿಕೆಟ್

ವೈಭವ್ ಸೂರ್ಯವಂಶಿ
97 ರನ್
29 ಎಸೆತ
5 ಬೌಂಡರಿ
12 ಸಿಕ್ಸರ್
334.48 ಸ್ಟ್ರೈಕ್‌ರೇಟ್

ಚಿತ್ರಗಳು: ಎಎಫ್‌ಪಿ/ ಪಿಟಿಐ

ಮುಲ್ಲನಪುರ (ಪಿಟಿಐ): ಒಂದು ಡಜನ್ ಸಿಕ್ಸರ್ ಸಿಡಿಸಿದ ವೈಭವ್ ಸೂರ್ಯವಂಶಿ ಕೇವಲ ಮೂರು ರನ್ ಅಂತರದಲ್ಲಿ ಶತಕ ಕೈತಪ್ಪಿಸಿಕೊಂಡರು. ಆದರೆ ರಾಜಸ್ಥಾನ ರಾಯಲ್ಸ್ ತಂಡವು ಕ್ವಾಲಿಫಯರ್–2 ಪ್ರವೇಶಿಸಲು ಅವರ ಆಟ ನೆರವಾಯಿತು.

ಮಹಾರಾಜ ಯಾದವೀಂದ್ರ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಟೂರ್ನಿಯ ಎಲಿಮಿನೇಟರ್ ಪಂದ್ಯದಲ್ಲಿ ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ಹೈದರಾಬಾದ್ ಎದುರು ರಾಜಸ್ಥಾನ ತಂಡವು 47 ರನ್‌ಗಳಿಂದ ಜಯಿಸಿತು. ಸನ್‌ರೈಸರ್ಸ್ ಅಭಿಯಾನಕ್ಕೆ ತೆರೆಬಿತ್ತು.

ರಿಯಾನ್ ಪರಾಗ್ ಪಡೆ, ಇದೇ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯುವ ಎರಡನೇ ಕ್ವಾಲಿಫಯರ್‌ನಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ.

ಟಾಸ್ ಗೆದ್ದ ಸನ್‌ರೈಸರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೈಭವ್ ಕೇವಲ 29 ಎಸೆತಗಳಲ್ಲಿ 97 ರನ್‌ಗಳನ್ನು ಸೂರೆ ಮಾಡಿದರು. ಅದರಲ್ಲಿ ಚೆಂಡು ಐದು ಸಲ ಬೌಂಡರಿಗೆರೆಗೆ ಮುತ್ತಿಕ್ಕಿದರೆ, 12 ಸಲ ಪ್ರೇಕ್ಷಕರ ಗ್ಯಾಲರಿಗೆ ಹೋಗಿ ಬಿತ್ತು. ಧ್ರುವ ಜುರೇಲ್ (50; 21ಎ, 4x5, 6x3) ಬಿರುಸಿನ ಅರ್ಧಶತಕ ಗಳಿಸಿದರು. ಇದರಿಂದಾಗಿ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 243 ರನ್ ಗಳಿಸಿತು. ಅದಕ್ಕುತ್ತರವಾಗಿ ಸನ್‌ರೈಸರ್ಸ್ ತಂಡವು 19.2 ಓವರ್‌ಗಳಲ್ಲಿ 196 ರನ್‌ಗಳಿಗೆ ಹೋರಾಟ ಮುಗಿಸಿತು.

ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ ತಂಡಕ್ಕೆ ರಾಯಲ್ಸ್ ವೇಗಿ ಜೋಫ್ರಾ ಆರ್ಚರ್ (58ಕ್ಕೆ3) ಅಡ್ಡಿಯಾದರು. ಅಭಿಷೇಕ್ ಶರ್ಮಾ ಅವರನ್ನು ಖಾತೆ ತೆರೆಯಲು ಜೋಫ್ರಾ ಅವಕಾಶ ಕೊಡಲಿಲ್ಲ. ಟ್ರಾವಿಸ್ ಹೆಡ್ (17 ರನ್) ಮತ್ತು ಇಶಾನ್ ಕಿಶನ್ (33 ರನ್) ಅವರಿಬ್ಬರಿಗೂ ಡಗ್‌ಔಟ್ ದಾರಿ ತೋರಿಸಿದರು.

ಕೊನೆಯ ಹಂತದಲ್ಲಿ ನಿತೀಶ್ ಕುಮಾರ್ ರೆಡ್ಡಿ (38; 20ಎ) ಮತ್ತು ಸಲೀಲ್ ಅರೋರಾ (35; 21ಎ) ತೋರಿದ ಹೋರಾಟ ಗೆಲುವಿಗೆ ಸಾಕಾಗಲಿಲ್ಲ. ವೇಗಿಗಳಾದ ನಾಂದ್ರೆ ಬರ್ಗರ್, ಸುಶಾಂತ್ ಮಿಶ್ರಾ ಹಾಗೂ ಸ್ಪಿನ್ನರ್ ರವೀಂದ್ರ ಜಡೇಜ ತಲಾ ಎರಡು ವಿಕೆಟ್ ಗಳಿಸಿ, ಸನ್‌ರೈಸರ್ಸ್ ತಂಡದ ಪತನಕ್ಕೆ ಕಾರಣರಾದರು.

ಕಮಿನ್ಸ್‌ಗೆ ವೈಭವ್ ಬಿಸಿ: ಪ್ಯಾಟ್ ಕಮಿನ್ಸ್ ಅವರಂತಹ ನುರಿತ ವೇಗಿಗೂ ಸಿಕ್ಸರ್‌ಗಳನ್ನು ಸಿಡಿಸಿದ 15 ವರ್ಷ ವಯಸ್ಸಿನ ವೈಭವ್ 16 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಇನ್ನೊಂದು ಬದಿಯಲ್ಲಿದ್ದ ಯಶಸ್ವಿ ಜೈಸ್ವಾಲ್ (29; 29ಎ, 4x4) ಯಾವುದೇ ಧಾವಂತ ಮಾಡದೇ ವೈಭವ್ ಆಟಕ್ಕೆ ಬೆಂಬಲವಾಗಿ ನಿಂತರು.

ಕಮಿನ್ಸ್ ಅವರ ಬೌಲಿಂಗ್‌ನಲ್ಲಿ ವೈಭವ್ ನಾಲ್ಕು ಸಿಕ್ಸರ್ ಹೊಡೆದರು. ಎಂಟನೇ ಓವರ್‌ನ ಕೊನೆಯ ಎಸೆತದಲ್ಲಿ ಪ್ರಫುಲ್ ಹಿಂಗೆ ಅವರ ಎಸೆತವನ್ನು ಅಪ್ಪರ್ ಕಟ್ ಮಾಡಿದರು. ಥರ್ಡ್‌ಮ್ಯಾನ್ ಬೌಂಡರಿಯಲ್ಲಿದ್ದ ಆರ್. ಸ್ಮರಣ್ ಅವರು ಜಿಗಿದು ಕ್ಯಾಚ್ ಪಡೆದರು. ವೈಭವ್ ತೀವ್ರ ಬೇಸರದಿಂದ ಡಗ್‌ಔಟ್‌ನತ್ತ ಹೆಜ್ಜೆ ಹಾಕಿದರು. ಎದುರಾಳಿ ತಂಡದ ಫೀಲ್ಡರ್‌ಗಳೂ ವೈಭವ್ ಬೆನ್ನು ತಟ್ಟಿ ಅಭಿನಂದಿಸಿದರು. ಈ ಓವರ್‌ನ ನಾಲ್ಕು ಮತ್ತು ಐದನೇ ಎಸೆತಗಳಲ್ಲಿ ಸತತ ಎರಡು ಸಿಕ್ಸರ್ ಸಿಡಿಸಿದ್ದರು. ಕ್ರಿಸ್ ಗೇಲ್ ಅವರು ಈ ಹಿಂದೆ 30 ಎಸೆತಗಳಲ್ಲಿ ಶತಕ ಹೊಡೆದಿದ್ದರು. ಆ ದಾಖಲೆ ಮುರಿಯುವ ಅವಕಾಶ ವೈಭವ್ ಕೈತಪ್ಪಿತು. ಆದರೆ ಗೇಲ್ ಅವರು ಒಂದೇ ಟೂರ್ನಿಯಲ್ಲಿ ಹೊಡೆದ 59 ಸಿಕ್ಸರ್‌ಗಳ ದಾಖಲೆಯನ್ನು ಬಿಹಾರಿ ಹುಡುಗ ನುಚ್ಚುನೂರು ಮಾಡಿದರು.

ಬ್ಯಾಟರ್‌ಗಳ ಸ್ವರ್ಗದಂತಿದ್ದ ಪಿಚ್‌ನಲ್ಲಿ ಮೊದಲ ವಿಕೆಟ್ ಜತೆಯಾಟದಲ್ಲಿ 8 ಓವರ್‌ಗಳಲ್ಲಿ 125 ರನ್ ಸೇರಿದವು.

ಕ್ರೀಸ್‌ಗೆ ಬಂದ ಜುರೇಲ್ ಅವರೂ ಚುರುಕಾಗಿ ಬ್ಯಾಟಿಂಗ್ ಮಾಡಿದರು. ಅವರ ಆಟದ ವೈಖರಿ ನೋಡಿದರೆ ತಂಡವು 280 ರನ್ ಗಳಿಸುವ ಭರವಸೆ ಮೂಡಿತ್ತು. ಆದರೆ ಯಶಸ್ವಿ ಜೈಸ್ವಾಲ್ ವಿಕೆಟ್ ಗಳಿಸಿದ ಶಿವಾಂಗ್ ಕುಮಾರ್ ಮಿಂಚಿದರು. ಇನ್ನೊಂದೆಡೆ ರಿಯಾನ್ ಪರಾಗ್ ಅವರು ಆಟಕ್ಕೆ ಕುದುರುವ ಹೊತ್ತಿನಲ್ಲಿಯೇ ಪ್ರಫುಲ್ ಅವರು ವಿಕೆಟ್ ಗಳಿಸಿದರು. ಅವರೇ ಜುರೇಲ್‌ಗೂ ಪೆವಿಲಿಯನ್ ದಾರಿ ತೋರಿಸಿದರು.

ನಂತರ ಬಂದ ಬ್ಯಾಟರ್‌ಗಳು ದೊಡ್ಡ ಮೊತ್ತ ಗಳಿಸದಂತೆ ಬೌಲರ್‌ಗಳು ಬಿಗಿ ಹಿಡಿತ ಸಾಧಿಸಿದರು. ಇದರಿಂದಾಗಿ ಕೊನೆಯ ಹಂತದ ಓವರ್‌ಗಳಲ್ಲಿ ಹೆಚ್ಚು ರನ್‌ಗಳು ಸೇರಲಿಲ್ಲ.

ಜೋಫ್ರಾ ಆರ್ಚರ್

ಐಪಿಎಲ್ ಆವೃತ್ತಿಯೊಂದರಲ್ಲಿ ಗರಿಷ್ಠ ಸಿಕ್ಸರ್

ಸಿಕ್ಸರ್	ಬ್ಯಾಟರ್	ತಂಡ	ವರ್ಷ
65	ವೈಭವ್ ಸೂರ್ಯವಂಶಿ	ಆರ್ ಆರ್	2026
59	ಕ್ರಿಸ್ ಗೇಲ್	ಆರ್‌ಸಿಬಿ	2012
52	ಆ್ಯಂಡ್ರೆ ರಸೆಲ್	ಕೆಕೆಆರ್	2019
51	ಕ್ರಿಸ್ ಗೇಲ್	ಆರ್‌ಸಿಬಿ	2013

ಐಪಿಎಲ್: ಪ್ಲೇಆಫ್‌ಗಳಲ್ಲಿ ಅತ್ಯಧಿಕ ಮೊತ್ತ

ರನ್	ತಂಡ	ಎದುರಾಳಿ	ತಾಣ	ವರ್ಷ
5ಕ್ಕೆ254	ಆರ್‌ಸಿಬಿ	ಜಿ.ಟಿ	ಧರ್ಮಶಾಲಾ	2026
8ಕ್ಕೆ243	ಆರ್.ಆರ್	ಎಸ್‌ಆರ್‌ಎಚ್	ಮುಲ್ಲನಪುರ	2026
3ಕ್ಕೆ233	ಜಿ.ಟಿ	ಎಂ.ಐ	ಅಹಮದಾಬಾದ್	2023
5ಕ್ಕೆ228	ಎಂ.ಐ	ಜಿ.ಟಿ	ಮುಲ್ಲನಪುರ	2025
6ಕ್ಕೆ226	ಪಿಬಿಕೆಎಸ್	ಸಿಎಸ್‌ಕೆ	ವಾಂಖೆಡೆ	2014

500+ ರನ್
ಈ ವರ್ಷದ ಐಪಿಎಲ್‌ನಲ್ಲಿ 11 ಮಂದಿ ಬ್ಯಾಟರ್‌ಗಳು 500ಕ್ಕೂ ಅಧಿಕ ರನ್ ಪೇರಿಸಿದರು. 2025ರ ಆವೃತ್ತಿಯಲ್ಲೂ ಇಷ್ಟೇ ಮಂದಿ ಆಟಗಾರರು ಈ ಮೈಲಿಗಲ್ಲು ಸಾಧಿಸಿದ್ದರು

ಜುರೇಲ್

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್: 8 ವಿಕೆಟ್‌ಗೆ 243 (20 ಓವರುಗಳಲ್ಲಿ)
ಜೈಸ್ವಾಲ್ ಸಿ ಅಭಿಷೇಕ್ ಬಿ ಶಿವಾಂಗ್ 29 (29ಎ, 4x4)
ಸೂರ್ಯವಂಶಿ ಸಿ ಸ್ಮರಣ್ ಬಿ ಪ್ರಫುಲ್ 97 (29ಎ, 4x5, 6x12)
ಜುರೇಲ್ ಸಿ ನಿತೀಶ್ ರೆಡ್ಡಿ ಬಿ ಪ್ರಫುಲ್ 50 (21, 4x5, 6x3)
ಪರಾಗ್ ಸಿ ಕ್ಲಾಸೆನ್ ಬಿ ಪ್ರಫುಲ್ 26 (12ಎ, 4x2, 6x2)
ಡೊನೊವನ್ ರನ್‌ಔಟ್ (ಶಿವಾಂಗ್/ ಇಶಾನ್) 12 (9ಎ, 4x1)
ಶನಕ ಸಿ ಅಭಿಷೇಕ್ ಬಿ ಮಾಲಿಂಗ 5 (3ಎ, 4x1)
ಜಡೇಜ ಔಟಾಗದೇ 12 (9ಎ, 4x1)
ಆರ್ಚರ್ ಸಿ ಅಭಿಷೇಕ್ 4 (5ಎ,4x1)
ಬರ್ಗರ್ ರನ್‌ಔಟ್ 1 (1ಎ)
ಸುಶಾಂತ್ ಔಟಾಗದೇ 1 (3ಎ)
ಇತರೆ: 6 (ಬೈ 2, ನೋಬಾಲ್ 1, ವೈಡ್ 3)
ವಿಕೆಟ್ ಪತನ: 1–125 (ವೈಭವ್ ಸೂರ್ಯವಂಶಿ, 7.6), 2–137 (ಯಶಸ್ವಿ ಜೈಸ್ವಾಲ್, 10.2), 3–192 (ಧ್ರುವ್ ಜುರೇಲ್, 13.5), 4–207 (ರಿಯಾನ್ ಪರಾಗ್, 15.2), 5–214 (ದಸುನ್ ಶನಕ, 16.1), 6–234 (ಡೊನೊವನ್ ಫೆರೀರಾ, 18.1), 7–238 (ಜೋಫ್ರಾ ಆರ್ಚರ್, 18.6), 8–240 (ನಾಂದ್ರೆ ಬರ್ಗರ್, 19.2).
ಬೌಲಿಂಗ್: ಪ್ಯಾಟ್ ಕಮಿನ್ಸ್ 4–0–64–0; ಇಶಾನ್ ಮಾಲಿಂಗ 4–0–40–0; ಸಾಕಿಬ್ ಹುಸೇನ್ 4–0–52–0; ಪ್ರಫುಲ್ ಹಿಂಗೆ 4–0–54–3; ಶಿವಾಂಗ್ ಕುಮಾರ್ 2–0–19–1; ನಿತೀಶ್ ಕುಮಾರ್ ರೆಡ್ಡಿ 2–0–12–1

ಸನ್‌ರೈಸರ್ಸ್ ಹೈದರಾಬಾದ್: 196 (19.2 ಓವರ್‌ಗಳಲ್ಲಿ)
ಅಭಿಷೇಕ್ ಸಿ ಜುರೇಲ್ ಬಿ ಆರ್ಚರ್ 0 (2ಎ)
ಹೆಡ್ ಬಿ ಆರ್ಚರ್ 17 (8ಎ, 4x2, 6x1)
ಇಶಾನ್ ಸಿ ಡೊನಾವನ್ ಬಿ ಆರ್ಚರ್ 33 (11ಎ, 4x3, 6x3)
ಸ್ಮರಣ್ ಸಿ ಆರ್ಚರ್ ಬಿ ಬರ್ಗರ್ 1 (4ಎ)
ಕ್ಲಾಸೆನ್ ಎಲ್‌ಬಿಡಬ್ಲ್ಯು ಬಿ ಯಶರಾಜ್ 18 (10ಎ, 4x2, 6x1)
ನಿತೀಶ್ ರೆಡ್ಡಿ ಸಿ ಶನಕ ಬಿ ಜಡೇಜ 38 (20ಎ, 4x4, 6x2)
ಸಲೀಲ್ ಸಿ ಬರ್ಗರ್ ಬಿ ಜಡೇಜ 35 (21ಎ, 4x2, 6x2)
ಕಮಿನ್ಸ್ ಸಿ ಆರ್ಚರ್ ಬಿ ಮಿಶ್ರಾ 1 (2ಎ)
ಶಿವಾಂಗ್ ಸಿ ವೈಭವ್ ಬಿ ಸುಶಾಂತ್ 27 (24ಎ, 4x3)
ಮಾಲಿಂಗ ಸಿ ಆರ್ಚರ್ ಬಿ ಬರ್ಗರ್ 5 (8ಎ)
ಸಾಕಿಬ್ ಹುಸೇನ್ ಔಟಾಗದೇ 5 (7ಎ, 4x1)
ಇತರೆ: 16 (ನೋಬಾಲ್1, ವೈಡ್ 15)
ವಿಕೆಟ್ ಪತನ: 1–0 (ಅಭಿಷೇಕ್ ಶರ್ಮಾ, 0.2), 2–51 (ಇಶಾನ್ ಕಿಶನ್, 2.5), 3–52 (ರವಿಚಂದ್ರನ್ ಸ್ಮರಣ್, 3.3), 4–57 (ಟ್ರಾವಿಸ್ ಹೆಡ್, 4.4), 5–81 (ಹೆನ್ರಿಚ್ ಕ್ಲಾಸೆನ್, 6.5), 6–137 (ನಿತೀಶ್ ಕುಮಾರ್ ರೆಡ್ಡಿ, 10.5), 7–139 (ಪ್ಯಾಟ್ ಕಮಿನ್ಸ್, 11.1), 8–163 (ಸಲೀಲ್ ಅರೋರಾ, 14.4), 9–187 (ಇಶಾನ್ ಮಾಲಿಂಗ, 17.3), 10–196 (ಶಿವಾಂಗ್ ಕುಮಾರ್, 19.2)
ಬೌಲಿಂಗ್: ಜೋಫ್ರಾ ಆರ್ಚರ್ 4–0–58–3; ನಾಂದ್ರೆ ಬರ್ಗರ್ 3–0–26–2; ಬ್ರಿಜೇಶ್ ಶರ್ಮಾ 3–0–31–0; ಯಶರಾಜ್ ಪೂಂಜಾ 4–0–39–1; ಸುಶಾಂತ್ ಮಿಶ್ರಾ 2.2–0–21–2; ರವೀಂದ್ರ ಜಡೇಜ 3–0–21–2
ಪಂದ್ಯದ ಆಟಗಾರ: ವೈಭವ್ ಸೂರ್ಯವಂಶಿ
ಆರೆಂಜ್ ಕ್ಯಾಪ್: ವೈಭವ್ ಸೂರ್ಯವಂಶಿ (ಆರ್ ಆರ್, 680 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್ (ಆರ್‌ಸಿಬಿ, 26 ವಿಕೆಟ್)

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 47 ರನ್ ಗೆಲುವು

ಫ್ರೆಂಚ್ ಓಪನ್ ಟೆನಿಸ್: 3ನೇ ಸುತ್ತಿಗೆ ಜೊಕೊವಿಚ್ • ಪೆಗುಲಾ ನಿರ್ಗಮನ

ಶ್ವಾಂಟೆಕ್ ಮುನ್ನಡೆ; ರಿಬಾಕಿನಾಗೆ ಆಘಾತ

ಪ್ಯಾರಿಸ್ (ಎಎಫ್‌ಪಿ): ನಾಲ್ಕು ಬಾರಿಯ ಚಾಂಪಿಯನ್, ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಬುಧವಾರ ಮೂರನೇ ಸುತ್ತಿಗೆ ಮುನ್ನಡೆದರು. ಆದರೆ, ಎರಡನೇ ಶ್ರೇಯಾಂಕದ ಆಟಗಾರ್ತಿ ಎಲಿನಾ ರಿಬಾಕಿನಾ ಹಾಗೂ ಐದನೇ ಶ್ರೇಯಾಂಕದ ಆಟಗಾರ್ತಿ ಜೆಸಿಕಾ ಪೆಗುಲಾ ಅವರು ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಸರ್ಬಿಯಾದ ದಿಗ್ಗಜ ಆಟಗಾರ ನೊವಾಕ್ ಜೊಕೊವಿಚ್ ಅವರು ಎರಡನೇ ಸುತ್ತಿನಲ್ಲಿ 6–3, 6–2, 6–7 (7–9), 6–3ರಿಂದ ಆತಿಥೇಯ ರಾಷ್ಟ್ರದ ವ್ಯಾಲೆಂಟಿನ್ ರಾಯರ್ ಎದುರು ಗೆದ್ದರು.

ಮೂರನೇ ಶ್ರೇಯಾಂಕದ ಶ್ವಾಂಟೆಕ್ ಅವರು ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ 6–2, 6–3 ನೇರ ಸೆಟ್‌ಗಳಲ್ಲಿ ಜೆಕ್ ಗಣರಾಜ್ಯದ ಸಾರಾ ಬೆಜ್ಲೆಕ್ ಅವರನ್ನು ಮಣಿಸಿದರು. 2020, 2022, 2023 ಮತ್ತು 2024ರಲ್ಲಿ ಪ್ರಶಸ್ತಿಯನ್ನು ಗೆದ್ದಿರುವ 24 ವರ್ಷ ವಯಸ್ಸಿನ ಶ್ವಾಂಟೆಕ್ ಅವರು ಐದನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಪ್ರಯತ್ನದಲ್ಲಿದ್ದಾರೆ. ಕಳೆದ ವರ್ಷ ಅವರು ಸೆಮಿಫೈನಲ್‌ನಲ್ಲಿ ಅರಿನಾ ಸಬಲೆಂಕಾ ವಿರುದ್ಧ ಸೋತಿದ್ದರು.

ಏಳನೇ ಶ್ರೇಯಾಂಕದ ಎಲಿನಾ ಸ್ವಿಟೋಲಿನಾ (ಉಕ್ರೇನ್) ಅವರು 6–0, 6–4 ರಿಂದ ಸ್ಪೇನ್‌ನ ಕೆಟ್ಲಿನ್ ಕ್ವೆವೆಡೊ ವಿರುದ್ಧ ನಿರಾಯಾಸವಾಗಿ ಗೆದ್ದರು. 31 ವರ್ಷ ವಯಸ್ಸಿನ ಅನುಭವಿ ಆಟಗಾರ್ತಿ ಮೊದಲ ಸೆಟ್‌ನಲ್ಲಿ ಒಂದೂ ಗೇಮ್ ಬಿಟ್ಟುಕೊಡದೆ ಪಾರಮ್ಯ ಮೆರೆದರು.

11ನೇ ಶ್ರೇಯಾಂಕದ ಬೆಲಿಂಡಾ ಬೆನ್ಸಿಕ್ ಅವರೂ 32ರ ಘಟ್ಟಕ್ಕೆ ಮುನ್ನಡೆದರು. ಸ್ವಿಟ್ಜರ್ಲೆಂಡ್‌ನ ಆಟಗಾರ್ತಿ ಎರಡನೇ ಸುತ್ತಿನಲ್ಲಿ 6–4, 6–0ಯಿಂದ ಅಮೆರಿಕದ ಕ್ಯಾಟಿ ಮೆಕ್‌ನ್ಯಾಲಿ ಅವರನ್ನು ಹಿಮ್ಮೆಟ್ಟಿಸಿದರು.

ಉಕ್ರೇನಿನ ಯೂಲಿಯಾ ಸ್ಟರಡಬ್ಸೆವಾ ಅವರು 3–6, 6–1, 7–6 (10–4)ರಿಂದ ಕಜಾಕಸ್ತಾನದ ರಿಬಾಕಿನಾಗೆ ಆಘಾತ ನೀಡಿದರು. ಶ್ರೇಯಾಂಕರಹಿತ ಆಟಗಾರ್ತಿ ಕಿಂಬರ್ಲಿ ಬಿರೆಲ್ (ಆಸ್ಟ್ರೇಲಿಯಾ) ಅವರು 1–6, 6–3, 6–3 ರಿಂದ ಅಮೆರಿಕದ ಆಟಗಾರ್ತಿ ಪೆಗುಲಾ ವಿರುದ್ಧ ಜಯಿಸಿದರು.

ಯಾನಿಕ್ ಸಿನ್ನರ್ ಬ್ಯಾಕ್‌ಹ್ಯಾಂಡ್ ಹೊಡೆತ
ಎಎಫ್‌ಪಿ ಚಿತ್ರ

ಸಿನ್ನರ್ ಶುಭಾರಂಭ

ಅಗ್ರ ಶ್ರೇಯಾಂಕದ ಆಟಗಾರ ಯಾನಿಕ್ ಸಿನ್ನರ್ ಅವರು 6–1, 6–3, 6–4ರಿಂದ ಆತಿಥೇಯ ಫ್ರಾನ್ಸ್‌ನ ವೈಲ್ಡ್‌ಕಾರ್ಡ್ ಆಟಗಾರ ಕ್ಲೆಮೆಂಟ್ ಟಬೂರ್ ಅವರನ್ನು ಸೋಲಿಸಿ ಶುಭಾರಂಭ ಮಾಡಿದರು. ಮೊದಲ ಸೆಟ್ ಅನ್ನು ನಿರಾಯಾಸವಾಗಿ ಗೆದ್ದ ಇಟಲಿಯ ಆಟಗಾರ ಎರಡು ಮತ್ತು ಮೂರನೇ ಸೆಟ್ ಗೆಲ್ಲಲು ಸ್ವಲ್ಪ ಶ್ರಮಹಾಕಬೇಕಾಯಿತು. ಈ ಪಂದ್ಯದಲ್ಲಿ ಸಿನ್ನರ್ ಎಂಟು ಏಸ್‌ಗಳನ್ನು ಹಾಕಿದರು.

ಕಳೆದ ಬಾರಿಯ ರನ್ನರ್ಸ್ ಅಪ್ ಸಿನ್ನರ್ ಅವರು ಈ ಬಾರಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ ಎನಿಸಿದ್ದಾರೆ. ಎರಡು ಬಾರಿಯ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಗಾಯದಿಂದಾಗಿ ಈ ಬಾರಿ ಕಣಕ್ಕಿಳಿಯುತ್ತಿಲ್ಲ. ಅವರ ಗೈರು-ಹಾಜರಿಯಲ್ಲಿ, 24 ವರ್ಷ ವಯಸ್ಸಿನ ಸಿನ್ನರ್ ಚಾಂಪಿಯನ್ ಆಗುವ ಉತ್ಸಾಹದಲ್ಲಿದ್ದಾರೆ.

ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೋರ್ ಅವರು ಪುರುಷರ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಬೆಲ್ಜಿಯಂನ ಅಲೆಕ್ಸಾಂಡರ್ ಬ್ಲಾಕ್ಸ್ ಎದುರು ವಾಕ್ ಓವರ್ ಪಡೆದರು. ರಷ್ಯಾದ ಕರೆನ್ ಕಚನೋವ್ ಅವರು 7–6 (7–5), 5–7, 6–1, 7–6 (7–4)ರಿಂದ ಅರ್ಜೆಂಟೀನಾದ ಮಾರ್ಕೊ ಟ್ರಂಗೆಲಿಟಿ ಎದುರು ಗೆದ್ದರು.

ಭಾರತಕ್ಕೆ ಏಷ್ಯನ್ ರಿಲೆ ಕೂಟದ ಆತಿಥ್ಯ

ನವದೆಹಲಿ (ಪಿಟಿಐ): ಚಂಡೀಗಢವು ಮುಂದಿನ ವರ್ಷದ ಮೇ ತಿಂಗಳಲ್ಲಿ ಏಷ್ಯನ್ ರಿಲೆ ಚಾಂಪಿಯನ್‌ಷಿಪ್‌ನ ಮತ್ತು ಭುವನೇಶ್ವರವು 2028ರ ಜನವರಿಯಲ್ಲಿ ಏಷ್ಯನ್ ಒಳಾಂಗಣ ಚಾಂಪಿಯನ್‌ಷಿಪ್‌ನ ಆತಿಥ್ಯ ವಹಿಸಲಿವೆ.

ಏಷ್ಯಾ ಅಥ್ಲೆಟಿಕ್ ಸಂಸ್ಥೆಯು (ಎಎಎ) ಹಾಂಗ್‌ಕಾಂಗ್‌ನಲ್ಲಿ ನಡೆದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಭಾರತಕ್ಕೆ ಈ ಕೂಟಗಳ ಆತಿಥ್ಯವನ್ನು ಪ್ರಕಟಿಸಿತು. ಮೇ 28 ರಿಂದ 31ರವರೆಗೆ ನಡೆಯಲಿರುವ ಏಷ್ಯಾ 20 ವರ್ಷದೊಳಗಿನವರ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಪೂರ್ವಭಾವಿಯಾಗಿ ಎಎಎ ಸಭೆ ನಡೆಯಿತು. ಈ ಎರಡು ಚಾಂಪಿಯನ್‌ಷಿಪ್‌ಗಳನ್ನು ಇದೇ ಮೊದಲ ಬಾರಿ ಆಯೋಜಿಸುವ ಅವಕಾಶ ಭಾರತಕ್ಕೆ ದೊರೆತಿದೆ.

‘ಈ ಚಾಂಪಿಯನ್‌ಷಿಪ್‌ನ ಆತಿಥ್ಯ ಭಾರತಕ್ಕೆ ವಹಿಸಿರುವುದು ಹೆಮ್ಮೆಯ ವಿಷಯ’ ಎಂದು ಸಭೆಯಲ್ಲಿ ಭಾಗವಹಿಸಿದ್ದ ವಿಶ್ವ ಅಥ್ಲೆಟಿಕ್ಸ್ ಉಪಾಧ್ಯಕ್ಷ ಅದಿಲ್ ಸುಮರಿವಾಲಾ ಸುದ್ದಿಸಂಸ್ಥೆಗೆ ತಿಳಿಸಿದರು. ಈ ಎರಡು ಕೂಟಗಳನ್ನು ವಹಿಸಿಕೊಳ್ಳಲು ಭಾರತ ಆಸಕ್ತಿ ತೋರಿಸಿದ್ದು, ಕಳೆದ ವರ್ಷ ಬಿಡ್ ಸಲ್ಲಿಸಿತ್ತು.

ಕ್ರೀಡಾ ಆಡಳಿತಗಾರ ರಣಧೀರ್ ಇನ್ನಿಲ್ಲ

ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಶೂಟರ್

ನವದೆಹಲಿ (ಪಿಟಿಐ): ಹಿರಿಯ ಕ್ರೀಡಾ ಆಡಳಿತಗಾರ, ಏಷ್ಯನ್ ಗೇಮ್ಸ್ ಶೂಟಿಂಗ್‌ನಲ್ಲಿ ಭಾರತದ ಮೊದಲ ಚಿನ್ನ ವಿಜೇತ ರಣಧೀರ್ ಸಿಂಗ್ (79) ಅವರು ವಯೋಸಹಜ ಕಾರಣಗಳಿಂದ ಬುಧವಾರ ಇಲ್ಲಿ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರಿಯರಿದ್ದಾರೆ. ಕೊನೆಯ ಪುತ್ರಿ ರಾಜೇಶ್ವರಿ ಅಂತರರಾಷ್ಟ್ರೀಯ ಶೂಟರ್ ಆಗಿದ್ದಾರೆ.

ನಾಲ್ಕು ದಶಕಗಳ ಕಾಲ ಕ್ರೀಡಾ ಆಡಳಿತ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಸಿಂಗ್ ಅವರು ಅನಾರೋಗ್ಯದ ಕಾರಣ ನೀಡಿ ಈಚೆಗಷ್ಟೇ ಏಷ್ಯಾ ಒಲಿಂಪಿಕ್ ಕೌನ್ಸಿಲ್ (ಒಸಿಎ) ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 2024ರಲ್ಲಿ ಅವರು ಈ ಸ್ಥಾನಕ್ಕೆ ನಾಲ್ಕು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದರು. ಈ ಹಿಂದೆ ಒಸಿಎದ ಮಹಾ ಪ್ರಧಾನ ಕಾರ್ಯದರ್ಶಿಯಾಗಿ 1991 ರಿಂದ 2015ರವರೆಗೆ ದೀರ್ಘಕಾಲ ಕಾರ್ಯನಿರ್ವಹಿಸಿದ್ದರು.

ರಣಧೀರ್ ಸಿಂಗ್

1987 ರಿಂದ 2010ರವರೆಗೆ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮಹಾ ಪ್ರಧಾನ ಕಾರ್ಯದರ್ಶಿಯಾಗಿದ್ದರು. 2001 ರಿಂದ 2014ವರೆಗೆ ಅಂತರ-ರಾಷ್ಟ್ರೀಯ ಒಲಿಂಪಿಕ್ ಸಮಿತಿಯಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದರು. ‘ವಾಡಾ’ದಲ್ಲಿ ಎರಡು ವರ್ಷ (2003 ರಿಂದ) ಭಾರತದ ಪ್ರತಿನಿಧಿಯಾಗಿದ್ದರು.

‘ಶ್ರೇಷ್ಠ ಒಲಿಂಪಿಯನ್, ಅರ್ಜುನ ಪ್ರಶಸ್ತಿ ಪುರಸ್ಕೃತ ಮತ್ತು ಭಾರತ, ಏಷ್ಯಾ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಕ್ರೀಡಾ ಆಡಳಿತಗಾರರಾಗಿ ಒಲಿಂಪಿಕ್ ಆಂದೋಲನಕ್ಕೆ ಮತ್ತು ಶೂಟಿಂಗ್ ಕ್ರೀಡೆಗೆ ರಾಜಾ ರಣಧೀರ್ ಸಿಂಗ್ ಅವರ ಸೇವೆ ಅಮೂಲ್ಯವಾದುದು’ ಎಂದು ಭಾರತ ರಾಷ್ಟ್ರೀಯ ರೈಫಲ್ಸ್ ಸಂಸ್ಥೆಯ ಕಾರ್ಯದರ್ಶಿ ರಾಜೀವ್ ಭಾಟಿಯಾ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಸಿಂಗ್ ಅವರು 1978ರ ಏಷ್ಯನ್ ಕ್ರೀಡೆಗಳ ಶೂಟಿಂಗ್‌ನಲ್ಲಿ ಟ್ರ್ಯಾಪ್ ಸ್ಪರ್ಧೆಯ ಸ್ವರ್ಣ ಗೆದ್ದುಕೊಂಡಿದ್ದರು. 1979ರಲ್ಲಿ ಅವರಿಗೆ ಅರ್ಜುನ ಪುರಸ್ಕಾರ ಒಲಿದಿತ್ತು. 1964ರ ಟೋಕಿಯೊ (ರಿಸರ್ವ್ ಶೂಟರ್) ಒಲಿಂಪಿಕ್ಸ್‌ನಿಂದ ಆರಂಭವಾಗಿ 1984ರ ಮಾಸ್ಕೊ ಒಲಿಂಪಿಕ್ಸ್‌ವರೆಗೆ ಅವರು ಆರು ಒಲಿಂಪಿಕ್ಸ್‌ಗಳಲ್ಲಿ ಭಾಗಿಯಾಗಿದ್ದರು.

ನಾಯಕನಾಗಿ ಮರಳಿದ ಹರ್ಮನ್‌ಪ್ರೀತ್

ನವದೆಹಲಿ (ಪಿಟಿಐ): ಅನುಭವಿ ಡ್ರ್ಯಾಗ್ ಫ್ಲಿಕ್ಕರ್ ಹರ್ಮನ್‌ಪ್ರೀತ್ ಸಿಂಗ್ ಅವರು ಭಾರತ ಹಾಕಿ ತಂಡಕ್ಕೆ ನಾಯಕರಾಗಿ ಮರಳಿದ್ದಾರೆ. ಮುಂದಿನ ತಿಂಗಳು ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪಿಯನ್ ಲೆಗ್‌ನಲ್ಲಿ ಅವರು ತಂಡವನ್ನು ಮುನ್ನಡೆಸಲಿದ್ದಾರೆ.

ಇದೇ ಆಗಸ್ಟ್‌ನಲ್ಲಿ ನಡೆಯಲಿರುವ ವಿಶ್ವಕಪ್ ಹಾಕಿ ಟೂರ್ನಿಗೆ ಸಿದ್ಧತೆಯ ದೃಷ್ಟಿಯಿಂದ ಭಾರತಕ್ಕೆ ಯುರೋಪಿನ ಲೆಗ್ ಮಹತ್ವದ್ದಾಗಿದೆ.

ವೈಯಕ್ತಿಕ ಕಾರಣ ನೀಡಿ ಹರ್ಮನ್‌ಪ್ರೀತ್ ಅವರು ಫೆಬ್ರುವರಿಯಲ್ಲಿ ನಡೆದಿದ್ದ ಹೋಬಾರ್ಟ್ ಲೆಗ್‌ನಿಂದ ಹಿಂದೆಸರಿದಿದ್ದರು.

ಭಾರತ ತಂಡ ಮೊದಲು ಬ್ರಸೆಲ್ಸ್‌ಗೆ ತೆರಳಿ ತರಬೇತಿಯಲ್ಲಿ ತೊಡಗಲಿದೆ. ಜೂನ್ 7 ರಿಂದ 9ವರೆಗೆ ಸೌಹಾರ್ದ ಪಂದ್ಯಗಳನ್ನು ಆಡಲಿದೆ. ಇಲ್ಲಿ ಶಿಬಿರದ ನಂತರ ಜೂನ್ 10ರಂದು ನೆದರ್ಲೆಂಡ್ಸ್‌ನ ರೋಟರ್‌ಡ್ಯಾಮ್‌ಗೆ ತೆರಳಲಿದೆ. ಜೂನ್ 14 ರಿಂದ 21ರವರೆಗಿನ ಅವಧಿಯಲ್ಲಿ ಜರ್ಮನಿ ಮತ್ತು ನೆದರ್ಲೆಂಡ್ಸ್ ವಿರುದ್ಧ ಪ್ರೊ ಲೀಗ್ ಪಂದ್ಯಗಳನ್ನು ಆಡಲಿದೆ.

ನಂತರ ಲಂಡನ್‌ಗೆ ತಂಡ ಪಯಣಿಸಲಿದ್ದು, ಅಲ್ಲಿ ಜೂನ್ 23 ರಿಂದ 28ರ ಅವಧಿಯಲ್ಲಿ ಪಾಕಿಸ್ತಾನ ಮತ್ತು ಇಂಗ್ಲೆಂಡ್ ವಿರುದ್ಧ ಪಂದ್ಯಗಳಲ್ಲಿ ಮುಖ್ಯಾಮುಖಿಯಾಗಲಿದೆ.

ತಂಡ ಹೀಗಿದೆ: ಗೋಲ್‌ಕೀಪರ್ಸ್: ಎಂ.ಎಚ್. ಶಶಿಕುಮಾರ್, ಸೂರಜ್ ಕರ್ಕೇರಾ. ಡಿಫೆಂಡರ್ಸ್: ಹರ್ಮನ್‌ಪ್ರೀತ್ ಸಿಂಗ್ (ನಾಯಕ), ಅಮಿತ್ ರೋಹಿದಾಸ್, ಸುಮಿತ್, ಸಂಜಯ್, ಯಶದೀಪ್ ಸಿವಾಚ್, ಅಮನದೀಪ್ ಲಾಕ್ರಾ, ಜರ್ಮನ್‌ಪ್ರೀತ್ ಸಿಂಗ್, ಜುಗರಾಜ್ ಸಿಂಗ್. ಮಿಡ್‌ಫೀಲ್ಡರ್ಸ್: ಹಾರ್ದಿಕ್ ಸಿಂಗ್, ಮನ್‌ಪ್ರೀತ್ ಸಿಂಗ್, ರಾಜಿಂದರ್ ಸಿಂಗ್, ರಾಜಕುಮಾರ್ ಪಾಲ್, ನೀಲಕಂಠ ಶರ್ಮಾ, ವಿವೇಕಸಾಗರ್ ಪ್ರಸಾದ್, ರವಿಚಂದ್ರ ಸಿಂಗ್ ಮೊಯರಂಗ್‌ಥೆಮ್. ಫಾರ್ವರ್ಡ್ಸ್: ಮನದೀಪ್ ಸಿಂಗ್, ಸುಖಜೀತ್ ಸಿಂಗ್, ಅಭಿಷೇಕ್, ಆದಿತ್ಯ ಅರ್ಜುನ್ ಲಾಲಗೆ, ದಿಲ್‌ಪ್ರೀತ್ ಸಿಂಗ್, ಶಿಲಾನಂದ ಲಾಕ್ರಾ, ಸೆಲ್ವಂ ಕಾರ್ತಿ.

ಮಹಿಳಾ ಹಾಕಿ: ಭಾರತಕ್ಕೆ ಜಯ

ಪರ್ತ್ (ಪಿಟಿಐ): ಭಾರತ ತಂಡವು ಸೌಹಾರ್ದ ಹಾಕಿ ಸರಣಿಯ ಎರಡನೇ ಪಂದ್ಯದಲ್ಲಿ ಬುಧವಾರ ಆತಿಥೇಯ ಆಸ್ಟ್ರೇಲಿಯಾ ವಿರುದ್ಧ ಹಿನ್ನಡೆಯಿಂದ ಚೇತರಿಸಿ 1–1 ಡ್ರಾ ಸಾಧಿಸಿತಲ್ಲದೇ, ಅಂತಿಮವಾಗಿ ಶೂಟೌಟ್‌ನಲ್ಲಿ 4–2 ರಿಂದ ಜಯಗಳಿಸಿತು. ಇದರಿಂದ ನಾಲ್ಕು ಪಂದ್ಯಗಳ ಸರಣಿ ಈಗ 1–1 ರಲ್ಲಿ ಸಮನಾಗಿದೆ.

ಪರ್ತ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಒಲಿವಾ ಡೌನೆಸ್ (10ನೇ ನಿಮಿಷ) ಆತಿಥೇಯರಿಗೆ ಮುನ್ನಡೆ ಒದಗಿಸಿದರು. ಆದರೆ ವಿರಾಮದ ಬಳಿಕ ಸುಶೀಲಾ ಚಾನು ಪುಖ್ರಂಬಾಮ್ (46ನೇ ನಿಮಿಷ) ಭಾರತ ಸಮ ಮಾಡಲು ನೆರವಾದರು.

ಶೂಟೌಟ್‌ನಲ್ಲಿ ನವನೀತ್ ಕೌರ್, ಇಶಿಕಾ ಚೌಧರಿ, ಅನ್ನು ಮತ್ತು ಖುತುಜಾ ದಾದಸೊ ಪಿಸಾಳ್ ಸ್ಕೋರ್ ಮಾಡಿದರು. ಸರಣಿಯ ಮೂರನೇ ಪಂದ್ಯವು ಶುಕ್ರವಾರ ನಡೆಯಲಿದೆ.

ಕ್ರಿಸ್ಟಿಗೆ ಆಘಾತ ನೀಡಿದ ಪ್ರಣಯ್

ಸಿಂಗಪುರ (ಪಿಟಿಐ): ಭಾರತದ ಅನುಭವಿ ಆಟಗಾರ ಎಚ್‌.ಎಸ್.ಪ್ರಣಯ್ ಮೂರು ಗೇಮ್‌ಗಳ ರೋಚಕ ಹೋರಾಟದಲ್ಲಿ ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಅವರಿಗೆ ಆಘಾತ ನೀಡಿ ಸಿಂಗಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತನ್ನು ಪ್ರವೇಶಿಸಿದರು. ಲಕ್ಷ್ಯ ಸೇನ್ ಸಹ ಜಯಗಳಿಸಿದರು.

33 ವರ್ಷ ವಯಸ್ಸಿನ ಪ್ರಣಯ್ ಸುಮಾರು ಒಂದು ಗಂಟೆ ನಡೆದ ಪಂದ್ಯದಲ್ಲಿ 10–21, 21–12, 21–18 ರಿಂದ ಐದನೇ ಶ್ರೇಯಾಂಕದ ಕ್ರಿಸ್ಟಿ ಅವರನ್ನು ಸೋಲಿಸಿದರು. ವಿಶ್ವ ಕ್ರಮಾಂಕದಲ್ಲೂ ಕ್ರಿಸ್ಟಿ ಐದನೇ ಸ್ಥಾನದಲ್ಲಿದ್ದಾರೆ. ಇದು ಪ್ರಣಯ್ ಅವರಿಗೆ ಐದು ವರ್ಷಗಳಲ್ಲಿ ಕ್ರಿಸ್ಟಿ ವಿರುದ್ಧ ಮೊದಲ ಗೆಲುವು ಆಗಿದೆ.

ಭಾರತದ ಆಟಗಾರ ಮುಂದಿನ ಸುತ್ತಿನಲ್ಲಿ ಮಾಜಿ ವಿಶ್ವ ಚಾಂಪಿಯನ್ ಲೋಹ್ ಕೀನ್ ಯೆವ್ ಅವರನ್ನು ಎದು-ರಿಸಲಿದ್ದಾರೆ.

ಲಕ್ಷ್ಯ ಇನ್ನೊಂದು ಪಂದ್ಯದಲ್ಲಿ ವಿಶ್ವ ಕ್ರಮಾಂಕದಲ್ಲಿ 24ನೇ ಸ್ಥಾನದಲ್ಲಿರುವ ಲು ಗುವಾಂಗ್ ಝು ಅವರನ್ನು 21–17, 21–15 ರಿಂದ ಸೋಲಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲ– ತನಿಶಾ ಕ್ರಾಸ್ಟೊ ಅವರೂ ಎರಡನೇ ಸುತ್ತಿಗೆ ಮುನ್ನಡೆದರು. ಈ ಜೋಡಿ 21–14, 20–22, 21–13 ರಿಂದ ಮಲೇಷ್ಯಾದ ವಾಂಗ್ ಟಿಯೆನ್ ಸಿ- ಲಿಮ್ ಚಿಯೆವ್ ಸಿಯೆನ್ ಜೋಡಿಯನ್ನು ಮಣಿಸಿತು.

ಎಚ್‌.ಎಸ್.ಪ್ರಣಯ್

ಆದರೆ ಕಿದಂಬಿ ಶ್ರೀಕಾಂತ್ ಮತ್ತು ಮಾಳವಿಕಾ ಬನ್ಸೋಡ್ ಅವರಿಗೆ ಮೊದಲ ಸುತ್ತನ್ನು ದಾಟಲಾಗಲಿಲ್ಲ. ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ 20–22, 21–19, 17–21 ರಿಂದ ಸ್ಥಳೀಯ ತಾರೆ ಲೋಹ್ ಕೀನ್ ಯೆವ್ ಅವರಿಗೆ ಮಣಿಸಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ 21–11, 19–21, 12–21 ರಲ್ಲಿ ಚೀನಾ ತೈಪೆಯ ಲಿನ್ ಸಿಯಾಂಗ್ ಟಿ ಅವರೆದುರು ಸೋಲನುಭವಿಸಿದರು.

ನಾರ್ವೆ ಚೆಸ್ ಟೂರ್ನಿ: ಮುನ್ನಡೆಯಲ್ಲಿ ಅಲಿರೇಝಾ

ಪ್ರಜ್ಞಾನಂದ, ಗುಕೇಶ್‌ಗೆ ನಿರಾಸೆ

ಓಸ್ಲೊ (ಪಿಟಿಐ): ಭಾರತದ ತಾರಾ ಆಟಗಾರರಾದ ಡಿ.ಗುಕೇಶ್ ಮತ್ತು ಆರ್. ಪ್ರಜ್ಞಾನಂದ ಅವರು ನಾರ್ವೆ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಹಿನ್ನಡೆ ಕಂಡರು. ಅಮೆರಿಕದ ವೆಸ್ಲಿ ಸೊ ‘ಆರ್ಮ್‌ಗೆಡನ್’ನಲ್ಲಿ (ಟೈಬ್ರೇಕರ್) ಗುಕೇಶ್ ಅವರನ್ನು ಸೋಲಿಸಿದರೆ, ಅಮೋಘ ಲಯದಲ್ಲಿರುವ ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ, ಪ್ರಜ್ಞಾನಂದ ಅವರನ್ನು ಪರಾಭವಗೊಳಿಸಿದರು.

ಟೂರ್ನಿಯ ಎರಡನೇ ದಿನವಾದ ಮಂಗಳವಾರ ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಹಿನ್ನಡೆಯ ಭೀತಿಯಲ್ಲಿದ್ದರು. ಆದರೆ ಜರ್ಮನಿಯ ಪ್ರತಿಭೆ, 21 ವರ್ಷ ವಯಸ್ಸಿನ ವಿನ್ಸೆಂಟ್ ಕೀಮರ್ ವಿರುದ್ಧ ‘ಆರ್ಮ್‌ಗೆಡನ್’ನಲ್ಲಿ ಜಯಗಳಿಸಿದರು.

ಪಾದದ ತೀವ್ರ ನೋವಿಗೆ ದಪ್ಪ ಬ್ಯಾಂಡೇಜ್ ಸುತ್ತಿಕೊಂಡರೂ ಎಲ್ಲಿಲ್ಲದ ಸಂಕಲ್ಪಶಕ್ತಿಯಿಂದ ಆಡುತ್ತಿರುವ ಅಲಿರೇಝಾ ಎರಡು ಕ್ಲಾಸಿಕಲ್ ಗೆಲುವುಗಳೊಡನೆ 6 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿದ್ದಾರೆ. ಆರು ಆಟಗಾರರು ಕಣದಲ್ಲಿರುವ ಟೂರ್ನಿಯಲ್ಲಿ ವೆಸ್ಲಿ ಸೊ ಮತ್ತು ಗುಕೇಶ್ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಪ್ರಜ್ಞಾನಂದ ಮತ್ತು ಸ್ಥಳೀಯ ಆಟಗಾರ ಕಾರ್ಲ್‌ಸನ್ ತಲಾ 1.5 ಪಾಯಿಂಟ್ಸ್ ಗಳಿಸಿದ್ದಾರೆ.

ಆರ್. ಪ್ರಜ್ಞಾನಂದ

ಡಿ.ಗುಕೇಶ್

ಗುಕೇಶ್ ಅವರಿಗೆ ಕಿರಿಕಿರಿಯಾಗುವ ಹಾಗೆ, ವೆಸ್ಲಿ ಸೊ ಅವರು ಪಂದ್ಯದ ನಂತರ ‘ಭಾರತದ ಆಟಗಾರ, ತಮ್ಮ ರೇಟಿಂಗ್‌ಗೆ ಅರ್ಹವಾಗಿರುವಷ್ಟು ಪ್ರಬಲರಾಗಿದ್ದಾರೆಯೇ ಎಂಬ ಬಗ್ಗೆ ತಮಗೆ ಸಂಶಯವಿದೆ’ ಎಂದು ವ್ಯಂಗ್ಯವಾಡಿದರು.

ಆರ್ಮ್‌ಗೆಡನ್ ಸೋಲಿನಿಂದ ಕಂಗೆಟ್ಟಂತೆ ಕಂಡುಬಂದ ಗುಕೇಶ್ ಅವರಿಗೆ ಕಡ್ಡಾಯ ಪ್ರಸಾರ (ಮಾಧ್ಯಮ ಸಂವಾದ) ಕರ್ತವ್ಯದ ನಂತರ ಹತಾಶೆ ಮುಚ್ಚಿಡಲಾಗಲಿಲ್ಲ. ಪಂದ್ಯದ ತಾಣದಿಂದ ಹೊರಟಾಗ ಸಿಟ್ಟು, ನಿರಾಶೆ ಅವರ ಮುಖದಲ್ಲಿ ಕಂಡಿತು.

ದಿವ್ಯಾಗೆ ಜಯ: ಮಹಿಳೆಯರ ವಿಭಾಗದಲ್ಲಿ, ಮೊದಲ ಬಾರಿ ಆಡುತ್ತಿರುವ ದಿವ್ಯಾ ದೇಶಮುಖ್ ಅವರು ಎರಡನೇ ಸುತ್ತಿನಲ್ಲಿ ಸ್ವದೇಶದ ಕೋನೇರು ಹಂಪಿ ಅವರನ್ನು ಮಣಿಸಿದರು. ಅವರು 3 ಅಂಕ ಸಂಗ್ರಹಿಸಿ ಎರಡನೇ ಸ್ಥಾನದಲ್ಲಿದ್ದಾರೆ.

ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ ಯಶಸ್ಸಿನ ಓಟ ಮುಂದುವರಿಸಿ ಚೀನಾದ ಝು ಜಿನೆರ್ ಅವರನ್ನು ಸೋಲಿಸಿದರು. ಅವರು 4.5 ಅಂಕಗಳೊಡನೆ ಅಗ್ರಸ್ಥಾನದಲ್ಲಿದ್ದಾರೆ.

ಹಾಲಿ ಚಾಂಪಿಯನ್ ಅನ್ನಾ ಮುಝಿಚುಕ್ (2.5), ಹಾಲಿ ವಿಶ್ವ ಚಾಂಪಿಯನ್ ಜು ವೆನ್‌ಜುನ್ (2) ಅವರ ಸವಾಲನ್ನು ಆರ್ಮ್‌ಗೆಡನ್ ಮೂಲಕ ಬದಿಗೊತ್ತಿದರು. ಹಂಪಿ (1 ಪಾಯಿಂಟ್) ಕೊನೆಯ ಸ್ಥಾನದಲ್ಲಿದ್ದಾರೆ.

ಗಂಗವ್ವ ನೀಲಪ್ಪಗೆ ಜಾವೆಲಿನ್ ಚಿನ್ನ

ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್: ಕರ್ನಾಟಕದ ಪದಕಗಳ ಸಂಖ್ಯೆ 17ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಗಂಗವ್ವ ನೀಲಪ್ಪ ಅವರು ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎಂಟನೇ ಆವೃತ್ತಿಯ ಇಂಡಿಯನ್ ಓಪನ್ ಅಂತರರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಕೂಟದ ಎರಡನೇ ದಿನವಾದ ಬುಧವಾರ ಕರ್ನಾಟಕದ ಪ್ಯಾರಾ ಅಥ್ಲೀಟ್‌ಗಳು ಒಂದು ಚಿನ್ನ ಸೇರಿದಂತೆ 9 ಪದಕಗಳನ್ನು ಗೆದ್ದರು. ಇದರೊಂದಿಗೆ ರಾಜ್ಯದ ಪದಕಗಳ ಸಂಖ್ಯೆ 17ಕ್ಕೆ ಏರಿಕೆಯಾಗಿದೆ. ಮೊದಲ ದಿನ ನಾಲ್ಕು ಸ್ವರ್ಣ ಸೇರಿ ಎಂಟು ಪದಕಗಳನ್ನು ಗೆದ್ದಿತ್ತು.

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಅಂಧ ಅಥ್ಲೀಟ್ ಗಂಗವ್ವ, ಜಾವೆಲಿನ್ ಥ್ರೋ ಸ್ಪರ್ಧೆಯ ಎಫ್12/13 ವಿಭಾಗದಲ್ಲಿ 22.85 ಮೀಟರ್ ಸಾಧನೆಯೊಂದಿಗೆ ಪ್ರಶಸ್ತಿಗೆ ಮುತ್ತಿಕ್ಕಿದರು. ಇದು ಕರ್ನಾಟಕಕ್ಕೆ ಲಭಿಸಿದ ಐದನೇ ಚಿನ್ನವಾಗಿದೆ. ಗಂಗವ್ವ ಅವರು ಶಾಟ್‌ಪಟ್ (ಎಫ್11/12) ಸ್ಪರ್ಧೆಯಲ್ಲೂ ಕಂಚು ಗೆದ್ದು, ಪದಕ ಡಬಲ್ ಮಾಡಿಕೊಂಡರು.

ಪುರುಷರ 400 ಮೀಟರ್ (ಟಿ11) ಸ್ಪರ್ಧೆಯಲ್ಲಿ ಗುರುಕೇಶವ, 400 ಮೀಟರ್ (ಟಿ47) ಸ್ಪರ್ಧೆಯಲ್ಲಿ ಬಾಬು ಜಾನು ಬೆಳ್ಳಿ ಪದಕ ಗೆದ್ದರು. ಮಹಿಳೆಯರ 400 ಮೀ. (ಟಿ12) ಸ್ಪರ್ಧೆಯಲ್ಲಿ ಸೌಮ್ಯಾ, ಲಾಂಗ್‌ಜಂಪ್ (ಟಿ37/38) ಸ್ಪರ್ಧೆಯಲ್ಲಿ ಹರ್ಷಿತಾ ಟೇಟರ್, ಶಾಟ್‌ಪಟ್ (ಎಫ್11/12) ಸ್ಪರ್ಧೆಯಲ್ಲಿ ಮಂಜುಳಾ ಹುಣಸೆಕಟ್ಟೆ ಅವರೂ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ಪುರುಷರ 400 ಮೀ (ಟಿ38) ಸ್ಪರ್ಧೆಯಲ್ಲಿ ಸಚ್ಚಿದಾನಂದ ದೇವಾಡಿಗ ಮತ್ತು ಮಹಿಳೆಯರ ಲಾಂಗ್‌ಜಂಪ್‌ನಲ್ಲಿ (ಟಿ37/38) ಭಾರತಿ ಭರತೇಶ್ ಕಂಚಿನ ಪದಕ ಗೆದ್ದುಕೊಂಡರು.

ಮೂರು ದಿನಗಳ ಕೂಟಕ್ಕೆ ಗುರುವಾರ ತೆರೆಬೀಳಲಿದೆ. ಭಾರತದ 341 ಪ್ಯಾರಾ ಅಥ್ಲೀಟ್‌ಗಳು ಸೇರಿದಂತೆ ಐದು ದೇಶಗಳ ಕ್ರೀಡಾಪಟುಗಳು ಭಾಗವಹಿಸಿದ್ದಾರೆ.

ಮಹಿಳೆಯರ ಶಾಟ್‌ಪಟ್ (ಎಫ್ 11/12) ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದ ಕರ್ನಾಟಕದ ಮಂಜುಳಾ ಹುಣಸೆಕಟ್ಟೆ ಮತ್ತು ಕಂಚು ಗೆದ್ದ ಗಂಗವ್ವ ನೀಲಪ್ಪ ಹರಿಜನ್ ಅವರ ಸಂಭ್ರಮ ಪ್ರಜಾವಾಣಿ ಚಿತ್ರ

ಕೌರ್ ಪಡೆಗೆ ಲಯ ಕಂಡುಕೊಳ್ಳುವ ವಿಶ್ವಾಸ

ಚೆಮ್ಸ್‌ಫೋರ್ಡ್ (ಯುಕೆ), (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ಗೆ ಮೊದಲು ಸ್ಥಿರತೆಯನ್ನು ಪಡೆದುಕೊಳ್ಳಲು ಮತ್ತು ತಂಡ ಸಂಯೋಜನೆಯನ್ನು ಅಂತಿಮಗೊಳಿಸುವ ಭಾಗವಾಗಿ ಭಾರತ ತಂಡ, ಇಂಗ್ಲೆಂಡ್ ವಿರುದ್ಧ ಮೂರು ಪಂದ್ಯಗಳ ಟಿ20 ಸರಣಿ ಆಡಲಿದೆ. ಮೊದಲ ಪಂದ್ಯ ಗುರುವಾರ ಇಲ್ಲಿ ನಡೆಯಲಿದೆ.

ಜೂನ್ 12 ರಂದು ವಿಶ್ವಕಪ್ ಆರಂಭವಾಗಲಿದೆ. 2025ರಲ್ಲಿ ಏಕದಿನ ವಿಶ್ವಕಪ್ ಗೆದ್ದುಕೊಂಡಿದ್ದ ಭಾರತ ಟಿ20 ಪಂದ್ಯಗಳಲ್ಲೂ ಆಗೊಮ್ಮೆ ಈಗೊಮ್ಮೆ ಮಿಂಚಿದೆ. ಆದರೆ ಸ್ಥಿರವಾದ ಪ್ರದರ್ಶನ ನೀಡಿಲ್ಲ.

ಈ ವರ್ಷ ಶ್ರೀಲಂಕಾ ವಿರುದ್ಧ 5–0 ಅಮೋಘ ಸರಣಿ ಜಯ ಪಡೆಯಿತು. ಆಸ್ಟ್ರೇಲಿಯಾ ವಿರುದ್ಧ ಅದರ ನೆಲದಲ್ಲೇ 2–1 ಸರಣಿ ಗೆದ್ದು ಇತಿಹಾಸ ಬರೆಯಿತು. ಬ್ಯಾಟರ್‌ಗಳ ಆಕ್ರಮಣಕಾರಿ ಮನೋಭಾವ, ಬೌಲರ್‌ಗಳ ಶಿಸ್ತುಬದ್ಧ ಬೌಲಿಂಗ್ ಗಮನಸೆಳೆಯಿತು. ಆದರೆ ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ತಂಡ 1–4ರಲ್ಲಿ ಹೀನಾಯ ಸೋಲು ಕಂಡಿದ್ದು ಕಳವಳಕ್ಕೆ ಕಾರಣವಾಯಿತು.

ಇಂಗ್ಲೆಂಡ್ ತಂಡವು ನ್ಯೂಜಿಲೆಂಡ್ ವಿರುದ್ಧ ಅತ್ಯುತ್ತಮ ಪ್ರದರ್ಶನ ನೀಡಿ ಈ ಸರಣಿ ಆಡುತ್ತಿದೆ. ಆದರೆ ಕಾಯಂ ನಾಯಕಿ ನಾಟ್ ಶಿವರ್ ಬ್ರಂಟ್ ಮೀನಖಂಡದ ನೋವಿನಿಂದ ಚೇತರಿಸುತ್ತಿದ್ದು, ಇಲ್ಲಿ ಆಡುತ್ತಿಲ್ಲ. ಮಾತೃತ್ವ ರಜೆ ಮುಗಿಸಿರುವ ಡ್ಯಾನಿ ವ್ಯಾಟ್ ಹಾಜ್ ತಂಡಕ್ಕೆ ಮರಳಿದ್ದಾರೆ. ತಮ್ಮ ತಂಡವು, ಭಾರತದ ಸ್ಪಿನ್ ಪಡೆಯಿಂದ ಸವಾಲನ್ನು ನಿರೀಕ್ಷಿಸುತ್ತಿದೆ ಎಂದು ವಿಕೆಟ್ ಕೀಪರ್–ಬ್ಯಾಟರ್ ಅಮಿ ಜೋನ್ಸ್ ಹೇಳಿದ್ದಾರೆ.

ಭಾರತ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪ ನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ಭಾರತಿ ಫುಲ್ಮಲಿ, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್ ಕೀಪರ್), ಶ್ರೀ ಚರಣಿ, ಯಷ್ಟಿಕಾ ಭಾಟಿಯಾ (ವಿಕೆಟ್ ಕೀಪರ್), ನಂದಿನಿ ಶರ್ಮಾ, ಅರುಂಧತಿ ರೆಡ್ಡಿ, ರೇಣುಕಾ ಠಾಕೂರ್, ಕ್ರಾಂತಿ ಗೌಡ, ಶ್ರೇಯಾಂಕ ಪಾಟೀಲ, ರಾಧಾ ಯಾದವ್.

ಪಂದ್ಯ ಆರಂಭ: ರಾತ್ರಿ 11 (ಭಾರತೀಯ ಕಾಲಮಾನ)

ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಅಭ್ಯಾಸ

ಭಾರತ ವಿರುದ್ಧ ಟೆಸ್ಟ್: ಅಫ್ಗನ್ ತಂಡ ಪ್ರಕಟ

ನವದೆಹಲಿ (ಪಿಟಿಐ): ಎಡಗೈ ಬ್ಯಾಟರ್ ಹಷ್ಮತ್‌ಉಲ್ಲಾ ಶಾಹಿದಿ ಅವರನ್ನು ಭಾರತ ವಿರುದ್ಧ ಜೂನ್ 6 ರಿಂದ 10ರವರೆಗೆ ನಡೆಯಲಿರುವ ಏಕೈಕ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಆಡುವ ಭಾರತ ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಟೆಸ್ಟ್ ಮತ್ತು ಮೂರು ಪಂದ್ಯಗಳ ಏಕದಿನ ಸರಣಿಗೆ ತಂಡಗಳನ್ನು ಮಂಗಳವಾರ ಪ್ರಕಟಿಸಲಾಯಿತು.

ಟೆಸ್ಟ್ ತಂಡ: ಹಷ್ಮತ್‌ಉಲ್ಲಾ ಶಾಹಿದಿ (ನಾಯಕ), ಅಬ್ದುಲ್ ಮಲಿಕ್, ಸೆದಿಖುಲ್ಲಾ ಅಟಲ್, ರಹಮತ್ ಶಾ, ರಹಮಾನುಲ್ಲಾ ಗುರ್ಬಾಝ್, ರಹಮಾನುಲ್ಲಾ ಜದ್ರಾನ್, ಅಫ್ಸರ್ ಝೂಝೈ (ವಿಕೆಟ್ ಕೀಪರ್), ಇಕ್ರಮ್ ಅಲಿಖಿಲ್ (ವಿಕೆಟ್ ಕೀಪರ್), ಅಜ್ಮತ್‌ವುಲ್ಲಾ ಒಮರ್‌ಝೈ, ಶರಾಫುದ್ದೀನ್ ಅಶ್ರಫ್, ನಗ್ಯಾಲ್ ಖರೋಟೈ, ಖಯಾಸ್ ಅಹ್ಮದ್, ಬಿಲಾಲ್ ಸಮಿ, ಜಿಯಾ ಶರಿಫಿ, ಸಲೀಮ್ ಸಫಿ.

ಏಕದಿನ ತಂಡ: ಹಷ್ಮತ್‌ವುಲ್ಲಾ ಶಾಹಿದಿ (ನಾಯಕ), ರಹಮಾನುಲ್ಲಾ ಗುರ್ಬಾಝ್ (ವಿಕೆಟ್ ಕೀಪರ್), ಇಬ್ರಾಹಿಂ ಜದ್ರಾನ್, ಸೇದಿಖುಲ್ಲಾ ಅಟಲ್, ದರ್ವಿಶ್ ರಸೂಲಿ, ರೆಹಮತ್ ಶಾ, ಇಕ್ರಮ್ ಅಲಿಖಿಲ್ (ವಿಕೆಟ್ ಕೀಪರ್), ಮೊಹಮ್ಮದ್ ನಬಿ, ಅಜ್ಮತ್‌ವುಲ್ಲಾ ಒಮರ್‌ಝೈ, ರಶೀದ್ ಖಾನ್, ನಂಗ್ಯಾಲ್ ಖರೋಟೈ, ಅಲ್ಲಾ ಘಜನಫರ್, ಝಿಯಾ ಉರ್ ರಹಮಾಣ್ ಶರಿಫಿ, ಫರೀದ್ ಮಲಿಕ್, ಬಿಲಾಲ್ ಶಮಿ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

2026-27ನೇ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ 02 ಕ್ರೀಡಾ ವಸತಿ ಶಾಲೆ ಹಾಗೂ 32 ಕ್ರೀಡಾ ವಸತಿ ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ. ಹಂತಕ್ಕೆ ಪ್ರವೇಶಕ್ಕೆ ‘ವಿಶೇಷ ಆಯ್ಕೆ ಪ್ರಕ್ರಿಯೆ’

ನೀವು ಭವಿಷ್ಯದ
ಕ್ರೀಡಾ ತಾರೆ
ಆಗಲು ಬಯಸುವಿರಾ?

ಈಗಲೇ ಮೊದಲ ಹೆಜ್ಜೆ ಇರಿಸಿ!

ಹೆಚ್.ಎಂ. ಜ್ಯೋತಿ, ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತರು, ಡಿ.ವೈ.ಇ.ಎಸ್. ಕ್ರೀಡಾ ವಸತಿ ಶಾಲೆಯ ಕ್ರೀಡಾಪಟು

ನಿಯಮಗಳು:

(1) ರಾಜ್ಯದ ಯಾವುದೇ ಭಾಗದ ಕ್ರೀಡಾಪಟುಗಳು ನಿಗದಿಪಡಿಸಿರುವ ಸ್ಥಳಗಳಲ್ಲಿನ ಕ್ರೀಡೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮುಕ್ತ ಅವಕಾಶವಿದೆ.

(2) 2026-27ನೇ ಸಾಲಿನ ಪ್ರವೇಶಕ್ಕೆ ಈಗಾಗಲೇ ಆಯೋಜಿಸಲಾದ ಆಯ್ಕೆ ಶಿಬಿರಗಳಲ್ಲಿ ಭಾಗವಹಿಸದ ಅಭ್ಯರ್ಥಿಗಳು ಈ ವಿಶೇಷ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

(3) ಈಗಾಗಲೇ ಆಯ್ಕೆ ಶಿಬಿರಗಳಲ್ಲಿ ಭಾಗಿಯಾಗಿರುವ ಆದರೆ, ವಸತಿ ನಿಲಯ ಪ್ರವೇಶಕ್ಕೆ ಆಯ್ಕೆಯಾಗದ ಅಭ್ಯರ್ಥಿಗಳು ಈ ಬಗ್ಗೆ ಅರ್ಜಿ ನಮೂನೆಯಲ್ಲಿ ಕಡ್ಡಾಯವಾಗಿ ದಾಖಲಿಸಿ, ವಿಶೇಷ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

(4) 8ನೇ ತರಗತಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳುಪ್ರಸ್ತುತ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, 8ನೇತರಗತಿ ಪ್ರವೇಶಕ್ಕೆ ಜೂನ್-2026ಕ್ಕೆ ಅನ್ವಯವಾಗುವಂತೆ 14 ವರ್ಷ ವಯಸ್ಸಿನ ಒಳಗೆ ಇರಬೇಕು. ಪ್ರಥಮ ಪಿ.ಯು.ಸಿ. ಪ್ರವೇಶ ಬಯಸುವ ಅಭ್ಯರ್ಥಿಗಳ ವಯಸ್ಸು ಜೂನ್-2026ಕ್ಕೆ ಅನ್ವಯವಾಗುವಂತೆ 18 ವರ್ಷ ವಯಸ್ಸಿನ ಒಳಗೆ ಇರಬೇಕು.

(5) ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಆಯಾ ಸ್ಥಳಗಳಲ್ಲಿ **ಬೆಳಿಗ್ಗೆ 8:30 ಗಂಟೆಗೆ ವರದಿ ಮಾಡಿಕೊಳ್ಳತಕ್ಕದ್ದು.**

(6) ವಾಲಿಬಾಲ್ ಮತ್ತು ಬಾಸ್ಕೆಟ್‌ಬಾಲ್ ಹೊರತುಪಡಿಸಿ, ಇತರೆ ಕ್ರೀಡೆಗಳಲ್ಲಿ ಅಸಾಧಾರಣ ಸಾಧನೆ ತೋರುವ ಕ್ರೀಡಾಪಟುಗಳಿಗೆ ಎತ್ತರ (Height) ಮತ್ತು ತೂಕದ (Weight) ಅರ್ಹತಾ ಮಾನದಂಡದಲ್ಲಿ ಸಡಿಲಿಕೆ ನೀಡಲಾಗುವುದು.

(7) ಈ ವಿಶೇಷ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಆಯ್ಕೆಯಾದ ಕ್ರೀಡಾಪಟುಗಳು ಅರ್ಹರಾದಲ್ಲಿ, ಕ್ರೀಡಾ ವಸತಿ ಶಾಲೆ/ನಿಲಯಗಳಿಗೆ ಪ್ರವೇಶ ನೀಡಲು ಪರಿಗಣಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರನ್ನು ಸಂಪರ್ಕಿಸಲು ಕೋರಿದೆ.

8ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ. ಗೆ ಕ್ರೀಡಾ ವಸತಿ ಶಾಲೆ/ ನಿಲಯಗಳ ಪ್ರವೇಶಕ್ಕೆ 'ವಿಶೇಷ ಆಯ್ಕೆ ಪ್ರಕ್ರಿಯೆಗಳು' ನಡೆಯುವ ಸ್ಥಳ ಮತ್ತು ದಿನಾಂಕ

ಹಂತ: 1

ಕ್ರ. ಸಂ	ಆಯ್ಕೆ ಪ್ರಕ್ರಿಯೆ ಕೈಗೊಳ್ಳಲಾಗುತ್ತಿರುವ ಸ್ಥಳಗಳು	ದಿನಾಂಕ	ಆಯ್ಕೆ ಪ್ರಕ್ರಿಯೆ ನಡೆಯುವ ಕ್ರೀಡೆಗಳು
1	ಜಿಲ್ಲಾ ಕ್ರೀಡಾಂಗಣ, ಬೆಳಗಾವಿ	01-06-2026	ವಾಲಿಬಾಲ್, ಸೈಕ್ಲಿಂಗ್, ಕುಸ್ತಿ, ಜೂಡೋ
2	ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ, ತುಮಕೂರು	01-06-2026	ಅಥ್ಲೆಟಿಕ್ಸ್, ಕಬಡ್ಡಿ , ಜಿಮ್ನಾಸ್ಟಿಕ್ಸ್, ಫುಟ್ಬಾಲ್
3	ಶ್ರೀ ಕಂಠೀರವ ಕ್ರೀಡಾಂಗಣ, ಬೆಂಗಳೂರು	01-06-2026	ಬಾಸ್ಕೆಟ್‌ಬಾಲ್, ಬಾಕ್ಸಿಂಗ್, ಆರ್ಚರಿ, ಫೆನ್ಸಿಂಗ್
4	ಅಕ್ಕಿತಿಮ್ಮನಹಳ್ಳಿ ಹಾಕಿ ಕ್ರೀಡಾಂಗಣ, ಬೆಂಗಳೂರು	01-06-2026	ಹಾಕಿ

ಹಂತ: 2

ಕ್ರ. ಸಂ	ಆಯ್ಕೆ ಪ್ರಕ್ರಿಯೆ ಕೈಗೊಳ್ಳಲಾಗುತ್ತಿರುವ ಸ್ಥಳಗಳು	ದಿನಾಂಕ	ಆಯ್ಕೆ ಪ್ರಕ್ರಿಯೆ ನಡೆಯುವ ಕ್ರೀಡೆಗಳು
1	ಸೆಂಟರ್ ಫಾರ್ ಸ್ಪೋರ್ಟ್ಸ್ ಸೈನ್ಸ್, ಗೇಟ್ ನಂ. 7 & 8 ಶ್ರೀ ಕಂಠೀರವ ಕ್ರೀಡಾಂಗಣ, ಬೆಂಗಳೂರು-560 027, ಮೊ: 9113535733, 9606670580	04-06-2026	ಬೆಳಗಾವಿ ಮತ್ತು ತುಮಕೂರು ಇಲ್ಲಿ ದಿನಾಂಕ:01-06-2026 ರಂದು ಆಯ್ಕೆಗೊಳ್ಳುವ ಕ್ರೀಡಾವಾರು ಕ್ರೀಡಾಪಟುಗಳು
2	ಸೆಂಟರ್ ಫಾರ್ ಸ್ಪೋರ್ಟ್ಸ್ ಸೈನ್ಸ್, ಗೇಟ್ ನಂ. 7 & 8 ಶ್ರೀ ಕಂಠೀರವ ಕ್ರೀಡಾಂಗಣ, ಬೆಂಗಳೂರು-560 027, ಮೊ: 9113535733, 9606670580	05-06-2026	ಶ್ರೀ ಕಂಠೀರವ ಕ್ರೀಡಾಂಗಣ ಮತ್ತು ಅಕ್ಕಿತಿಮ್ಮನಹಳ್ಳಿ, ಬೆಂಗಳೂರು ಇಲ್ಲಿ ದಿನಾಂಕ:01-06-2026 ರಂದು ಆಯ್ಕೆಗೊಳ್ಳುವ ಕ್ರೀಡಾವಾರು ಕ್ರೀಡಾಪಟುಗಳು

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಯುವ ಸಹಾಯವಾಣಿ ಸಂಖ್ಯೆ: 155265

ಮಹಿಳಾ ಸ್ವಾವಲಂಬನೆಯ ಹಾದಿ, ಕರ್ನಾಟಕದ ಮಾದರಿ

ಕಲ್ಪವೃಕ್ಷವಾದ ‘ಗೃಹಲಕ್ಷ್ಮಿ’ | ಶೋಷಿತರ ಬದುಕಿಗೆ ಸ್ವಾಭಿಮಾನದ ಬೆಳಕು

ಗ್ಯಾರಂಟಿ ವಾರ್ತೆ

ಬೆಂಗಳೂರು: ‘ನಾನು ತೃತೀಯಲಿಂಗಿಯಾಗಿರುವ ಕಾರಣ ಸಮಾಜ ನಮ್ಮನ್ನು ನೋಡುವ ದೃಷ್ಟಿಯೇ ಬೇರೆಯಾಗಿತ್ತು. ಇಷ್ಟು ವರ್ಷ ಕಷ್ಟ–ನೋವುಗಳನ್ನು ಸಹಿಸಿಕೊಂಡಿದ್ದ ನನಗೆ ಆಸರೆಯಾಗಿದ್ದೇ ಕರ್ನಾಟಕ ಸರ್ಕಾರದ ‘ಗೃಹಲಕ್ಷ್ಮಿ’ ಯೋಜನೆ. ಪ್ರತಿ ತಿಂಗಳು ಬರುತ್ತಿರುವ ಹಣದಿಂದಲೇ ನಾನೀಗ ಹಣ್ಣಿನ ಅಂಗಡಿ ಇಟ್ಟುಕೊಂಡು ಗೌರವದಿಂದ ಜೀವನ ನಡೆಸುತ್ತಿದ್ದೇನೆ. ಅಂದು ನಮ್ಮನ್ನು ಹೀಗಳೆಯುತ್ತಿದ್ದವರೆಲ್ಲಾ ಇಂದು ಪ್ರೀತಿಯಿಂದ ‘ಅಕ್ಕಾ’ ಎಂದು ಕರೆಯುತ್ತಿದ್ದಾರೆ...’ ಇದು ಕಲಬುರಗಿಯ ಸಪ್ನಾ ಅವರ ಮನದಾಳದ ಮಾತುಗಳು.

ಗೃಹಲಕ್ಷ್ಮಿ

ಸಪ್ನಾರಂತಹ ಲಕ್ಷಾಂತರ ಶೋಷಿತ ಹಾಗೂ ಕೋಟ್ಯಂತರ ಗೃಹಿಣಿಯರ ಬದುಕಿನಲ್ಲಿ ಸ್ವಾಭಿಮಾನದ ಬೆಳಕು ಚೆಲ್ಲಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ‘ಗೃಹಲಕ್ಷ್ಮಿ’ ಯೋಜನೆ. ಮಹಿಳೆ ಆರ್ಥಿಕವಾಗಿ ಸಬಲಳಾದರೆ ಇಡೀ ಕುಟುಂಬವೇ ಪ್ರಗತಿಯ ಹಾದಿಯಲ್ಲಿ ಸಾಗುತ್ತದೆ ಎಂಬ ಉದಾತ್ತ ಚಿಂತನೆಯೊಂದಿಗೆ ಜಾರಿಗೆ ತಂದ ಈ ಮಹತ್ವಾಕಾಂಕ್ಷಿ ಯೋಜನೆಗೆ 2023ರ ಆಗಸ್ಟ್ 30ರಂದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಐತಿಹಾಸಿಕ ಚಾಲನೆ ನೀಡಲಾಗಿತ್ತು. ಇಂದು ಈ ಯೋಜನೆ ಯಶಸ್ವಿಯಾಗಿ ಮೂರು ವರ್ಷ ಪೂರೈಸಿದ್ದು, ನಾಡಿನ ಮನೆ–ಮನಗಳ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ.

ಮಹಿಳೆಯರ ಆರ್ಥಿಕ ಸ್ವಾತಂತ್ರ್ಯವೇ ಸಮೃದ್ಧ ಸಮಾಜದ ಬುನಾದಿ

‘ಗೃಹಲಕ್ಷ್ಮಿ’ ಯೋಜನೆ ಕೇವಲ ರಾಜಕೀಯ ಭರವಸೆಯಲ್ಲ; ಅದು ನಮ್ಮ ತಾಯಂದಿರ ಘನತೆ ಮತ್ತು ಗೌರವದ ಸಂಕೇತ. ಮಹಿಳೆಯರ ಕೈಯಲ್ಲಿ ಹಣ ಓಡಾಡಿದರೆ ಇಡೀ ಕುಟುಂಬ ಸುಖವಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ 1.24 ಕೋಟಿಗೂ ಅಧಿಕ ತಾಯಂದಿರ ಖಾತೆಗೆ ನಿರಂತರವಾಗಿ ಹಣ ತಲುಪುತ್ತಿರುವುದು ನಮ್ಮ ಸರ್ಕಾರದ ಪ್ರಾಮಾಣಿಕತೆಗೆ ಸಾಕ್ಷಿ.

– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ದೇಶದ ಇತಿಹಾಸದಲ್ಲೇ ಅತಿ ದೊಡ್ಡ ಕ್ರಾಂತಿ

‘ಗೃಹಲಕ್ಷ್ಮಿ’ ಯೋಜನೆಯು ಕೇವಲ ಕರ್ನಾಟಕದ ಹೆಮ್ಮೆಯಲ್ಲ, ಇಡೀ ದೇಶದ ಇತಿಹಾಸದಲ್ಲೇ ಮಹಿಳೆಯರಿಗಾಗಿ ಜಾರಿಯಾದ ಅತ್ಯಂತ ಬೃಹತ್ ನೇರ ನಗದು ವರ್ಗಾವಣೆ ಯೋಜನೆಯಾಗಿದೆ. ತಂತ್ರಜ್ಞಾನದ ಮೂಲಕ ಅತ್ಯಂತ ಪಾರದರ್ಶಕವಾಗಿ ಕೋಟ್ಯಂತರ ತಾಯಂದಿರನ್ನು ತಲುಪಿ, ಅವರ ಬದುಕಿಗೆ ಸ್ಥಿರವಾದ ಆರ್ಥಿಕ ಭದ್ರತೆ ನೀಡಲು ನಮ್ಮ ಸರ್ಕಾರ ಯಶಸ್ವಿಯಾಗಿದೆ.

– ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

ನನಗೆ ಅಪ್ಪ–ಅಮ್ಮ ಇಬ್ಬರೂ ಇಲ್ಲ... ತುತ್ತು ಅನ್ನಕ್ಕೂ ಪರದಾಡುವಂತ ಮೂವರು ಹೆಣ್ಣುಮಕ್ಕಳು ನಾವು. ಅದರಲ್ಲೂ ನಾನು ಅಂಗವಿಕಲೆ. ಬದುಕೇ ಮುಗಿದುಹೋಯಿತು ಅಂದುಕೊಂಡಾಗ ಕೈಹಿಡಿದಿದ್ದು ಇದೇ ‘ಗೃಹಲಕ್ಷ್ಮಿ’ ಹಣ. ಅದರಿಂದಲೇ ಬಟ್ಟೆ ವ್ಯಾಪಾರ ಶುರು ಮಾಡಿಕೊಂಡಿದ್ದೇನೆ. ಯಾರ ಮುಂದೆಯೂ ಕೈಚಾಚದೆ, ಸ್ವಾವಲಂಬಿಯಾಗಿ ದುಡಿದು ತಿನ್ನಬೇಕು ಅನ್ನೋ ನನ್ನ ಆಸೆಗೆ ಸಿದ್ದರಾಮಯ್ಯ ಸರ್ ಜೀವ ಕೊಟ್ಟಿದ್ದಾರೆ.

ಜಯಮ್ಮ, ಬಳ್ಳಾರಿ

ಗಂಡ ತೀರಿಹೋಗಿ 8 ವರ್ಷವಾಯಿತು. ಮೂವರು ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಗಂಡು ದಿಕ್ಕಿಲ್ಲದ ಮನೆಯನ್ನು ನಿಭಾಯಿಸುವುದು ನರಕಯಾತನೆಯಾಗಿತ್ತು. ಕಾಫಿ ಸೀಸನ್‌ನಲ್ಲಿ ಕೂಲಿ ಸಿಕ್ಕರೆ ಮಾತ್ರ ಕೈಯಲ್ಲಿ ಹಣ. ಇಲ್ಲದಿದ್ದರೆ ವರ್ಷಪೂರ್ತಿ ಖಾಲಿಯೇ ಇರಬೇಕು. ಇಂದು ‘ಗೃಹಲಕ್ಷ್ಮಿ’ಯ ಹಣವೇ ನಮ್ಮ ಉಸಿರಾಗಿದೆ. ಒಂದೊಮ್ಮೆ ಈ ಯೋಜನೆ ನಿಂತು ಹೋದರೆ ನಮ್ಮ ಬದುಕು ಏನಾಗಬಹುದು ಎಂದು ಊಹಿಸಿಕೊಳ್ಳಲೂ ಅಸಾಧ್ಯ, ಕಣ್ಣಲ್ಲಿ ನೀರು ಬರುತ್ತದೆ.

ಲಕ್ಷ್ಮಿ, ಚಾಮರಾಜನಗರ

ನಂಗೆ ನಾಟಿ ಕೋಳಿ ಸಾಕಾಣಿಕೆ ಆರಂಭಿಸುವ ಆಸೆ ಇತ್ತು. ವ್ಯಾಪಾರಕ್ಕಾಗಿ ಓಡಾಟ ಹಾಗೂ ಬಂಡವಾಳದ ಕೊರತೆಯಿಂದ ಕಂಗಾಲಾಗಿದ್ದೆ. ‘ಗೃಹಲಕ್ಷ್ಮಿ’ ಯೋಜನೆಯ ಹಣವನ್ನು ಕೂಡಿಟ್ಟು ನಾಟಿ ಕೋಳಿ ಫಾರ್ಮ್ ಶುರು ಮಾಡಿದೆ. ನಾನು ಈಗ ಯಾರ ಮೇಲೂ ಅವಲಂಬಿತಳಾಗದೇ ಬದುಕುತ್ತಿದ್ದೇನೆ.

ಲೀಲಾವತಿ, ಶಿವಮೊಗ್ಗ

ಮಾಸಿಕ ಗೌರವಧನ, ಮಹಿಳಾ ಸಬಲೀಕರಣದ ಹೊಸ ಆಯಾಮ

ಮನೆಯ ಯಜಮಾನಿ ತನಗೆ ಬೇಕಾದ ಸಣ್ಣಪುಟ್ಟ ಅಗತ್ಯಗಳಿಗೂ ಇತರರ ಮುಂದೆ ಕೈಚಾಚಬಾರದು ಎಂಬ ದೃಢ ಸಂಕಲ್ಪದೊಂದಿಗೆ ಈ ಯೋಜನೆಯನ್ನು ಆರಂಭಿಸಲಾಗಿದೆ. ಅರ್ಹ ಮಹಿಳೆಯರ ಖಾತೆಗೆ ಪ್ರತಿ ತಿಂಗಳು ₹2,000 ನಗದು ಹಣವನ್ನು ನೇರವಾಗಿ ಜಮೆ (DBT) ಮಾಡಲಾಗುತ್ತಿದೆ. ಇದು ಕೇವಲ ಉಚಿತ ಹಣವಲ್ಲ, ಬದಲಿಗೆ ದಿನವಿಡೀ ಸಂಸಾರಕ್ಕಾಗಿ ಶ್ರಮಿಸುವ ಗೃಹಿಣಿಯರ ತ್ಯಾಗಕ್ಕೆ ರಾಜ್ಯ ಸರ್ಕಾರ ನೀಡುತ್ತಿರುವ ಅತ್ಯುನ್ನತ ‘ಗೌರವಧನ’ವಾಗಿದೆ. ಇದರಿಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶದ ಕೆಳ ಮತ್ತು ಮಧ್ಯಮ ವರ್ಗದ ಮಹಿಳೆಯರು ತಮ್ಮದೇ ಆದ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆ.

ಮೂರು ವರ್ಷಗಳಲ್ಲಿ ತಂದ ಆರ್ಥಿಕ ಕ್ರಾಂತಿ

ಪ್ರತಿ ವರ್ಷ ಬರೋಬ್ಬರಿ ₹24,000 ಪಡೆಯುತ್ತಿರುವ ಮಹಿಳೆಯರು, ಕಳೆದ ಮೂರು ವರ್ಷಗಳ ಅವಧಿಯಲ್ಲಿ ₹70,000 ಕ್ಕೂ ಅಧಿಕ ಆರ್ಥಿಕ ಆಸರೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಹಣ ಬಡ ಕುಟುಂಬಗಳ ಆರ್ಥಿಕ ಚಿತ್ರಣವನ್ನೇ ಬದಲಿಸಿದೆ. ನಾಡಿನ ತಾಯಂದಿರು ಈ ಹಣವನ್ನು ಅತ್ಯಂತ ಜವಾಬ್ದಾರಿಯುತವಾಗಿ ಬಳಸುತ್ತಿದ್ದಾರೆ. ಸಾವಿರಾರು ಮಹಿಳೆಯರು ಈ ನೆರವಲ್ಲಿ ಕುರಿ–ಕೋಳಿ ಸಾಕಾಣಿಕೆ, ಮಕ್ಕಳ ವಿದ್ಯಾಭ್ಯಾಸ, ಮನೆಗೆ ಎಲೆಕ್ಟ್ರಾನಿಕ್ ಉಪಕರಣ ಖರೀದಿ, ಗೃಹೋದ್ಯಮಗಳನ್ನು ಆರಂಭಿಸಿ ಸಬಲೀಕರಣದ ಜೊತೆಗೆ ಸ್ವಾವಲಂಬನೆಯ ಹಾದಿ ಹಿಡಿದಿದ್ದಾರೆ. ಗ್ರಾಮೀಣ ಭಾಗದ ಅನೇಕ ಮಹಿಳೆಯರು ಈ ಹಣವನ್ನು ಒಟ್ಟುಗೂಡಿಸಿ, ಸ್ವ–ಸಹಾಯ ಸಂಘಗಳಲ್ಲಿ ಸಣ್ಣಪುಟ್ಟ ಉಳಿತಾಯ ಮಾಡುತ್ತಿದ್ದಾರೆ.

ಅಂಕಿ–ಅಂಶಗಳಲ್ಲಿ ಜಾಗತಿಕ ದಾಖಲೆ

ಇಡೀ ದೇಶದಲ್ಲೇ ಇಷ್ಟೊಂದು ಬೃಹತ್ ಸಂಖ್ಯೆಯ ಮಹಿಳಾ ಫಲಾನುಭವಿಗಳನ್ನು ಹೊಂದಿರುವ ಹಾಗೂ ನೇರ ನಗದು ವರ್ಗಾವಣೆ ಮಾಡುವ ಮತ್ತೊಂದು ಯೋಜನೆ ಇಲ್ಲ. 1.24 ಕೋಟಿಗೂ ಅಧಿಕ ಗೃಹಿಣಿಯರು ಪ್ರತಿ ತಿಂಗಳು ನೇರ ನಗದು ವರ್ಗಾವಣೆ ಮೂಲಕ ₹2,000 ಪಡೆಯುತ್ತಿದ್ದು, ಈವರೆಗೆ ಸರ್ಕಾರ ಈ ಯೋಜನೆಗಾಗಿ ₹69,783 ಕೋಟಿ ಅನುದಾನ ನೀಡಿದೆ.

ಸಬಲ ಮಹಿಳೆ, ಸಶಕ್ತ ಸಮಾಜ

ಯಾವ ದೇಶದಲ್ಲಿ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಾರೋ, ಆ ದೇಶ ಮಾತ್ರ ನಿಜವಾದ ಪ್ರಗತಿ ಸಾಧಿಸಲು ಸಾಧ್ಯ. ‘ಗೃಹಲಕ್ಷ್ಮಿ’ ಗ್ಯಾರಂಟಿ ಯೋಜನೆಯು ರಾಜ್ಯದ ಕೋಟ್ಯಂತರ ಕುಟುಂಬಗಳಿಗೆ ಬೆಲೆ ಏರಿಕೆಯ ಈ ದಿನಗಳಲ್ಲಿ ದೊಡ್ಡ ಆಸರೆಯಾಗಿ ನಿಂತಿದೆ. ಪ್ರತಿಯೊಂದು ಕುಟುಂಬವನ್ನು ಮುನ್ನಡೆಸುವ ಶಕ್ತಿ ಹೆಣ್ಣಿಗೆ ಇದೆ. ಆಕೆಯ ಕೈ ಬಲಪಡಿಸಿದರೆ ಇಡೀ ಕುಟುಂಬವೇ ಬಲವಾಗುತ್ತದೆ ಎಂಬ ನಂಬಿಕೆಯಿಂದ ನಮ್ಮ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ.

– ಲಕ್ಷ್ಮಿ ಹೆಬ್ಬಾಳ್ಕರ್,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ನಾನು ಉಪ್ಪಿನಕಾಯಿ ವ್ಯಾಪಾರ ಮಾಡ್ತೇನೆ. ಆದರೆ, ವ್ಯಾಪಾರಕ್ಕಾಗಿ ಪ್ರತಿದಿನ ಕಿಲೋಮೀಟರ್‌ಗಟ್ಲೆ ನಡೆಯಬೇಕಿತ್ತು, ಕಾಲುಗಳು ದಣಿದು ಹೋಗುತ್ತಿದ್ದವು. ಇಂತಹ ಸಂದರ್ಭದಲ್ಲಿ ನನ್ನ ಕೈಹಿಡಿದಿದ್ದು ‘ಗೃಹಲಕ್ಷ್ಮಿ’ ಯೋಜನೆ. ಪ್ರತಿ ತಿಂಗಳು ಬರುತ್ತಿರುವ 2,000 ರೂಪಾಯಿಗಳನ್ನು ಕೂಡಿಟ್ಟು ನಾನು ಸ್ವಂತ ಸ್ಕೂಟರ್ ಖರೀದಿಸಿದ್ದೇನೆ. ಮನೆಮನೆಗೆ ಹೋಗಿ ಉಪ್ಪಿನಕಾಯಿ ಮಾರಲು ತುಂಬಾ ಸಹಾಯವಾಗಿದೆ.

ಜೀನತ್, ಮಂಗಳೂರು

ಹೊಟ್ಟೆಯಲ್ಲಿದ್ದ ಮಗ ಐದು ತಿಂಗಳ ಕೂಸಾಗಿದ್ದಾಗಲೇ ಗಂಡ ನನ್ನನ್ನು ಬಿಟ್ಟು ಇನ್ನೊಂದು ಮದುವೆಯಾಗಿ ಹೋದ. ಸಾಲದ ಹೊರೆ ಹೆದರಿಸುತ್ತಿತ್ತು, ಸತ್ತು ಹೋಗೋಣ ಅನ್ನಿಸಿತ್ತು. ತಿನ್ನಲು ಅನ್ನವಿರಲಿಲ್ಲ, ಕರೆಂಟ್ ಬಿಲ್ ಕಟ್ಟದ್ದಕ್ಕೆ ಕನೆಕ್ಷನ್ ಕಟ್ ಮಾಡಿಕೊಂಡು ಹೋಗಿದ್ದರು. ಕತ್ತಲಲ್ಲಿ ಅತ್ತ ದಿನಗಳು ಅಪಾರ. ಇಂದು ‘ಗೃಹಲಕ್ಷ್ಮಿ’ಯ ಹಣ ನನ್ನ ಬದುಕಿನ ಕತ್ತಲನ್ನು ದೂರ ಮಾಡಿದೆ. ಅಜ್ಜಿಯೊಬ್ಬರು ಕೊಟ್ಟ ಪುಟ್ಟ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು, ಅಂಗಡಿಗೆ ಸಾಮಾನು ತರಲು ಈ ಹಣ ನೆರವಾಗಿದೆ. ಸಿದ್ದರಾಮಯ್ಯ ಪುಣ್ಯದ ಕೆಲಸ ಮಾಡಿದ್ದಾರೆ.

ರೇಣುಕಾ, ಕೊಪ್ಪಳ

ಮನೆಯಲ್ಲಿ ಕಡು ಬಡತನ. ಸಂಸಾರವನ್ನು ನಿಭಾಯಿಸೋದು ತುಂಬಾ ಕಷ್ಟ ಇತ್ತು. ಸರ್ಕಾರದ ‘ಗೃಹಲಕ್ಷ್ಮಿ’ ಯೋಜನೆ ನನ್ನ ಬದುಕಿಗೆ ಆರ್ಥಿಕ ಶಕ್ತಿ ತುಂಬಿತು. ಪ್ರತಿ ತಿಂಗಳು ಬರುತ್ತಿದ್ದ ಹಣವನ್ನು ಕೂಡಿಟ್ಟು, ಅದರಿಂದ ಎರಡು ಮೇಕೆಗಳನ್ನು ಖರೀದಿಸಿ ಸಾಕಲು ಆರಂಭಿಸಿದೆ. ಸದ್ಯ ಅವುಗಳ ಸಂಖ್ಯೆ ಹೆಚ್ಚಾಗಿದ್ದು, ನಮ್ಮ ಕುಟುಂಬಕ್ಕೆ ಆದಾಯದ ಮೂಲವಾಗಿದೆ.

ದೇವಮ್ಮ, ಯಾದಗಿರಿ

ಕರ್ನಾಟಕ ವಾರ್ತೆ